₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಗುರುವಾರ 12.06.2025 ಸಂಪುಟ: 10 ಸಂಚಿಕೆ: 149 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಐಸಿಸಿ ಟೆಸ್ಟ್ ಬೌಲರ್‌ಗಳ ಪಾರಮ್ಯ

ಲಾರ್ಡ್ಸ್‌ನಲ್ಲಿ ಬುಧವಾರ ಆರಂಭಗೊಂಡ ವಿಶ್ವ ಕ್ರಿಕೆಟ್ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದ ಮೊದಲನೇ ದಿನ ದ. ಆಫ್ರಿಕಾದ ವೇಗದ ಬೌಲರ್ ಕಗಿಸೋ ರಬಾಡ ಐದು ವಿಕೆಟ್ ಪಡೆದು ಕಾಂಗರೂ ಪಡೆಯನ್ನು 212 ರನ್‌ಗಳಿಗೆ ನಿಯಂತ್ರಿಸಿದರು. ಆದರೆ ಆಸೀಸ್ ಬೌಲರ್‌ಗಳು ಸಮರ್ಥ ಪ್ರತಿ ದಾಳಿ ಸಂಘಟಿಸಿದ್ದು ಮೊದಲನೇ ದಿನದಾಟದ ಅಂತ್ಯಕ್ಕೆ ದಕ್ಷಿಣ ಆಫ್ರಿಕಾ ತಂಡ 4 ವಿಕೆಟ್ ಕಳೆದುಕೊಂಡು 43 ರನ್‌ಗಳನ್ನು ಗಳಿಸಿದೆ.

ಬಳ್ಳಾರಿ ಧಣಿಗಳಿಗೆ ಕಹಿ-ಸಿಹಿ

ವಾಲ್ಮೀಕಿ ನಿಗಮ ಹಗರಣ: ಸಂಸದ ತುಕಾರಾಂ, 3 ಶಾಸಕರ ನಿವಾಸದ ಮೇಲೆ ದಾಳಿ

ಕೈ ಪಡೆ ಬೆಂಬಿಡದ ಇಡಿ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರುಪಯೋಗ ಹಗರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇಡಿ) ಮತ್ತೆ ತನ್ನ ದಾಳಿ ಮುಂದುವರಿಸಿದ್ದು, ಕಾಂಗ್ರೆಸ್‌ನ ಒಬ್ಬ ಸಂಸದ ಹಾಗೂ ಮೂವರು ಶಾಸಕರ ಮನೆ, ಕಚೇರಿಗಳ ಮೇಲೆ ದಾಳಿ ನಡೆಸಿ ಅಪಾರ ಪ್ರಮಾಣದ ದಾಖಲೆಗಳನ್ನು ವಶಪಡಿಸಿಕೊಂಡಿದೆ.

ಬುಧವಾರ ಬೆಳಗ್ಗೆ ಬಳ್ಳಾರಿ ಸಂಸದ ಇ.ತುಕಾರಾಂ (ಸಂಡೂರಿನ ಮನೆ), ಶಾಸಕರಾದ ಕಂಪ್ಲಿ ಗಣೇಶ್, ನಾ.ರಾ. ಭರತ್ ರೆಡ್ಡಿ, ಕೂಡ್ಲಿಗಿ ಶಾಸಕ ಶ್ರೀನಿವಾಸ್ ಹಾಗೂ ಬಿ.ನಾಗೇಂದ್ರ ಮನೆ ಮೇಲೆ ಇಡಿ ದಾಳಿ ನಡೆಸಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರು. ನಗದನ್ನು ಅನಾಮಿಕ ವ್ಯಕ್ತಿಗಳಿಗೆ ವರ್ಗಾವಣೆ ಮಾಡಿ ದುರುಪಯೋಗ ಮಾಡಿಕೊಂಡ ಆರೋಪದ ಮೇಲೆ ಇಡಿ ತನಿಖೆ ನಡೆಸಿದೆ. ಇ.ಡಿ ದಾಳಿಗೆ ಒಳಗಾದ ಜನಪ್ರತಿನಿಧಿಗಳ ಮೊಬೈಲ್ ಅನ್ನು ವಶಕ್ಕೆ ಪಡೆಯುವ ಮೂಲಕ ಪರಿಶೀಲನೆ ನಡೆಸಲಾಗಿದೆ.

ಇ.ಡಿ ಅಧಿಕಾರಿಗಳು ಎಂಟು ತಂಡಗಳಲ್ಲಿ ಬುಧವಾರ ಬೆಳಗ್ಗೆ ದಾಳಿ ನಡೆಸಿದರು. ಸ್ಥಳೀಯ ಪೊಲೀಸ್ ಇಲಾಖೆ ಮತ್ತು ಕಂದಾಯ ಇಲಾಖೆಯ ಸಹಕಾರದೊಂದಿಗೆ ಈ ಕಾರ್ಯಾಚರಣೆ ನಡೆದಿದ್ದು, ಶಾಸಕರು ಹಾಗೂ ಸಂಸದರ ನಿವಾಸಗಳ ಜತೆಗೆ ಅವರ ಗೃಹ ಕಚೇರಿಗಳಲ್ಲೂ ಶೋಧ ನಡೆಸಲಾಯಿತು. ಈ ಶೋಧದ ವೇಳೆ ಲ್ಯಾಪ್‌ಟಾಪ್, ಮೊಬೈಲ್, ಬ್ಯಾಂಕ್ ಪಾಸ್‌ಬುಕ್, ಹಣಕಾಸು ದಾಖಲಾತಿಗಳು ಹಾಗೂ ಇತರ ಪ್ರಮುಖ ದಾಖಲೆಗಳನ್ನು ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ. ಅನುದಾನದ ಲೆಕ್ಕಪತ್ರಗಳು, ಸಂಬಂಧಿತ ದಾಖಲೆಗಳು ಸೇರಿದಂತೆ ಹಲವು ದಾಖಲೆಗಳ ಪರಿಶೀಲನೆ ನಡೆಸಲಾಗಿದೆ.

ನಿಗಮದ ಹಣದಲ್ಲಿ ಬೆಂಝ್ ಕಾರು ಖರೀದಿ: ಹಗರಣದ ಆರೋಪಿ ಸತ್ಯನಾರಾಯಣ ವರ್ಮಾ ತನ್ನ ಬಳಿ ಇದ್ದ 4.2 ಕೋಟಿ ರು. ಹಣದಲ್ಲಿ 1.5 ಕೋಟಿಯಷ್ಟು ಸಾಲ ತೀರಿಸಿದ್ದಾನೆ. 1.2 ಕೋಟಿ ರು. ಬೆಲೆ ಬಾಳುವ ಬೆಂಝ್ ಕಾರ್ ಖರೀದಿಸಿದ್ದಾನೆ. ಉಳಿದ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ತೊಡಗಿಸಿದ್ದಾನೆ. ಅಲ್ಲದೇ, ಮೂರು ಕಂತುಗಳಲ್ಲಿ ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭನಿಗೆ ಹಣ ಕೊಟ್ಟಿದ್ದಾನೆ. ಮಾರ್ಚ್ 7 ರಂದು ಆನಂದರಾವ್ ಸರ್ಕಲ್‌ನಲ್ಲಿರುವ ಹೋಟೇಲ್ ಒಂದರಲ್ಲಿ 90 ಲಕ್ಷ ಹಣ ನೀಡಿದ್ದಾನೆ. ಮಾ. 7 ರಂದು ನಾಗೇಂದ್ರ, ರವಿ ನೆಕ್ಕಂಟಿಗೆ 1.2 ಕೋಟಿ ಎರಡನೇ ಕಂತಿನ ಹಣ ನೀಡಿದ್ದಾನೆ.

→ 4

ಸಂಸದ ತುಕಾರಾಂ


ಶಾಸಕ ಬಿ.ನಾಗೇಂದ್ರ


ಶಾಸಕ ನಾ.ರಾ.ಭರತ್ ರೆಡ್ಡಿ

ಶಾಸಕ ಶ್ರೀನಿವಾಸ್

ಶಾಸಕ ಕಂಪ್ಲಿ ಗಣೇಶ್

ರಾಜ್ಯ ಕಾಂಗ್ರೆಸ್ ಪಕ್ಷವನ್ನು ಒಡೆಯಲು, ಶಾಸಕರನ್ನ ಡಿವೈಡ್ ಮಾಡುವ ಉದ್ದೇಶದಿಂದ ಸಂಚು ಮಾಡಿ ಕೇಂದ್ರ, ನಮ್ಮ ಶಾಸಕರನ್ನೇ ಟಾರ್ಗೆಟ್ ಮಾಡಿ ಇ.ಡಿ ದಾಳಿ ನಡೆಸುತ್ತಿದೆ.
ಮಲ್ಲಿಕಾರ್ಜುನ ಖರ್ಗೆ
ಎಐಸಿಸಿ ಅಧ್ಯಕ್ಷ

ಯಾವ್ಯಾವ ಕ್ಷೇತ್ರಕ್ಕೆ ಎಷ್ಟು ಕೋಟಿ ಹಣ?

ಕ್ಷೇತ್ರ	ಮತಗಟ್ಟೆ	ಪ್ರತಿ ಬೂತ್‌ಗೆ	ಒಟ್ಟು ಹಣ
ಬಳ್ಳಾರಿ ಗ್ರಾ.	235	23 ಲಕ್ಷ ರು.	5 ಕೋಟಿ 22 ಲಕ್ಷ ರು.
ಬಳ್ಳಾರಿ ನಗರ	150	15 ಲಕ್ಷ	3 ಕೋಟಿ 60 ಲಕ್ಷ ರು.
ಕಂಪ್ಲಿ	180	18 ಲಕ್ಷ	3 ಕೋಟಿ 20 ಲಕ್ಷ ರು.
ಕೂಡ್ಲಿಗಿ	160	15 ಲಕ್ಷ	3 ಕೋಟಿ ರು.

ಶಾಸಕರ ಭವನದಲ್ಲೂ ಶೋಧ

ಬಳ್ಳಾರಿ ಮಾತ್ರವಲ್ಲದೇ ಬೆಂಗಳೂರಿನ ಶಾಸಕರ ಭವನದ ನಾಲ್ಕನೇ ಮಹಡಿಯಲ್ಲಿರುವ ಮಾಜಿ ಸಚಿವ ಬಿ.ನಾಗೇಂದ್ರ ಅವರ ಕೊಠಡಿ ಸಂಖ್ಯೆ 360ರಲ್ಲೂ ಬುಧವಾರ ಬೆಳ್ಳಂಬೆಳ್ಳಗೆ ಇಡಿ ಅಧಿಕಾರಿಗಳು ದಾಳಿ ಮಾಡಿ ಶೋಧ ನಡೆಸುತ್ತಿದ್ದಾರೆ. ನಾಗೇಂದ್ರ ಅವರ ಆಪ್ತ ಸಹಾಯಕ ಗೋರ್ವರ್ಧನ್ ಮನೆ ಮೇಲೆಯೂ ದಾಳಿ ಮಾಡಿ ಶೋಧ ನಡೆಸಿದೆ. ಮುಂಜಾಗ್ರತಾ ಕ್ರಮವಾಗಿ ಶಾಸಕರ ಭವನದ ಸುತ್ತಲೂ ಸಿಆರ್‌ಪಿಎಫ್ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ನಿಗಮದ 187 ಕೋಟಿ ರುಪಾಯಿ ಹಣ ದುರ್ಬಳಕೆ ಸಂಬಂಧ ಸಿಐಡಿಯ ಎಸ್‌ಐಟಿ ತಂಡವು ತನಿಖೆ ನಡೆಸಿ 12 ಮಂದಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಅಕ್ರಮ ಹಣ ವರ್ಗಾವಣೆ ಕಾಯಿದೆಯಡಿ (ಪಿಎಂಎಲ್‌ಎ) 2024ಜೂನ್ 6 ರಂದು ದೂರು ದಾಖಲಿಸಿಕೊಂಡಿತ್ತು. ಬಳಿಕ ಸಚಿವ ಇ.ಡಿ ನಾಗೇಂದ್ರ ಅವರನ್ನು ಬಂಧಿಸಿತ್ತು. ವಿಚಾರಣೆ ವೇಳೆ ನಿಗಮದ ಹಣವು ಬಳ್ಳಾರಿ ಲೋಕಸಭಾ ಚುನಾವಣೆಗೆ ಬಳಸಿಕೊಂಡಿದ್ದ ವಿಷಯ ಬೆಳಕಿಗೆ ಬಂದಿತ್ತು ಎಂದು ಇ.ಡಿ ತನ್ನ ಚಾರ್ಜ್‌ಶೀಟ್ ನಲ್ಲಿ ತಿಳಿಸಿತ್ತು.

ಏನಿದು ಪ್ರಕರಣ?

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಅಧೀಕ್ಷಕ ಪಿ.ಚಂದ್ರಶೇಖರನ್ ಆತ್ಮಹತ್ಯೆ ಬಳಿಕ ನಿಗಮದಲ್ಲಿ ಅಕ್ರಮ ವರ್ಗಾವಣೆ ಪ್ರಕರಣ ಬೆಳಕಿಗೆ ಬಂದಿತ್ತು. ನಿಗಮದಲ್ಲಿ ನಡೆದಿರುವ ಅಕ್ರಮ ಹಣಕಾಸು ವರ್ಗಾವಣೆಯ ಕುರಿತು ಚಂದ್ರಶೇಖರನ್ ಅವರು ಆರು ಪುಟಗಳ ಡೆತ್ ನೋಟ್ ಬರೆದಿಟ್ಟು 2024 ಮೇ 26ರಂದು ಶಿವಮೊಗ್ಗದ ತಮ್ಮ ನಿವಾಸದಲ್ಲಿ ಆತ್ಮಹತ್ಯೆಗೆ ಶರಣಾಗಿದ್ದರು. ನಿಗಮದ 2024-25ನೇ ಸಾಲಿನ ಯೋಜನೆಗಳಿಗೆ ಮೀಸಲಿಟ್ಟಿದ್ದ ಒಟ್ಟು 187.33 ಕೋಟಿ ರು. ಮೊತ್ತದಲ್ಲಿ 89 ಕೋಟಿ ರೂಪಾಯಿ ಅಕ್ರಮ ವರ್ಗಾವಣೆ ನಡೆದಿದೆ ಎಂದು ಚಂದ್ರಶೇಖರನ್ ಡೆತ್‌ನೋಟ್‌ನಲ್ಲಿ ನಮೂದಿಸಿದ್ದರು. ಈ ಅಕ್ರಮಕ್ಕೆ ನಿಗಮದ ಹಿರಿಯ ಅಧಿಕಾರಿಗಳು ಮತ್ತು ಯೂನಿಯನ್ ಬ್ಯಾಂಕಿನ ಅಧಿಕಾರಿಗಳು ಕಾರಣ ಎಂದು ಅವರು ಹೆಸರು ಸಹಿತ ಉಲ್ಲೇಖಿಸಿದ್ದರು. ಆತ್ಮಹತ್ಯೆ ಪ್ರಕರಣದಿಂದ ಬಹುಕೋಟಿ ಹಗರಣ ಬಯಲಿಗೆ ಬಂದಿತ್ತು.

ಜೈಲು ಶಿಕ್ಷೆ ಜಾರಿಗೆ ತೆಲಂಗಾಣ ಹೈಕೋರ್ಟ್ ತಡೆ
ಜಾಮೀನು ಮಂಜೂರು, ಮರಳಿದ ಶಾಸಕ ಸ್ಥಾನ

ರೆಡ್ಡಿಗೆ ಡಬಲ್ ಜಾಮೂನು

ವಿಶ್ವವಾಣಿ ಸುದ್ದಿಮನೆ

ಹೈದರಾಬಾದ್/ಬೆಂಗಳೂರು: ಓಬಳಾಪುರಂ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಅವರಿಗೆ ತೆಲಂಗಾಣ ಹೈಕೋರ್ಟ್ ಬಿಗ್ ರಿಲೀಫ್ ನೀಡಿದೆ. ವಿಶೇಷ ಸಿಬಿಐ ನ್ಯಾಯಾಲಯ ಇತ್ತೀಚೆಗೆ ವಿಧಿಸಿದ್ದ ಏಳು ವರ್ಷಗಳ ಜೈಲು ಶಿಕ್ಷೆಯನ್ನು ಈ ಹಂತದಲ್ಲಿ ಜಾರಿಗೊಳಿಸುವ ಅಗತ್ಯವಿಲ್ಲ ಎಂದು ಬುಧವಾರ ಹೈಕೋರ್ಟ್ ತೀರ್ಪು ನೀಡಿ ಜನಾರ್ದನ ರೆಡ್ಡಿಗೆ ಷರತ್ತುಬದ್ಧ ಜಾಮೀನು ನೀಡಿದೆ. ಇದರಿಂದ ರೆಡ್ಡಿ ಮತ್ತೆ ಶಾಸಕ ಸ್ಥಾನವನ್ನು ಅಲಂಕರಿಸುವಂತಾಗಿದೆ.

ಇತ್ತೀಚೆಗಷ್ಟೇ ನ್ಯಾಂಪಲ್ಲಿಯ ಸಿಬಿಐ ವಿಶೇಷ ನ್ಯಾಯಾಲಯವು ಅಕ್ರಮ ಗಣಿಗಾರಿಕೆ ಪ್ರಕರಣದ ಎಲ್ಲಾ ಅಪರಾಧಿಗಳಿಗೆ ತಲಾ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿತ್ತು. ಸಿಬಿಐ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಗಾಲಿ ಜನಾರ್ದನ ರೆಡ್ಡಿ ಹೈಕೋರ್ಟ್ ಮೊರೆ ಹೋಗಿದ್ದರು. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಸಿಬಿಐ ನ್ಯಾಯಾಲಯದ ತೀರ್ಪನ್ನು ಅಮಾನತಿನಲ್ಲಿಟ್ಟಿದ್ದು, ಜನಾರ್ದನ ರೆಡ್ಡಿ, ಅವರ ಆಪ್ತ ಸಹಾಯಕರಾದ ಅಲಿ ಖಾನ್, ಬಿ.ವಿ.ಶ್ರೀನಿವಾಸ್ ರೆಡ್ಡಿ ಹಾಗೂ ರಾಜಗೋಪಾಲ್‌ಗೆ ಜಾಮೀನು ಮಂಜೂರು ಮಾಡಿದೆ.

ನ್ಯಾಂಪಲ್ಲಿ ಸಿಬಿಐ ನ್ಯಾಯಾಲಯವು ಮೇ 6 ರಂದು ನೀಡಿದ್ದ ತೀರ್ಪಿನಲ್ಲಿ ನಾಲ್ವರು ಆರೋಪಿಗಳಿಗೆ ಏಳು ವರ್ಷಗಳ ಜೈಲು ಶಿಕ್ಷೆ ಮತ್ತು ತಲಾ 20 ಸಾವಿರ ರು. ದಂಡ ವಿಧಿಸಿತ್ತು. ಸರಕಾರದ ಮಾಜಿ ಅಧಿಕಾರಿಯಾದ ವಿ.ಡಿ. ರಾಜಗೋಪಾಲ್‌ಗೆ ನಾಲ್ಕು ವರ್ಷಗಳ ಹೆಚ್ಚುವರಿ ಶಿಕ್ಷೆ ವಿಧಿಸಿತ್ತು. ಸಿಬಿಐ ನ್ಯಾಯಾಲಯ ಪ್ರಕಟಿಸಿರುವ ಶಿಕ್ಷೆ ಅಮಾನತು ಮಾಡುವಂತೆ ಕೋರಿ ಗಾಲಿ ಜನಾರ್ದನ ರೆಡ್ಡಿ ಸಲ್ಲಿಸಿದ್ದ ಮಧ್ಯಂತರ ಅರ್ಜಿಯ ವಿಚಾರಣೆ ಮಂಗಳವಾರ ನಡೆದಿತ್ತು. ಹಿರಿಯ ವಕೀಲರಾದ ಬಿ. ನಳಿನ್ ಕುಮಾರ್ ಮತ್ತು ನಾಗಮುತ್ತು ಅರ್ಜಿದಾರರ ಪರವಾಗಿ ವಾದ ಮಂಡಿಸಿದ್ದರು. ಅರ್ಜಿದಾರರು ಈಗಾಗಲೇ ಮೂರುವರೆ ವರ್ಷ ಜೈಲು ಶಿಕ್ಷೆ ಅನುಭವಿಸಿದ್ದಾರೆ. ಜನಾರ್ದನ ರೆಡ್ಡಿ ಅವರ ಶಾಸಕ ಸ್ಥಾನವೂ ರದ್ದಾಗಿದೆ. ಹಾಗಾಗಿ ಶಿಕ್ಷೆಯನ್ನು ಅಮಾನತು ಮಾಡಬೇಕು ಎಂದು ನ್ಯಾಯಪೀಠವನ್ನು ಕೋರಿದ್ದರು.

ಶಾಸಕತ್ವ ಸ್ಥಾನ ಮತ್ತೆ ವಾಪಸ್: ಸಿಬಿಐ ನ್ಯಾಯಾಲಯದಿಂದ ಶಿಕ್ಷೆ ಪ್ರಕಟವಾದ ಹಿನ್ನೆಲೆಯಲ್ಲಿ ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿಯವರು ಗಾಲಿ ಜನಾರ್ದನ ರೆಡ್ಡಿ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಿ ಅಧಿಸೂಚನೆ ಹೊರಡಿಸಿದ್ದಾರೆ. ಅಲ್ಲದೇ ತೆರವಾಗಿರುವ ಶಾಸಕ ಸ್ಥಾನ ಭರ್ತಿಗೆ ಚುನಾವಣೆ ಅಧಿಸೂಚನೆ ಹೊರಡಿಸಿದರೆ ಅರ್ಜಿದಾರರು ಸಾಕಷ್ಟು ನಷ್ಟ ಅನುಭವಿಸುತ್ತಾರೆ ಎಂದು ಜನಾರ್ದನ ರೆಡ್ಡಿ ಪರ ವಕೀಲರು ವಾದ ಮಂಡಿಸಿದರು.

→ 4

ಜಾಮೀನಿಗೆ ಷರತ್ತುಗಳೇನು

- ಅಪರಾಧಿಗಳು ದೇಶ ಬಿಟ್ಟು ಹೋಗುವಂತಿಲ್ಲ
- ಪಾಸ್‌ಪೋರ್ಟ್ ಅನ್ನು ಕೋರ್ಟ್ ವಶಕ್ಕೆ ನೀಡಬೇಕು
- ಎಲ್ಲರೂ ತಲಾ 10 ಲಕ್ಷ ರು. ಇಬ್ಬರ ಭದ್ರತೆ ಒದಗಿಸಬೇಕು

ಸೊಂಪಾದ ಪುಟಗಳು

ಕೈ ಸವೆಯುವವರೆಗೂ ನಿರಂತರ ಬರೆಯಲು ಸೈ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ಓ ಹೆಣ್ಣೇ, ಗಂಡನನ್ನು ಏಕೆ ಕೊಂದೆ?
ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ



ಬಂಗಾರವನ್ನು ಕುಲುಮೆಯಲ್ಲಿಟ್ಟರೆ ಅದು ತನ್ನ ಕಲ್ಮಶವನ್ನು ಕಳೆದುಕೊಂಡು ಮತ್ತಷ್ಟು ಪ್ರಕಾಶಮಾನವಾಗಿ ಹೊಳೆಯುತ್ತದೆ. ನೀವು ಕಷ್ಟದಲ್ಲಿ ಸಿಲುಕಿದರೆ ನಿಮ್ಮಲ್ಲಿರುವ ಸಾಮರ್ಥ್ಯ ಹೊರಬಂದು ನೀವು ಮತ್ತಷ್ಟು ಪ್ರಕಾಶಿಸಲು ಅನುವು ಮಾಡಿಕೊಟ್ಟಂತಾಗುತ್ತದೆ. ಕಷ್ಟಗಳು ನಮ್ಮನ್ನು ಗಟ್ಟಿ ಮಾಡಲು ಬರುತ್ತವೆ ಎಂದು ಭಾವಿಸಿ.

ವಕ್ರತುಂಡೋಕ್ತಿ

ಯಾವ ಗಂಡ ಹೆಂಡತಿಯ ಗೊರಕೆಯಿಂದ ಡಿಸ್ಟರ್ಬ್ ಆಗುವುದಿಲ್ಲವೋ, ಆತ ಆಕೆಯ ಬೈಗುಳಗಳಿಂದಲೂ ಡಿಸ್ಟರ್ಬ್ ಆಗಲಾರ.

ಸಿಎಂ ಮತ್ತೆ ದೆಹಲಿಗೆ

ಬೆಂಗಳೂರು: ಪಕ್ಷದ ಹೈಕಮಾಂಡ್ ಜತೆ ಚರ್ಚೆ ನಡೆಸಿ ಮಂಗಳವಾರವಷ್ಟೇ ಬೆಂಗಳೂರಿಗೆ ವಾಪಸಾಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಸಂಜೆ ಮತ್ತೆ ದೆಹಲಿಗೆ ತೆರಳಲಿದ್ದಾರೆ. ಮಂಗಳವಾರ ದೆಹಲಿ ಪ್ರವಾಸದ ವೇಳೆ ಪಕ್ಷದ ಹೈಕಮಾಂಡ್ ಜತೆ ಹಲವು ವಿಷಯಗಳನ್ನು ಚರ್ಚಿಸಿ ವಾಪಸಾಗಿದ್ದರು. ಆದರೀಗ ಪುನಃ ತೆರಳುತ್ತಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಡಿಕೆಶಿ ಭೇಟಿ ಮಾಡಿದ ಜೆಡಿಎಸ್ ಶಾಸಕಿ

ದೆಹಲಿ: ದೇವದುರ್ಗದ ಶಾಸಕಿ ಜೆಡಿಎಸ್ ನ ಕರೆಮ್ಮ ನಾಯಕ್ ಅವರು ಡಿಸಿಎಂ ಡಿ ಕೆ ಶಿವಕುಮಾರ್ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿರುವುದು ಕುತೂಹಲ ಮೂಡಿಸಿದೆ. ಡಿಸಿಎಂ ದೆಹಲಿ ಭೇಟಿಯಲ್ಲಿದ್ದಾಗ ಭೇಟಿ ಮಾಡಿರುವ ಶಾಸಕಿ, ಭೇಟಿಯ ಉದ್ದೇಶ ಬಹಿರಂಗ ಪಡಿಸಿಲ್ಲ.

ಶುಭಾಂಶು ಶುಕ್ಲ ಗಗನ ಯಾನ ಮತ್ತೆ ಮುಂದಕ್ಕೆ

ದೆಹಲಿ: ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಮತ್ತು ಇತರ ಮೂವರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕರೆದೊಯ್ಯಲು ಬುಧವಾರ ನಿಗದಿಯಾಗಿದ್ದ ಆಕ್ಸಿಯಮ್-4 ಉಡ್ಡಯನ ಕಾರ್ಯಾಚರಣೆಯನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದೆ. ಸ್ಪೇಸ್ ಎಕ್ಸ್ ಫಾಲ್ಕನ್-9 ರಾಕೆಟ್‌ನಲ್ಲಿ ಆಮ್ಲಜನಕ ಸೋರಿಕೆಯನ್ನು ಸರಿಪಡಿಸುವ ಉದ್ದೇಶದಿಂದ ಕಾರ್ಯಚರಣೆಯನ್ನು ಮುಂದೂಡಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಒಂದಕ್ಕೆ 2 ಲಕ್ಷದಂತೆ ಪಾಕಿಸ್ತಾನದ ಕತ್ತೆಗಳನ್ನು ಖರೀದಿಸುತ್ತಿರುವ ಚೀನಾ



ಮರುಗಣತಿ ನಿರ್ಧಾರ ಮರಳಿ ವಾಕ್ ಸಮರ

ಬೆಂಗಳೂರು: ಭಾರಿ ವಿವಾದಕ್ಕೆ ಕಾರಣವಾಗಿರುವ ಜಾತಿ ಗಣತಿಗೆ ಹಲವು ವಿರೋಧ ವ್ಯಕ್ತವಾಗಿರುವುರಿಂದ ಮರುಗಣತಿ ಸರಕಾರ ಮುಂದಾಗುತ್ತಿದ್ದಂತೆ, ರಾಜ್ಯದಲ್ಲಿ ಪರ-ವಿರೋಧ ಚರ್ಚೆಗಳು ಶುರುವಾಗಿದ್ದು, ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಸ್ಪಷ್ಟನೆ ಸಿಗಲಿದೆ.

ದೆಹಲಿಯಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಮಂಗಳವಾರ ಸಭೆಯಾದ ಬಳಿಕ ಮರುಗಣತಿಗೆ ಸರಕಾರ ತೀರ್ಮಾನಿಸಿತ್ತು. ಆದರೀಗ ಸರಕಾರದ ಈ ನಡೆಯನ್ನು ಕಾಂಗ್ರೆಸಿನ ಲಿಂಗಾಯತ ಹಾಗೂ ಒಕ್ಕಲಿಗ ನಾಯಕರು ಸ್ವಾಗತಿಸಿದ್ದರೆ, ಬಿಜೆಪಿ ನಾಯಕರು ಮರುಗಣತಿಯ ಮೂಲಕ ಸಿದ್ದರಾಮಯ್ಯ ಅವರ ಸೋಲೊಪ್ಪಿಕೊಂಡಿದ್ದಾರೆ ಎಂದು ಟೀಕಿಸಿದ್ದಾರೆ. ಕಾಂತರಾಜು ಅವರು ಸಲ್ಲಿಸಿದ್ದ ಜಾತಿ ಗಣತಿಯಲ್ಲಿ ಹಲವು ಸಮುದಾಯಗಳ ಸಂಖ್ಯೆಯನ್ನು ತಪ್ಪಾಗಿ ತೋರಿಸಲಾಗಿದೆ ಎನ್ನುವ ಆರೋಪ ಕೇಳಿ ಬಂದಿತ್ತು. ಇದೀಗ ಮರು ಸಮೀಕ್ಷೆಗೆ ಮುಂದಾಗಿರುವುದಕ್ಕೆ ಲಿಂಗಾಯತ, ಒಕ್ಕಲಿಗ, ಬ್ರಾಹ್ಮಣ ಸಮುದಾಯದ ಸ್ವಾಮೀಜಿಗಳು ಹಾಗೂ ಮುಖಂಡರು ಸ್ವಾಗತಿಸಿದ್ದಾರೆ.

ಮರುಗಣತಿಗೆ ಬಿಜೆಪಿ ವಿರೋಧಿಸಿರುವುದಕ್ಕೆ ಪ್ರತಿಕ್ರಿಯಿಸಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಾತಿ ಗಣತಿ ವರದಿ ವಿರೋಧ ಮಾಡಿದವರು ಅವರಲ್ಲವೇ? ಅವರು ಜಾತಿಗಣತಿ ವರದಿ ಸ್ವೀಕಾರ ಮಾಡಲಿಲ್ಲ ಯಾಕೆ? ಈ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿಲ್ಲ.

ಹೈಕಮಾಂಡ್ ನಾಯಕರು ಹಾಗೂ ಮುಖ್ಯಮಂತ್ರಿಗಳು ಹೇಳಿದ್ದನ್ನು ಪಾಲನೆ ಮಾಡಬೇಕು. ಕಾಂತರಾಜು ಅವರ ವರದಿಯ ಬಗ್ಗೆಯೂ ಚರ್ಚೆಯಾಗಲಿದೆ. ಮೂರು ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಎಲ್ಲಾ ಸಚಿವರು ಸಲಹೆಗಳನ್ನು ನೀಡಿದ್ದಾರೆ. ಗುರುವಾರ ಕೂಲಂಕಷವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು. ಯಾರ ಮನಸ್ಸಿಗೂ ನೋವಾಗದಂತೆ, ರಾಜ್ಯದ ಜನರಿಗೆ ಅನುಕೂಲವಾಗಬೇಕು ಎನ್ನುವುದು ನಮ್ಮ ಉದ್ದೇಶ.
- ಶಿವರಾಜ್ ತಂಗಡಗಿ, ಸಚಿವ

ಎಂಟು ಜಿಲ್ಲೆಗಳಲ್ಲಿ ರೆಡ್ ಅಲರ್ಟ್

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಮತ್ತೆ ಚುರುಕುಗೊಂಡಿದೆ. ರಾಜ್ಯದಲ್ಲಿ ಮುಂದಿನ 48 ಗಂಟೆಗಳಲ್ಲಿ ಧಾರಾಕಾರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದ.ಕನ್ನಡ, ಉ.ಕನ್ನಡ, ಉಡುಪಿ, ಬೆಳಗಾವಿ, ಚಿಕ್ಕಮಗಳುರು, ಶಿವ ಮೊಗ್ಗ, ಕೊಡಗು, ಹಾವೇರಿ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದ್ದು ರೆಡ್ ಅಲರ್ಟ್ ಘೋಷಿಸಲಾಗಿದೆ.

ಇಂಡಿ: ಚಾಕು ಇರಿತಕ್ಕೆ ಮಹಿಳಾ ಅಧಿಕಾರಿ ಬಲಿ

ವಿಜಯಪುರ: ಇಂಡಿ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಮಹಿಳಾ ಅಧಿಕಾರಿಯನ್ನು ದುಷ್ಕರ್ಮಿಯೊಬ್ಬ ಚಾಕುವಿನಿಂದ ಇರಿದ ಬರ್ಬರ ಘಟನೆ ನಡೆದಿದೆ. ರೇಣುಕಾ ಸಾಯಬಣ್ಣ ಕನ್ನೊಳ್ಳಿ (30) ಮೃತ ಅಧಿಕಾರಿ. ಗುರುವಾರ ಬೆಳಗ್ಗೆ ರೇಣುಕಾ ಇಂಡಿ ಪಟ್ಟಣದ ವೃತ್ತದ ಬಳಿ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಆರೋಪಿ ಸಂಜು ಬನಸೋಡೆ ಎನ್ನುವಾತ ಅವರನ್ನು ಅಡ್ಡಗಟ್ಟಿ ಚಾಕುವಿನಿಂದ ಮನ ಬಂದಂತೆ ಇರಿದಿದ್ದಾನೆ. ಗಂಭೀರ ಗಾಯಗೊಂಡ ರೇಣುಕಾ ಅವರನ್ನು ಸ್ಥಳೀಯರು ತಕ್ಷಣವೇ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ.

ಆರ್‌ಸಿಬಿ, ಕೆಎಸ್‌ಸಿಎ, ಡಿಎನ್‌ಎ ಹೊಣೆ: ಹೈಕೋರ್ಟ್‌ನಲ್ಲಿ ಅಡ್ವೋಕೇಟ್ ಜನರಲ್ ವಾದ

ಕಾಲ್ತುಳಿತಕ್ಕೆ ಆರ್‌ಸಿಬಿ ಕಾರಣ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣ ಬಳಿಯ ಕಾಲ್ತುಳಿತಕ್ಕೆ ಸರಕಾರವೇ ಕಾರಣವೆಂದು ಆರೋಪಿಸಿದ್ದ ಆರ್‌ಸಿಬಿ, ಕೆಎಸ್‌ಸಿಎ ವಾದಕ್ಕೆ ಪ್ರತಿಯಾಗಿ ವಾದ ಮಂಡಿಸಿರುವ ಸರಕಾರ 'ಬ್ರ್ಯಾಂಡ್ ಮೌಲ್ಯ ಹೆಚ್ಚಿಸಿಕೊಳ್ಳಲು ಪ್ರಾಣಕ್ಕೆ ಆರ್‌ಸಿಬಿ, ಡಿಎನ್‌ಎ ಹಾಗೂ ಕೆಎಸ್‌ಸಿಎ ಕುತ್ತುತಂದಿದೆ' ಎನ್ನುವ ವಾದಿಸಿದೆ.

ಹೈಕೋರ್ಟ್‌ನಲ್ಲಿ ನಡೆದ ವಿಚಾರಣೆ ವೇಳೆ ಸರಕಾರದ ಪರವಾಗಿ ವಾದಿಸಿದ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಕಾಲ್ತುಳಿತದಲ್ಲಿ 11 ಜನ ಮೃತಪಟ್ಟು, 50ಕ್ಕೂ ಹೆಚ್ಚು ಜನರು ಗಾಯಗೊಳ್ಳಲು ಆರ್‌ಸಿಬಿ ಮತ್ತು ಡಿಎನ್‌ಎ ಸೂಕ್ತ ರೀತಿಯಲ್ಲಿ ಜನ ಸಂದಣಿ ನಿರ್ವಹಣೆ ಮಾಡದಿರುವುದೇ ಕಾರಣ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಬೇಕು ಎಂದು ಟ್ವೀಟ್‌ಗಳನ್ನು ಮಾಡಿದೆ. ಆದರೆ, ಇದಕ್ಕೆ ಸೂಕ್ತವಾದ ಅನುಮತಿಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದಿಲ್ಲ. ಸುಮಾರು 4 ಲಕ್ಷ ಜನರು ಕ್ರೀಡಾಂಗಣದ ಮುಂಭಾಗ ನೆರೆದಿದ್ದರೂ, 21 ಗೇಟ್‌ಗಳ ಪೈಕಿ 3 ಗೇಟ್‌ಗಳನ್ನು ಮಾತ್ರ ತೆರೆಯಲಾಗಿದೆ. ದುರ್ಘಟನೆಗೆ ಆರ್‌ಸಿಬಿ, ಡಿಎನ್‌ಎ ಮತ್ತು ಕೆಎಸ್‌ಸಿಎ ಕಾರಣ ಎಂದು ಬಲವಾಗಿ ಆಕ್ಷೇಪಿಸಿದರು.

→ 4

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಹಮ್ಮಿಕೊಂಡ ಕಾರ್ಯಕ್ರಮಕ್ಕೆ ರಾಜ್ಯಪಾಲರು ಅವರಾಗಿಯೇ ಬರಲಿಲ್ಲ, ನಾನೇ ಆಹ್ವಾನಿಸಿದ್ದೆ. ಜೂನ್ 4ರಂದು ಕೆಎಸ್‌ಸಿಎ ಹಾಗೂ ಆರ್‌ಸಿಬಿ ವತಿಯಿಂದ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ನನಗೆ ಅಂದು ಬೆ.11.29ಕ್ಕೆ ಕೆಎಸ್‌ಸಿಎ ವತಿಯಿಂದ ಶಂಕರ್ ಮತ್ತು ಜಯರಾಮ್ ಆಹ್ವಾನ ನೀಡಿ ಮನವಿ ಮಾಡಿಕೊಂಡರು. ರಾಜ್ಯಪಾಲರನ್ನು ಆಹ್ವಾನ ಮಾಡಿರುವುದಾಗಿ ತಿಳಿಸಿದರು. ಬಳಿಕ ಗೋವಿಂದರಾಜು ಅವರು ರಾಜ್ಯಪಾಲರಿಗೆ ಕರೆ ಮಾಡಿ ಫೋನ್ ನನಗೆ ಕೊಟ್ಟರು. ಆಗ ನಾನು ಕೂಡ ಕಾರ್ಯಕ್ರಮಕ್ಕೆ ತೆರಳುತ್ತಿದ್ದು ನೀವು ಬನ್ನಿ ಎಂದು ಆಹ್ವಾನಿಸಿದೆ.
- ಸಿದ್ದರಾಮಯ್ಯ, ಮುಖ್ಯಮಂತ್ರಿ

ಜಿಲ್ಲಾಧಿಕಾರಿ ಮುಂದೆ ಗಾಯಾಳುಗಳ ಹೇಳಿಕೆ

ಬೆಂಗಳೂರು ಜಿಲ್ಲಾಧಿಕಾರಿ ಜಗದೀಶ್ ಅವರು ನಡೆಸುತ್ತಿರುವ ಮ್ಯಾಜಿಸ್ಟ್ರೇಟ್ ತನಿಖೆಯಲ್ಲಿ 14 ಗಾಯಾಳುಗಳು ಹಾಜರಾಗಿ, ತಮ್ಮ ಹೇಳಿಕೆ ದಾಖಲಿಸಿದ್ದಾರೆ. ಹೇಳಿಕೆ ನೀಡಿದ ಬಳಿಕ ಗಾಯಾಳು ಮೋನಿಷ್ ಮಾಧ್ಯಮ ಗಳೊಂದಿಗೆ ಮಾತನಾಡಿ, ಜಿಲ್ಲಾಧಿಕಾರಿಗಳು ನೀಡಿದ ನೋಟಿಸ್ ಮೇರೆಗೆ ಹಾಜರಾಗಿ ಹೇಳಿಕೆ ದಾಖಲಿಸಿದ್ದೇನೆ. ಘಟನೆ ಬಗ್ಗೆ ಪ್ರಾಥಮಿಕ ಮಾಹಿತಿ ಕುರಿತ ಪ್ರಶ್ನೆಗಳನ್ನು ಕೇಳಿದರು. ಇದಕ್ಕೆ ಸಮಂಜಸವಾಗಿ ಉತ್ತರಿಸಿದ್ದೇನೆ ಎಂದರು. ದುರ್ಘಟನೆಗೆ ಆರ್‌ಸಿಬಿ ಮ್ಯಾನೇಜ್‌ಮೆಂಟ್ ಹಾಗೂ ರಾಜ್ಯ ಸರಕಾರದ ತಪ್ಪಿದೆ. ಏಕಕಾಲದಲ್ಲಿ ಎರಡೂ ಕಡೆ ಕಾರ್ಯಕ್ರಮ ಆಯೋಜಿಸಬಾ ರದಾಗಿತ್ತು. ಎರಡು ದಿನ ಬಿಟ್ಟು ಕಾರ್ಯಕ್ರಮ ಹಮ್ಮಿಕೊಳ್ಳ ಬಹುದಿತ್ತು. ವಿಧಾನಸೌಧದ ಬಳಿ ಹೆಚ್ಚಿನ ಪೊಲೀಸರಿದ್ದರೆ, ಕ್ರೀಡಾಂಗಣದಲ್ಲಿ ಕಡಿಮೆ ಸಂಖ್ಯೆಯಲ್ಲಿ ಭದ್ರತೆಗೆ ನಿಯೋಜನೆಗೊಂಡಿದ್ದರು. ಇನ್ಮುಂದೆ ಸ್ಟೇಡಿಯಂಗೆ ಹೋಗಿ ಪಂದ್ಯ ವೀಕ್ಷಿಸಲು ಭಯವಾಗುತ್ತದೆ. ಮುಂಚಿತವಾಗಿ ಟಿಕೆಟ್ ನೀಡಿದ್ದರೆ ಅನಾಹುತ ಆಗುತ್ತಿರಲಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬಳ್ಳಾರಿ-ಚಿಕ್ಕಜಾಜೂರು ರೈಲ್ವೆ ಡಬಲಿಂಗ್‌ಗೆ 3342 ಕೋಟಿ ರು.

ಬಳ್ಳಾರಿ-ಚಿಕ್ಕಜಾಜೂರು ರೈಲ್ವೆ ಮಾರ್ಗ ಡಬ್ಲಿಂಗ್

ದೆಹಲಿ: 185 ಕಿ.ಮೀ. ಉದ್ದದ ಬಳ್ಳಾರಿ-ಚಿಕ್ಕಜಾಜೂರು ರೈಲು ಮಾರ್ಗದಲ್ಲಿ 3,342 ಕೋಟಿ ರು. ವೆಚ್ಚದಲ್ಲಿ ಡಬಲಿಂಗ್ ಕಾಮಗಾರಿಗೆ(ಮತ್ತೊಂದು ರೈಲು ಹಳಿ ಮಾರ್ಗ ಜೋಡಣೆಗೆ) ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಕರ್ನಾಟಕದ ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳು ಹಾಗೂ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಮೂಲಕ ಹಾದುಹೋಗುತ್ತದೆ. ಅಲ್ಲದೇ, ಈ ಮಾರ್ಗವು ಮಂಗಳೂರಿನ ನವಮಂಗಳೂರು ಬಂದರನ್ನು ಸಿಕಂದರಾಬಾದ್‌ಗೆ ಜೋಡಿಸುತ್ತದೆ.

ರೈಲು ಮಾರ್ಗ ಡಬಲಿಂಗ್ ಕಾಮಗಾರಿಯಿಂದಾಗಿ ಕಬ್ಬಿಣದ ಅದಿರು, ಕಲ್ಲಿದ್ದಲು, ಉಕ್ಕು, ರಸಗೊಬ್ಬರ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಆಹಾರ ಧಾನ್ಯಗಳ ಸಾಗಣೆಗೆ ಬಹಳ ಅನುಕೂಲವಾಗಲಿದೆ. ವಾರ್ಷಿಕವಾಗಿ 1.89 ಕೋಟಿ ಟನ್ ಸರಕು ಸಾಗಣೆ ಸರಾಗವಾಗಲಿದೆ.

ಬಳ್ಳಾರಿ-ಚಿಕ್ಕಜಾಜೂರು ರೈಲು ಮಾರ್ಗದಲ್ಲಿ 19 ನಿಲ್ದಾಣಗಳು, 29 ಪ್ರಮುಖ ಸೇತುವೆಗಳು, 230 ಸಣ್ಣ ಸೇತುವೆಗಳು, 21 ರೈಲ್ವೆ ಮೇಲ್ಸೇತುವೆಗಳು ಮತ್ತು 85 ರೈಲ್ವೆ ಅಂಡರ್‌ಪಾಸ್‌ಗಳು ಬರುತ್ತವೆ. ಬಳ್ಳಾರಿ-ಚಿಕ್ಕಜಾಜೂರು ರೈಲು ಮಾರ್ಗದಲ್ಲಿ ಎರಡನೇ ಹಳಿ ಬರುವುದರಿಂದ ಈ ಮಾರ್ಗದಲ್ಲಿನ 470 ಹಳ್ಳಿಗಳ 13 ಲಕ್ಷ ಜನರಿಗೆ ಪ್ರಯೋಜನವಾಗಲಿದೆ. 28.19 ಲಕ್ಷ ಜನಸಂಖ್ಯೆಯ 1,408 ಹಳ್ಳಿಗಳಿಗೆ ಸಂಪರ್ಕ ಸೌಲಭ್ಯವನ್ನು ಹೆಚ್ಚಿಸಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ಬುಧವಾರ ತಿಳಿಸಿದ್ದಾರೆ.

ಸಂಪುಟ ಸಭೆ: ಚಿಕ್ಕಬಳ್ಳಾಪುರಕ್ಕೆ ಭರಪೂರ ಅನುದಾನ?

ಕ್ಷೇತ್ರದ ಕಾಮಗಾರಿಗಳಿಗೆ 250ರಿಂದ 300 ಕೋಟಿ ರು. ಅನುದಾನದ ನಿರೀಕ್ಷೆ: ಶಾಸಕ ಪ್ರದೀಪ್ ಈಶ್ವರ್

ಬೆಂಗಳೂರು: ಗಡಿ ಜಿಲ್ಲೆಯಾಗಿರುವ ಚಾಮರಾಜನಗರದಲ್ಲಿ ವಿಶೇಷ ಸಚಿವ ಸಂಪುಟ ಸಭೆಯ ಬಳಿಕ ಇದೀಗ ಆಂಧ್ರದೊಂದಿಗೆ ಗಡಿ ಹಂಚಿಕೊಂಡಿರುವ ಚಿಕ್ಕಬಳ್ಳಾಪುರದಲ್ಲಿ ಸಚಿವ ಸಂಪುಟಕ್ಕೆ ಸರಕಾರ ಸಿದ್ಧತೆ ನಡೆಸಿಕೊಂಡಿದೆ. ಈ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರವೊಂದಕ್ಕೆ ಭಾರಿ ಪ್ರಮಾಣದ ಕಾಮಗಾರಿಗಳಿಗೆ ಅನುಮೋದನೆ ಸಿಗುವ ಸಾಧ್ಯತೆಯಿದೆ.

ಮುಂದಿನ ಗುರುವಾರ ಚಿಕ್ಕಬಳ್ಳಾಪುರದ ನಂದಿಬೆಟ್ಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ವಿಶೇಷ ಸಚಿವ ಸಂಪುಟ ಸಭೆ ನಡೆಯಲಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಹಲವು ಯೋಜನೆಗಳು ಹರಿದುಬರುವ ಸಾಧ್ಯತೆಯಿದೆ. ಅದರಲ್ಲಿಯೂ ಪ್ರದೀಪ್ ಈಶ್ವರ್ ಪ್ರತಿನಿಧಿಸುವ ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಕನಿಷ್ಠ 250 ಕೋಟಿ ಮೊತ್ತದ ಯೋಜನೆಗಳಿಗೆ ಒಪ್ಪಿಗೆ ನೀಡುವುದು ಬಹುತೇಕ ಖಚಿತ ಎನ್ನಲಾಗುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಬ್ಬರೊಂದಿಗೆ ಉತ್ತಮ ಒಡನಾಟ ಹೊಂದಿರುವ ಪ್ರದೀಪ್ ಈಶ್ವರ್ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ತಮ್ಮ ಕ್ಷೇತ್ರದ ಹಲವು ಯೋಜನೆಗಳಿಗೆ ಅನುಮೋದನೆ ನೀಡುವಂತೆ ಈಗಾಗಲೇ ಮನವಿ ಸಲ್ಲಿಸಿದ್ದು, ಬಹುತೇಕ ಯೋಜನೆಗಳಿಗೆ ಸರಕಾರ ಒಪ್ಪಿಗೆ ನೀಡುವ ಭರವಸೆ ಸಿಕ್ಕಿದೆ. ಆದ್ದರಿಂದ ಮುಂದಿನ ಗುರುವಾರ ಕ್ಷೇತ್ರಕ್ಕೆ ಭರ್ಜರಿ ಯೋಜನೆಗಳು ಸಿಗುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

→ 4

ರೋಪ್ ವೇ ಕಾಮಗಾರಿಗೆ ವೇಗ

ಇನ್ನು ನಂದಿಬೆಟ್ಟಕ್ಕೆ ರೋಪ್ ವೇ ಕಾಮಗಾರಿಯನ್ನು ಆರಂಭಿಸಲು ಈಗಾಗಲೇ ಸರಕಾರ ತೀರ್ಮಾನಿಸಿತ್ತು. ಆದರೆ ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿನ ಕಾನೂನು ತೊಡಕಿನಿಂದ ಸಮಸ್ಯೆಯಾಗಿತ್ತು. ಆದರೀಗ ಅಲ್ಲಿನ ಸಮಸ್ಯೆ ಬಗೆಹರಿದಿದ್ದು, ಅರಣ್ಯ ಇಲಾಖೆಯಿಂದ ಅನುಮತಿ ಸಿಗಬೇಕಿದೆ. ಆದ್ದರಿಂದ ಈ ವಿಷಯಕ್ಕೆ ಸಂಬಂಧಿಸಿದಂತೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ಈಗಾಗಲೇ ಮನವಿ ಸಲ್ಲಿಸಲಾಗಿದ್ದು, ಶೀಘ್ರವೇ ಅರಣ್ಯ ಇಲಾಖೆಯಿಂದ ಅನುಮತಿ ಸಿಗುವ ಸಾಧ್ಯತೆಯಿದೆ. ಈ ಸಚಿವ ಸಂಪುಟ ಸಭೆಯಲ್ಲಿಯೂ ಈ ಬಗ್ಗೆ ಚರ್ಚಿಸಿ, ಅನುಮತಿ ಸಿಗುವ ಸಾಧ್ಯತೆಯಿದೆ ಎನ್ನಲಾಗಿದೆ.

ಶಾಸಕರಿಗೆ ಮೆಚ್ಚುಗೆ

ಶಾಸಕರಾಗಿ ಆಯ್ಕೆಯಾಗುತ್ತಿದ್ದಂತೆ ಪ್ರದೀಪ್ ಈಶ್ವರ್ ಅವರು 'ನಮಸ್ತೆ ಚಿಕ್ಕಬಳ್ಳಾಪುರ' ಮೂಲಕ ಚಿಕ್ಕಬಳ್ಳಾಪುರ ನಗರದ ವಾರ್ಡ್‌ಗಳನ್ನು ಅಧಿಕಾರಿಗಳೊಂದಿಗೆ ಓಡಾಡಿ ಸಮಸ್ಯೆ ಬಗೆಹರಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಇದಾದ ಬಳಿಕ ಕ್ಷೇತ್ರದ ವ್ಯಾಪ್ತಿಗೆ ಬರುವ ಗ್ರಾಮಗಳ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ 'ನಮ್ಮೂರಿಗೆ ನಮ್ಮ ಶಾಸಕ' ಎನ್ನುವ ಅಭಿಯಾನದ ಮೂಲಕ ವಾರದಲ್ಲಿ ಮೂರು ದಿನ ಗ್ರಾಮಗಳಿಗೆ ಭೇಟಿ ನೀಡಿ ಸ್ಥಳದಲ್ಲಿಯೇ ಸಮಸ್ಯೆ ಬಗೆಹರಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ತಾವೊಬ್ಬರೇ ಗ್ರಾಮಗಳಿಗೆ ತೆರಳದೇ, ಜತೆಯಲ್ಲಿ ತಹಶೀಲ್ದಾರ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳನ್ನು ಕರೆದುಕೊಂಡು ಹೋಗುವ ಮೂಲಕ ಗ್ರಾಮಸ್ಥರ ಸಮಸ್ಯೆ ಆಲಿಸುತ್ತಿದ್ದಾರೆ.

ವಿರಾಮ
ಪ್ರತಿ ಭಾನುವಾರ

FORM KMV 54
[See Rule 83(3)]

Form of notice to be published in newspaper by the successor to the permit holder

It is hereby informed for the knowledge of public that Smt. Shahnaz Sulthana W/o Late S.Muneer Ahmed, Masthi Express, Masthi owner of the Motor Vehicle No.KA-01/AF-1890 covered in the stage carriage permit No.169/63-64 valid upto 25.08.2027 issued by the STA, Bengaluru expired on 16.04.2025.

I, Smt.Shabana Sultana, W/o Abdul Mujeeb Khan Vellore being the successor to the possession of the above mentioned to confer intend to use the permit and accordingly I have applied to the Secretary, State Transport Authority for transfer of permit to my name. The other LRs of late Smt. Shahnaz Sulthana, have given No Objection to the transfer.

Any person having any claim or objection in this regard, should within 15 days from the publication of this notice, bring such fact to the notice of the Secretary, State Transport Authority, TTMC Building, Bengaluru- 560 027.

SHABANA SULTANA
W/o Abdul Mujeeb Khan Vellore.

ಐಟಿ ಅಧಿಕಾರಿಗಳಿಂದ ವಿಚಾರಣೆ | ಜಾಮೀನು ಸಿಕ್ಕರೂ ಬಿಡುಗಡೆ ಇಲ್ಲ

ನಟಿ ರನ್ಯಾಗೆ ಮುಗಿಯದ ಸಂಕಷ್ಟ

ಬೆಂಗಳೂರು: ಚಿನ್ನ ಕಳ್ಳ ಸಾಗಣೆ ಪ್ರಕರಣ ದಲ್ಲಿ ನಟಿ ರನ್ಯಾ ರಾವ್ ಜೈಲು ಪಾಲಾಗಿ ಹಲವು ತಿಂಗಳು ಕಳೆದಿವೆ. ಸದ್ಯ ಅವರ ವಿರುದ್ಧ ನಾನಾ ಪ್ರಕರಣಗಳು ದಾಖಲಾಗಿವೆ. ಈ ಎಲ್ಲಾ ಕಾರಣಕ್ಕೆ ಅವರಿಗೆ ಜಾಮೀನು ಸಿಕ್ಕರೂ ಬಿಡುಗಡೆ ಭಾಗ್ಯ ಸಿಕ್ಕಿಲ್ಲ. ಹೀಗಿರು ವಾಗಲೇ ರನ್ಯಾ ರಾವ್ ಪ್ರಕರಣಕ್ಕೆ ಆದಾಯ ತೆರಿಗೆ (ಐಟಿ) ಇಲಾಖೆ ಪ್ರವೇಶ ಮಾಡಿದೆ.

ಕೆಲವು ದಿನಗಳ ಕಾಲ ಅವರನ್ನು ವಿಚಾರಣೆ ಮಾಡಲು ಐಟಿ ಇಲಾಖೆ ಮುಂದಾಗಿದ್ದು, ಈ ಮೂಲಕ ನಟಿಗೆ ಮತ್ತಷ್ಟು ಸಂಕಷ್ಟ ಹೆಚ್ಚುವ ಸಾಧ್ಯತೆ ಇದೆ. ಈಗ ಐಟಿ ಇಲಾಖೆ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದಿಂದ ರನ್ಯಾ ವಿಚಾರಣೆಗೆ ಅನುಮತಿ ಪಡೆದಿದೆ. ಅದರಂತೆ ಜೂನ್ 13ರವರೆಗೆ ನಟಿಯ ವಿಚಾರಣೆ ನಡೆಯಲಿದೆ. ರನ್ಯಾ ಸದ್ಯ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದು, ಅಲ್ಲಿಯೇ ಅವರು ವಿಚಾರಣೆಗೆ ಒಳಗಾಗಲಿದ್ದಾರೆ. ಇಷ್ಟು ದಿನ ಜೈಲಿನಲ್ಲಿ ಹಾಯಾಗಿದ್ದ ಅವರಿಗೆ ಈಗ ಮತ್ತೆ ವಿಚಾರಣೆಯ ಭೂತ ಕಾಡಿದೆ. ಐಟಿ ಮಹಿಳಾ ಇನ್‌ಸ್ಪೆಕ್ಟರ್ ಶ್ವೇತ, ಇನ್‌ಸ್ಪೆಕ್ಟರ್ ರವಿಪಾಲ್ ನೇತೃತ್ವದಲ್ಲಿ ನಟಿ ರನ್ಯಾ ರಾವ್ ವಿಚಾರಣೆ ನಡೆಯಲಿದೆ. ಈ ವಿಚಾರಣೆ ವೇಳೆ ಮತ್ತಷ್ಟು ದೊಡ್ಡ ವಿಚಾರಗಳು ಬಹಿರಂಗ ಆಗುವ ಸಾಧ್ಯತೆ ಇದೆ. ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆ ತನಕ ವಿಚಾರಣೆ ನಡೆಸುವಂತೆ ಕೋರ್ಟ್ ಅಧಿಕಾರಿಗಳಿಗೆ ಸೂಚಿಸಿದೆ.

ಪ್ರಕರಣದ ಹಿನ್ನೆಲೆ

ಮಾರ್ಚ್ 3ರಂದು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರನ್ಯಾ ಅವರು 14 ಕೆಜಿ ಚಿನ್ನದ ಜತೆ ಸಿಕ್ಕಿ ಬಿದ್ದಿದ್ದರು. ತಕ್ಷಣ ಅವರನ್ನು ಬಂಧಿಸಲಾಯಿತು. ಅಕ್ರಮ ಚಿನ್ನ ಕಳ್ಳ ಸಾಗಣೆಗೆ ಪೊಲೀಸ್ ವ್ಯವಸ್ಥೆಯನ್ನು ಬಳಕೆ ಮಾಡಿಕೊಂಡಿದ್ದು, ತನಿಖೆ ವೇಳೆ ತಿಳಿದು ಬಂದಿತ್ತು. ಅಲ್ಲದೆ, ಈ ಮೊದಲು ಹಲವು ಬಾರಿ ಚಿನ್ನ ಕಳ್ಳ ಸಾಗಣೆ ಮಾಡಿ, ಕೋಟ್ಯಂತರ ರೂಪಾಯಿ ವಂಚನೆ ಮಾಡಿದ್ದು ಕೂಡ ಬಹಿರಂಗ ಆಗಿದೆ. ಈ ಮೊದಲು ನಟಿ ರಮ್ಯಾಗೆ ವಿಶೇಷ ನ್ಯಾಯಾಲಯ ಜಾಮೀನು ನೀಡಿತ್ತು. ಆದರೆ, ಆದರೆ ರನ್ಯಾ ರಾವ್ ಜೈಲಿನಿಂದ ಬಿಡುಗಡೆ ಆಗಿಲ್ಲ. ರನ್ಯಾ ವಿರುದ್ಧ ಕಠಿಣವಾದ ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳಸಾಗಣೆ ನಿಯಂತ್ರಣ ಕಾಯಿದೆ ಅಡಿಯಲ್ಲಿ ದೂರು ದಾಖಲಿಸಲಾಗಿದೆ. ಇದೊಂದು ಕಠಿಣವಾದ ಕಾಯಿದೆಯಾಗಿದೆ. ಇದರ ಅಡಿಯಲ್ಲಿ ಪ್ರಕರಣ ದಾಖಲಾದರೆ ಜಾಮೀನು ಸಿಗುವುದಿಲ್ಲ. ಒಂದೊಮ್ಮೆ ಆರೋಪಿಗಳಿಗೆ ಬೇರೆ ಪ್ರಕರಣಗಳಲ್ಲಿ ಜಾಮೀನು ದೊರೆತರೂ ಸಹ ಅವರ ಬಿಡುಗಡೆ ಸಾಧ್ಯವಿಲ್ಲ.

ದಕ್ಷಿಣವಾಯಿತು, ಇದೀಗ ಬೆಂಗಳೂರು ಉತ್ತರಕ್ಕೆ ಪ್ರಸ್ತಾವನೆ?

ಬೆಂಗಳೂರು: ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣವೆಂದು ಮರುನಾಮಕರಣಗೊಳಿಸಿದ್ದು ತೀವ್ರ ವಿವಾದಕ್ಕೆ ಕಾರಣವಾದ ಬೆನ್ನಲ್ಲೇ, ತುಮಕೂರಿನ ಹೆಸರನ್ನು ಬದಲಾಯಿಸಬೇಕು ಎನ್ನುವ ಚರ್ಚೆಗಳು ಮುನ್ನಲೆಗೆ ಬಂದಿದೆ.

ಜಿಲ್ಲೆಗಳೊಂದಿಗೆ 'ಬೆಂಗಳೂರು' ಎನ್ನುವ ಹೆಸರು ತುಳಕು ಹಾಕಿಕೊಂಡರೆ, ಬ್ರ್ಯಾಂಡ್ ಹೆಚ್ಚಾಗುತ್ತದೆ ಎನ್ನುವ ಕಾರಣಕ್ಕೆ ಈ ಹಿಂದೆ ಡಿಸಿಎಂ ಡಿ.ಕೆ.ಶಿವಕುಮಾರ್ ರಾಮನಗರವನ್ನು ಬೆಂಗಳೂರು ದಕ್ಷಿಣವೆಂದು ಮರುನಾಮಕರಣ ಮಾಡಲು ಆಗ್ರಹಿಸಿದ್ದರು. ಇದೀಗ ಗೃಹ ಸಚಿವ ಡಾ.ಜಿ. ಪರಮೇಶ್ವರ, ತುಮಕೂರು ಜಿಲ್ಲೆಯನ್ನು ಬೆಂಗಳೂರು ಉತ್ತರ ಎಂದು ಮರುನಾಮಕರಣ ಮಾಡುವ ಬೇಡಿಕೆ ತೇಲಿಬಿಟ್ಟಿದ್ದಾರೆ. ಈ ಬಗ್ಗೆ ಮಾತನಾಡಿರುವ ಗೃಹ ಸಚಿವ ಪರಮೇಶ್ವರ, ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರ ವ್ಯಾಪ್ತಿಯು ಈಗಾಗಲೇ ನೆಲಮಂಗಲದವರೆಗೂ ತಲುಪಿದ್ದು, ತುಮಕೂರನ್ನೂ ಸಹ ತಲುಪುವ ಸಾಧ್ಯತೆಯಿದೆ. ಆದ್ದರಿಂದ ನಗರದ ಬೆಳವಣಿಗೆಯನ್ನು ಮನಗಂಡ ಸರಕಾರ ರಾಮನಗರವನ್ನು ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಿದ ಮಾದರಿಯಲ್ಲಿಯೇ ತುಮಕೂರನ್ನು ಬೆಂಗಳೂರು ಉತ್ತರ ಎಂದು ಹೆಸರಿಡಲು ಚಿಂತನೆ ನಡೆಸಲಾಗಿದೆ ಎಂದಿದ್ದಾರೆ.

ಹಂತ ಹಂತವಾಗಿ ನಗರ

ತುಮಕೂರು ನಗರದ ಸುತ್ತಲಿನ 14 ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ನಗರವನ್ನು ವಿಸ್ತರಿಸುವ ಪ್ರಸ್ತಾವನೆ ಸಿದ್ಧವಿದ್ದು, ಹಂತ ಹಂತವಾಗಿ ವಿಸ್ತರಣಾ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಈಗಾಗಲೇ ಮನೆ ಕಟ್ಟಿಕೊಂಡು ವಾಸವಿರುವ ನಿವಾಸಿಗಳು ಮೂಲಸೌಕರ್ಯಗಳ ಕೊರತೆಯಿಂದಾಗಿ ಅವರು ಸಂಕಷ್ಟ ಅನುಭವಿಸುತ್ತಿದ್ದಾರೆ. ಸಮರ್ಪಕ ಕುಡಿಯುವ ನೀರು, ರಸ್ತೆ, ಒಳಚರಂಡಿ ವ್ಯವಸ್ಥೆಯಿಲ್ಲದೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ನಗರ ವಿಸ್ತರಣೀಕರಣದಿಂದ ನಾಗರಿಕರಿಗೆ ಮೂಲ ಸೌಕರ್ಯಗಳು ತಲುಪುತ್ತವೆ ಎಂದು ಗೃಹ ಸಚಿವ ಪರಮೇಶ್ವರ ತಿಳಿಸಿದರು.

ಸಿಎಂ ಜನರ ಕ್ಷಮೆ ಕೇಳಲಿ

ಬೆಂಗಳೂರು: ಜಾತಿ ಗಣತಿ ವಿಷಯದಲ್ಲಿ 10 ವರ್ಷದ ತಪ್ಪು ದತ್ತಾಂಶವನ್ನು ಪದೇ ಪದೇ ರಾಜ್ಯದ ಜನರಿಗೆ ಹೇಳುತ್ತ ಬಂದಿದ್ದಕ್ಕಾಗಿ ರಾಜ್ಯದ ಜನರ ಕ್ಷಮೆ ಕೇಳಿ ಮುಖ್ಯಮಂತ್ರಿ ರಾಜೀನಾಮೆ ಕೊಡಬೇಕು ಎಂದು ಶಾಸಕ ವಿ. ಸುನೀಲ್ ಕುಮಾರ್ ಆಗ್ರಹಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಮಾತನಾಡಿ, ಜಾತಿ ಗಣತಿಗೆ 165 ಕೋಟಿ ದುರುಪಯೋಗವಾಗಿದೆ. ಮುಡಾ ಹಗರಣದ ವೈಫಲ್ಯ, ವಾಲ್ಮೀಕಿ ಹಗರಣ, ಕಾಲ್ತುಳಿತದ ಪ್ರಕರಣ, ಅಬಕಾರಿ ಹಗರಣ, ಈಗ ಈ ಜಾತಿ ಗಣತಿ– ಇವೆಲ್ಲವೂ ಸರಣಿ ವೈಫಲ್ಯಗಳಾಗಿದ್ದು ಸಿಎಂ ರಾಜೀನಾಮೆಗೆ ಒತ್ತಾಯಿಸಿದರು. ರಾಜ್ಯದ ಹಿಂದಿನ ಜಾತಿ ಸಮೀಕ್ಷೆ ಕೈಬಿಟ್ಟಿದ್ದೇವೆ ಎನ್ನುತ್ತಿದ್ದು, 165 ಕೋಟಿ ಖರ್ಚು ಮಾಡಿದ್ದಕ್ಕೆ ಹೊಣೆಗಾರರು ಯಾರು ಎಂದು ಪ್ರಶ್ನಿಸಿದ ಅವರು, ಹೊಸ ಸಮೀಕ್ಷೆಗೆ ತಗಲುವ ವೆಚ್ಚಕ್ಕೆ ಯಾರನ್ನು ಜವಾಬ್ದಾರರನ್ನಾಗಿ ಮಾಡುವಿರಿ. ರಾಜ್ಯದ ತೆರಿಗೆ ಹಣ ಬೇಕಾದಂತೆ ನೀರಿನಲ್ಲಿ ಹೋಮ ಮಾಡಲು ತಯಾರಿ ಮಾಡಿಕೊಂಡಿದ್ದೀರಾ ಎಂದು ಪ್ರಶ್ನಿಸಿದರು.

THIS IS A PUBLIC ANNOUNCEMENT FOR INFORMATION PURPOSES ONLY AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES NOR IS IT A PROSPECTUS ANNOUNCEMENT. **NOT FOR RELEASE, PUBLICATION OR DISTRIBUTION, DIRECTLY OR INDIRECTLY, OUTSIDE INDIA.** INITIAL PUBLIC OFFERING OF EQUITY SHARES ON THE MAIN BOARD OF THE BSE LIMITED ("**BSE**") AND NATIONAL STOCK EXCHANGE OF INDIA LIMITED ("**NSE**", AND TOGETHER WITH "**BSE**", THE "**STOCK EXCHANGES**") IN COMPLIANCE WITH CHAPTER II OF THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED ("**SEBI ICDR REGULATIONS**"), NOT FOR RELEASE, PUBLICATION OR DISTRIBUTION OR INDIRECTLY, OUTSIDE INDIA.

PUBLIC ANNOUNCEMENT

(Please scan this QR code to view the Draft Red Herring Prospectus)

Orkla INDIA

ORKLA INDIA LIMITED

(Formerly known as MTR Foods Private Limited)

Our Company was originally incorporated as "MTR Foods Limited" as a public company under the Companies Act, 1956, pursuant to a certificate of incorporation dated August 21, 1996, issued by the Registrar of Companies, Karnataka at Bengaluru ("**RoC**"). Upon conversion of our Company from a public limited company to a private limited company, pursuant to a resolution passed by the Board of Directors dated June 27, 2008, and a special resolution passed by our Shareholders on August 12, 2008, our name was changed to "MTR Foods Private Limited" and a fresh certificate of incorporation dated November 4, 2008 was issued by the RoC. Thereafter, pursuant to the resolution passed by the Board of Directors dated December 5, 2023 and the Shareholders resolution dated December 12, 2023, our name was changed to "Orkla India Private Limited" and a certificate of incorporation dated January 4, 2024 was issued by the RoC. Upon the conversion of our Company into a public limited company, pursuant to a resolution passed by the Board of Directors dated February 26, 2025, and a Shareholders' resolution dated March 13, 2025, the name of our Company was changed to "Orkla India Limited", and a fresh certificate of incorporation dated April 25, 2025 was issued by the Registrar of Companies, Central Processing Centre. For details of changes in the name and the registered office of our Company, see *"History and Certain Corporate Matters"* on page 193 of the Draft Red Herring Prospectus dated June 10, 2025 ("**DRHP**").

Registered Office: No.1. 2nd and 3rd Floor, 100 Feet Inner Ring Road, Ejipura, Ashwini Layout, Vivek Nagar, Bengaluru - 560 047, Karnataka, India

Contact Person: Kaushik Seshadri, Company Secretary and Compliance Officer; **Tel:** +91 80 4081 2100, **E-mail:** investors@orklaindia.com; **Website:** www.orklaindia.com; **Corporate Identity Number:** U15136KA1996PLC021007

OUR PROMOTERS: ORKLA ASA, ORKLA ASIA HOLDING AS AND ORKLA ASIA PACIFIC PTE. LTD.

INITIAL PUBLIC OFFER OF UP TO 22,843,004 EQUITY SHARES BEARING FACE VALUE OF ₹1 EACH ("EQUITY SHARES") OF ORKLA INDIA LIMITED ("OUR COMPANY" OR THE "ISSUER") FOR CASH AT A PRICE OF ₹[●] PER EQUITY SHARE (INCLUDING A PREMIUM OF ₹[●] PER EQUITY SHARE) ("OFFER PRICE") AGGREGATING TO ₹[●] MILLION THROUGH AN OFFER FOR SALE (THE "OFFER" OR "OFFER FOR SALE") OF UP TO 20,560,768 EQUITY SHARES BEARING FACE VALUE OF ₹1 EACH AGGREGATING TO ₹[●] MILLION BY ORKLA ASIA PACIFIC PTE. LTD. ("PROMOTER SELLING SHAREHOLDER"), UP TO 1,141,118 EQUITY SHARES BEARING FACE VALUE OF ₹1 EACH AGGREGATING TO ₹[●] MILLION BY NAVAS MEERAN AND UP TO 1,141,118 EQUITY SHARES BEARING FACE VALUE OF ₹1 EACH AGGREGATING TO ₹[●] MILLION BY FEROZ MEERAN (TOGETHER REFERRED TO AS "OTHER SELLING SHAREHOLDERS" AND TOGETHER WITH PROMOTER SELLING SHAREHOLDER REFERRED TO AS THE "SELLING SHAREHOLDERS" AND SUCH EQUITY SHARES OFFERED BY THE SELLING SHAREHOLDERS, THE "OFFERED SHARES"). THE OFFER SHALL CONSTITUTE [●]% OF THE POST-OFFER PAID-UP EQUITY SHARE CAPITAL OF OUR COMPANY.

THE OFFER MAY INCLUDE A RESERVATION OF UP TO [●] EQUITY SHARES OF FACE VALUE OF ₹1 EACH, AGGREGATING TO ₹[●] MILLION (CONSTITUTING UP TO [●]% OF THE POST-OFFER PAID-UP EQUITY SHARE CAPITAL), FOR SUBSCRIPTION BY ELIGIBLE EMPLOYEES ("EMPLOYEE RESERVATION PORTION"). THE OFFER LESS THE EMPLOYEE RESERVATION PORTION IS HEREINAFTER REFERRED TO AS THE "NET OFFER". THE OFFER AND THE NET OFFER SHALL CONSTITUTE [●]% AND [●]% OF THE POST-OFFER PAID-UP EQUITY SHARE CAPITAL OF OUR COMPANY, RESPECTIVELY.

THE FACE VALUE OF THE EQUITY SHARE IS ₹1 EACH. THE OFFER PRICE IS [●] TIMES THE FACE VALUE OF THE EQUITY SHARES. THE PRICE BAND AND THE MINIMUM BID LOT SIZE WILL BE DECIDED BY OUR COMPANY, IN CONSULTATION WITH THE BOOK RUNNING LEAD MANAGERS, AND WILL BE ADVERTISED IN ALL EDITIONS OF [●] (A WIDELY CIRCULATED ENGLISH NATIONAL DAILY NEWSPAPER), ALL EDITIONS OF [●] (A WIDELY CIRCULATED HINDI NATIONAL DAILY NEWSPAPER) AND ALL EDITIONS OF [●] (A WIDELY CIRCULATED KANNADA DAILY NEWSPAPER, KANNADA BEING THE REGIONAL LANGUAGE OF KARNATAKA, INDIA, WHERE OUR REGISTERED OFFICE IS LOCATED), AT LEAST TWO WORKING DAYS PRIOR TO THE BID/OFFER OPENING DATE AND SHALL BE MADE AVAILABLE TO THE BSE AND NSE FOR UPLOADING ON THEIR RESPECTIVE WEBSITES IN ACCORDANCE WITH THE SEBI ICDR REGULATIONS.

In case of any revision in the Price Band, the Bid/Offer Period shall be extended for at least three additional Working Days after such revision of the Price Band, subject to the total Bid/Offer Period not exceeding 10 Working Days. In cases of *force majeure*, banking strike or similar unforeseen circumstances, our Company, may in consultation with the Book Running Lead Managers, for reasons to be recorded in writing, extend the Bid/Offer Period for a minimum of one Working Day, subject to the Bid/Offer Period not exceeding 10 Working Days. Any revision in the Price Band, and the revised Bid/Offer Period, if applicable, shall be widely disseminated by notification to the Stock Exchanges by issuing a public notice and also by indicating the change on the respective websites of the Book Running Lead Managers and at the terminals of the Members of the Syndicate and by intimation to the Designated Intermediaries and the Sponsor Bank(s), as applicable.

The Offer is being made in terms of Rule 19(2)(b) of the Securities Contracts (Regulation) Rules, 1957, as amended (the "**SCRR**"), read with Regulation 31 of the SEBI ICDR Regulations. The Offer is being made through the Book Building Process in accordance with Regulation 6(1) of the SEBI ICDR Regulations in terms of Regulation 32(1) of the SEBI ICDR Regulations wherein not more than 50% of the Net Offer shall be available for allocation on a proportionate basis to Qualified Institutional Buyers ("**QIBs**") (the "**QIB Portion**"), provided that our Company, in consultation with the Book Running Lead Managers, may allocate up to 60% of the QIB Portion to Anchor Investors and the basis of such allocation will be on a discretionary basis by our Company, in consultation with the Book Running Lead Managers, in accordance with the SEBI ICDR Regulations (the "**Anchor Investor Portion**"), of which one-third shall be reserved for domestic Mutual Funds, subject to valid Bids being received from the domestic Mutual Funds at or above the price at which allocation is made to Anchor Investors ("**Anchor Investor Allocation Price**"). In the event of under-subscription, or non-allocation in the Anchor Investor Portion, the balance Equity Shares shall be added to the QIB Portion (other than Anchor Investor Portion) ("**Net QIB Portion**"). Further, 5% of the Net QIB Portion shall be available for allocation on a proportionate basis only to Mutual Funds, subject to valid Bids being received at or above the Offer Price, and the remainder of the Net QIB Portion shall be available for allocation on a proportionate basis to all QIBs, including Mutual Funds, subject to valid Bids being received at or above the Offer Price. Further, not less than 15% of the Net Offer shall be available for allocation to Non-Institutional Bidders ("**Non-Institutional Category**" or "**Non-Institutional Portion**") of which one-third of the Non-Institutional Category shall be available for allocation to Bidders with an application size of more than ₹200,000 (net of Employee Discount, if any) and up to ₹1,000,000 and two-thirds of the Non-Institutional Category shall be available for allocation to Bidders with an application size of more than ₹1,000,000 and under-subscription in either of these two sub-categories of Non-Institutional Category may be allocated to Bidders in the other sub-category of Non-Institutional Category in accordance with the SEBI ICDR Regulations, subject to valid Bids being received at or above the Offer Price. Further, not less than 35% of the Net Offer shall be available for allocation to Retail Individual Bidders ("**Retail Category**" or "**Retail Portion**"), in accordance with the SEBI ICDR Regulations, subject to valid Bids being received from them at or above the Offer Price. All Bidders (except Anchor Investors) shall mandatorily participate in this Offer only through the Application Supported by Blocked Amount ("**ASBA**") process and shall provide details of their respective bank account (including UPI ID (defined hereinafter)) in case of UPI Bidders (defined hereinafter) in which the Bid Amount will be blocked by the Self Certified Syndicate Banks ("**SCSBs**") or the Sponsor Bank(s), as the case may be. Anchor Investors are not permitted to participate in the Anchor Investor Portion through the ASBA process. Further, Equity Shares will be allocated on a proportionate basis to Eligible Employees applying under the Employee Reservation Portion, subject to valid Bids received from them at or above the Offer Price. For details, see *"Offer Procedure"* on page 401 of the DRHP.

This public announcement is being made in compliance with the provisions of Regulation 26(2) of the SEBI ICDR Regulations to inform the public that our Company is proposing, subject to applicable statutory and regulatory requirements, receipt of requisite approvals, market conditions and other considerations, to undertake an initial public offering of its Equity Shares pursuant to the Offer and has filed the DRHP dated June 10, 2025, with the Securities and Exchange Board of India ("**SEBI**") and with the Stock Exchanges. Pursuant to Regulation 26(1) of the SEBI ICDR Regulations, the DRHP filed with SEBI and the Stock Exchanges has been made public for comments, if any, for a period of at least 21 days from the date of publication of this public announcement by hosting it on the website of SEBI at www.sebi.gov.in, websites of the Stock Exchanges at, www.bseindia.com and www.nseindia.com, on the website of the Company at www.orklaindia.com and on the websites of the Book Running Lead Managers ("**BRLMs**"), i.e. ICICI Securities Limited, Citigroup Global Markets India Private Limited, J.P. Morgan India Private Limited and Kotak Mahindra Capital Company Limited at www.icicisecurities.com, https://www.citigroup.com/global/about-us/global-presence/india/disclaimer, www.jpmipl.com and https://investmentbank.kotak.com, respectively. Our Company invites the public to give their comments on the DRHP filed with SEBI and the Stock Exchanges, with respect to disclosures made in the DRHP. The members of the public are requested to send a copy of the comments to SEBI, to the Company Secretary and Compliance Officer of our Company and/or the BRLMs at their respective addresses mentioned herein. All comments must be received by SEBI and/or our Company and/or the Company Secretary and Compliance Officer of our Company and/or the BRLMs in relation to the Offer on or before 5.00 p.m. on the 21st day from the aforesaid date of publication of this public announcement.

Investments in equity and equity-related securities involve a degree of risk and Bidders should not invest any funds in the Offer unless they can afford to take the risk of losing their entire investment. Bidders are advised to read the risk factors carefully before taking an investment decision in the Offer. For taking an investment decision, Bidders must rely on their own examination of our Company and the Offer, including the risks involved. The Equity Shares offered in the Offer have not been recommended or approved by the Securities and Exchange Board of India ("**SEBI**"), nor does the SEBI guarantee the accuracy or adequacy of the contents of this Draft Red Herring Prospectus. Specific attention of the Bidders is invited to *"Risk Factors"* on page 33 of the DRHP.

Any decision to invest in the Equity Shares described in the DRHP may only be taken after a Red Herring Prospectus ("**RHP**") has been filed with the RoC and must be made solely on the basis of such RHP as there may be material changes in RHP from DRHP. The Equity Shares, when offered through the RHP, are proposed to be listed on the Stock Exchanges.

For details of the share capital and capital structure and the names of the signatories to the memorandum and the number of shares subscribed by them of our Company, please see the section titled *"Capital Structure"* on page 92 of the DRHP. The liability of the members of our Company is limited. For details of the main objects of our Company as contained in the Memorandum of Association, please see the section titled *"History and Certain Corporate Matters,"* on pages 193 of the DRHP.

BOOK RUNNING LEAD MANAGERS				REGISTRAR TO THE OFFER
ICICI Securities Limited ICICI Venture House Appasaheb Marathe Marg, Prabhadevi, Mumbai - 400025, Maharashtra, India **Tel:** +91 22 6807 7100 **E-mail:** orkla.ipo@icicisecurities.com **Investor grievance e-mail:** customercare@icicisecurities.com **Website:** www.icicisecurities.com **Contact person:** Tanya Tiwari / Ashik Joisar **SEBI registration no.:** INM000011179	**Citigroup Global Markets India Private Limited** 1202, 12th Floor, First International Financial Centre, G-Block, C 54 & 55, Bandra Kurla Complex, Bandra (East), Mumbai - 400 098, Maharashtra India **Tel:** + 91 22 6175 9999 **E-mail:** orklaindia.ipo@citi.com **Website:** https://www.citigroup.com/global/about-us/global-presence/india/disclaimer **Investor grievance e-mail:** investors.cgmib@citi.com **Contact person:** Karishma Asrani/ Adarsh Agarwal **SEBI registration no.:** INM000010718	**J.P. Morgan India Private Limited** J.P. Morgan Tower, Off C.S.T Road Kalina, Santacruz (East), Mumbai - 400 098 Maharashtra, India **Tel.:** +91 22 6157 3000 **E-mail:** orkla_india_ipo@jpmorgan.com **Website:** www.jpmipl.com **Investor grievance e-mail:** investorsmb.jpmipl@jpmorgan.com **Contact person:** Himanshi Arora / Rishank Chheda **SEBI registration no.:** INM000002970	**Kotak Mahindra Capital Company Limited** 27 BKC, 1st Floor, Plot No. C-27 "G" Block, Bandra Kurla Complex, Bandra (East) Mumbai - 400 051, Maharashtra, India **Tel:** +91 22 4336 0000 **E-mail:** orklaindia.ipo@kotak.com **Investor grievance e-mail:** kmccredressal@kotak.com **Website:** https://investmentbank.kotak.com **Contact person:** Ganesh Rane **SEBI registration no.:** INM000008704	**KFin Technologies Limited** 301, The Centrium, 3rd Floor, 57, Lal Bahadur Shastri Road, Nav Pada, Kurla (West), Kurla, Mumbai, Maharashtra, India, 400 070 **Tel:** + 91 40 6716 2222/ 1800 309 4001 **E-mail:** orklaindia.ipo@kfintech.com **Website:** www.kfintech.com **Investor grievance e-mail:** einward.ris@kfintech.com **Contact person:** M. Murali Krishna **SEBI registration no.:** INR000000221

All capitalized terms used herein and not specifically defined shall have the same meaning as ascribed to them in the DRHP.

For **ORKLA INDIA LIMITED**
(Formerly known as MTR Foods Private Limited)
On behalf of the Board of Directors
Sd/-
Kaushik Seshadri
Company Secretary and Compliance Officer

Place: Bengaluru
Date: June 11, 2025

ORKLA INDIA LIMITED *(Formerly known as MTR Foods Private Limited)* is proposing, subject to applicable statutory and regulatory requirements, receipt of requisite approvals, market conditions and other considerations, to make an initial public offering of its Equity Shares and has filed the Draft Red Herring Prospectus dated June 10, 2025, with SEBI and the Stock Exchanges. The DRHP is available on the website of SEBI at www.sebi.gov.in, as well as on the websites of the Stock Exchanges i.e. BSE and NSE at www.bseindia.com and www.nseindia.com, respectively, on the website of the Company at www.orklaindia.com and on the websites of the Book Running Lead Managers ("**BRLMs**"), i.e. ICICI Securities Limited, Citigroup Global Markets India Private Limited, J.P. Morgan India Private Limited and Kotak Mahindra Capital Company Limited at www.icicisecurities.com, https://www.citigroup.com/global/about-us/global-presence/india/disclaimer, www.jpmipl.com and https://investmentbank.kotak.com, respectively. Any potential investors should note that investment in equity shares involves a high degree of risk and for details relating to such risk, see the section titled "Risk Factors" of the RHP, once available. Potential Bidders should not rely on the DRHP filed with SEBI and the Stock Exchanges for making any investment decision and should instead rely on the RHP, for making investment decision.

The Equity Shares have not been and will not be registered under the United States Securities Act of 1933, as amended (the **"U.S. Securities Act"**) or any other applicable law of the United States and, unless so registered, may not be offered or sold within the United States except pursuant to an exemption from, or in a transaction not subject to, the registration requirements of the U.S. Securities Act and applicable U.S. state securities laws. Accordingly, the Equity Shares are being offered and sold (a) in the United States to persons reasonably believed to be "qualified institutional buyers" (as defined in Rule 144A under the U.S. Securities Act and referred to in the Draft Red Herring Prospectus as "**U.S. QIBs**"), in transactions exempt from, or not subject to, the registration requirements of the U.S. Securities Act, and (b) outside of the United States in offshore transactions as defined in and in compliance with Regulation S and the applicable laws of the jurisdiction where those offers and sales occur. There will be no public offering in the United States.

Adfactors 190/25

BEFORE THE JOINT REGISTRAR OF CO-OPERATIVE SOCIETIES, BANGALORE REGION AT BENGALURU
Dispute No. UBC-3:DIS: 1856/24-25

Between: Gayathri Credit Co-Operative Society Ltd No.40. & 41. 5th Cross, Malleswaram, Bangalore-560003.
...Petitioner
And
Mr. Elamvazhuthy S. And others
...Respondents

Notice/Summons to Respondent No.1
To. Mr.Elamvazhuthy S. S/o. Mr.Selvam, Aged about 55 years, No.140, 1 Main, 2nd Cross, Nisarga Layout, Bangalore - 560091.

NOTICE/SUMMONS TO RESPONDENT

Whereas the above named Petitioner has instituted a dispute under section 70 of Karnataka Co-operatvie Societies Act, 1959, against you & other for recovery of money of sum of Rs.7,19,902/-(Rupees Seven lakhs Nineteen thousand Nine hundred and Two only) together with future interest at the rate 11.6% per annum, before the Assistant Registrar of Co-operative Societies, (Urban banks division). Hon'ble Joint Registrar of Co-operative Societies have transferred this dispute to this court under section 71(1)(b) of the Karnataka Co-operative Societies Act, 1959 for adjunction. Therefore you are here by directed to appear and to file your written statement/ objection along with supporting documents, witnesses in the office of the Assistant Registrar of Co-Operative Societies, 4 Circle, Sahakara Soudha, No.146, 3rd Main Road, 8th Cross, Margosa Road, Malleshwaram, Bangalore 560003, on **17.06.2025 at 11 A.M.** to answer the claim.

Take notice that in default of your appearance on the day afore mentioned. The dispute will be heard and determined in your absence, placing you ex-parte.

Given under my hand and the seal of the court, this 10th day of June 2025.

By order of the Court
Assistant Registrar of Co-Operative Societies, 4th Circle, Bangalore urban district, Bangalore

Advocate for petitioner:
R.K. Amarnath
No.7, 1 floor, Off Diagonal Road, V.V.Puram, Bangalore-560004.

BEFORE THE JOINT REGISTRAR OF CO-OPERATIVE SOCIETIES, BANGALORE REGION AT BENGALURU
Dispute No. UBC-3:DIS: 1861/24-25

Between: Gayathri Credit Co-Operative Society Ltd No.40, & 41, 5th Cross, Malleswaram, Bangalore-560003.
.... Petitioner
And
Mr.Ravi Kumar M.B. And others
...Respondents

Notice/Summons to Respondent No.1 & 2
To, 1) Mr.Ravi Kumar M B. S/o. Late Mr.Bheemaraju M.G., Aged about 43 years, No.41, 12th Main, 1 Block, HMT ECHS Layout, Vidyaranyapura Post, Bangalore-560097.
2) Mrs. Chethana V. W/o. Mr.Ravi Kumar M B., Aged about 39 years, No.41 12 Main, 1" Block, PHMTECHS Layout, Vidyaranyapura Post, Bangalore 560097.

NOTICE/SUMMONS TO RESPONDENT

Whereas the above named Petitioner has instituted a dispute under section 70 of Karnataka Co-operative Societies Act, 1959, against you & other for recovery of money of sum of Rs.11,82.511/-(Rupees Eleven lakhs Eighty Two thousand Five hundred and Eleven only) together with future interest at the rate 11.6% per annum, before the Assistant Registrar of Co-operative Societies, (Urban banks division). Hon'ble Joint Registrar of Co-operative Societies have transferred this dispute to this court under section 71(1)(b) of the Karnataka Co-operative Societies Act, 1959 for adjunction. Therefore you, are here by directed to appear and to file your written statement / objection along with supporting documents, witnesses in the office of the Assistant Registrar of Co-Operative Societies, 4" Circle, Sahakara Soudha, No.146, 3rd Main Road, 8th Cross, Margosa Road, Bangalore 560003, on **17.06.2025 at 11 A.M.** to answer the claim.

Take notice that in default of your appearance on the day afore mentioned. The dispute will be heard and actermined in your absence, placing you ex-parte.

Given under my hand and the seal of the court, this 10thday of June 2025.

By order of the Court
Assistant Registrar of Co-Operative Societies, 4th Circle, Bangalore urban district, Bangalore

Advocate for petitioner:
R.K. Amarnath
No.7, 1 floor, Off Diagonal Road, V.V.Puram, Bangalore-560004.

ಮಚ್ಚಿನಿಂದ ಕೊಚ್ಚಿ ರೌಡಿಶೀಟರ್ ಭೀಕರ ಹತ್ಯೆ

ಬೆಂಗಳೂರು: ರೌಡಿಶೀಟರ್‌ನನ್ನು ನಡು ರಸ್ತೆಯಲ್ಲಿ ಮಚ್ಚಿನಿಂದ ಮನಸೋ ಇಚ್ಛೆ ಕೊಚ್ಚಿ ದುಷ್ಕರ್ಮಿಗಳು ಕೊಲೆ ಮಾಡಿ ತಲೆಮರಿಸಿಕೊಂಡಿರುವ ಘಟನೆ ಕಾಡುಗೋಡಿಯಲ್ಲಿ ನಡೆದಿದೆ. ಪುನೀತ್ ಕೊಲೆಯಾದ ರೌಡಿಶೀಟರ್.

ಅಪರಾಧ ಸುದ್ದಿಗಳು

ಕೊಲೆ ಯಾಗಿರುವ ಪುನೀತ್ ಕಾಡುಗೋಡಿ ಪೊಲೀಸ್ ಠಾಣೆಯ ರೌಡಿಶೀಟರ್ ಆಗಿದ್ದಾನೆ. ಕಾಡುಗೋಡಿ ಠಾಣೆ ರೌಡಿಶೀಟರ್ ಶ್ರೀಕಾಂತ್ ತಂಡದಿಂದ ಹತ್ಯೆ ನಡೆದಿರುವ ಶಂಕೆ ವ್ಯಕ್ತವಾಗಿದೆ. ಶ್ರೀಕಾಂತ್ ಹಾಗೂ ರೌಡಿಶೀಟರ್ ಪುನೀತ್ ನಡುವೆ ಆಗಾಗ ಸಣ್ಣಪುಟ್ಟ ವಿಚಾರಕ್ಕೆ ಗಲಾಟೆ ಆಗುತ್ತಿರುತ್ತಿತ್ತು. ಪುನೀತ್, ಶ್ರೀಕಾಂತ್‌ನನ್ನು ಕೊಲೆ ಮಾಡುವುದಾಗಿ ಎಲ್ಲರ ಮುಂದೆ ಹೇಳಿಕೊಂಡು ಓಡಾಡುತ್ತಿದ್ದ. ಅದನ್ನೇ ಶ್ರೀಕಾಂತ್ ಮನಸ್ಸಿನಲ್ಲಿ ಇಟ್ಟುಕೊಂಡಿದ್ದ. ಮಂಗಳವಾರ ರಾತ್ರಿ ಕಾಡುಗೋಡಿಯ ವಿಜಯಲಕ್ಷ್ಮಿ ಲೇಔಟ್ ಬಳಿ ಪುನೀತ್ ಇರುವಾಗ ಬೈಕ್‌ನಲ್ಲಿ ಬಂದ ನಾಲ್ವರು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿ ಪರಾರಿ ಯಾಗಿದ್ದಾರೆ. ಘಟನೆ ಸಂಬಂದ ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಿಸಿಕೊಂಡಿ ರುವ ಪೊಲೀಸರು ಆರೋಪಿಗಳಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ನೆಫ್ರೋ ಯುರಾಲಜಿ ವೈದ್ಯರ ವಿರುದ್ಧ ದೂರು

ಬೆಂಗಳೂರು: ಸರಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆಯಾದ ನೆಫ್ರಾಯುರಾಲಜಿ ಸಂಸ್ಥೆಯಲ್ಲಿನ ಐವರು ವೈದ್ಯರು ಕರ್ತವ್ಯದ ಅವಧಿಯಲ್ಲಿ ಖಾಸಗಿಯಾಗಿ ಬೇರೆಡೆಗೆ ವೈದ್ಯಕೀಯ ವೃತ್ತಿ ನಡೆಸುತ್ತಿರುವುದು ಲೋಕಾಯುಕ್ತ ಪೊಲೀಸರ ತನಿಖೆಯಿಂದ ದೃಢಪಟ್ಟಿದ್ದು, ಕ್ರಮ ಕೈಗೊಳ್ಳುವಂತೆ ಸರಕಾರಕ್ಕೆ ವರದಿ ಸಲ್ಲಿಕೆಯಾಗಿ ಮೂರು ತಿಂಗಳು ಕಳೆದರೂ ಕ್ರಮ ಕೈಗೊಂಡಿಲ್ಲ. ಆದ್ದರಿಂದ ದೂರುದಾರರು ರಾಜ್ಯ ಸರಕಾರಕ್ಕೆ ಪತ್ರ ಬರೆಯುವ ಮೂಲಕ ಕ್ರಮ ಕೈಗೊಳ್ಳಲು ಆಗ್ರಹಿಸಿದ್ದಾರೆ. ನೆಫ್ರೋ ಯುರಾಲಜಿ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಪ್ರದೀಪ್, ಸಹಾಯಕ ಪ್ರಾಧ್ಯಾಪಕರಾದ ಡಾ.ಶ್ರೀಧರ್, ಡಾ.ಕಿಶನ್, ಸಹ ಪ್ರಾಧ್ಯಾಪಕ ಡಾ. ಶಿವಕುಮಾರ್ ಹಾಗೂ ಪ್ರಾಧ್ಯಾಪಕ ಶ್ರೀನಿವಾಸ್ ಅವರು ವಿಚಾರಣೆಗೆ ಒಳಪಟ್ಟಿದ್ದರು. ಇವರು ಖಾಸಗಿ ಆಸ್ಪತ್ರೆಗಳಲ್ಲಿಯೂ ಕಾರ್ಯನಿರ್ವಹಿಸುತ್ತಿರುವುದ ರಿಂದ ರೋಗಿಗಳಿಗೆ ಸಮಸ್ಯೆಯಾಗುತ್ತಿದೆಯೆಂದು ವರದಿಯಲ್ಲಿ ಹೇಳಲಾಗಿದ್ದು, 12(3) ಲೋಕಾಯುಕ್ತ ಕಾಯಿದೆ 1984 ರ ಕಾಯಿದೆಯಡಿ ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿದೆ.

ಕರ್ತವ್ಯದ ಅವಧಿಯಲ್ಲಿ ಐವರು ವೈದ್ಯರ ಖಾಸಗಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ರೋಗಿಗಳಿಗೆ ಸಮಸ್ಯೆಯಾಗುತ್ತಿದೆ ಎಂದು ಸಂಸ್ಥೆಯ ವೈದ್ಯರೊಬ್ಬರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಈ ಪ್ರಕರಣದ ತನಿಖೆ ಪೂರ್ಣ ಗೊಂಡಿದ್ದು, ಕರ್ತವ್ಯದ ಅವಧಿಯಲ್ಲಿ ಐವರು ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ವೈದ್ಯಕೀಯ ಶಿಕ್ಷಣ ಇಲಾಖೆ ಯಾವುದೇ ಕ್ರಮ ಕೈಗೊಳ್ಳದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಸಮಾಚಾರ ಸಣ್ಣದಲ್ಲ

ಜೂ.15ಕ್ಕೆ ನುಡಿ ನಮನ ಕಾರ್ಯಕ್ರಮ

ಬೆಂಗಳೂರು: ಖ್ಯಾತ ಕವಿ ಡಾ.ಎಚ್.ಎಸ್.ವೆಂಕಟೇಶ್ ಮೂರ್ತಿ ನುಡಿ ನಮನ ಕಾರ್ಯಕ್ರಮ ಭಾನುವಾರ ಬೆಳಗ್ಗೆ 10 ಗಂಟೆಗೆ ಶೇಷಾದ್ರಿಪುರಂ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ. ಕನ್ನಡ ಸಾಹಿತ್ಯ ಪರಿಷತ್ತು ಯಶವಂತಪುರ ವಿಧಾನಸಭಾ ಕ್ಷೇತ್ರ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಕವಿ ಬಿ.ಆರ್. ಲಕ್ಷ್ಮಣರಾವ್, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರಭಟ್, ರಂಗಕರ್ಮಿ ಶ್ರೀನಿವಾಸ್ .ಜಿ.ಕಪ್ಪಣ್ಣ, ಪ್ರಾಧ್ಯಾಪಕಿ ವತ್ಸಲಾ ಮೋಹನ್ ಎಚ್.ಎಸ್.ವಿ ಅವರಿಗೆ ನುಡಿ ನಮನ ಸಲ್ಲಿಸಲಿದ್ದಾರೆ. ಈ ವೇಳೆ ಗಾಯಕಿ ಸಂಗೀತಕಟ್ಟಿ ಅವರಿಂದ ಸಂಗೀತ ಕಾರ್ಯಕ್ರಮ, ಹಾಗೂ ವಿವಿಧ ಗಾಯಕರಿಂದ ನುಡಿ ನಮನ ಗೀತೆ ಕಾರ್ಯಕ್ರಮ ನಡೆಯಲಿದೆ. ಕಸಾಪ ಯಶವಂತಪುರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಎಚ್.ಎಸ್. ಸುಧೀಂದ್ರಕುಮಾರ್, ಕಸಾಪ ಬೆಂಗಳೂರು ನಗರ ಜಿಲ್ಲೆ ಅಧ್ಯಕ್ಷ ಎಂ.ವೆಂಕಟೇಶಮೂರ್ತಿ, ಶೇಷಾದ್ರಿಪುರಂ ಪಿಯು ಕಾಲೇಜು ಪ್ರಾಚಾರ್ಯ ಡಾ.ಮಂಜುನಾಥ್, ಎಸ್‌ಎಬಿಎಸ್ ಪ್ರಾಚಾರ್ಯ ಡಾ.ಜಯರಾಮ್, ಶ್ರೇಯ ಆಸ್ಪತ್ರೆ ಎಂಡಿ ಡಾ.ವೆಂಕಟಸ್ವಾಮಿ, ಸುಪ್ರ ಆಸ್ಪತ್ರೆ ಎಂಡಿ ಡಾ.ವಿನಯ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಜೂ.22ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು: ಕನ್ನಡ ಕಾಯಕಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ಜೂ.22 ರಂದು ಬೆಳಗ್ಗೆ 11 ಗಂಟೆಗೆ

ವಿಎಂ ಘಾಟ್ಗೆ ಸಭಾಂಗಣದಲ್ಲಿ ನಡೆಯಲಿದೆ. ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್‌ನ ವಿಮಾನ ಕನ್ನಡ ಸಂಘ ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಪರಂಪರೆಗೆ ಕೊಡುಗೆ ನೀಡಿದ ಸಾಧಕರನ್ನು ಗುರುತಿಸಿ ಕೊಡಮಾಡುವ ಈ ಪ್ರಶಸ್ತಿ ಈ ಬಾರಿ ಪ್ರೇಮ ಕವಿ ಬಿ.ಆರ್. ಲಕ್ಷ್ಮಣರಾವ್ ಅವರಿಗೆ ನೀಡಲು ತೀರ್ಮಾನಿಸಿದೆ. ಜೂ.22 ರಂದು ನಡೆಯುವ ಕನ್ನಡ ಸಂಘದ 20ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಬಿ.ಆರ್.ಲಕ್ಷ್ಮಣ ರಾವ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಮಕ್ಕಳ ಹೃದ್ರೋಗ ತಜ್ಞೆ ವಿಜಯಲಕ್ಷ್ಮಿ ಬಾಳೇಕುಂದ್ರಿ, ವಿಮಾನ ವಿಭಾಗದ ವ್ಯವಸ್ಥಾಪಕ ವಿ.ಶ್ರೀಕೃಷ್ಣ ಪ್ರಸಾದ್, ಕಾರ್ಮಿಕ ಸಂಘ, ಅಧಿಕಾರಿಗಳ ಸಂಘದ ಹಾಗೂ ಎಚ್‌ಎಎಲ್‌ನ ಇನ್ನಿತರ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿರುತ್ತಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

ನಾಳೆ ಕರಾವಳಿ, ಮಲೆನಾಡಿಗೆ ರೆಡ್ ಅಲರ್ಟ್ ಘೋಷಣೆ | ಮಳೆಗೆ ಬೆಂಗಳೂರಲ್ಲಿ ಟ್ರಾಫಿಕ್ ಜಾಮ್

ರಾಜ್ಯದಲ್ಲಿ ಐದು ದಿನ ಭಾರೀ ಮಳೆ

ವಿಶ್ವವಾಣಿ ಸುದ್ದಿಮನೆ, ಬೆಂಗಳೂರು

ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿದ್ದು, ವಿವಿಧೆಡೆಗ ಳಲ್ಲಿ ಮುಂದಿನ 5 ದಿನಗಳ ಕಾಲ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಇಂದಿನಿಂದ(ಜೂ.12)ಜೂನ್ 16ರವರೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಮಳೆ ಮುಂದುವರಿಯಲಿದ್ದು, ವಿವಿಧ ಜಿಲ್ಲೆಗಳಿಗೆ ರೆಡ್ ಅಲರ್ಟ್, ಯೆಲ್ಲೋ ಅಲರ್ಟ್, ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ರಾಜ್ಯದಾದ್ಯಂತ ಅಲ್ಲಲ್ಲಿ ಗುಡುಗು ಸಿಡಿಲಿನಿಂದ ಕೂಡಿದ್ದು ವ್ಯಾಪಕವಾಗಿ ಸಾಧಾರಣ ಮಳೆ ಸಹಿತ ಉತ್ತರ ಒಳನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಅಲ್ಲಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ ಮುನ್ಸೂಚನೆ ನೀಡಿದೆ.

ಜೂನ್ 12ರಂದು ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ದಕ್ಷಿಣ ಕನ್ನಡ, ಕೊಡಗು ಚಿಕ್ಕಮಗಳೂರು ಜಿಲ್ಲೆಗೆ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ. ಇನ್ನುಳಿದಂತೆ ಬೆಳಗಾವಿ, ಧಾರವಾಡ, ಗದಗ, ಕೊಪ್ಪಳ, ರಾಯಚೂರು, ವಿಜಯನಗರ, ಬಳ್ಳಾರಿ, ದಾವಣಗೆರೆ, ಹಾಸನ ಜಿಲ್ಲೆಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದ್ದು, ಬೀದರ್, ಕಲಬು ರಗಿ , ಯಾದಗಿರಿ, ಬೆಂಗಳೂರು, ಬೆಂಗಳೂರು ಗ್ರಾಮಾಂ ತರ, ಮೈಸೂರು, ರಾಮನಗರ, ಮಂಡ್ಯ ಸೇರಿದಂತೆ 16 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ.

ಜೂನ್ 13ರಂದು ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಗೆ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ. ಬೆಳಗಾವಿ, ಧಾರವಾಡ, ಗದಗ, ಹಾಸನ, ಕೊಡಗು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಿದ್ದರೆ, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಚಾಮರಾಜನಗರ, ಮೈಸೂರು, ತುಮಕೂರು ಸೇರಿದಂತೆ ಉಳಿದ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಣೆ ಮಾಡಲಾಗಿದೆ.

ಜೂನ್ 14ರಂದು ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು ಜಿಲ್ಲೆಗೆ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ. ಬೆಳಗಾವಿ, ಧಾರವಾಡ, ಹಾವೇರಿ, ಹಾಸನ ಮೈಸೂರಿಗೆ ಆರೆಂಜ್ ಅಲರ್ಟ್ ನೀಡಲಾಗಿದೆ. ಇನ್ನು ಬೀದರ್, ಕಲಬುರಗಿ, ವಿಜಯಪುರ, ಬೆಂಗಳೂರು, ಬೆಂಗಳೂರು ಗ್ರಾಮಾಂತರ ಸೇರಿದಂತೆ ಉಳಿದ ಎಲ್ಲಾ ಜಿಲ್ಲೆಗಳಿಗೂ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ

ರಾಜಧಾನಿಯಲ್ಲಿ ಬುಧವಾರ ಮಳೆ

ಬೆಂಗಳೂರಿನಲ್ಲಿ ಮತ್ತೆ ಮಳೆ ಶುರುವಾಗಿದ್ದು, ಮಂಗಳವಾರ ರಾತ್ರಿ ಹಾಗೂ ಬುಧವಾರ ದಿಢೀರ್ ಮಳೆಯಾಗಿದ್ದು ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿದ್ದು ಸವಾರರು ಪರದಾಡುವಂತಾಯಿತು. ಇಷ್ಟೇ ಅಲ್ಲದೆ ಮುಂದಿನ ಮೂರು ದಿನ ರಾಜ್ಯದಲ್ಲಿ ಭಾರೀ ಮಳೆಯಾಗುತ್ತದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ. ನಗರದಲ್ಲಿ ಬುಧವಾರ ಮಧ್ಯಾಹ್ನದ ವೇಳೆಗೆ ಹಲವು ಭಾಗಗಳಲ್ಲಿ ಮಳೆಯಾಗಿದ್ದು, ಸಂಜೆ ವೇಳೆಗೆ ಮತ್ತೆ ಮಳೆಯಾಗಿದೆ. ನಗರದ ಮೆಜೆಸ್ಟಿಕ್, ಆರ್‌ಆರ್ ನಗರ, ಶೇಷಾದ್ರಿಪುರ, ರಾಜಾಜಿನಗರ, ಉತ್ತರಹಳ್ಳಿ, ಮಲ್ಲೇಶ್ವರ, ಲಾಲ್‌ಬಾಗ್, ಜಯನಗರ ಸೇರಿದಂತೆ ಹಲವು ಭಾಗಗಳಲ್ಲಿ ಮಳೆಯಾಗಿದೆ.

ಪೋಟೊ: ಸುಧಾಕರ್ ದೇವರಾಜ್

ರೆಡ್ ಅಲರ್ಟ್?

- **ಜೂನ್ 13 ರಂದು ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು**
- **ಜೂನ್ 14ರಂದು ಕೊಡಗು ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು**

ಸಿಎಂ, ಡಿಸಿಎಂ 3-4 ಬಾರಿ ಗಡುವು ವಿಧಿಸಿದರೂ ಕಾಮಗಾರಿ ಮುಗಿದಿಲ್ಲ

ಹೆಬ್ಬಾಳ ಮೇಲ್ಸೇತುವೆ ಕಾಮಗಾರಿಗೆ ಮತ್ತೆ ಹಿನ್ನಡೆ

ಬೆಂಗಳೂರು: ಹೆಬ್ಬಾಳ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಸಮಸ್ಯೆಯನ್ನು ನಿರ್ವಹಿಸುವ ಸಲುವಾಗಿ ಬಿಡಿಎಯು ಕೈಗೆತ್ತಿಕೊಂಡಿರುವ ಮೇಲ್ಸೇತುವೆ ಕಾಮಗಾರಿಯನ್ನು ಪೂರ್ಣಗೊಳಿಸಲು ನಾಲ್ಕನೇ ಬಾರಿ ವಿಫಲವಾಗಿದೆ.

ಕೆಂಪೇಗೌಡ ಏರ್‌ಪೋರ್ಟ್ ಸಂಪರ್ಕಿಸುವ ಪ್ರಮುಖ ಮಾರ್ಗವಾಗಿರುವ ಹೆಬ್ಬಾಳ ಮೇಲ್ಸೇತುವೆಯ ಹೆಚ್ಚುವರಿ ಪಥ ನಿರ್ಮಾಣ ಕಾಮಗಾರಿಯು ನಿಧಾನಗತಿಯಲ್ಲಿದ್ದು, ಮೊದಲ ಹಂತವಾಗಿ ಕೆ.ಆರ್ ಪುರ ಲ್ಯೂಪ್ ನಿರ್ಮಾಣದ ಕಾರ್ಯ ವಿವಿಧ ಕಾರಣಗಳಿಂದಾಗಿ ವರ್ಷವಾದರೂ ಕೂಡಾ ಪೂರ್ಣಗೊಂಡಿಲ್ಲ. ಸಿಎಂ, ಡಿಸಿಎಂ ಹಾಗೂ ಮುಖ್ಯ ಕಾರ್ಯದರ್ಶಿ 3-4 ಬಾರಿ ಗಡುವು ವಿಧಿಸಿದರೂ, ಕಾಮಗಾರಿ ಮುಗಿದಿಲ್ಲ.

ಕಳೆದ ಮೇ ಅಂತ್ಯದೊಳಗೆ ಕೆ.ಆರ್ .ಪುರ ಲೂಪ್ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಗುತ್ತಿಗೆದಾರರಿಗೆ ಕೊನೆಯ ಎಚ್ಚರಿಕೆಯನ್ನು ನೀಡಲಾಗಿದ್ದು, ರೈಲ್ವೆ ಹಳಿಯ ಮೇಲಿನ ಮೇಲ್ಸೇತುವೆಗೆ ಕಬ್ಬಿಣದ ಬೃಹತ್ ಗಾತ್ರ ಗರ್ಡರ್ ಅಳವಡಿಸಲು ಸಾಧ್ಯವಾಗಿರಲಿಲ್ಲ, ರೈಲ್ವೆ ಇಲಾಖೆಯಿಂದ ಅನುಮತಿ ಪಡೆಯಲು ಸಮಯ ಹಿಡಿಯಿತು ಎಂದು ಅಧಿಕಾರಿಗಳು ಹೇಳಿದ್ದು, ಈ ಹಿಂದೆಯೇ ರೈಲ್ವೆ ಹಾಗೂ ಇತರ ಇಲಾಖೆ

ಗಳೊಂದಿಗೆ ಸಮನ್ವಯ ಸಾಧಿಸಿ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿತ್ತು.

ಕೆ.ಆರ್.ಪುರ ಲೂಪ್‌ನಲ್ಲಿ ವಾಹನಗಳ ಓಡಾಟಕ್ಕೆ ಅವಕಾಶ ಕಲ್ಪಿಸಿದ ಬಳಿಕ ಎಸ್ಟೀಮ್ ಮಾಲ್ ಕಡೆಯಿಂದ ನಗರಕ್ಕೆ ನೇರ ಪ್ರವೇಶ ಕಲ್ಪಿಸಲು ಹೊಸದಾಗಿ 2 ಪಥದ ಮೇಲ್ಸೇತುವೆ ನಿರ್ಮಿಸಲಾಗುತ್ತದೆ. ಈ ಕಾರ್ಯವನ್ನು ಕಳೆದ ಜನವರಿಯಿಂದ ಆರಂಭಿಸಬೇಕಿದ್ದರೂ, ಕೆ.ಆರ್.ಪುರ ಲೂಪ್ ಕಾಮಗಾರಿ ಅಪೂರ್ಣಗೊಂಡಿದ್ದರೂ ಗಡುವನ್ನು ವಿಸ್ತರಿಸಲಾಗಿತ್ತು. ಹಾಲಿ ಮುಖ್ಯ ಕ್ಯಾರೇಜ್‌ನಲ್ಲೇ ವಾಹನಗಳು ಸಾಗುತ್ತಿದ್ದು, ನೆಲಮಟ್ಟದಲ್ಲಿನ ರಸ್ತೆಯಲ್ಲಿ ಪಿಲ್ಲರ್ ಅಗೆತ ಇತ್ಯಾದಿ ಕೆಲಸ ಇನ್ನಷ್ಟೇ ಆಗಬೇಕಿದೆ. ಈ ಕಾರ್ಯವನ್ನು ಮುಂದಿನ ಜನವರಿ ವೇಳೆಗೆ ಸಿದ್ಧಪಡಿಸಲು ಬಿಡಿಎ ಗಮನಹರಿಸಿದೆ. ಆದರೆ, ಭಾರೀ ಸಂಚಾರ ಸಮಸ್ಯೆ ಮಧ್ಯೆಯೇ ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಹೆಚ್ಚುವರಿ ಪಥ ನಿರ್ಮಾಣ ವಿಳಂಬವಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಜೂನ್ ತಿಂಗಳಾಂತ್ಯಕ್ಕೂ ಸಂಚಾರ ಅನುಮಾನ

ಬೆಂಗಳೂರು ಉತ್ತರ ಭಾಗದಿಂದ ನಗರದೊಳಗೆ ಪ್ರವೇಶಿಸಲು ಹೆಬ್ಬಾಳ ಮಾರ್ಗ ಪ್ರಮುಖವಾಗಿದೆ. ಇದನ್ನಾಧರಿಸಿಯೇ ಕೆ.ಆರ್.ಪುರ ಲೂಪ್‌ನ್ನು ಮೊದಲು ಪೂರ್ಣಗೊಳಿಸಿ ಆ ಭಾಗದಿಂದ ನಗರಕ್ಕೆ ಬರಲು ಅವಕಾಶ ನೀಡಲು ನಿರ್ಧರಿಸಲಾಗಿತ್ತು. ದಿನದ ಎರಡು ಪಾಳಿಯಲ್ಲಿ ಕೆಲಸ ಮಾಡುತ್ತಿದ್ದರೂ. ಕೆಲಸ ಮಾತ್ರ ನಿರೀಕ್ಷೆಯಂತೆ ಸಾಗುತ್ತಿಲ್ಲ. ಹಾಲಿ ಕಾಮಗಾರಿಯ ವೇಗ ಗಮನಿಸಿದೆ ಈ ತಿಂಗಳಾಂತ್ಯಕ್ಕೂ ಕೆ.ಆರ್.ಪುರ ಲೂಪ್ ಕಾರ್ಯ ಮುಗಿಯುವ ಲಕ್ಷಣವಿಲ್ಲ.

ಅನಧಿಕೃತ ಕಟ್ಟಡ ತೆರವಿಗೆ ಮುಂದಾದ ಬಿಬಿಎಂಪಿ

ಬೆಂಗಳೂರು: ಮಹದೇವಪುರ ವ್ಯಾಪ್ತಿಯಲ್ಲಿ ಅನಧಿಕೃತ ಕಟ್ಟಡ ಹಾಗೂ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿದ ಕಟ್ಟಡಗಳನ್ನು ಗುರುತಿಸಿ, ಸೂಕ್ತ ಪರಿಶೀಲನೆ ನಡೆಸಿ ತ್ವರಿತವಾಗಿ ತೆರವು ಕಾರ್ಯವನ್ನು ನಡೆಸುವಂತೆ ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು.

ನಲ್ಲೂರುಹಳ್ಳಿ ಮೆಟ್ರೋ ಸ್ಟೇಷನ್‌ನಿಂದ ನಲ್ಲೂರಹಳ್ಳಿ ಬೋರ್‌ವೆಲ್ ರಸ್ತೆ ಮುಖಾಂತರ ವೈಟ್ ಫೀಲ್ಡ್ ಮುಖ್ಯ ರಸ್ತೆವರೆಗೆ ಪರಿಶೀಲನೆ ನಡೆಸಿದ ಮುಖ್ಯ ಆಯುಕ್ತರು ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ಕೈಗೊಳ್ಳಲು ಸಂಬಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದು, ನಲ್ಲೂರಹಳ್ಳಿ ಕಾಲೋನಿಯ 3ನೇ ಅಡ್ಡರಸ್ತೆ ಹಾಗೂ 7ನೇ ಅಡ್ಡರಸ್ತೆಯಲ್ಲಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ನಿಯಮಾನುಸಾರ ಅನಧಿಕೃತ ಕಟ್ಟಡದ ಭಾಗವನ್ನು ತ್ವರಿತವಾಗಿ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಡಾಡ್ಸ್ ವರ್ತ್ ಎನ್‌ಕ್ಲೇವ್ ರೋಡ್ ಬಳಿ ಚರಂಡಿಯ ನೀರು ರಸ್ತೆಗೆ ಬರುತ್ತಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ಪರಿಶೀಲನೆ ನಡೆಸಿ ಕಟ್ಟಡದ ಮಾಲೀಕರಿಗೆ ನೋಟಿಸ್ ನೀಡಲು ಹಾಗೂ ಕಟ್ಟಡ ಮಾಲೀಕರಿಗೆ ದಂಡ ವಿಧಿಸಲು ಸೂಚಿಸಲಾಗಿದೆ.

ಈ ವೇಳೆ ವಲಯ ಆಯುಕ್ತ ರಮೇಶ್, ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಮುಖ್ಯ ಅಭಿಯಂತರ ಲೋಕೇಶ್, ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಹಾಗೂ ಜಲಮಂಡಳಿಯ ಅಧಿಕಾರಿಗಳು ಇದ್ದರು.

ನಲ್ಲೂರುಹಳ್ಳಿ ಮೆಟ್ರೋ ಸ್ಟೇಷನ್‌ನಿಂದ ನಲ್ಲೂರಹಳ್ಳಿ ಬೋರ್‌ವೆಲ್ ರಸ್ತೆ ಮುಖಾಂತರ ವೈಟ್ ಫೀಲ್ಡ್ ಮುಖ್ಯ ರಸ್ತೆವರೆಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಪರಿಶೀಲನೆ ನಡೆಸಿದರು.

ಅನಧಿಕೃತ ವಾಹನ ನಿಲುಗಡೆ

ವಾಹನಗಳ ಮೇಲೆ ದಂಡ ನಲ್ಲೂರಹಳ್ಳಿ ಮುಖ್ಯ ರಸ್ತೆಯು ಅಧಿಕ ಸಂಚಾರ ದಟ್ಟಣೆಯನ್ನು ಹೊಂದಿದ್ದು, ರಸ್ತೆಯ ಇಕ್ಕೆಲಗಳಲ್ಲಿ ವಾಹನಗಳನ್ನು ನಿಲ್ಲಿಸಿರುವುದು ಕಂಡುಬಂದಿದ್ದು, ಮುಖ್ಯ ಆಯುಕ್ತರು ವಾಹನಗಳ ಮೇಲೆ ದಂಡ ವಿಧಿಸಿ ಸಂಚಾರಿ ಪೊಲೀಸ್ ಮೂಲಕ ವಾಹನಗಳನ್ನು ತೆರವುಗೊಳಿಸಲು ನಿರ್ದೇಶಿಸಿದರು. ನಲ್ಲೂರಹಳ್ಳಿ ರಾಜಕಾಲುವೆ ಪರಿಶೀಲಿಸಿದ ಮುಖ್ಯ ಆಯುಕ್ತರು, ರಾಜಕಾಲುವೆಗೆ ತಡೆಗೋಡೆ ನಿರ್ಮಿಸುವ ಅಗತ್ಯವಿದ್ದು ತ್ವರಿತವಾಗಿ ಸೂಕ್ತ ಕ್ರಮ ಕೈಗೊಂಡು ನಾಲಾ ಪಕ್ಕದಲ್ಲಿ ನಿರ್ಮಿಸಿರುವ ಅಕ್ರಮ ಕಟ್ಟಡ ತೆರವುಗೊಳಿಸಿ, ಬಫರ್ ಜೋನ್ ನಲ್ಲಿ ಯಾವುದೇ ಕಟ್ಟಡಗಳ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ ನೀಡದಂತೆ ಸೂಚಿಸಿದರು. ಪಾದಚಾರಿ ಮಾರ್ಗ ಒತ್ತುವರಿ ಹಾಗೂ ಅನಧಿಕೃತ ಓ.ಎಫ್.ಸಿ ಗಳನ್ನು ತ್ವರಿತವಾಗಿ ತೆರವುಗೊಳಿಸಿ, ರಸ್ತೆ ಪಕ್ಕದ ಚರಂಡಿಗಳ ಹೂಳೆತ್ತಿ, ಮುರಿದುಬಿದ್ದ ಸ್ಲ್ಯಾಬ್ ಗಳನ್ನು ಸರಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಕೋಮು ಗಲಭೆಗಳಿಗೆ ನಿಗ್ರಹ ಪಡೆ ಸುಧೀರ್ ಕುಮಾರ್ ರೆಡ್ಡಿ ಮುಖ್ಯಸ್ಥ

ಬೆಂಗಳೂರು: ಕರಾವಳಿ ಹಾಗೂ ಮಲೆನಾಡಿನಲ್ಲಿ ಕೋಮುಗಲಭೆ ಪ್ರಚೋದಿಸುವ ಸರಣಿ ಹತ್ಯೆಗಳ ತಡೆಗೆ ರಾಜ್ಯ ಸರಕಾರವು ರಚಿಸಿದ್ದ ವಿಶೇಷ ಕಾರ್ಯಪಡೆ ಘಟಕಕ್ಕೆ 248 ಮಂದಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ ರಾಜ್ಯ ಪೊಲೀಸ್ ಇಲಾಖೆ ಆದೇಶ ಹೊರಡಿಸಿದೆ.

ಸದ್ಯ, ವಿಸರ್ಜನೆಗೊಂಡಿರುವ ರಾಜ್ಯ ನಕ್ಸಲ್ ನಿಗ್ರಹ ಪಡೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮೂವರು ಇನ್ಸ್‌ಪೆಕ್ಟರ್ ಒಳಗೊಂಡಂತೆ 230 ಪೊಲೀಸ್ ಸಿಬ್ಬಂದಿಯನ್ನು ವಿಶೇಷ ಕಾರ್ಯಪಡೆಗೆ ನಿಯೋಜಿಸಲಾಗಿದೆ. ಮುಂದಿನ ಆದೇಶದವರೆಗೂ ಪಶ್ಚಿಮ ವಲಯದ ಐಜಿಪಿ ಅಮಿತ್ ಸಿಂಗ್ ಅವರಿಗೆ ವರದಿ ಮಾಡಿ ಪಾಲನಾ ವರದಿ ಸಲ್ಲಿಸಬೇಕು ಎಂದು ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎನ್.ಸಲೀಂ ಆದೇಶದಲ್ಲಿ ತಿಳಿಸಿದ್ದಾರೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಗಳ ಒಳಗೊಂಡು ಕಾರ್ಯನಿರ್ವಹಿಸುವ ವಿಶೇಷ ಕಾರ್ಯಪಡೆ ಇದಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕೋಮು ಗಲಭೆ ಪ್ರಚೋದಿಸುವ ಪ್ರತೀಕಾರದ ಸರಣಿ ಹತ್ಯೆಗಳು ನಡೆಯುತ್ತಿವೆ. ಇದರಿಂದ ಸಮಾಜದ ಸ್ವಾಸ್ಥ್ಯ ಜತೆಗೆ ಕಾನೂನು ಸುವ್ಯವಸ್ಥೆಗೂ ಧಕ್ಕೆಯಾಗುತ್ತಿದೆ.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಿಟ್ಟೆ ಕುಲಾಧಿಪತಿ ವಿನಯ್ ಹೆಗ್ಡೆ ಅಭಿಮತ

ಸಮಾಜಕ್ಕೆ ಸುಧಾಮೂರ್ತಿ ಮಾರ್ಗದರ್ಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಲೇಖಕಿಯಾಗಿ, ಶಿಕ್ಷಕಿಯಾಗಿ, ಉದ್ಯಮಿಯಾಗಿ ಸುಧಾಮೂರ್ತಿ ಅವರು ಯುವ ಸಮಾಜಕ್ಕೆ ನಿಜವಾದ ಮಾರ್ಗದರ್ಶಿಯಾಗಿದ್ದಾರೆ ಎಂದು ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಾಧಿಪತಿ ಎನ್.ವಿನಯ್ ಹೆಗ್ಡೆ ಹೇಳಿದರು.

ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ ಅವರಿಗೆ 2025ನೇ ಸಾಲಿನ ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆ ಚಾರಿಟಬಲ್ ಪ್ರತಿಷ್ಠಾನದ ಪ್ರಶಸ್ತಿಯನ್ನು ಪ್ರದಾನ ಮಾಡಿ ಮಾತನಾಡಿದ ಅವರು, ಪ್ರಸ್ತುತ ನಮ್ಮ ದೇಶ ಸಶಕ್ತರಾಗಿದ್ದೇವೆ. ಯಾವ ವಿದೇಶಿ ಶಕ್ತಿಯ ಮೇಲೂ ಅವಲಂಬಿತವಾಗಿಲ್ಲ. ಇದಕ್ಕೆ ಕಾರಣ ನಮ್ಮ ಹಿರಿಯರು ಮಾಡಿದ ತ್ಯಾಗ ಹಾಗೂ ಗ್ರಾಮೀಣ ಭಾರತದ ಅಭಿವೃದ್ಧಿಗೆ ತೋರಿದ ಅಪಾರ ಕಾಳಜಿ. ನ್ಯಾಯಮೂರ್ತಿ ಕೆ.ಎಸ್.ಹೆಗ್ಡೆ ಅವರು ಗ್ರಾಮ ಸಬಲೀಕರಣ ಮಾತ್ರವಲ್ಲ, ಸುತ್ತಲಿನ ಪ್ರದೇಶಗಳ ಯುವ ಜನಾಂಗಕ್ಕೆ ಶೈಕ್ಷಣಿಕ ವಾತಾವರಣ ಕಲ್ಪಿಸುವಲ್ಲಿ ಕಾಣಿಕೆ ನೀಡಿದರು. ಇಂದಿನ ಸಂದರ್ಭದಲ್ಲಿ ಸುಧಾಮೂರ್ತಿ ಅವರು ನೈತಿಕತೆ ರೂಢಿಸಿಕೊಳ್ಳಲು ಯುವ ಸಮಾಜಕ್ಕೆ ಪ್ರೇರೇಪಣೆ ನೀಡುತ್ತಿದ್ದಾರೆ. ಅವರಿಗೆ ನ್ಯಾಯಮೂರ್ತಿ ಕೆ.ಎಸ್. ಹೆಗ್ಡೆ ಅವರ ಸ್ಮರಣಾರ್ಥ ನೀಡಲಾಗುತ್ತಿರುವ ಪ್ರಶಸ್ತಿ ಸಂದಿರುವುದು ಅಪಾರ ಸಂತಸ ತಂದಿದೆ ಎಂದರು.

ಸಮಾರಂಭದಲ್ಲಿ ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಡಾ. ಎಂ.ಶಾಂತಾರಾಮ ಶೆಟ್ಟಿ, ಬೆಂಗಳೂರು ಕ್ಯಾಂಪಸ್ ಉಪಾಧ್ಯಕ್ಷ ಡಾ. ಸಂದೀಪ್ ಶಾಸ್ತ್ರಿ , ಕುಲಪತಿ ಡಾ.ಎಂ.ಎಸ್.ಮೂಡಿತ್ತಾಯ, ಆಡಳಿತ ಸಹ ಕುಲಾಧಿಪತಿ ವಿಶಾಲ್ ಹೆಗ್ಡೆ, ಹಿರಿಯ ಸಲಹೆಗಾರ ಡಾ. ಎನ್.ಆರ್.ಶೆಟ್ಟಿ ಉಪಸ್ಥಿತರಿದ್ದರು.

ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಅವರಿಗೆ ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಾಧಿಪತಿ ಎನ್.ವಿನಯ ಹೆಗ್ಡೆ ಕೆ.ಎಸ್. ಹೆಗ್ಡೆ ಅವರ ಸ್ಮರಣಾರ್ಥ ಪ್ರಶಸ್ತಿ ಪ್ರದಾನ ಮಾಡಿದರು. ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ಕುಲಾಧಿಪತಿ ಡಾ.ಎಂ.ಶಾಂತಾರಾಮ ಶೆಟ್ಟಿ, ಕುಲಪತಿ ಡಾ.ಎಂ.ಎಸ್.ಮೂಡಿತ್ತಾಯ ಮತ್ತಿತರರು ಇದ್ದರು.

ನಾನು ಲೋಕಾಯುಕ್ತ ಆಗುವವರೆಗೆ ಜನರ ಸಮಸ್ಯೆಗಳನ್ನು ಹತ್ತಿರದಿಂದ ನೋಡಿರಲಿಲ್ಲ. ನಮ್ಮ ಸಮಾಜದ ದೊಡ್ಡ ರೋಗ ಎಂದರೆ ದುರಾಸೆ. ಈ ದುರಾಸೆಯು ಅನೇಕ ಅನಾಹುತ ಉಂಟು ಮಾಡಿದೆ. ಆದರೆ ಸುಧಾಮೂರ್ತಿ ಅವರಂತಹ ಸಜ್ಜನರು ದೇಶದ ಸಬಲೀಕರಣಕ್ಕೆ ನೀಡುತ್ತಿರುವ ಕಾಣಿಕೆ ಹಾಗೂ ಅವರು ಮಾಡುತ್ತಿರುವ ಸಮಾಜಮುಖಿ ಕಾರ್ಯಗಳು ಹತಾಶೆಯ ನಡುವೆಯೂ ಆಶಾಭಾವನೆ ಮೂಡಿಸುತ್ತವೆ.

ಎನ್.ಸಂತೋಷ್ ಹೆಗ್ಡೆ , ನಿವೃತ್ತ ನ್ಯಾಯಮೂರ್ತಿ

ದುಡಿದು ಸಂಪಾದನೆ ಮಾಡಿದ್ದನ್ನು ಸಾರ್ಥಕಕ್ಕೆ ವಿನಯೋಗ ಮಾಡಿ

ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಮಾತನಾಡಿ, ಬದುಕಿನಲ್ಲಿ ನಾವು ಧನಕನಕಗಳನ್ನು ಗಳಿಸಿದರೆ ಸಾಲದು. ದುಡಿದು ಸಂಪಾದನೆ ಮಾಡಿದ್ದನ್ನು ಸಾರ್ಥಕ ವಿನಿಯೋಗ ಮಾಡಿದರೆ ಅದು ಸಾಧನೆ ಅನ್ನಿಸಿಕೊಳ್ಳುತ್ತದೆ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉತ್ತಮ ಶಿಕ್ಷಣ ಮಾತ್ರವಲ್ಲ, ನೈತಿಕತೆಯನ್ನು ಅವರ ಬದುಕಿನಲ್ಲಿ ರೂಢಿಸಿಕೊಳ್ಳುವಂತೆ ಮಾಡಿರುವ ಕೆಲಸ ಬಹಳ ದೊಡ್ಡದು. ಕೆ.ಎಸ್.ಹೆಗ್ಡೆ ಅವರ ಕುಟುಂಬ ನೀಡುತ್ತಿರುವ ಈ ಪ್ರಶಸ್ತಿ ನನ್ನಲ್ಲಿ ಜೀವನೋತ್ಸಾಹ ಹೆಚ್ಚಿಸಿದೆ ಹಾಗೂ ಮತ್ತಷ್ಟು ಜನಮುಖಿ ಕಾರ್ಯ ಕೈಗೊಳ್ಳಲು ಪ್ರೇರೇಪಿಸಿದೆ. ಪ್ರೀತಿ ಹಾಗೂ ಜನಪರ ಕಾಳಜಿ ನಮ್ಮೆಲ್ಲರಲ್ಲೂ ಶಾಶ್ವತವಾಗಿ ಮೂಡಲಿ. ಈ ನಿಟ್ಟಿನಲ್ಲಿ ಕಾರ್ಯತತ್ಪರಾಗೋಣ ಎಂದು ನುಡಿದರು.

ಪ್ರತಿ ಕಿ.ಮೀ ಶುಲ್ಕವು 15 ರು.ಗಳಿಂದ 18 ರು.ಗಳಿಗೆ ಏರಿಕೆಯಾಗುವ ನಿರೀಕ್ಷೆ

ಶೀಘ್ರದಲ್ಲೇ ಆಟೋ ಪ್ರಯಾಣ ದರ ಹೆಚ್ಚಳ ಸಾಧ್ಯತೆ

ಬೆಂಗಳೂರು: ನಗರದಲ್ಲಿ ಶೀಘ್ರದಲ್ಲೇ ಆಟೋ ಪ್ರಯಾಣದರವೂ ಹೆಚ್ಚಳವಾಗುವ ಸಾಧ್ಯತೆಯಿದ್ದು, ಈಗಿರುವ 30 ರು. ಗಳಿಂದ 36 ರು.ಗಳಿಗೆ ಮತ್ತು ಪ್ರತಿ ಕಿ.ಮೀ ಶುಲ್ಕವು 15 ರು.ಗಳಿಂದ 18 ರು.ಗಳಿಗೆ ಏರಿಕೆಯಾಗುವ ನಿರೀಕ್ಷೆಯಿದೆ ಎಂದು ಉನ್ನತ ಮೂಲಗಳು ತಿಳಿಸಿದೆ.

ಆಟೋರಿಕ್ಷಾ ಚಾಲಕರು ಮತ್ತು ಸಂಘಗಳು ಸರಕಾರವನ್ನು ಆಟೋಪ್ರಯಾಣ ದರವನ್ನು ಹೆಚ್ಚಿಸುವಂತೆ ಒತ್ತಾಯಿಸುತ್ತಿದ್ದು, ಮೂಲ ದರವನ್ನು 40 ರು.ಗೆ ಮತ್ತು ಪ್ರತಿ ಕಿ.ಮೀ ಶುಲ್ಕವನ್ನು 20 ರು.ಗಳಿಗೆ ಪರಿಷ್ಕರಿಸಬೇಕು ಎಂದು ಒತ್ತಡ ಹೇರುತ್ತಿದ್ದಾರೆ. ನಗರ ವ್ಯಾಪ್ತಿಗೆ ಬರುವ 10 ಆರ್‌ಟಿಒ ಅಧಿಕಾರಿಗಳು, ಪೊಲೀಸ್ ಉಪ ಆಯುಕ್ತರು ಮತ್ತು ಆಟೋ ಚಾಲಕರ ಸಂಘಗಳ ಪ್ರತಿನಿಧಿಗಳು ಜಿಲ್ಲಾ ಸಾರಿಗೆ ಪ್ರಾಧಿಕಾರದ ಭಾಗವಾಗಿದ್ದು, ಅಸ್ತಿತ್ವದಲ್ಲಿರುವ ಇಂಧನ ಬೆಲೆ, ನಗರದಲ್ಲಿನ ಸಂಚಾರ ಸ್ಥಿತಿ ಮತ್ತು ಪ್ರಯಾಣಿಕರ ಬೇಡಿಕೆಯಂತಹ ಅಂಶಗಳನ್ನು ಪರಿಗಣಿಸಿ ದರ ಪರಿಷ್ಕರಣೆಯನ್ನು ನಿರ್ಧರಿಸಲಾಗುತ್ತದೆ. ಶಿಫಾರಸಿನ ಆಧಾರದ ಮೇಲೆ, ಡಿಟಿಎ ಅಧ್ಯಕ್ಷ ಬೆಂಗಳೂರು ನಗರ ಉಪ ಆಯುಕ್ತರು ದರ ಪರಿಷ್ಕರ ಣೆಯ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಾರೆ. ಬೆಂಗಳೂರು ನಗರ ಡಿಸಿ ಕಚೇರಿಯ ಮೂಲಗಳ ಪ್ರಕಾರ, ಪರಿಷ್ಕೃತ ದರಗಳು 36 ರು. ಮತ್ತು 18 ರು. ಆಗಿದ್ದು, ಬೆಂಗಳೂರು ನಗರ ಡಿಸಿ ಜಗದೀಶ ಜಿ ಅವರ ಅನುಮೋದನೆಗಾಗಿ ಕಾಯುತ್ತಿದ್ದು, ಶೀಘ್ರವೇ ದರಗಳನ್ನು ಅಧಿಕೃತವಾಗಿ ಘೋಷಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಎಲ್ಲ ದರಗಳು ಹೆಚ್ಚಳವಾಗಿವೆ

ಆದರ್ಶ ಆಟೋ ಮತ್ತು ಟ್ಯಾಕ್ಸಿ ಚಾಲಕರ ಒಕ್ಕೂಟದ ಅಧ್ಯಕ್ಷ ಮಂಜುನಾಥ್ ಮಾತನಾಡಿ, 1.85 ಲಕ್ಷ ರು. ಇದ್ದ ಹೊಸ ಆಟೋಗಳ ಬೆಲೆ ಈಗ 2.85 ಲಕ್ಷ ರು. ಆಗಿದೆ. ಎಲ್ಲಾ ಅಗತ್ಯ ವಸ್ತುಗಳ ಬೆಲೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ, ಆದರೆ ಆಟೋ ದರಗಳು ಪರಿಷ್ಕರಣೆಯಿಲ್ಲದೆ ವರ್ಷಗಳಿಂದ ಹಾಗೆಯೇ ಉಳಿದಿವೆ. ಆಟೋ ಚಾಲಕರು ತಮ್ಮ ಕುಟುಂಬಗಳನ್ನು ಹೇಗೆ ನಡೆಸಬೇಕು ಎಂದು ಪ್ರಶ್ನಿಸಿದರು.

2021 ರಿಂದ ದರಗಳನ್ನು ಪರಿಷ್ಕರಿಸಲಾಗಿಲ್ಲ

ಪರಿಷ್ಕೃತ ದರಗಳು 40 ರು. ಮತ್ತು 20 ರು. ಆಗದಿದ್ದರೆ ಹೋರಾಟ ನಡೆಸುವುದಾಗಿ ಆಟೋರಿಕ್ಷಾ ಚಾಲಕರ ಸಂಘ, ಆದರ್ಶ ಆಟೋ ಮತ್ತು ಟ್ಯಾಕ್ಸಿ ಚಾಲಕರ ಒಕ್ಕೂಟದಂತಹ ಆಟೋ ಒಕ್ಕೂಟಗಳು ತಿಳಿಸಿದ್ದು, 2021 ರಿಂದ ದರಗಳನ್ನು ಪರಿಷ್ಕರಿಸಲಾಗಿಲ್ಲ. ಈ ಎಲ್ಲಾ ವರ್ಷಗಳಲ್ಲಿ, ಅನೇಕ ವಸ್ತುಗಳ ಬೆಲೆಗಳು ಹೆಚ್ಚಿವೆ. ಆಟೋ ದರ ಪರಿಷ್ಕರಣೆಯನ್ನು ಸಗಟು ಬೆಲೆ ಸೂಚ್ಯಂಕಕ್ಕೆ ಲಿಂಕ್ ಮಾಡಬೇಕೆಂದು ನಾವು ಒತ್ತಾಯಿಸುತ್ತೇವೆ ಎಂದು ಎಆರ್‌ಡಿಯು ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ ಹೇಳಿದರು.

ಕಾರ್ಮಿಕ ಇಲಾಖೆ
ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕರ್ನಾಟಕ ರಾಜ್ಯ ಬಾಲಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ(ರಿ)



ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ
ಜೂನ್ 12 2025

ಮಕ್ಕಳನ್ನು ಶಾಲೆಗೆ ಕಳುಹಿಸಿ, ಕೆಲಸಕ್ಕಲ್ಲ.

ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಅನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದು ಹಾಗೂ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ.

- ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳದಂತೆ ತಡೆಯಲು ಕ್ರಮ ಕೈಗೊಳ್ಳಲಾಗಿದ್ದು ನಿರಂತರ ಪರಿಶೀಲನೆಯನ್ನು ನಡೆಸಲಾಗುತ್ತಿದೆ.
- ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಲು ವಿಶೇಷ ಯೋಜನೆಗಳನ್ನು ಜಾರಿಮಾಡಲಾಗಿದೆ.
- ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ರ ಪರಿಣಾಮಕಾರಿ ಅನುಷ್ಠಾನ.
- ಸರ್ಕಾರದ 11 ಇಲಾಖೆಗಳ ಅಧಿಕಾರಿಗಳನ್ನು ನಿರೀಕ್ಷಕರುಗಳನ್ನಾಗಿ ನೇಮಕ ಮಾಡಲಾಗಿದ್ದು, ಅಧಿಕಾರಿಗಳ ತಂಡದ ಮೂಲಕ ನಿಯೋಜಿತ ಹಾಗೂ ಅನಿರೀಕ್ಷಿತ ದಾಳಿಗಳನ್ನು ಕೈಗೊಳ್ಳಲಾಗುತ್ತಿದೆ.
- ಕೆಲಸದಲ್ಲಿ ತೊಡಗಿರುವ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರು ಕಂಡುಬಂದಲ್ಲಿ ಅಂತಹ ಮಕ್ಕಳನ್ನು ರಕ್ಷಿಸಿ ಕೆಲಸದಿಂದ ಬಿಡುಗಡೆಗೊಳಿಸಿ ಶಿಕ್ಷಣ ಮುಂದುವರಿಕೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.
- ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿಗಳನ್ನು ಸ್ಥಾಪಿಸಲಾಗಿದೆ.
- ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿಕೊಂಡಲ್ಲಿ, ಮೊದಲ ಅಪರಾಧಕ್ಕೆ ಮಾಲೀಕರಿಗೆ 06 ತಿಂಗಳಿಂದ 02 ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ ರೂ. 20,000/- ರಿಂದ ರೂ. 50,000/- ಗಳವರೆಗೆ ದಂಡ ಅಥವಾ ಎರಡೂ. ಪುನರಾವರ್ತಿತ ಅಪರಾಧಕ್ಕೆ 01 ವರ್ಷದಿಂದ 03 ವರ್ಷಗಳವರೆಗೆ ಜೈಲು ಶಿಕ್ಷೆ.
- ಮಕ್ಕಳನ್ನು ಕೆಲಸಕ್ಕೆ ದೂಡುವ ಪೋಷಕರಿಗೂ ಸಹ ಶಿಕ್ಷಾ ಪ್ರಾವಧಾನವಿದ್ದು, ಪುನರಾವರ್ತಿತ ಅಪರಾಧಕ್ಕೆ ರೂ. 10,000/- ಗಳ ದಂಡ.
- ತಪ್ಪಿತಸ್ಥ ಮಾಲೀಕರು ತಾವು ನಿಯೋಜಿಸಿಕೊಂಡ ಪ್ರತಿ ಮಗುವಿಗೆ ರೂ. 20,000/- ಗಳಂತೆ ಮಕ್ಕಳ ಪುನರ್ವಸತಿ ಕಲ್ಯಾಣ ನಿಧಿಗೆ ಪಾವತಿಸಬೇಕಾಗುತ್ತದೆ. ಸರ್ಕಾರದ ವತಿಯಿಂದ ಪ್ರತಿ ಮಗುವಿಗೆ ರೂ. 15,000/- ಗಳ ಸಮಾನಂತರ ವಂತಿಕೆಯನ್ನು ನಿಧಿಗೆ ಪಾವತಿಸಲಾಗುತ್ತದೆ.

ಬಾಲ ಕಾರ್ಮಿಕ ಪದ್ಧತಿ ತಡೆಯೋಣ
ಸದೃಢ ಭವಿಷ್ಯ ರೂಪಿಸೋಣ

ಮಾನ್ಯ ಕಾರ್ಮಿಕ ಸಚಿವರು ಮತ್ತು ಮಂಡಳಿಯ ಅಧ್ಯಕ್ಷರಾದ ಶ್ರೀ ಸಂತೋಷ್ ಎಸ್. ಲಾಡ್ ರವರು ಶಾಲಾ ಮಕ್ಕಳೊಂದಿಗಿರುವ ಸಾಂದರ್ಭಿಕ ಚಿತ್ರ.

ಅಂತರ್ಜಾಲ ವ್ಯವಸ್ಥೆ: https://pencil.gov.in
https://ncpcr.gov.in/user.complaints.php | kscleps@gmail.com

ಸಹಾಯವಾಣಿ ಸಂಖ್ಯೆಗಳು
ಕಾರ್ಮಿಕರ ಸಹಾಯವಾಣಿ-155214 | ಮಕ್ಕಳ ಸಹಾಯವಾಣಿ-1098 | ಪೊಲೀಸ್ ಸಹಾಯವಾಣಿ-112

ಶ್ರೀಮತಿ ಭಾರತಿ ಡಿ., ಭಾ.ಆ.ಸೇ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಡಾ|| ಹೆಚ್.ಎನ್. ಗೋಪಾಲಕೃಷ್ಣ, ಭಾ.ಆ.ಸೇ
ಆಯುಕ್ತರು,
ಕಾರ್ಮಿಕ ಇಲಾಖೆ

ಡಾ|| ಎನ್.ವಿ. ಪ್ರಸಾದ್, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು
ಕಾರ್ಮಿಕ ಇಲಾಖೆ

"ಎಲ್ಲಾ ಮಾನವರು ಸ್ವತಂತ್ರರಾಗಿಯೇ ಜನಿಸಿದ್ದಾರೆ. ಘನತೆ ಹಾಗೂ ಹಕ್ಕುಗಳಲ್ಲಿ ಸಮಾನರಾಗಿದ್ದಾರೆ. ವಿವೇಕ ಮತ್ತು ಅಂತಃಕರಣಗಳನ್ನು ಪಡೆದವರಾದ್ದರಿಂದ ಅವರು ಪರಸ್ಪರ ಸಹೋದರ ಭಾವದಿಂದ ವರ್ತಿಸಬೇಕು" - ಇದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ.

ಸಮಾಚಾರ ಸಣ್ಣದಲ್ಲ

ರೌಡಿಶೀಟರ್‌ನ ಬರ್ಬರ ಹತ್ಯೆ

ಕಲಬುರಗಿ: ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ರೌಡಿಶೀಟರ್‌ನ ಹತ್ಯೆ ಮಾಡಿರುವ ಘಟನೆ ಆಳಂದ ತಾಲೂಕಿನ ಸಾವಳೇಶ್ವರ ಕ್ರಾಸ್ ಬಳಿ ಮಂಗಳವಾರ ತಡರಾತ್ರಿ ನಡೆದಿದೆ. ರೌಡಿಶೀಟರ್ ಸುಧಾಕರ್ (32) ಕೊಲೆಯಾಗಿದ್ದು, ಮಂಗಳವಾರ ತಡರಾತ್ರಿ ತನ್ನ ಸಹೋದರನ ಜತೆಗೆ ಬೈಕ್ ಮೇಲೆ ತೆರಳುವಾಗ ಈ ಘಟನೆ ನಡೆದಿದ್ದು, ಸುಧಾಕರ್ ಸಹೋದರನಿಗೂ ಗಂಭೀರ ಗಾಯವಾಗಿ ಆಸ್ಪತ್ರೆಗೆ ದಾಖಲಾಗಿದ್ದಾನೆ. ಹಳೆ ವೈಷಮ್ಯದ ಹಿನ್ನೆಲೆಯಲ್ಲಿ ಕೊಲೆ ಮಾಡಲಾಗಿದೆ ಎಂಬ ಶಂಕೆ ವ್ಯಕ್ತವಾಗಿದ್ದು,ಆಳಂದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಲ್ತುಳಿತಕ್ಕೆ ಆರ್‌ಸಿಬಿ ಕಾರಣ: ಸರಕಾರ

← ಮೊದಲಪುಟದಿಂದ

ಸಾಕ್ಷ್ಯ ನಾಶ, ಅಭಿಮಾನಿಗಳಿಗೆ ಸರಿಯಾದ ರೀತಿಯಲ್ಲಿ ಉಚಿತ ಟಿಕೆಟ್ ಮಾಹಿತಿ ನೀಡದಿರುವುದು; ಜನಸಂದಣಿಯನ್ನು ನಿಯಂತ್ರಿಸಲು ಸೂಕ್ತ ವ್ಯವಸ್ಥೆ, ಅಗ್ನಿಶಾಮಕ ದಳದ ವ್ಯವಸ್ಥೆ, ಬೆಳವಣಿಗೆಗಳ ಕುರಿತು ಜನರಿಗೆ ನಿರಂತರ ಮಾಹಿತಿ ಕೊರತೆ ಸೇರಿದಂತೆ 12 ಕಾರಣಗಳ ಹಿನ್ನೆಲೆಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಚಾರಕ್ಕಾಗಿ, ಬ್ರ್ಯಾಂಡ್ ಮೌಲ್ಯ ಹೆಚ್ಚಿಸಲು ಜನರ ಪ್ರಾಣಕ್ಕೆ ಕುತ್ತು ತಂದು, ಎಫ್‌ಐಆರ್ ದಾಖಲಾಗುತ್ತಿದ್ದಂತೆ ನಾಪತ್ತೆಯಾಗಲು ಆರೋಪಿಗಳು ಪ್ರಯತ್ನಿಸಿದ್ದಾರೆ. ಇದಕ್ಕಾಗಿ ನಾಲ್ವರನ್ನು ಬಂಧಿಸಲಾಗಿದೆ ಎಂದು ವಿವರಿಸಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಕರೋನಾ ರೂಪಾಂತರಿ ವೈರಸ್ ಸೌಮ್ಯ ಸ್ವಭಾವ | ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಜನ ಕೈಗೊಳ್ಳಿ; ಸಿಎಂ ಸಿದ್ದರಾಮಯ್ಯ

ಕರೋನಾ ಆತಂಕ ಬೇಡ: ಸಿಎಂ ಅಭಯ

ಬೆಂಗಳೂರು: ಕರೋನಾ ಬಗ್ಗೆ ಜನರು ಯಾವುದೇ ಆತಂಕಪಡುವ ಅಗತ್ಯವಿಲ್ಲ. ಆದರೂ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಕಾವೇರಿ ನಿವಾಸದಲ್ಲಿ ನಡೆದ ಸಿಎಂ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರಾಜ್ಯದಲ್ಲಿ ಮೇ ತಿಂಗಳ ಬಳಿಕ ಕರೋನಾ ಪರೀಕ್ಷೆ ಹೆಚ್ಚಿಸಲಾಗಿದೆ. ಈ ತಿಂಗಳು ಪ್ರತಿ ದಿನ ಸರಾಸರಿ 500 ಪರೀಕ್ಷೆ ನಡೆಸುತ್ತಿದ್ದೇವೆ. ಕಳೆದ 10 ದಿನಗಳಲ್ಲಿ 5 ಸಾವಿರ ಪರೀಕ್ಷೆ ನಡೆಸಲಾಗಿದ್ದು, 862 ಕರೋನಾ ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿವೆ. ಇದುವರೆಗೆ 11 ಸಾವು ಸಂಭವಿಸಿದೆ. ಆದರೂ ಇದರಲ್ಲಿ 10 ಪ್ರಕರಣಗಳಲ್ಲಿ ಕರೋನಾ ಕಾರಣದಿಂದ ಸಾವು ಸಂಭವಿಸಿಲ್ಲ. ವಿವಿಧ ರೀತಿಯ ಅನಾರೋಗ್ಯಕ್ಕೆ ತುತ್ತಾಗಿದ್ದ ರೋಗಿಗಳು ಈ ಪ್ರಕರಣಗಳಲ್ಲಿ ಸಾವನ್ನಪ್ಪಿದ್ದಾರೆ. ಒಂದು ಪ್ರಕರಣದ ಆಡಿಟ್ ವರದಿ ಬರಬೇಕಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರು ಮಾತನಾಡಿ, ರಾಜ್ಯದಲ್ಲಿ ಕರೋನಾ ಸೋಂಕಿನಿಂದಾಗಿ ಯಾವುದೇ ಸಾವು ಸಂಭವಿಸಿಲ್ಲ.

ಕಾವೇರಿ ನಿವಾಸದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಕರೋನಾ ಸೋಂಕು ಹತೋಟಿಯಲ್ಲಿದ್ದು ಜನರು ಆತಂಕಕ್ಕೆ ಒಳಗಾಗುವ ಸ್ಥಿತಿ ಇಲ್ಲ. ರಾಜ್ಯದಲ್ಲಿ ಕರೋನಾ ಪಾಸಿಟಿವ್ ಬಂದವರಲ್ಲಿ ಸಾವಿಗೀಡಾಗಿರುವ 11 ಜನರಲ್ಲಿ 10 ಜನರ ಡೆತ್ ಆಡಿಟ್ ರಿಪೋರ್ಟ್ ಬಂದಿದೆ. ಡೆತ್ ಆಡಿಟ್ ರಿಪೋರ್ಟ್ ಪ್ರಕಾರ 10 ಜನರು ಇತರ ಮಾರಕ ಕಾಯಿಲೆಗಳಾದ ಹೃದಯಸಂಬಂಧಿ, ಕಿಡ್ನಿ, ಅಂಗಾಂಗ ವೈಫಲ್ಯದಂತಹ ಕಾರಣಗಳಿಂದ ಸಾವನ್ನಪ್ಪಿದ್ದು, ಕರೋನಾ ಕಾರಣವಲ್ಲ ಎಂಬುದು ಸ್ಪಷ್ಟವಾಗಿದೆ. ಇನ್ನು ಒಬ್ಬರ ಡೆತ್ ಆಡಿಟ್ ರಿಪೋರ್ಟ್ ಬರುವುದು ಬಾಕಿ ಇದೆ ಎಂದು ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದರು.

ಸಭೆಯಲ್ಲಿ ಆರೋಗ್ಯ ಸಚಿವ ಡಾ.ದಿನೇಶ್ ಗುಂಡೂರಾವ್, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಸಿಎಂ ಅವರ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಇದ್ದರು.

ಕರೋನಾ ಡೆತ್ ಎಂದಾಕ್ಷಣ ಅನಗತ್ಯವಾಗಿ ಜನರು ಆತಂಕಕ್ಕೆ ಒಳಗಾಗುವುದು ಸಹಜ. ಆದರೆ ವಾಸ್ತವ ಚಿತ್ರಣ ಬೇರೆಯೇ ಆಗಿರುತ್ತದೆ. ಈಗಿರುವ ಕರೋನಾ ರೂಪಾಂತರಿ ವೈರಸ್ ಸೌಮ್ಯ ಸ್ವಭಾವದ್ದಾಗಿದೆ. 500 ಕ್ಕೂ ಹೆಚ್ಚು ಕರೋನಾ ಪಾಸಿಟಿವ್ ಪ್ರಕರಣಗಳಲ್ಲಿ ಕೇವಲ ಇಬ್ಬರು ಮಾತ್ರ ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೀಗಾಗಿ ಆತಂಕದ ಸ್ಥಿತಿ ಇಲ್ಲ.

-ದಿನೇಶ್ ಗುಂಡೂರಾವ್
ಆರೋಗ್ಯ ಸಚಿವ

ದುಬಾರಿ ಶುಲ್ಕ ವಿಧಿಸಿದರೆ ಕ್ರಮ

ಕರೋನಾ ಬಗ್ಗೆ ಯಾರೂ ಅನಗತ್ಯ ಗೊಂದಲ ಮೂಡಿಸಬಾರದು. ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ. ಎಲ್ಲಾ ಆಸ್ಪತ್ರೆಗಳಲ್ಲಿ ಕೋವಿಡ್ ಪ್ರಕರಣಗಳನ್ನು ನಿಭಾಯಿಸಲು ಸೂಕ್ತ ವ್ಯವಸ್ಥೆಯನ್ನು ಕೈಗೊಳ್ಳಬೇಕು. ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಖಾಸಗಿ ಆಸ್ಪತ್ರೆಗಳಲ್ಲಿ ಅನಗತ್ಯವಾಗಿ ಕರೋನಾ ಪರೀಕ್ಷೆ ಹೆಸರಿನಲ್ಲಿ ದುಬಾರಿ ಶುಲ್ಕ ವಿಧಿಸುತ್ತಿರುವ ದೂರುಗಳ ಬಗ್ಗೆ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಂದಿಬೆಟ್ಟ ಸಂಪುಟ ಸಭೆ; ಚಿಕ್ಕಬಳ್ಳಾಪುರಕ್ಕೆ ಭರಪೂರ ಅನುದಾನ?

← ಮೊದಲಪುಟದಿಂದ

ಹೂವಿಗೆ ವಿಶ್ವವಿಖ್ಯಾತಿ ಪಡೆದಿರುವ ಚಿಕ್ಕಬಳ್ಳಾಪುರದಲ್ಲಿ ಹೂವಿನ ಮಾರುಕಟ್ಟೆ ಸ್ಥಾಪಿಸುವುದಾಗಿ ಸರಕಾರ ಕಳೆದ ಬಜೆಟ್‌ನಲ್ಲಿ ಘೋಷಿಸಿತ್ತು. ಆರಂಭದಲ್ಲಿ ಪಿಪಿಪಿ ಮಾದರಿಯಲ್ಲಿ ಮಾರುಕಟ್ಟೆ ಸ್ಥಾಪಿಸಲು ಉದ್ದೇಶಿಸಿದ್ದ ಸರಕಾರ, ಇದೀಗ ಸರಕಾರದ ವತಿಯಿಂದಲೇ ನಿರ್ಮಿಸಲು ತೀರ್ಮಾನಿಸಿದೆ. ಈ ತೀರ್ಮಾನದ ಹಿಂದೆ ಪ್ರದೀಪ್ ಈಶ್ವರ್ 'ಪರಿಶ್ರಮ'ವಿದೆ ಎನ್ನುವುದು ಸ್ಥಳೀಯರ ಮಾತಾಗಿದೆ.

ಸಚಿವ ಸಂಪುಟದಲ್ಲಿ ಈ ಹೂವಿನ ಮಾರುಕಟ್ಟೆ ಅನುದಾನ, ಮಂಚೇನಹಳ್ಳಿಯಲ್ಲಿ ಮಿನಿ ವಿಧಾನಸೌಧ ನಿರ್ಮಾಣಕ್ಕೆ ಅನುದಾನ, 1955ರಲ್ಲಿ ವಿಶ್ವೇಶ್ವರಯ್ಯ ಅವರು ಕಟ್ಟಿಸಿರುವ ಜಕ್ಕಲಮಡಗು ಜಲಾಶಯದ ಸಂಗ್ರಹ ಸಾಮರ್ಥ್ಯ ಹೆಚ್ಚಳಕ್ಕೆ ಡಿಪಿಆರ್ ಸಿದ್ಧಪಡಿಸಲು ಅನುದಾನ ಸೇರಿದಂತೆ ನಂದಿಬೆಟ್ಟದ ರೋಪ್ ವೇ ಹಾಗೂ ಇತರೆ ಮೂಲಸೌಕರ್ಯ ಕಾಮಗಾರಿಗೆ ಅನುದಾನ ಸಿಗುವ ನಿರೀಕ್ಷೆಯಿದೆ. ಈ ಮೂಲಕ ಸುಮಾರು 250 ಕೋಟಿಯಿಂದ 300 ಕೋಟಿ ಅನುದಾನ ಲಭಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ವೈಯಕ್ತಿಕವಾಗಿಯೂ ಹಲವು ಕಾರ್ಯ

ಇನ್ನು ಶಾಸಕ ಪ್ರದೀಪ್ ಈಶ್ವರ್ ಶಾಸಕರಾಗಿ ಕ್ಷೇತ್ರಕ್ಕೆ ನೂರಾರು ಕೋಟಿ ಅನುದಾನವನ್ನು ತರುವ ಜತೆಜತೆಗೆ ವೈಯಕ್ತಿಕವಾಗಿಯೂ ಹಲವು ಕೊಡುಗೆಗಳನ್ನು ನೀಡುತ್ತಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಪ್ರಮುಖವಾಗಿ 'ಅಮ್ಮ' ಆಂಬ್ಯುಲೆನ್ಸ್ ಮೂಲಕ ಉಚಿತ ಆಂಬ್ಯುಲೆನ್ಸ್ ಸೇವೆಯನ್ನು ನೀಡಿರುವ ಪ್ರದೀಪ್ ಅವರು, ಇದಕ್ಕಾಗಿ ಪ್ರತಿತಿಂಗಳು ಲಕ್ಷಾಂತರ ರುಪಾಯಿ ವ್ಯಯಿಸುತ್ತಿದ್ದಾರೆ. ಇದೇ ರೀತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಉಚಿತ ಸಿಇಟಿ, ನೀಟ್ ತರಬೇತಿ, ಅನಾಥ ಮಕ್ಕಳ ದತ್ತು ಕಾರ್ಯ ಸೇರಿದಂತೆ ಹಲವು ಕಾರ್ಯಗಳನ್ನು ಸ್ವಂತಖರ್ಚಿನಲ್ಲಿ ಮಾಡುತ್ತಿರುವುದು ಸ್ಥಳೀಯರಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ.

ಕೊಲ್ಲೂರು ದೇವಿಗೆ 1 ಕೆ.ಜಿ.ಚಿನ್ನದ ಮುಖವಾಡ ಕೊಡುಗೆ

ಉಡುಪಿ: ಇಲ್ಲಿನ ಕೊಲ್ಲೂರು ಶ್ರೀಮೂಕಾಂಬಿಕಾ ದೇವಿಗೆ 1 ಕೆ.ಜಿ. ತೂಕದ ರತ್ನಖಚಿತ ಚಿನ್ನದ ಮುಖವಾಡವನ್ನು ತುಮಕೂರು ಜಿಲ್ಲೆ ಶಿರಾದ ದಾನಿಗಳಾದ ಆಯುರ್ವೇದ ವೈದ್ಯ ಡಾ. ಕೆ. ಲಕ್ಷ್ಮೀನಾರಾಯಣ ಅವರು ಬುಧವಾರ ಕುಟುಂಬ ಸಮೇತರಾಗಿ ದೇವಳಕ್ಕೆ ಆಗಮಿಸಿ, ದೇವಿಗೆ ಸಮರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ದೇಗುಲದ ವತಿಯಿಂದ ವೈದ್ಯರ ಕುಟುಂಬವನ್ನು ಗೌರವಿಸಲಾಯಿತು. ದೇವಸ್ಥಾನ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ, ಕಾರ್ಯನಿರ್ವಾಹಕ ಅಧಿಕಾರಿ ಪ್ರಶಾಂತ್ ಕುಮಾರ್ ಶೆಟ್ಟಿ, ಸಮಿತಿ ಸದಸ್ಯರಾದ ರಘುರಾಮ್ ದೇವಾಡಿಗ, ಮಹಾಲಿಂಗ ನಾಯ್ಕ್, ಸುಧಾ, ದೇವಳದ ಅರ್ಚಕರರಾದ ಸುಬ್ರಮಣ್ಯ ಅಡಿಗ, ಕ್ಷೇತ್ರ ಪುರೋಹಿತರಾದ ಕೆ. ನರಸಿಂಹ ಭಟ್ ಹಾಗೂ ಅರ್ಚಕರು ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕನೀನಿನಿ, ಮಎದಂಕಾನಿ
ವಿಭಾಗ ನಂ 3, ಬಾದಾಮಿ ಜಿಲ್ಲೆ:ಬಾಗಲಕೋಟ
ದೂರವಾಣಿ ಸಂಖ್ಯೆ : 08357-220057 e-mail : eemlb3bdm@gmail.com
ಸಂ.ಕನೀನಿನಿ/ಮಎಕಾನಿ,ವಿ-3/ಯೋ.ಶಾ/ಟೆಂಡರ/2025-26/170 ದಿನಾಂಕ:09-06-2025

ಅಲ್ಪಾವಧಿ ಟೆಂಡರ ಅಧಿಸೂಚನೆ
(ಕೆಪಿಪಿ ಪೋರ್ಟಲ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದವರಿಂದ 4701 ಎಂ & ಎಂ.ಐ ಶೀರ್ಷಿಕೆ ಅಡಿ "Availing Consultancy Services for obtaining Forest Clearance for diversion of 113 Hectare of forest land for Malaprabha Left Bank Canal, Badami Taluk, Bagalkote District" ಕಾಮಗಾರಿಗೆ (ವರ್ಕ ಇಂಡೆಂಟ ನಂ. KNNL/2025-26/SE0134/ CALL-2) "Agency having certificate of accredition from National accredition board for education and training (NABET) ಗುತ್ತಿಗೆದಾರರಿಂದ, ಕೆಪಿಪಿ ಪೋರ್ಟಲ್ ಮೂಲಕ ಕರೆಯಲಾಗಿದೆ. ವಿವರಗಳು ಈ ಕೆಳಗಿನಂತಿವೆ.
1)ಟೆಂಡರಗಿಟ್ಟ ಕಾಮಗಾರಿ ಮೊತ್ತ ಕನಿಷ್ಟ ರೂ.42.00 ಲಕ್ಷ ಇರುತ್ತದೆ. 2)ಪಾವತಿ ಸಬೇಕಾದ ಇ.ಎಂ.ಡಿ ಮೊತ್ತ:ರೂ.50,000.00 ಇರುತ್ತದೆ. 3)ಇ-ಟೆಂಡರ ದಾಖಲೆಗಳನ್ನು ಡೌನಲೋಡ ಮಾಡಿಕೊಳ್ಳಲು ಹಾಗೂ ಭರ್ತಿ ಮಾಡಿದ ಇ-ಟೆಂಡರ ಸಲ್ಲಿಸಲು ಕೊನೆಯ ದಿನಾಂಕ:20-06-2025 ಸಾಯಂಕಾಲ 4-00 ಗಂಟೆ ವರೆಗೆ. 4)ಟೆಂಡರ ಆಕ್ಷೇಪಣೆಗಳಿಗೆ/ಸ್ಪಷ್ಟೀಕರಣಕ್ಕಾಗಿ ನಿಗದಿಪಡಿಸಿದ ದಿನಾಂಕ:16-06-2025 ರಂದು ಮಧ್ಯಾಹ್ನ 5-30 ಗಂಟೆಯವರೆಗೆ, 5)ತಾಂತ್ರಿಕ ಬಿಡ್ ತೆರೆಯುವ ದಿನಾಂಕ:21-06-2025 ರಂದು ಸಾಯಂಕಾಲ 4-00 ಗಂಟೆಯ ನಂತರ, 6)ಹಣಕಾಸಿನ ಬಿಡ್ ತೆರೆಯುವ ದಿನಾಂಕ : 26-06-2025 ರಂದು ಮುಂಜಾನೆ 11-00 ಗಂಟೆಯ ನಂತರ.
ಗುತ್ತಿಗೆದಾರರ ಅರ್ಹತೆ/ಟೆಂಡರ ನಿಯಮಗಳು/ಟೆಂಡರಪ್ರೊಸೆಸ್ಸಿಂಗ ಶುಲ್ಕ ಇತ್ಯಾದಿ ವಿವರಗಳಿಗೆ ವೆಬ್ ಸೈಟ www.kpp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕಛೇರಿಯ ಸಮಯದಲ್ಲಿ ದೂರವಾಣಿ ಸಂ.08357-220057 ಕ್ಕೆ ಸಂಪರ್ಕಿಸಬಹುದು. ಟೆಂಡರಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.
ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ:08357-220057 ರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ.ಮ.ಎ.ಕಾ.ನಿ.ವಿಭಾಗ ನಂ.3,ಬಾದಾಮಿ.
DIPR/BGK/RO-NO-118/KSMCA/2025-26

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ
ಕೋಲಾರ – 563101
e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in
ದೂರವಾಣಿ ಸಂಖ್ಯೆ: 08152-222022

ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು -3
ಟೆಂಡರ್ ಪ್ರಕಟಣೆ ಸಂಖ್ಯೆ-11/2025-26 ದಿನಾಂಕ: 10.06.2025

ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 5054 ಜಿಲ್ಲಾ ಮತ್ತು ಇತರೆ ರಸ್ತೆಗಳು ಸುಧಾರಣೆ ಅಡಿಯಲ್ಲಿ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಯ ಅಂದಾಜು ಮೊತ್ತ: 90.00 ಲಕ್ಷಗಳು ಮತ್ತು **ಇ.ಎಂ.ಡಿ ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ** ಕಾಲಾವಧಿ : 06 ತಿಂಗಳು ನಿರ್ವಹಿಸಲು **ಅರ್ಹ ಸಿವಿಲ್ ಗುತ್ತಿಗೆದಾರರಿಂದ** ಕೆಪಿಪಿ ಪೋರ್ಟಲ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯು-3 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ **ದಿನಾಂಕ: 25.06.2025 ರಂದು ಸಂಜೆ 16.00 ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: 26.06.2025 ರಂದು ಸಂಜೆ 16.30 ಗಂಟೆಯ ನಂತರ ಕೆ.ಪಿ.ಪಿ ಪೋರ್ಟಲ್ ನಲ್ಲಿ ತೆರೆಯಲಾಗುವುದು.** ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು **ಕೆ.ಪಿ.ಪಿ ಪೋರ್ಟಲ್ (Viz.,http://kppp.karnataka.gov.in)**ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.
ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/-
ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ
ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:116/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು & ಸಂಶೋಧನಾಧಿಕಾರಿಗಳ ಕಛೇರಿ,
ಹೆಡಿಯಾಲ ಉಪ-ವಿಭಾಗ, ಹೆಡಿಯಾಲ
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ – 571315
Ph: 08221-228129 Email: hediyala.acf@gmail.com
ಸಂ.ಸಅಸಂ/ಹೆಉವಿ/ರಾಂಪುರ/ಸಾಕಾನೆಆಹಾರ/ಟೆಂಡರ್/ಸಿಆರ್-01/2025-26 ದಿನಾಂಕ: 05.06.2025

ಟೆಂಡರ್ ಪ್ರಕಟಣೆ
ಇ-ಪ್ರೊಕ್ಯೂರ್‌ಮೆಂಟ್

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2025-26ನೇ ಸಾಲಿನಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ಉಪ-ವಿಭಾಗ ವ್ಯಾಪ್ತಿಯ ಐನೂರು ಮಾರಿಗುಡಿ ವಲಯದ ರಾಂಪುರ ಸಾಕಾನೆ ಶಿಬಿರದಲ್ಲಿರುವ ಇಲಾಖಾ ಸಾಕಾನೆಗಳಿಗೆ 2025-26ನೇ ಸಾಲಿನಲ್ಲಿ (ಜುಲೈ-2025 ರಿಂದ ಮಾರ್ಚ್-2026ರ ಮಾಹೆಯ ಅಂತ್ಯಕ್ಕೆ) ಮೇವು ಹಾಗು ಆಹಾರ ಪದಾರ್ಥಗಳನ್ನು ಸರಬರಾಜು ಸರಬರಾಜು ಮಾಡುವ ಸಂಬಂಧ 2025-26ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಿಕೊಂಡಿರುವಂತಹ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಸರಕು/ಸಾಮಾಗ್ರಿಗಳ ಸಂಖ್ಯೆ 01 (ಒಂದು) ಮೊಬಲಗು ರೂ.69,97,617.00 ಆಗಿದ್ದು, ಇ.ಎಂ.ಡಿ ಮೊಬಲಗು ರೂ.1,40,000.00 ಆಗಿರುತ್ತದೆ. ಹಾಗು ಟೆಂಡರ್ ಸಲ್ಲಿಸಲು ಕೊನೆಯ ದಿ: 20.06.2025ರ ಸಂಜೆ: 4.30 ಗಂಟೆ ಆಗಿದ್ದು, ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಹಾಗು ಷರತ್ತುಗಳನ್ನು https://kppp.karnataka.gov.in ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/- ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ ಹಾಗು
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
DIPR/DDMYS/435/KSMCA/273/2025-26

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 08/25-26 ದಿನಾಂಕ: 06.06.2025

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ:8443 ಠೇವಣಿ ವಂತಿಕೆ, 3054-04-337-1-10-200 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ)(ಅತಿವೃಷ್ಟಿ), 4059-80-386-051-0-29 ಅಡಿಯಲ್ಲಿನ ಒಟ್ಟು 04 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW - 1 & 3ರಂತೆ) ವಿವರಗಳನ್ನು ಲಗತ್ತಿಸತಕ್ಕದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.10.00 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ.100.00 ಲಕ್ಷಗಳು ಆಗಿರುತ್ತವೆ. ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 04 ಕಾಮಗಾರಿಗಳಿಗೆ (ಇಂ.ಸಂಖ್ಯೆ:22024, ದಿ:13.06.2025, ಇಂ.ಸಂಖ್ಯೆ:10224(4ನೇ ಕರೆ), 16239 (2ನೇ ಕರೆ), ದಿ:18.06.2025, ಇಂ.ಸಂಖ್ಯೆ:22132, ದಿ:25.06.2025 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/25-26/39/399

ಅತ್ತಿಬೆಲೆ ಪುರಸಭೆ ಕಾರ್ಯಾಲಯ
ಸ್ವಚ್ಛ ಭಾರತ
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562107.
ದೂರವಾಣಿ ಸಂಖ್ಯೆ: 080-27821501, ಇ-ಮೇಲ್: itstaff_ulb_attibele@yahoo.com
ವೆಬ್‌ಸೈಟ್: www.attibeletown.mrc.gov.in
ಸಂಖ್ಯೆ: ಅಪುಕಾ/ಆಶಾ/ಪ.ಆ/ಐ.ಇ.ಸಿ/ಎಸ್‌ಬಿಎಂ2.0/ಸಿಆರ್/134/2025-26 ದಿನಾಂಕ: 11.06.2025

ಆಸಕ್ತ ಅಭಿವ್ಯಕ್ತ (EOI) ಗಾಗಿ ಅರ್ಜಿ ಆಹ್ವಾನ

ಬೆಂಗಳೂರು ನಗರ ಜಿಲ್ಲೆಯ, ಅತ್ತಿಬೆಲೆ ಪುರಸಭಾ ವ್ಯಾಪ್ತಿಯಲ್ಲಿ ನಲ್ಮ್-ಡೇಯಲ್ಲಿ ನೊಂದಾಯಿತ ಸ್ವ-ಸಹಾಯ ಗುಂಪುಗಳ ನೇಮಕಾತಿಯ ಮೂಲಕ ಸ್ವಚ್ಛ ಭಾರತ್-2.0 ಯೋಜನೆಯಡಿಯಲ್ಲಿ ಮಾಹಿತಿ ವಿದ್ಯಾಭ್ಯಾಸ, ಸಂವಹನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಆಸಕ್ತ ಅಭಿವ್ಯಕ್ತ (EOI) ಗಾಗಿ ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತ ಸ್ವ-ಸಹಾಯ ಗುಂಪುಗಳು ಭಾಗವಹಿಸಬಹುದಾಗಿದೆ. TOR ಆಯ್ಕೆ ಪ್ರಕ್ರಿಯೆ ಮತ್ತು ಸಂಭಾವನೆ ವಿವರಗಳು **www.attibeletown.mrc.gov.in** ನಲ್ಲಿ ಲಭ್ಯವಿರುತ್ತದೆ. ಆಸಕ್ತ ಗುಂಪುಗಳ ಸದಸ್ಯರು ವೆಬ್‌ಸೈಟ್ ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ **ದಿನಾಂಕ: 30.06.2025 ಸಂಜೆ 5.00 ಗಂಟೆಯ** ಮೊದಲು ಅಥವಾ ಅದಕ್ಕೂ ಮೊದಲು ಅಧಿಕೃತ ಇಮೇಲ್ ಐಡಿ **www.attibeletown.mrc.gov.in** ಗೆ ಕಳುಹಿಸಬಹುದಾಗಿದೆ. ಆಸಕ್ತ ಗುಂಪಿನ ಸದಸ್ಯರುಗಳು ಅರ್ಜಿಯನ್ನು ಸಲ್ಲಿಸುವಾಗ ಅವಶ್ಯವಿರುವ ದಾಖಲೆಗಳನ್ನು ನಿಗದಿತ ನಮೂನೆಯೊಂದಿಗೆ ಲಗತ್ತಿಸಲು ಕೋರಿದೆ. 1. ಗುರುತಿನ ಪುರಾವೆ (ಓಟರ್ ಐಟಿ), 2. ವಿಳಾಸದ ಪುರಾವೆ (ಆಧಾರ್ ಕಾರ್ಡ್), 3. ಎಂಪಾನೇಲ್ಡ್ ದಾಖಲೆಗಳು, 4. ಶೈಕ್ಷಣಿಕ ಅರ್ಹತೆ (ಎಸ್.ಎಸ್.ಎಲ್.ಸಿ ಅಂಕಪಟ್ಟಿ), 5. ಡೇ-ನಲ್ಮ್ ಅನುಮೋದನೆ ಪಡೆದ ನಮೂನೆ. ಆಯ್ಕೆಯಾದ ಅಭ್ಯರ್ಥಿಗಳಿಗೆ, ಸಂದರ್ಶನವನ್ನು ಆಯೋಜಿಸಿ ವಿಷಯದ ತಿಳುವಳಿಕೆ ಸಾಮರ್ಥ್ಯದ ಆಧಾರದ ಮೇರೆಗೆ ಆಯ್ಕೆ ಮಾಡಲಾಗುವುದು ಹಾಗೂ ಸಂದರ್ಶನದ ದಿನಾಂಕವನ್ನು ಪತ್ರದ ಮೂಲಕ ತಿಳಿಸಲಾಗುವುದು.
ಸಹಿ/-
ಆಡಳಿತಾಧಿಕಾರಿಗಳು ಹಾಗೂ,
ಉಪ-ವಿಭಾಗಾಧಿಕಾರಿಗಳು, ದಕ್ಷಿಣ ವಿಭಾಗ,
ಬೆಂಗಳೂರು.
ಸಹಿ/-
ಮುಖ್ಯಾಧಿಕಾರಿ,
ಪುರಸಭೆ, ಅತ್ತಿಬೆಲೆ
ವಾಸಾಸಂಇ/ವಾ.ಪ್ರ/1178/ಎಸ್‌ಎಸ್‌ಸಿ/2025-26

ಕೈ ಪಡೆಗೆ ಇಡಿ ಶಾಕ್

← ಮೊದಲಪುಟದಿಂದ

ಮೂರನೇ ಕಂತಿನ 5.25 ಕೋಟಿ ಹಣವನ್ನು ಯಶವಂತಪುರದಲ್ಲಿನ ಮಾಲ್‌ವೊಂದರ ಬಳಿ ಮಾಜಿ ಎಂಡಿ ಪದ್ಮನಾಭನಿಗೆ ನೀಡಿದ್ದಾನೆ ಎನ್ನುವುದು ವಿಚಾರಣೆ ವೇಳೆ ಬೆಳಕಿಗೆ ಬಂದಿದೆ.

ಹವಾಲಾ ವಾಸನೆ: ಆರೋಪಿ ನೆಕ್ಕಂಟಿ ನಾಗರಾಜ್ ಐ ಫೋನ್‌ನಲ್ಲಿ 20 ರು. ನೋಟಿನ ಫೋಟೋ ಪತ್ತೆಯಾಗಿದೆ. ಹವಾಲಾ ವ್ಯವಹಾರಕ್ಕೆ ಈ 20 ರು. ನೋಟ್ ಬಳಸಲಾಗಿದೆ ಎಂದು ದೂರಲಾಗಿದೆ. ನಾಗರಾಜ ನೆಕ್ಕಂಟಿ ತನ್ನ ಸಹೋದರ ನೆಕ್ಕಂಟಿ ರಮೇಶ್‌ಗೆ 20 ರು. ನೋಟ್ ಕೊಟ್ಟಿದ್ದ. ಸತ್ಯನಾರಾಯಣ ವರ್ಮಾಗೆ ಈ ನೋಟ್ ಕೊಟ್ಟರೆ 1.5 ಕೋಟಿ ರು. ಹಣ ಕೊಡುತ್ತಾನೆ ಎಂದು ನೆಕ್ಕಂಟಿ ನಾಗರಾಜ್ ಹೇಳಿದ್ದ. ಅದರಂತೆ, ನೆಕ್ಕಂಟಿ ರಮೇಶ್ 300042317 ನಂಬರ್‌ನ 20 ರು. ಕೊಟ್ಟು 1.5 ಕೋಟಿ ಹಣ ಪಡೆದಿದ್ದ. ಈ ಎಲ್ಲ ಹಣದ ವಹಿವಾಟುಗಳು ಮಾಜಿ ಸಚಿವ, ಶಾಸಕ ಬಿ. ನಾಗೇಂದ್ರಗೆ ಗೊತ್ತಿತ್ತು. ಮತ್ತು ಬಿ. ನಾಗೇಂದ್ರ ಸೂಚನೆ ಮೇರೆಗೆ ಇದೆಲ್ಲವೂ ನಡೆದಿತ್ತು ಎಂದು ತಿಳಿದು ಬಂದಿದೆ. 21 ಕೋಟಿ ದುಡ್ಡಿನ ಫೋಟೋವನ್ನು ಇ.ಡಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ನಾಗೇಂದ್ರ ಆಪ್ತ ಸಹಾಯಕ ಗೋವರ್ಧನ ಮೂಲಕ ಹವಾಲ ಹಣ ನೀಡಲಾಗಿದೆ. ಹವಾಲಕ್ಕೆ ಬಳಸಿದ್ದ 20 ರೂಪಾಯಿ ನೋಟಿನ ಫೋಟೋ ಮತ್ತು ಹವಾಲಾ ಮೂಲಕ ಪಡೆದ ಕಂತೆ ಕಂತೆ ಹಣದ ಫೋಟೋ ಇಡಿ ಅಧಿಕಾರಿಗಳಿಗೆ ಲಭ್ಯವಾಗಿದೆ.

ರೆಡ್ಡಿಗೆ ಡಬಲ್‌ಜಾಮೂನು

← ಮೊದಲಪುಟದಿಂದ

ತಮ್ಮ ಕಕ್ಷಿದಾರರಾದ ಜನಾರ್ದನ ರೆಡ್ಡಿ ಅವರಿಗೆ ಜಾಮೀನು ನೀಡಬೇಕೆಂದು ಕೋರಿ ಅಫ್ಜಲ್ ಅಲಿ ಖಾನ್ ಮತ್ತು ರಾಹುಲ್ ಗಾಂಧಿ, ನವಜೋತ್ ಸಿಂಗ್ ಸಿಧು ಸದಸ್ಯತ್ವ ರದ್ದತಿ ಪ್ರಕರಣಗಳನ್ನು ಉಲ್ಲೇಖಿಸಿದ್ದರು. ಮಂಗಳವಾರ ನಡೆದ ವಾದ ವಿವಾದಗಳನ್ನು ಆಲಿಸಿದ್ದ ನ್ಯಾಯಪೀಠ, ಬುಧವಾರಕ್ಕೆ ತೀರ್ಪು ಕಾಯ್ದಿರಿಸಿತ್ತು. ಬುಧವಾರ ಆದೇಶ ಪ್ರಕಟಿಸಿದ ನ್ಯಾಯಮೂರ್ತಿ ಕೆ. ಲಕ್ಷ್ಮಣ್ ಅವರು ಸಿಬಿಐ ನ್ಯಾಯಾಲಯದ ತೀರ್ಪನ್ನು ತಾತ್ಕಾಲಿಕವಾಗಿ ತಡೆಹಿಡಿದು, ಗಾಲಿ ಜನಾರ್ದನ ರೆಡ್ಡಿಗೆ ಜಾಮೀನು ಮಂಜೂರು ಮಾಡಿದರು. ಜನಾರ್ದನ ರೆಡ್ಡಿ ಅವರಿಗೆ ಸಿಬಿಐ ಕೋರ್ಟ್ 7 ವರ್ಷ ಶಿಕ್ಷೆ ವಿಧಿಸಿದ ಬೆನ್ನಲ್ಲೇ ಅವರ ಶಾಸಕತ್ವ ಅನರ್ಹವಾಗಿತ್ತು. ಇದೀಗ, ಶಿಕ್ಷೆಯೇ ರದ್ದಾಗಿರುವುದರಿಂದ ಶಾಸಕ ಸ್ಥಾನ ಮರಳಲಿದೆ.

ಪ್ರಕರಣದ ಹಿನ್ನೆಲೆ

ಆಂಧ್ರಪ್ರದೇಶಕ್ಕೆ ಸೇರಿದ, ಕರ್ನಾಟಕದ ಗಡಿ ಭಾಗದಲ್ಲಿರುವ ಓಬಳಾಪುರಂ ಬೆಟ್ಟದಲ್ಲಿ ಕ್ರಮವಾಗಿ 68.5 ಹೆಕ್ಟೇರ್ ಮತ್ತು 36.5 ಹೆಕ್ಟೇರ್ ಕಬ್ಬಿಣದ ಅದಿರು ಗಣಿಗಾರಿಕೆ ಗುತ್ತಿಗೆಗಳನ್ನು ಅಕ್ರಮವಾಗಿ ಜಿ.ಜನಾರ್ದನರೆಡ್ಡಿ ಒಡೆತನದ ಓಎಂಸಿಗೆ ಹಂಚಿಕೆ ಮಾಡಲಾಗಿತ್ತು. ಆದರೆ, ಸುಮಾರು 29 ಲಕ್ಷ ಟನ್ ಅದಿರನ್ನು ಅಕ್ರಮವಾಗಿ ಬಗೆದು 448 ಕೋಟಿ ರು. ಆದಾಯವನ್ನು ಓಎಂಸಿ ಗಳಿಸಿದೆ ಎಂದು ಸಿಬಿಐ ಆರೋಪಪಟ್ಟಿಯಲ್ಲಿ ಉಲ್ಲೇಖಿಸಿತ್ತು. ಅಕ್ರಮ ಅದಿರು ಸಾಗಣೆ ನಡೆಯುತ್ತಿದೆ ಎಂಬ ಆರೋಪದ ಮೇಲೆ 2009ರಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ಮುಖ್ಯಮಂತ್ರಿ ಕಾಂಗ್ರೆಸ್‌ನ ರೋಷಯ್ಯ ಅವರು ಈ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡಿದ್ದರು. ಅಕ್ರಮ ಸಾಬೀತಾದ ಹಿನ್ನೆಲೆಯಲ್ಲಿ ಸಿಬಿಐ ಅಧಿಕಾರಿಗಳು 2011 ರ ಸೆಪ್ಟೆಂಬರ್ 5 ರಂದು ಜನಾರ್ದನ ರೆಡ್ಡಿ ಮತ್ತು ಶ್ರೀನಿವಾಸರೆಡ್ಡಿ ಅವರನ್ನು ಬಂಧಿಸಿದ್ದರು. ಮೂರುವರೆ ವರ್ಷಗಳ ಕಾಲ ಚಂಚಲಗುಡ ಮತ್ತು ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿ ಜನಾರ್ದನ ರೆಡ್ಡಿ ಬಂಧಿತರಾಗಿದ್ದರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:O&MTENDER:2025-26/425
ದಿನಾಂಕ:09.06.2025

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:01/2025-26
(ದ್ವಿ-ಲಕೋಟೆ ಪದ್ಧತಿ)/2ನೇ ಕರೆ (Kppp portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ. ಮಂಡ್ಯರವರಿಂದ ಎಂ.ವಿ.ಎಸ್ ಓ&ಎಂ ಯೋಜನೆಯಡಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬಿ.ಜಿ.ಪುರ ಮತ್ತು ಇತರೆ 56 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ (12 ತಿಂಗಳು) ಕಾಮಗಾರಿಯ ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ ರೂ.113.15ಲಕ್ಷಗಳು, ಪೂರ್ವಭಾವಿ ಸಭೆ ದಿನಾಂಕ:17.06.2025 ಸಮಯ:ಬೆಳಿಗ್ಗೆ 11:00 ಗಂಟೆಗೆ (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ), ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:18.06.2025 ಸಂಜೆ: 5:00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:19.06.2025 ಸಂಜೆ: 05:05 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ:26.06.2025 ಬೆಳಿಗ್ಗೆ:11:00 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ:08232-222363.
ಸಹಿ/-ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/179/2025-26

50 ಕೋಟಿ ಸಾಲ ಕೊಡಿಸುವ ಆಮಿಷ
60 ಲಕ್ಷ ರು. ಪಡೆದ ವಂಚಕನ ಸೆರೆ

1.87 ಕೋಟಿ ರು. ನಕಲಿ ನೋಟು ಕೊಟ್ಟು ವಂಚನೆ

ಹುಬ್ಬಳ್ಳಿ: ವ್ಯವಹಾರಗಳಿಗೆ ಕಡಿಮೆ ಬಡ್ಡಿದರದಲ್ಲಿ ಆರ್ಥಿಕ ಸೌಲಭ್ಯ ಕಲ್ಪಿಸುವುದಾಗಿ ವಂಚಿಸುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ವಂಚನೆಗೆ ಬಳಸಿದ ನಕಲಿ ನೋಟುಗಳನ್ನು ಜಪ್ತಿ ಮಾಡಿದ್ದಾರೆ.

ಮೈಸೂರು ಮೂಲದ ಸುಧೀರ ಮೆಹ್ತಾ ಎನ್ನುವ ಹೆಸರಲ್ಲಿ ವಂಚಿಸಿದ್ದ ಎ.ಮೊಹಮ್ಮದ್ ಆಸೀಫ್ ಎಂಬವನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ವಂಚನೆ ಮಾಡುವ ಉದ್ದೇಶದಿಂದ ಮಹಿಳೆಯೊಬ್ಬರಿಗೆ ನೀಡಿದ್ದ 1,87,45,000 ಮೌಲ್ಯದ ನಕಲಿ ನೋಟುಗಳನ್ನು ಜಪ್ತಿ ಮಾಡಿದ್ದಾರೆ. ಇದರೊಂದಿಗೆ 500 ರು. ಮುಖ ಬೆಲೆಯ 5000 ರು. ಅಸಲಿ ನೋಟುಗಳು, 4 ಲಕ್ಷ ರು. ಮೌಲ್ಯದ 1 ಕಾರು, 2 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ಪ್ರಕರಣದ ಕುರಿತು ಹು-ಧಾ ಪೊಲೀಸ್ ಆಯುಕ್ತ ಎನ್.ಶಶಿಕುಮಾರ ಸುದ್ದಿಗಾರರೊಂದಿಗೆ ಮಾತನಾಡಿ, ಪುಣೆ ಮೂಲದ ಅಶ್ವಿನಿ ಪೆದ್ದವಾಡ ಅವರ ಮಗಳ ಕನ್‌ಸ್ಟ್ರಕ್ಷನ್ ವ್ಯವಹಾರಕ್ಕಾಗಿ ಹಣದ ಸೌಲಭ್ಯ ಕಲ್ಪಿಸಿ ಕೊಡುವುದಾಗಿ ನಂಬಿಸಿದ್ದ. 50 ಕೋಟಿ ರು. ಖಾಸಗಿ ಫೈನಾನ್ಸ್ ಹಾಗೂ ಉದ್ದಿಮೆದಾರರಿಂದ ಕೊಡಿಸುವುದಾಗಿ ಭರವಸೆ ನೀಡಿದ್ದ. ಪ್ರೊಸೆಸಿಂಗ್ ಶುಲ್ಕದ ರೂಪದಲ್ಲಿ 60 ಲಕ್ಷ ರು. ಬೇಡಿಕೆಯಿಟ್ಟು ಅಶ್ವಿನಿ ಅವರಿಂದ ಪಡೆದುಕೊಂಡಿದ್ದ. ಮೊದಲ ಹಂತವಾಗಿ 1.87 ಕೋಟಿ ರು. ನಕಲಿ ನೋಟುಗಳನ್ನು ಸಾಲದ ರೂಪದಲ್ಲಿ ನೀಡಿ ಆರೋಪಿ ವಂಚನೆ ಮಾಡಿದ್ದಾನೆ ಎಂದರು.

ಏನಿದು ಪ್ರಕರಣ?

- ಕನ್‌ಸ್ಟ್ರಕ್ಷನ್ ವ್ಯವಹಾರಕ್ಕೆ ಸಾಲ ಪಡೆಯಲು ಮುಂದಾಗಿದ್ದ ಮಹಿಳೆ
- ಕಡಿಮೆ ಬಡ್ಡಿಗೆ 50 ಕೋಟಿ ರು. ಸಾಲ ಕೊಡಿಸುವ ಆಮಿಷ
- ಮೈಸೂರು ಮೂಲದ ಆರೋಪಿ ಎ.ಮೊಹಮ್ಮದ್ ಆಸೀಫ್ ಆಮಿಷ
- 50 ಕೋಟಿ ರು. ಕೊಡಿಸಲು ಮಹಿಳೆಯಿಂದ 60 ಲಕ್ಷ ರು. ಪಡೆದಿದ್ದ ಆರೋಪಿ
- ಸಾಲದ ರೂಪದಲ್ಲಿ 1.87 ಕೋಟಿ ರು. ನಕಲಿ ನೋಟು ನೀಡಿ ವಂಚನೆ
- ಆರೋಪಿಯನ್ನು ಎ.ಮೊಹಮ್ಮದ್ ಆಸೀಫ್‌ನನ್ನು ಜೈಲಿಗೆ ತಳ್ಳಿರುವ ಖಾಕಿ

50ಕ್ಕೂ ಅಧಿಕ ಮೊಸಳೆ ಮರಿಗಳ ರಕ್ಷಣೆ

ಕಾಗವಾಡ: ತಾಯಿ ಮೊಸಳೆ ಸೇರಿ ಸುಮಾರು 50 ಕ್ಕೂ ಹೆಚ್ಚು ಮೊಸಳೆ ಮರಿಗಳು ಪ್ರತ್ಯಕ್ಷವಾದ ಘಟನೆ ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ ದೇವರಡ್ಡೆರಟ್ಟಿ ಗ್ರಾಮದಲ್ಲಿ ನಡೆದಿದೆ.

ಹಲವು ದಿನಗಳಿಂದ ಗ್ರಾಮದ ಸಮೀಪದ ಅಪ್ಪಾಸಾಬ ಸತ್ಯಪ್ಪ ನಾಯಕ ಅವರ ತೋಟದ ಕೃಷಿ ಹೊಂಡದಲ್ಲಿ ಠಿಕಾನಿ ಹೂಡಿದ್ದ ಮೊಸಳೆ ಗ್ರಾಮಸ್ಥರಲ್ಲಿ ಆತಂಕ ಹುಟ್ಟಿಸಿತು.

ಕೃಷಿಹೊಂಡದ ಸಮೀಪದ ಗದ್ದೆಯ ಬದುವಿನಲ್ಲಿ ಸುಮಾರು 50 ಕ್ಕೂ ಅಧಿಕ ಮೊಸಳೆ ಮರಿಗಳು ಪ್ರತ್ಯಕ್ಷವಾಗಿದ್ದು ಸ್ಥಳೀಯರಲ್ಲಿ ಭಯದ ವಾತಾವರಣ ನಿರ್ಮಾಣವಾಗಿತ್ತು. ಗ್ರಾಮಸ್ಥರು ಸುರಕ್ಷಿತವಾಗಿ ರಕ್ಷಣೆ ಮಾಡಿ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಒಪ್ಪಿಸಿದ್ದು, ತಾಯಿ ಮೊಸಳೆಯನ್ನು ಸೆರೆ ಹಿಡಿಯುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಮೊಯಿದ್ದೀನ್ ಬಾವ ವಿರುದ್ಧ ಎಫ್ಐಆರ್

ಮಂಗಳೂರು: ಸರಕಾರಿ ನೌಕರರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಲ್ಲಿ ಮಾಜಿ ಶಾಸಕ ಮೊಯಿದ್ದೀನ್ ಬಾವ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.ಜೂ.9ರಂದು ರಾತ್ರಿ 8 ಗಂಟೆಗೆ ಮೊಯಿದ್ದೀನ್ ಬಾವಾ ಅವರು ತಮ್ಮ ಇಬ್ಬರು ಸಹಚರರೊಂದಿಗೆ ಕಾಮಗಾರಿ ಬಿಲ್ಲನ್ನು ಮಂಜೂರು ಮಾಡುವ ವಿಷಯದ ಕುರಿತು ಸರಕಾರಿ ನೌಕರರ



ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ. ಎನ್ಎಂಪಿಎ ಉಪಾಧ್ಯಕ್ಷರ ಕಚೇರಿಗೆ ನುಗ್ಗಿ 15 ನಿಮಿಷಗಳ ಕಾಲ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿ, ಅವರನ್ನು ಕಚೇರಿಯಿಂದ ಹೊರ ಹೋಗಲು ಅವಕಾಶ ನೀಡದೆ, ತಡೆದು ನಿಲ್ಲಿಸಿದ್ದಾರೆ. ನಂತರ ಅವರು ಹೊರಗೆ ಬಂದಾಗಲೂ ಹಿಂಬಾಲಿಸುತ್ತಾ ಬೆದರಿಕೆ ಹಾಕಿ ಕಿರುಚುತ್ತಾ ಬಂದಿದ್ದು, ಕಾರಿನಲ್ಲಿ ಬೇರೆ ಕರ್ತವ್ಯಕ್ಕೆ ಹೋಗುತ್ತಿರುವಾಗ ತಡೆದು ನಿಲ್ಲಿಸಿದ್ದಾರೆ ಎಂದು ಎನ್ಎಂಪಿಎ ಕಾರ್ಯದರ್ಶಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಕೊಡಗಿನಲ್ಲಿ ಮಳೆ ಅಂಗನವಾಡಿಗಳಿಗೆ ರಜೆ

ಕೊಡಗು: ಜಿಲ್ಲೆಯಾದ್ಯಂತ ಭಾರೀ ಮಳೆ ಹಿನ್ನೆಲೆ ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಗುರುವಾರ ರಜೆ ಘೋಷಣೆ ಮಾಡಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ. ಗುರುವಾರ ಭಾರೀ ಮಳೆ ಮುನ್ಸೂಚನೆ ಹಿನ್ನೆಲೆ ಜಿಲ್ಲೆಗೆ ರೆಡ್ ಅಲರ್ಟ್ ಘೋಷಣೆ ಮಾಡಿದೆ. ಮುಂಜಾಗ್ರತಾ ಕ್ರಮವಾಗಿ ಕೊಡಗು ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಜಿಲ್ಲಾಧಿಕಾರಿ 1 ದಿನದ ರಜೆ ಘೋಷಿಸಿದ್ದಾರೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಳಗಾವಿ**

ಸಮಸ್ಯೆಯೇನು..?

- ಬೆಳಗಾವಿ ಕಪಿಲೇಶ್ವರ ಕಾಲೋನಿಯಲ್ಲಿ ರಸ್ತೆ ಪುನರ್ ನಿರ್ಮಾಣ ಮಾಡುವ ಬಗ್ಗೆ.
- **ಪರಿಹಾರ:** ಬೆಳಗಾವಿ ಕಪಿಲೇಶ್ವರ ಕಾಲೋನಿಯಲ್ಲಿ ರಸ್ತೆ ಪುನರ್ ನಿರ್ಮಾಣ ಕೆಲಸವನ್ನು ಪೂರ್ಣಗೊಳಿಸಲಾಗಿರುತ್ತದೆ. ಈ ಪ್ರದೇಶದಲ್ಲಿ ಕೆಲವು ಬೀದಿಯಲ್ಲಿ ಕೊಳವೆ ಅಳವಡಿಸುವ ಕಾಮಗಾರಿ, ಮನೆಗಳಿಗೆ ನೀರಿನ ಸಂಪರ್ಕ ನೀಡುವ ಹಾಗೂ ಅಳವಡಿಸಲಾದ ಕೊಳವೆಯ ಹೈಡ್ರೋಟೆಸ್ಟ್ ಮಾಡುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈ ಕಾಮಗಾರಿಯು ಪೂರ್ಣಗೊಂಡ ನಂತರ ಅಗೆಯಲಾದ ರಸ್ತೆಗಳನ್ನು ಶಾಶ್ವತವಾಗಿ ಪುನರ್ ನಿರ್ಮಾಣ ಮಾಡಲಾಗುವುದು.

ವಿಶ್ವವಾಣಿ ಕ್ಲಬ್ ಹೌಸ್
12.06.2025
ಗುರುವಾರದ ಅತಿಥಿ
ಶ್ರೀಮತಿ ರೇಖಾ ಪ್ರೇಮ ಕುಮಾರ್
ವಿಷಯ
ಹೆಚ್ ಎಸ್ ವಿ...
ಕವನ ಗಾಯನ 2
vishwavani.news

ಟ್ವೀಟೂ-ಖಾರಾ

ಪ್ರಿಯಾಂಕ್ ಖರ್ಗೆ

ಬಿಜೆಪಿ ನಾಯಕರ ಮಕ್ಕಳು ವಿದೇಶದಲ್ಲಿ ಓದಿ, ವ್ಯಾಪಾರ ಮಾಡಬೇಕು. ಬಡವರ ಮಕ್ಕಳು ಬೀದಿಯಲ್ಲಿ ಧರ್ಮ ರಕ್ಷಣೆ, ಗೋ ರಕ್ಷಣೆ ಮಾಡಬೇಕಾ?

ಹನುಮಂತ ರೆಡ್ಡಿ ಗೂಡೂರು

ಕಾಂಗ್ರೆಸ್ಸಿಗರ ಮಕ್ಕಳು ವೇದಿಕೆಯಲ್ಲಿ ಆರ್‌ಸಿಬಿ ಆಟಗಾರರ ಜತೆಗೆ ಸೆಲ್ಫಿ ತೆಗೆಸಿಕೊಳ್ಳಬೇಕು. ಬಡವರ ಮಕ್ಕಳು ಹೊರಗಡೆ ಕಾಲ್ತುಳಿತದಲ್ಲಿ ಸಾಯಬೇಕಾ ಪ್ರಿಯಾಂಕ್ ಖರ್ಗೆಯವರೇ? ಒಂದು ವರ್ಗ ನಡೆಸುವ ಕ್ರಿಮಿನಲ್ ಚಟುವಟಿಕೆಗಳ ಕೇಸು ವಾಪಾಸು ಪಡೆದು ಮತ್ತೆ ಅವರನ್ನು ಆ ಚಟುವಟಿಕೆಗಳಿಗೆ ದೂಡುವುದು ಯಾವ ಪಕ್ಷ ಎಂದು ಜಗತ್ತಿಗೆ ಗೊತ್ತಿದೆ!

ಕುಸುಮ್ ಸೌರೀಕರಣ ಯೋಜನೆಗೆ ಗೌರಿಬಿದನೂರಿನಲ್ಲಿ ಸಿಎಂ ಚಾಲನೆ । 60 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಗುರಿ

ಪಂಪ್‌ಸೆಟ್‌ಗೆ ವಾರ್ಷಿಕ 19 ಸಾವಿರ ಕೋಟಿ ರು. ಸಬ್ಸಿಡಿ

ಚಿಕ್ಕಬಳ್ಳಾಪುರ: ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ 4 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಹೆಚ್ಚಿಸಿದ್ದೇವೆ. 30 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಮುಂದಿನ 3 ವರ್ಷಗಳಲ್ಲಿ 60 ಸಾವಿರ ಮೆಗಾವ್ಯಾಟ್ ಉತ್ಪಾದನೆ ಮಾಡುವ ಗುರಿಯನ್ನು ಹೊಂದಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಇಂಧನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರಗಳ ಸಂಯುಕ್ತಾಶ್ರಯದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನಲ್ಲಿ ಆಯೋಜಿಸಿದ್ದ ಕುಸುಮ್ ಸೌರೀಕರಣ ಯೋಜನೆಗೆ ಚಾಲನೆ ನೀಡಿ ಸಿಎಂ ಸಿದ್ದರಾಮಯ್ಯ ಮಾತನಾಡಿ, ನಮ್ಮ ಸರಕಾರ ಪ್ರತೀ ವರ್ಷ 19000 ಕೋಟಿ ರು. ಪಂಪ್ ಸೆಟ್ ಸಬ್ಸಿಡಿ ಹಣ ನೀಡುತ್ತಿದ್ದೇವೆ. ಹಿಂದಿನ ಬಿಜೆಪಿ ಸರಕಾರ 2 ವರ್ಷ ಈ ಯೋಜನೆ ಆರಂಭಿಸಲೇ ಇಲ್ಲ. ಮತ್ತೆ ನಾವೇ ಅಧಿಕಾರಕ್ಕೆ ಬಂದು ಜಾರಿ ಮಾಡಿದ್ದೇವೆ. ನಾನು ಉದ್ಘಾಟನೆ ಮಾಡಿರುವ 70 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯ ಸೌರೀಕರಣ ಘಟಕದಿಂದ ರೈತರಿಗೆ ಹಗಲುಹೊತ್ತಿನಲ್ಲೇ 3 ಫೇಸ್ ವಿದ್ಯುತ್ 5 ಗಂಟೆಗಳ ಕಾಲ ಸಿಗಲಿದೆ. ರೈತರ ಪಂಪ್‌ಸೆಟ್‌ಗಳಿಗೆ ನಿರಂತವಾಗಿ ವಿದ್ಯುತ್ ಪೂರೈಕೆ ಮಾಡಲಾಗುತ್ತದೆ. ಕುಸುಮ್ ಸೌರೀಕರಣ ಹೆಸರಿಗೆ ಮಾತ್ರ ಕೇಂದ್ರದ ಯೋಜನೆ. ಆದರೆ ರಾಜ್ಯ ಸರಕಾರ ಶೇ.50 ರಷ್ಟು ಹಣ ಕೊಡುತ್ತದೆ. ಶೇ.20 ರಷ್ಟು ಹಣ ಹೂಡಿಕೆದಾರರದ್ದು. ಕೇಂದ್ರ ಸರಕಾರ ಕೊಡುವುದು ಕೇವಲ

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನಲ್ಲಿ ಕುಸುಮ್ ಸೌರೀಕರಣ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ಸಚಿವ ಡಾ.ಎಂ.ಸಿ.ಸುಧಾಕರ್, ಶಾಸಕರಾದ ಕೆ.ಎಚ್.ಪುಟ್ಟಸ್ವಾಮಿಗೌಡ, ಎಸ್.ಎನ್.ಸುಬ್ಬಾರೆಡ್ಡಿ, ಪ್ರದೀಪ್ ಈಶ್ವರ್, ಟಿ.ಡಿ.ರಾಜೇಗೌಡ, ಎಚ್.ನರಸಿಂಹಯ್ಯ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎಚ್.ಶಿವಶಂಕರರೆಡ್ಡಿ, ಪರಿಷತ್ ಸದಸ್ಯರಾದ ನಸೀರ್ ಅಹ್ಮದ್ ಇದ್ದರು.

ಶೇ.30 ರಷ್ಟು ಹಣ ಕೊಡುತ್ತದೆ. ಆದರೂ ಇದಕ್ಕೆ ಕೇಂದ್ರದ ಯೋಜನೆ ಎಂದು ಹೆಸರಿಟ್ಟಿದ್ದಾರೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸಚಿವ ಡಾ.ಎಂ.ಸಿ. ಸುಧಾಕರ್, ಶಾಸಕರಾದ ಕೆ.ಎಚ್.ಪುಟ್ಟಸ್ವಾಮಿಗೌಡ, ಎಸ್.ಎನ್.ಸುಬ್ಬಾರೆಡ್ಡಿ, ಪ್ರದೀಪ್ ಈಶ್ವರ್, ಟಿ.ಡಿ.ರಾಜೇಗೌಡ, ಎಚ್.ನರಸಿಂಹಯ್ಯ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎಚ್.ಶಿವಶಂಕರರೆಡ್ಡಿ, ಪರಿಷತ್ ಸದಸ್ಯರಾದ ನಸೀರ್ ಅಹ್ಮದ್, ಅನಿಲ್ ಕುಮಾರ್ ಸೇರಿ ಮತ್ತಿತರರು ಪಾಲ್ಗೊಂಡಿದ್ದರು.

ಆರ್‌ಡಿಎಸ್ಎಸ್ ಯೋಜನೆಗೆ ಕೇಂದ್ರ ಮಂತ್ರಿ ಒಪ್ಪಿಗೆ

ಕಾರ್ಯಕ್ರಮದಲ್ಲಿ ಮತನಾಡಿದ ಇಂಧನ ಸಚಿವ ಕೆ.ಜೆ.ಜಾರ್ಜ್ ಮಾತನಾಡಿ, ಪರಿಷ್ಕೃತ ವಿತರಣಾ ವಲಯ ಯೋಜನೆ (ಆರ್‌ಡಿಎಸ್ಎಸ್) ಯೋಜನೆಯಡಿ ಇಂಧನ ಮೂಲ ಸೌಕರ್ಯಕ್ಕೆ ಕೇಂದ್ರ ಸರಕಾರದಿಂದ ಶೇ. 60 ಸಹಾಯಧನ ಸಿಗುವುದರ ಜತೆಗೆ ಸ್ಮಾರ್ಟ್ ಮೀಟರ್ ಅಳವಡಿಸಲು ಪ್ರತಿ ಮೀಟರ್‌ಗೆ 900 ರು. ಸಬ್ಸಿಡಿ ಸಿಗುತ್ತದೆ. ಆದರೆ, ಕೆಲವೊಂದು ಷರತ್ತುಗಳ ಕಾರಣಕ್ಕೆ ಹಿಂದಿನ ರಾಜ್ಯ ಸರಕಾರ ಅದನ್ನು ಒಪ್ಪಿಕೊಂಡಿರಲಿಲ್ಲ. ಇದೀಗ ಆರ್‌ಡಿಸ್ಎಸ್ ಯೋಜನೆ ಅಳವಡಿಸಿಕೊಳ್ಳಲು ಅವಕಾಶ ನೀಡುವಂತೆ ಹಾಗೂ ಷರತ್ತುಗಳಿಗೆ ವಿನಾಯಿತಿ ಕೋರಿ ಕೇಂದ್ರ ಇಂಧನ ಸಚಿವರನ್ನು ನೀಡುವಂತೆ ಮನವಿ ಮಾಡಿಕೊಳ್ಳಲಾಗಿದ್ದು, ಇದಕ್ಕೆ ಒಪ್ಪಿಗೆ ನೀಡಿದ್ದಾರೆ ಎಂದರು.

ನಾನೇ ರಾಜ್ಯಪಾಲರಿಗೆ ಆಹ್ವಾನ ಕೊಟ್ಟೆ

ವಿಧಾನಸೌಧದಲ್ಲಿ ಆಯೋಜಿಸಿದ್ದ ಆರ್‌ಸಿಬಿ ಆಟಗಾರರ ಸನ್ಮಾನ ಸಮಾರಂಭಕ್ಕೆ ರಾಜ್ಯಪಾಲರನ್ನು ಆಹ್ವಾನಿಸಿದ್ದ ವಿಚಾರಕ್ಕೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ ಅವರು, ಸನ್ಮಾನ ಸಮಾರಂಭದಲ್ಲಿ ಪಾಲ್ಗೊಳ್ಳಲು ರಾಜ್ಯಪಾಲರನ್ನು ನಾನೇ ಆಹ್ವಾನಿಸಿದ್ದೆ. ಅವರಾಗೇ ಬರಲಿಲ್ಲ. ಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ರಾಜ್ಯಪಾಲರು ಅವರಾಗಿಯೇ ಸಮಾರಂಭಕ್ಕೆ ಬಂದಿದ್ದರು ಎಂದು ಪ್ರಾಚಾರವಾಗಿದ್ದು ತಪ್ಪು ಎಂದು ಹೇಳಿದರು.

> ಪಿಎಂ ಕುಸುಮ್-ಸಿ ಯೋಜನೆ ಬಯಲು ಸೀಮೆ ರೈತರಿಗೆ ವರದಾನವಾಗಿದೆ. ಯೋಜನೆ ಜಾರಿಗೊಳಿಸಲು ಸರಕಾರ ಎಲ್ಲಾ ರೀತಿಯ ಬೆಂಬಲ ನೀಡುತ್ತಿದೆ. ಯೋಜನೆ ಅನುಷ್ಠಾನಕ್ಕೆ ಭೂಮಿ ಕೊರತೆ ಇದೆ. ಸ್ಥಳೀಯ ಶಾಸಕರು ಆಸಕ್ತಿ ವಹಿಸಿ ಯೋಜನೆ ಅನುಷ್ಠಾನಗೊಳಿಸಲು ಸಹಕರಿಸಿದರೆ ರೈತರಿಗೆ ಹೆಚ್ಚು ಅನುಕೂಲವಾಗಲಿದೆ.
>
> **ಕೆ.ಜೆ.ಜಾರ್ಜ್**, ಇಂಧನ ಸಚಿವ

> ನಂದಿ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಯಲಿರುವುದು ಈ ಭಾಗದ ಜನರಲ್ಲಿ ನಿರೀಕ್ಷೆ ಹುಟ್ಟುಹಾಕಿದೆ. ಬೆಂಗಳೂರು ವಿಭಾಗಕ್ಕೆ ಸಂಬಂಧಿಸಿದಂತೆ ಜೂ. 19 ರಂದು ಸಚಿವ ಸಂಪುಟ ನಡೆಯುತ್ತಿದೆ. ಅಲ್ಲಿ ಪ್ರಸ್ತಾಪವಾಗುವ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ.
>
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

- ಹಗಲುಹೊತ್ತಿನಲ್ಲೇ 5 ಗಂಟೆಗಳ ಕಾಲ ರೈತರಿಗೆ 3 ಫೇಸ್ ವಿದ್ಯುತ್
- ಕುಸುಮ್ ಸೌರೀಕರಣ ಹೆಸರಿಗೆ ಮಾತ್ರ ಕೇಂದ್ರದ ಯೋಜನೆ
- ಶೇಕಡ 50 ರಷ್ಟು ಹಣವನ್ನು ರಾಜ್ಯ ಸರಕಾರ ಕೊಡುತ್ತದೆ
- ಕೇವಲ ಶೇ.30 ರಷ್ಟು ಮಾತ್ರ ಕೇಂದ್ರ ಸರಕಾರದ ಹಣ

ಕೆಲವು ಬದಲಾವಣೆಗಳೊಂದಿಗೆ ಮರು ಸಮೀಕ್ಷೆ: ಸಿದ್ದರಾಮಯ್ಯ

ಜಾತಿ ಗಣತಿ ಮರು ಸಮೀಕ್ಷೆ ಹೈ ನಿರ್ಧಾರ

ಚಿಕ್ಕಬಳ್ಳಾಪುರ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ಮರು ಗಣತಿ ನಡೆಸುವುದು ನನ್ನ ತೀರ್ಮಾನವಲ್ಲ. ಅದು ಪಕ್ಷದ ಹೈಕಮಾಂಡ್ ನಿರ್ಧಾರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಜಾತಿ ಗಣತಿ ನಡೆದಿದ್ದು 2015ರಲ್ಲಿ. ಈಗ 10 ವರ್ಷಗಳಾಗಿವೆ. ಆದ್ದರಿಂದ ಮರು ಸಮೀಕ್ಷೆ ನಡೆಸುವಂತೆ ನಿರ್ದೇಶನ ನೀಡಿದೆ. ಕಾಂತರಾಜು ವರದಿ ಸರಕಾರಕ್ಕೆ ಸಲ್ಲಿಕೆ ಆಗಿದ್ದು ವರದಿಯನ್ನು ಪೂರ್ಣವಾಗಿ ಕಡೆಗಣಿಸಿಲ್ಲ. ಕೆಲವು ಬದಲಾವಣೆಗಳೊಂದಿಗೆ 60ರಿಂದ 70 ದಿನಗಳಲ್ಲಿ ಮರು ಸಮೀಕ್ಷೆ ನಡೆಸಲಾಗುತ್ತದೆ ಎಂದರು.

ಬಳ್ಳಾರಿ ಜಿಲ್ಲೆಯ ಜನಪ್ರತಿನಿಧಿಗಳ ಮೇಲೆ ಇ.ಡಿ ದಾಳಿ ಕುರಿತು ಪ್ರತಿಕ್ರಿಯಿಸಿದ ಅವರು, ಯಾವುದೇ ಕಾನೂನಿನ ಅನುಷ್ಠಾನಕ್ಕೆ ನಾವು ಅಡ್ಡಿಪಡಿಸುವುದಿಲ್ಲ. ಆದರೆ ಬಿಜೆಪಿ ಕಾನೂನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ದೂರಿದರು.

ಗೋದ್ರಾ ಘಟನೆಯಲ್ಲಿ ಎಷ್ಟು ಜನರು ಸತ್ತರು? ಚಾಮರಾಜನಗರದಲ್ಲಿ ಕೋವಿಡ್ ವೇಳೆ ಆಮ್ಲಜನಕ ದೊರೆಯದೆ ಮೃತಪಟ್ಟರು. ಆಗ ಮುಖ್ಯಮಂತ್ರಿ ಆಗಿದ್ದು ಯಾರು? ಅವರು ರಾಜೀನಾಮೆ ನೀಡಿದರೆ ಎಂದು ಪ್ರಶ್ನಿಸಿದರು. ಆರ್‌ಸಿಬಿ ವಿಜಯೋತ್ಸವದ ಕಾಲ್ತುಳಿತ ಪ್ರಕರಣವನ್ನು ಬಿಜೆಪಿ ರಾಜಕೀಯವಾಗಿ ಬಳಸಿಕೊಳ್ಳುತ್ತಿದೆ ಎಂದು ದೂರಿದರು.ಕಾಂಗ್ರೆಸ್ ಸರಕಾರ ಬಡತನ ನಿರ್ಮೂಲನೆಗೆ ಗರೀಬಿ ಹಠಾವೊ ಕಾರ್ಯಕ್ರಮ ರೂಪಿಸಿದೆ. ಆದ್ದರಿಂದ ಬಡತನ ನಿರ್ಮೂಲನೆ ಆಗಿದೆ. ನರೇಂದ್ರ ಮೋದಿ ಮತ್ತು ಬಿಜೆಪಿ ಬಡತನ ನಿರ್ಮೂಲನೆಗೆ ಏನು ಕ್ರಮವಹಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೋವಿಡ್ ದುರಂತದ ವೇಳೆ ಸಿಎಂ ರಾಜೀನಾಮೆ ನೀಡಿದ್ದರೇ?

ಬಿಜೆಪಿಯವರಿಗೆ ಸುಳ್ಳು ಹೇಳಿ ಜನರ ದಾರಿ ತಪ್ಪಿಸುವುದು ಮತ್ತು ರಾಜಕೀಯವಾಗಿ ರಾಜೀನಾಮೆ ಕೇಳುವುದು ಅಭ್ಯಾಸವಾಗಿದೆ. ಬಿಜೆಪಿ ಎಲ್ಲದರಲ್ಲೂ ರಾಜಕೀಯ ಮಾಡೇ ಮಾಡುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಬಿಜೆಪಿ ವತಿಯಿಂದ ಮುಖ್ಯಮಂತ್ರಿಗಳ ರಾಜೀನಾಮೆ ಒತ್ತಾಯಿಸಿ ಪ್ರತಿಭಟನೆ ಕೈಗೊಂಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು ಕುಂಭ ಮೇಳದಲ್ಲಿ 40-50 ಜನ ಕಾಲ್ತುಳಿತದಲ್ಲಿ ಸತ್ತರು. ಆಗ ಅಲ್ಲಿನ ಮುಖ್ಯಮಂತ್ರಿಗಳ ರಾಜೀನಾಮೆ ಕೇಳಿದರೇ? ಸೇತುವೆಯೊಂದು ಉದ್ಘಾಟನೆಯಾದ ದಿನವೇ ಬಿದ್ದು 140 ಜನ ಸತ್ತರು ಆಗ ಪ್ರಧಾನಿಗಳ ರಾಜೀನಾಮೆ ಕೇಳಿದರೇ ? ಗೋಧ್ರಾ ಹತ್ಯಾಕಾಂಡದಲ್ಲಿ ಎಷ್ಟು ಜನ ಸತ್ತರು. ಆಗ ಗುಜರಾತ್ ಮುಖ್ಯಮಂತ್ರಿಗಳು ಯಾರಾಗಿದ್ದರು? ಅವರ ರಾಜೀನಾಮೆ ಕೇಳಿದರೇ? ಕೋವಿಡ್ ಸಂದರ್ಭದಲ್ಲಿ ಆಕ್ಸಿಜನ್ ಸರಬರಾಜು ಮಾಡದೇ 23 ಜನ ಸತ್ತಾಗ ಬಸವರಾಜ ಬೊಮ್ಮಾಯಿ ರಾಜೀನಾಮೆ ನೀಡಿದರೆ ಎಂದು ಮುಖ್ಯಮಂತ್ರಿಗಳು ಪ್ರಶ್ನಿಸಿದರು.

ಜಿಲ್ಲಾಧಿಕಾರಿ ಸಂಧಾನ, ಹೋರಾಟ ಕೈ ಬಿಟ್ಟ ರೈತರು । ಇಂದು ಬೈರತಿ ಜತೆ ಸಭೆ

ಮಾವಿಗೆ ಬೆಂಬಲ ಬೆಲೆ ಆಗ್ರಹಿಸಿ ಶ್ರೀನಿವಾಸಪುರ ಬಂದ್

ಕೋಲಾರ: ಜಿಲ್ಲೆಯ ಮಾವು ಬೆಳೆ ಮಾರಾಟಕ್ಕೆ ಆಂಧ್ರದ ಚಿತ್ತೂರು ಜಿಲ್ಲೆಯ ಎಪಿಎಂಸಿಯಲ್ಲಿ ನಿಷೇಧ ಹಿನ್ನೆಲೆ ಹಾಗೂ ಮಾವಿಗೆ ಬೆಂಬಲ ಬೆಲೆ ಘೋಷಣೆಗೆ ಆಗ್ರಹಿಸಿ ಬುಧವಾರ ಶ್ರೀನಿವಾಸಪುರ ಪಟ್ಟಣ ಬಂದ್ ಮಾಡಲಾಗಿತ್ತು.

ಬೆಳಗ್ಗೆ 6 ಗಂಟೆಯಿಂದಲೇ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಸ್ವಯಂ ಪ್ರೇರಿತವಾಗಿ ಅಂಗಡಿ-ಮುಂಗಟ್ಟುಗಳನ್ನು ಬಂದ್ ಮಾಡಿ ವ್ಯಾಪಾರಿಗಳು ರೈತರ ಹೋರಾಟಕ್ಕೆ ಬೆಂಬಲ ನೀಡಿದರು. ಪಟ್ಟಣದ ಮುಖ್ಯ ಸರ್ಕಲ್‌ಗಳಲ್ಲಿ ಜಮಾವಣೆಗೊಂಡ ರೈತ ಪರ ಸಂಘಟನೆಗಳು ಮಾವು ಬೆಳೆಗೆ ಬೆಂಬಲ ಬೆಲೆ ರಾಜ್ಯ ಸರಕಾರ ಈ ಕೂಡಲೇ ಘೋಷಣೆ ಮಾಡಬೇಕು. ಆಂಧ್ರದ ಚಿತ್ತೂರಿನಲ್ಲಿ ಯಾವುದೇ ಅಡೆತಡೆ ಇಲ್ಲದೆ ಕೋಲಾರದ ಮಾವು ಮಾರಾಟಕ್ಕೆ ಅವಕಾಶ ಮಾಡಿಕೊಡಬೇಕೆಂದು ರೈತಪರ ಸಂಘಟನೆಗಳು ಆಗ್ರಹ ಮಾಡಿದವು. ಬೇಡಿಕೆ ಈಡೇರುವ ತನಕ ಹೋರಾಟ ನಡೆಸಲು ನಿರ್ಧಾರ ಮಾಡಲಾಯಿತು. ಶ್ರೀನಿವಾಸಪುರ ಪಟ್ಟಣ ಹೊರವಲಯದ ಚಿಂತಾಮಣಿ ರಸ್ತೆಯಲ್ಲಿ ನಡೆದಿದ್ದ ಪ್ರತಿಭನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ರವಿ ಹಾಗು ಎಸ್‌ಪಿ ನಿಖಿಲ್ ರೈತರನ್ನು ಮೊದಲ ಬಾರಿ ಮನವೊಲಿಸುವಲ್ಲಿ ವಿಫಲರಾದರು. ಹೋರಾಟಗಾರರ ಜತೆ ನಡೆಸಿದ 2ನೇ ಸುತ್ತಿನ ಮಾತುಕತೆಯಲ್ಲಿ ಸಂಧಾನ ಏರ್ಪಟ್ಟ ಬಳಿಕ ಹೋರಾಟ ಕೈಬಿಡಲಾಯಿತು.

ಮಾವು ಬೆಳೆಗೆ ಬೆಂಬಲ ಬೆಲೆ ಘೋಷಣೆಗೆ ಆಗ್ರಹಿಸಿ ಕೋಲಾರದ ಶ್ರೀನಿವಾಸಪುರ ಪಟ್ಟಣ ಬಂದ್ ಮಾಡಿ ರೈತರು ಪ್ರತಿಭಟನೆ ನಡೆಸಿದರು.

ಮಾವಿಗೆ ಬೆಂಬಲ ಬೆಲೆ ಬಗ್ಗೆ ಸಂಪುಟದಲ್ಲಿ ಚರ್ಚೆ

ಮಾವಿನ ಬೆಲೆ ಕುಸಿತದ ವಿಚಾರಕ್ಕೆ ಕೋಲಾರದ ಶ್ರೀನಿವಾಸಪುರ ಬಂದ್ ವಿಚಾರಕ್ಕೆ ಗೌರಿಬಿದನೂರಿನಲ್ಲಿ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಆಂಧ್ರದಲ್ಲಿ ತೋತಾಪುರಿ ಮಾವಿಗೆ ಒಂದು ಕೆಜಿ ಗೆ 4 ರು. ನೀಡಲಾಗುತ್ತಿದ್ದು, ಇಲ್ಲಿಯೂ ಕೊಡಬೇಕು ಎನ್ನುವ ಬೇಡಿಕೆಯನ್ನು ಸಚಿವ ಎಂ.ಸಿ.ಸುಧಾಕರ್ ಅವರು ಮಾಡಿದ್ದು, ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಲಾಗುವುದು ಎಂದರು.

ಈ ಸಂಬಂಧ ಸಚಿವ ಬೈರತಿ ಸುರೇಶ್ ಜತೆಗೆ ಮಾತುಕತೆಗೆ ಸಮಯ ನಿಗದಿ ಆಗಿದೆ. ಜಿಲ್ಲಾಧಿಕಾರಿ ಹಾಗೂ ಸಚಿವ ಬೈರತಿ ಸುರೇಶ್ ಜತೆ ರೈತ ಹೋರಾಟಗಾರರು ಇಂದು ಸಭೆ ನಡೆಸಲಿದ್ದಾರೆ.

ಸಾವಿರಾರು ಜನರಿಗೆ ನ್ಯಾಯ ಒದಗಿಸಿದ್ದೇನೆ ಹೊರತು ಅನ್ಯಾಯ ಮಾಡಿಲ್ಲ

ಯೋಗೀಶಗೌಡ ಪ್ರಕರಣದಲ್ಲಿ ನನ್ನ ತಪ್ಪಿಲ್ಲ

ಧಾರವಾಡ: ನನ್ನ ಜೀವನದುದ್ದಕ್ಕೂ ಸಾವಿರಾರು ಜನರಿಗೆ ನ್ಯಾಯ ಒದಗಿಸುವ ಕೆಲಸ ಮಾಡಿದ್ದೇನೆ ಹೊರತು ಯಾರಿಗೂ ಅನ್ಯಾಯ ಮಾಡಿಲ್ಲ. ರಾಜಕೀಯ ಬೆಳವಣಿಗೆ ಸಹಿಸಿಕೊಳ್ಳಲಾಗದವರು ನನ್ನ ವಿರುದ್ಧ ಪಿತೂರಿ ಮಾಡುತ್ತಿದ್ದಾರೆ ಎಂದು ಶಾಸಕ ವಿನಯ್ ಕುಲಕರ್ಣಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಷ್ಟದಲ್ಲಿ ಇದ್ದವರನ್ನೇ ತುಳಿಯುವವರು ಬಹಳ. ಸತ್ಯಕ್ಕೆ ಜಯ ಸಿಕ್ಕೆ ಸಿಗುತ್ತದೆ. ಅದಕ್ಕೆ ಸ್ವಲ್ಪ ಸಮಯ ತೆಗೆದುಕೊಳ್ಳಲಿದೆ. ನಾನು ನೇರವಾಗಿ ಮಾತನಾಡುತ್ತೇನೆ. ನನ್ನ ಮಾತುಗಳು ಕಠೋರವಾಗಿರಬಹುದು. ಆದ್ರೆ ನನ್ನ ಜೀವನದಲ್ಲಿ ಒಬ್ಬರಿಗೂ ಅನ್ಯಾಯ ಮಾಡಿಲ್ಲ ಎಂದು ವಿನಯ್ ಹೇಳಿದರು.

ಯೋಗೀಶಗೌಡ ಪ್ರಕರಣದಲ್ಲಿ ನನ್ನ ತಪ್ಪಿಲ್ಲ. ಆದರೆ ಇದೊಂದು ರಾಜಕೀಯ ಷಡ್ಯಂತ್ರವಾಗಿದ್ದು ಇಡೀ ರಾಜ್ಯದ ಜನರಿಗೆ ಗೊತ್ತಿದೆ. ನನ್ನ ಕ್ಷೇತ್ರದ ಜನರಿಗೂ ಗೊತ್ತಿದೆ. ನ್ಯಾಯಾಲಯದ ಮೇಲೆ ವಿಶ್ವಾಸವಿದೆ, ದೇವರ ಮೇಲೆ ನಂಬಿಕೆ ಇದೆ. ನಾನು ನಿರಪರಾಧಿಯಾಗಿ ಹೊರ ಬರುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

> ನ್ಯಾಯಾಲಯದ ಆದೇಶಕ್ಕೆ ನಾನು ತಲೆಬಾಗುತ್ತೇನೆ. ಶುಕ್ರವಾರ ಬೆಂಗಳೂರಿನ ಜನಪ್ರತಿನಿಗಳ ನ್ಯಾಯಾಲಯಕ್ಕೆ ಹಾಜರಾಗುತ್ತೇನೆ ನನ್ನ ಕೆಲಸವನ್ನು ಇನ್ನೂ ನನ್ನ ಪತ್ನಿ, ಪುತ್ರಿ, ಪಕ್ಷದ ಮುಖಂಡರು ಮುಂದುವರಿಸಿಕೊಂಡು ಹೋಗುತ್ತಾರೆ ಎಲ್ಲರೂ ಸಹಕಾರ ನೀಡಿ. ನನಗೆ ರಾಜಕೀಯ ಷಡ್ಯಂತ್ರದಿಂದ ಅಗ್ನಿ ಪರೀಕ್ಷೆ ಎದುರಾಗಿದೆ. ಕಷ್ಟಕಾಲದಲ್ಲಿ ಕೆಲವರು ಉರಿವ ಬೆಂಕಿಗೆ ತುಪ್ಪ ಸುರಿಯುತ್ತಿದ್ದಾರೆ.
>
> **-ವಿನಯ್ ಕುಲಕರ್ಣಿ**, ಶಾಸಕ

ಈಶ್ವರಪ್ಪಗೆ ಬಿಎಸ್‌ವೈ ಸನ್ಮಾನ

ಶಿವಮೊಗ್ಗ: ಮಾಜಿ ಸಿಎಂ ಯಡಿಯೂರಪ್ಪ ಅವರ ಮೊಮ್ಮಗನ ಮದುವೆ ಆರತಕ್ಷತೆಯಲ್ಲಿ ಭಾಗಿಯಾಗಿದ ಈಶ್ವರಪ್ಪ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ ಬಿಎಸ್‌ವೈ ಶಾಲು ಹೊದಿಸಿ ಸನ್ಮಾನ ಮಾಡಿದರು.

ಶಿವಮೊಗ್ಗದಲ್ಲಿ ನಡೆದ ಸಂಸದ ರಾಘವೇಂದ್ರ ಅವರ ಮಗನ ಆರತಕ್ಷತೆ ಕಾರ್ಯಕ್ರಮಕ್ಕೆ ಈಶ್ವರಪ್ಪ ಹಾಗೂ ಅವರ ಪುತ್ರ ಕಾಂತೇಶ್ ಬಂದಿದ್ದರು. ಈ ವೇಳೆ ಈಶ್ವರಪ್ಪ ಅವರ ಹೆಗಲ ಮೇಲೆ ಕೈ ಹಾಕಿ ಆತ್ಮೀಯವಾಗಿ ಯಡಿಯೂರಪ್ಪ ಮಾತಾಡಿಸಿದರು. ಇದೇ ವೇಳೆ ಯಡಿಯೂರಪ್ಪ ಅವರ ಕಾಲಿಗೆ ಬಿದ್ದು ಕಾಂತೇಶ್ ಆಶೀರ್ವಾದ ಪಡೆದರು. ರಾಜಕೀಯ ಮನಸ್ತಾಪ ಬದಿಗಿಟ್ಟು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಬೆನ್ನು ತಟ್ಟಿ ಈಶ್ವರಪ್ಪ ಮಾತನಾಡಿಸಿದರು.



ಮಾಜಿ ಸಿಎಂ ಯಡಿಯೂರಪ್ಪ ಅವರ ಮೊಮ್ಮಗನ ಮದುವೆ ಆರತಕ್ಷತೆಯಲ್ಲಿ ಮಾಜಿ ಸಚಿವ ಈಶ್ವರಪ್ಪ ಭಾಗಿಯಾಗಿದ್ದರು.

ಅಧಿಕಾರ ಅನುಭವಿಸಿ ಜಿಡ್ಡು ಹಿಡಿದ ಹಿರಿಯ ಸಚಿವರು: ಶಿವಗಂಗಾ

ಹೊಸಬರಿಗೆ ಸಚಿವ ಸ್ಥಾನ ಕೊಟ್ರೆ ಒಳ್ಳೆಯದು

ದಾವಣಗೆರೆ: ಸರಕಾರದ ಎರಡು ವರ್ಷದ ಸಾಧನೆ ಎಂದು ಹೇಳುತ್ತಾರೆ, ಆದರೆ ಕೆಲವು

ಸಚಿವರು ಏನೂ ಸಾಧನೆ ಮಾಡಿಲ್ಲ ಎಂದು ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಅಸಮಾಧಾನ ಹೊರಹಾಕಿದ್ದಾರೆ.

ಸುದ್ದಿಗಾರರೊಂದಿಗೆ ಸಂಪುಟ ಪುನಾರಚನೆ ವಿಚಾರದ ಬಗ್ಗೆ ಅವರು ಮಾತನಾಡಿ, ಹಿರಿಯ ಸಚಿವರಿಗೆ ಕೊಕ್ ಕೊಟ್ಟರೆ ಒಳ್ಳೆಯದು. ಹಿರಿಯರು ಅಧಿಕಾರ ಅನುಭವಿಸಿ ಜಿಡ್ಡು ಹಿಡಿದು ಹೋಗಿದ್ದಾರೆ. ಹೊಸದಾಗಿ ಆಯ್ಕೆಯಾದ ಶಾಸಕರಿಗೆ ಸಚಿವ ಸ್ಥಾನ ನೀಡಿದ್ರೆ ಉತ್ತಮವಾಗಿ ಕೆಲಸ ಮಾಡುತ್ತಾರೆ. ನಾನು ಸನ್ಯಾಸಿ ಅಲ್ಲ, ಸಚಿವ ಸ್ಥಾನ ಕೊಟ್ಟರೆ ನಿಭಾಯಿಸುತ್ತೇನೆ. ಏನು ಕೆಲಸ ಮಾಡ್ತಿನಿ ಎಂದು ಆರು ತಿಂಗಳ ಬಾಂಡ್ ಬೇಕಾದರೂ ಕೊಡ್ತಿನಿ. ಜಿಲ್ಲೆಯ ಹಿರಿಯ ರಾಜಕಾರಣಿ ಶಾಸಕ ಶಾಂತನಗೌಡ್ರಿಗೆ ಕೊಟ್ಟರೂ ನಾನು ಖುಷಿ ಪಡುತ್ತೇನೆ ಎಂದಿದ್ದಾರೆ.

ಮರು ಜಾತಿಗಣತಿ ಮಾಡಿದ್ರೆ ಸ್ವಾಗತ

ಮರು ಜಾತಿಗಣತಿ ವಿಚಾರವಾಗಿ, ಈ ಬಗ್ಗೆ ನನಗೆ ಮಾಹಿತಿ ಇಲ್ಲ. ಮಾಹಿತಿ ಪಡೆದು ಮಾತನಾಡುತ್ತೇನೆ. ಈ ಬಗ್ಗೆ ಸಿಎಂ ದೆಹಲಿಯಲ್ಲಿ ಮಾತಾಡಿದಂತೆ ಕಾಣುತ್ತದೆ. ಮರು ಜಾತಿಗಣತಿ ಮಾಡುವುದಾದರೆ ನಾನು ಆ ನಿರ್ಧಾರವನ್ನು ಸ್ವಾಗತ ಮಾಡುತ್ತೇನೆ. ಜಾತಿ ಗಣತಿ ವ್ಯವಸ್ಥಿತವಾಗಿ ಆಗಿಲ್ಲ ಎಂಬ ವಿಚಾರ ಹಿಂದಿನಿಂದಲೂ ಹೇಳುತ್ತಿದ್ದೇನೆ. ಹಳೆಯ ವರದಿಯಲ್ಲಿ 60 ಸಾವಿರ ಲಿಂಗಾಯತರು ಇದ್ದಾರೆ ಎಂಬ ವರದಿ ತಪ್ಪಾಗಿತ್ತು. ಮರು ಸಮೀಕ್ಷೆ ಮಾಡಲು ನಾನೇ ಮೊದಲಿಗ ಎಂದು ಹೇಳಿಕೊಂಡಿದ್ದಾರೆ.

ಕೆಲ ಸಚಿವರು, ಶಾಸಕರಿಂದ ಸಿಎಂ ಸಿದ್ದರಾಮಯ್ಯ ಪರ ಬ್ಯಾಟಿಂಗ್

ಮತ್ತೆ ಮುನ್ನೆಲೆಗೆ ಬಂದ ಸಿಎಂ ಕೂಗು

ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ದೆಹಲಿ ಭೇಟಿಯ ಬೆನ್ನಲ್ಲೇ, ರಾಜ್ಯದಲ್ಲಿ ಐದು ವರ್ಷ ಸಿದ್ದರಾಮಯ್ಯ ಸಿಎಂ ಎನ್ನುವ ಕೂಗು ಶುರುವಾಗಿದೆ. ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಕೆಲ ಸಚಿವರು, ಶಾಸಕರು ಈ ಹೇಳಿಕೆಯನ್ನು ಮುನ್ನೆಲೆಗೆ ತರುತ್ತಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಎರಡೂವರೆ ವರ್ಷ ಸಿದ್ದರಾಮಯ್ಯರೇ ಸಿಎಂ

ಮೈಸೂರು: ಸಿಎಂ ಕುರ್ಚಿ ಯಾವತ್ತೂ ಅಲ್ಲಾಡಿಲ್ಲ. ಸಿಎಂ ಕುರ್ಚಿ, ಕುರ್ಚಿಯ

ಮೇಲೆ ಕುಳಿತವರು ಎರಡು ಬಿಗಿಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನವೆಂಬರ್ ಬಳಿಕ ಸಿಎಂ ಬದಲಾವಣೆಯಾಗುತ್ತಾರೆ ಎಂಬ ವಿಷಯ ಕುರಿತು ಪ್ರತಿಕ್ರಿಯಿಸಿ, ಸಿಎಂ ಕುರ್ಚಿ ಗಟ್ಟಿಯಾಗಿರುತ್ತದೆ. ಅದರ ಮೇಲೆ ಕುಳಿತವರು ಸಹ ಗಟ್ಟಿಯಾಗಿರುತ್ತಾರೆ. ಕುರ್ಚಿ ಅಲ್ಲಾಡುವ ಪ್ರಶ್ನೆಯೇ ಬರುವುದಿಲ್ಲ. ಮುಂದಿನ ಎರಡೂವರೆ ವರ್ಷ ಸಿದ್ದರಾಮಯ್ಯ ಸಿಎಂ ಆಗಿರುತ್ತಾರೆ ಎಂದು ಸ್ಪಷ್ಟವಾಗಿ ಉತ್ತರಿಸಿದರು.

ಸಚಿವ ಸಂಪುಟದಲ್ಲಿ ಚರ್ಚೆ: ಸಿಎಂ ಸಿದ್ದರಾಮಯ್ಯ ದೆಹಲಿಗೆ ಹೋಗಿದ್ದ ವಿಚಾರದ ಕುರಿತು ಪ್ರತಿಕ್ರಿಯಿಸಿ, ಜಾತಿ ಗಣತಿ ವಿಚಾರ, ಪ್ರಸಕ್ತ ವಿದ್ಯಮಾನಗಳ ಬಗ್ಗೆ ಮಾತನಾಡಲು ಸಿಎಂ ದೆಹಲಿಗೆ ಹೋಗಿದ್ದರು. ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ. ಪ್ರಮುಖವಾಗಿ ಜಾತಿ ಗಣತಿಯ ವಿಚಾರದ ಬಗ್ಗೆ ಸಿಎಂ ಚರ್ಚೆ ಮಾಡಿದ್ದಾರೆ. ಗುರುವಾರ ಜಾತಿಗಣತಿಯ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡುತ್ತೇವೆ ಎಂದರು.

ಯಾರೂ ಸಿಎಂ ಬದಲಾವಣೆಗೆ ಗಡುವು ಕೊಟ್ಟಿಲ್ಲ

ಮೈಸೂರು: ನವೆಂಬರ್‌ನಲ್ಲಿ ಮುಖ್ಯ ಮಂತ್ರಿ ಬದಲಾವಣೆ ವಿಚಾರ ನನಗೆ ಗೊತ್ತಿಲ್ಲ, ಯಾರೂ ಮುಖ್ಯಮಂತ್ರಿಗಳ ಬದಲಾವಣೆಗೆ ಗಡುವು ಕೊಟ್ಟಿಲ್ಲ. ಈಗ ಸಿಎಂ ಒಳ್ಳೆ ಕೆಲಸ ಮಾಡುತ್ತಿದ್ದಾರೆ. ಐದು ವರ್ಷ ಸಿದ್ದರಾಮಯ್ಯನವರೇ ಸಿಎಂ ಆಗಿ ಇರುತ್ತಾರೆ ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಜಿಪಂ ಕಚೇರಿ ಬಳಿ ನವೆಂಬರ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ಯಾಗುತ್ತಾ ರೆಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ, ದೆಹಲಿಗೆ ಸಿಎಂ, ಡಿಸಿಎಂ ಹೋಗಿರುವುದು ಎಲ್ಲ

ವಿಚಾರಗಳ ಬಗ್ಗೆ ಚರ್ಚೆ ಮಾಡಲು, ಮುಖ್ಯವಾಗಿ ಜಾತಿ ಗಣತಿ ಬಗ್ಗೆ ಚರ್ಚೆಯಾಗಿದೆ. ಆದರೆ ನವೆಂಬರ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ನಡೆಯುತ್ತಿರುವ ಚರ್ಚೆ ಬಗ್ಗೆ ಗೊತ್ತಿಲ್ಲ. ಯಾರೂ ಮುಖ್ಯಮಂತ್ರಿ ಬದಲಾವಣೆಗೆ ಗಡುವು ಕೊಟ್ಟಿಲ್ಲ. ಮುಖ್ಯಮಂತ್ರಿಗಳು ಒಳ್ಳೆ ಕೆಲಸ ಮಾಡುತ್ತಿದ್ದಾರೆ, ಅದನ್ನು ಮುಂದುವರಿಸಿಕೊಂಡು ಹೋಗಿ ಎಂದು ಹೇಳಿದ್ದಾರೆ ಎಂದರು.

ಕಾಂಗ್ರೆಸ್ ಶಾಸಕರನ್ನು ಗುರಿಯಾಗಿಸಿ ಇಡಿ ದಾಳಿ । ಮಲ್ಲಿಕಾರ್ಜುನ ಖರ್ಗೆ ಕಿಡಿ

ಇಡಿ ದಾಳಿ ಕಾಂಗ್ರೆಸ್ ಒಡೆಯುವ ಸಂಚು

ಕಲಬುರಗಿ: ಕಾಂಗ್ರೆಸ್ ಪಕ್ಷ ಹಾಗೂ ಶಾಸಕರ ಒಗ್ಗಟ್ಟನ್ನು ಒಡೆಯಲು ಸಂಚು ಮಾಡಿ ಶಾಸಕರನ್ನು ಗುರಿಯಾಗಿಸಿ ಇಡಿ ದಾಳಿ ಮಾಡಿಸಲಾಗುತ್ತಿದೆ ಎಂದು ಎಐಸಿಸಿ ಅಧ್ಯಕ್ಷ ಡಾ. ಮಲ್ಲಿಕಾರ್ಜುನ್ ಖರ್ಗೆ ಕಿಡಿಕಾರಿದರು.

ಬಳ್ಳಾರಿ ಸಂಸದ ಇ.ತುಕಾರಾಂ, ಶಾಸಕ ನಾರಾ ಭರತ್ ರೆಡ್ಡಿ, ಗಣೇಶ್ ಸೇರಿ ಕೈ ಮುಖಂಡರ ಮನೆ ಮೇಲೆ ಇಡಿ ದಾಳಿ ವಿಚಾರದ ಬಗ್ಗೆ ಸುದ್ದಿಗಾರರೊಂದಿಗೆ ಕಲಬುರಗಿಯಲ್ಲಿ ಮಾತನಾಡಿದರು.

ಬಿಜೆಪಿಯವರಿಗೆ ಕಾಂಗ್ರೆಸ್ ಪಕ್ಷದ ಮೇಲೆ ಸಿಟ್ಟಿದೆ. ಚುನಾವಣೆ ಸೋಲಿನ ಸೇಡನ್ನು ತೀರಿಸಿಕೊಳಲ್ಲು ನಮ್ಮ ಪಕ್ಷದ ಶಾಸಕರನ್ನು ಗುರಿಯಾಗಿಸಿ ಇಡಿ ದಾಳಿ ನಡೆಸಲಾಗುತ್ತಿದೆ. ಇದು ಸರಿಯಲ್ಲ ಎಂದು ವಾಗ್ದಾಳಿ ನಡೆಸಿದರು.

ಚುನಾವಣೆ ವೇಳೆ ರಾಜ್ಯ ಹಾಗೂ ದೇಶಾದ್ಯಂತ ಸಾವಿರಾರು ಕೋಟಿ ರುಪಾಯಿ ಹಣ ಜಪ್ತಿ ಮಾಡಲಾಗಿದೆ. ಅದೆಲ್ಲ ಹಣ ಈಗ ಎಲ್ಲಿಗೆ ಹೋಗಿದೆ. ಚುನಾವಣೆಯಲ್ಲಿ ಯಾರು ಎಷ್ಟು ಹಣ ಖರ್ಚು ಮಾಡುತ್ತಾರೆ ಎನ್ನುವುದು ಗೊತ್ತು ಎಂದ ಮಲ್ಲಿಕಾರ್ಜುನ ಖರ್ಗೆ ಅವರು, ಬಿಜೆಪಿಗೆ ಪರೋಕ್ಷ ಟಾಂಗ್ ಕೊಟ್ಟರು.

ಆರ್‌ಸಿಬಿ ವಿಜಯೋತ್ಸವದ ಸಂಭ್ರಮಾಚರಣೆ ವೇಳೆ ಸಂಭವಿಸಿದ ಕಾಲ್ತುಳಿತ ದುರಂತ ಪ್ರಕರಣ ಸಂಬಂಧ ಸಿಎಂ ಹಾಗೂ ಡಿಸಿಎಂ ರಾಜೀನಾಮೆಗೆ ಬಿಜೆಪಿ ಆಗ್ರಹ ವಿಚಾರವಾಗಿ ಮಾತನಾಡಿ, ಕುಂಭಮೇಳದಲ್ಲಿ ಕಾಲ್ತುಳಿತ ಉಂಟಾಗಿ ಸಾವು-ನೋವುಗಳು ನಡೆದವು, ಅಲ್ಲಿನ ಸಿಎಂ ಯೋಗಿ ರಾಜೀನಾಮೆ ಕೊಟ್ಟರಾ? ಎಂದು ಪ್ರಶ್ನಿಸಿದರು. ಬೆಂಗಳೂರಿನ ಕಾಲ್ತುಳಿತ ಘಟನೆ ಆಕಸ್ಮಿಕ, ಈ ಘಟನೆ ನಡೆಯಬಾರದಿತ್ತು. ಅದಕ್ಕೆ ನಮ್ಮವರೂ ಕ್ಷಮೆ ಕೇಳಿದ್ದಾರೆ. ನೊಂದ ಕುಟುಂಬಗಳ ನೆರವಿಗೆ ನಿಲ್ಲಲ್ಲು ರಾಹುಲ್ ಗಾಂಧಿ ಸೂಚಿಸಿದ್ದಾರೆ ಎಂದರು.



> ಪ್ರಧಾನಿ ನರೇಂದ್ರ ಮೋದಿ ಅವರ 3ನೇ ಅವಧಿ ಶುರುವಾದರೂ ಲೋಕಸಭೆಯ ಡೆಪ್ಯೂಟಿ ಸ್ಪೀಕರ್ ಹುದ್ದೆ ಖಾಲಿ ಇಟ್ಟಿದ್ದಾರೆ. ಈ ಹುದ್ದೆ ಭರ್ತಿ ಮಾಡದ ಸ್ವತಂತ್ರ ಭಾರತದ ಮೊದಲ ಪ್ರಧಾನಿ ಮೋದಿ. ವಿರೋಧ ಪಕ್ಷದ ನಾಯಕರನ್ನು ನೇಮಕ ಮಾಡಬೇಕಿತ್ತು, ಮಾಡಲಾಗಿಲ್ಲ, ಇದು ಸಂವಿಧಾನ ವಿರೋಧಿ ನಡೆ.
>
> **-ಮಲ್ಲಿಕಾರ್ಜುನ ಖರ್ಗೆ**, ಎಐಸಿಸಿ ಅಧ್ಯಕ್ಷ

- ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ
- ಬಿಜೆಪಿಯವರಿಗೆ ಕಾಂಗ್ರೆಸ್ ಪಕ್ಷದ ಮೇಲೆ ಸಿಟ್ಟಿದೆ
- ಬೆಂಗಳೂರಿನ ಕಾಲ್ತುಳಿತ ಘಟನೆ ಆಕಸ್ಮಿಕ, ಈ ಘಟನೆ ನಡೆಯಬಾರದಿತ್ತು

ಸಂಪುಟ ರಚನೆ ಬಗ್ಗೆ ಚರ್ಚೆ ನಡೆದಿಲ್ಲ

ದೆಹಲಿ ಸಭೆ ಬಗ್ಗೆ ಮಾತನಾಡಿದ ಅವರು, ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆಯೂ ಯಾವುದೇ ಚರ್ಚೆ ಆಗಿಲ್ಲ. ಕಾಲ್ತುಳಿತ, ಜಾತಿಗಣತಿ, ವಿಚಾರದ ಬಗ್ಗೆ ಚರ್ಚೆ ಮಾಡಲಾಗಿದೆ. ಮುಂದೆ ಕಾಲ್ತುಳಿದಂತಹ ಯಾವುದೇ ದುರಂತಗಳು ನಡೆಯದಂತೆ ಎಚ್ಚರ ವಹಿಸಲು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆಶಿಗೆ ರಾಹುಲ್ ಗಾಂಧಿ ಸಲಹೆ ಕೊಟ್ಟಿದ್ದಾರೆ ಅಷ್ಟೆ. ನೂತನ ಸಂಪುಟ ರಚನೆ ಬಗ್ಗೆ ಮಾತುಕತೆ ನಡೆದಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದರು.

ವಿಶ್ವವಾಣಿ

ಸಂಪಾದಕೀಯ

ಮತ್ತೊಮ್ಮೆ ಜಾತಿಗಣತಿ ಸಮೀಕ್ಷೆ

ರಾಜ್ಯದಲ್ಲಿ ಮತ್ತೊಮ್ಮೆ ಜಾತಿಗಣತಿ ಸಮೀಕ್ಷೆ ನಡೆಸುವುದಾಗಿ ಸಿಎಂ ಸಿದ್ದರಾಮಯ್ಯ ಘೋಷಿಸಿದ್ದಾರೆ. ಜಾತಿಗಣತಿ ಸಮೀಕ್ಷೆ ನಡೆದು ಒಂಭತ್ತು-ಹತ್ತು ವರ್ಷಗಳಾಗಿವೆ, ಹೀಗಾಗಿ ಕೆಲವರು ಅದರ ವಿರುದ್ಧ ಅಪಸ್ವರ ಎತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮತ್ತೊಮ್ಮೆ ಜಾತಿಗಣತಿ ಸಮೀಕ್ಷೆ ನಡೆಸಲಿದ್ದು, 90 ದಿನದೊಳಗೆ ಆ ಕಾರ್ಯ ಮುಗಿಯಲಿದೆ ಎಂದೂ ಅವರು ಜಾತಿಗಣತಿ ಸಮೀಕ್ಷೆಯನ್ನು ಮತ್ತೊಮ್ಮೆ ಮಾಡುವ ರಾಜ್ಯ ಸರಕಾರದ ನಿರ್ಧಾರವನ್ನು ಬಲವಾಗಿ ಸಮರ್ಥಿಸಿದ್ದಾರೆ. ಈ ಹಿಂದಿನ ಸಮೀಕ್ಷೆಯಲ್ಲಿ ಹಲವಾರು ಲೋಪದೋಷಗಳಿದ್ದವು, ಎಲ್ಲರಿಗೂ ನ್ಯಾಯಬದ್ಧವಾಗಿ ಅವಕಾಶ ಕಲ್ಪಿಸಿಕೊಡಬೇಕೆಂಬ ಉದ್ದೇಶಕ್ಕಾಗಿಯೇ ಮತ್ತೊಮ್ಮೆ ಜಾತಿಗಣತಿ ಸಮೀಕ್ಷೆ ನಡೆಸುವ ನಿರ್ಧಾರ ಮಾಡಲಾಗಿದೆ ಎಂದಿದ್ದಾರೆ. ಆದರೆ ಪ್ರತಿಪಕ್ಷವು ಸರಕಾರದ ಈ ನಿಲುವಿಗೆ ಭಾರೀ ವಿರೋಧ ವ್ಯಕ್ತಪಡಿಸಿದೆ. ಈ ಹಿಂದೆ ಕಾಂತರಾಜು ಆಯೋಗದ ವರದಿ ಅವೈಜ್ಞಾನಿಕ, ಅಪೂರ್ಣ ಎಂದೆಲ್ಲಾ ಸಾರ್ವಜನಿಕ ವಲಯದಲ್ಲಿ ವಿರೋಧ ವ್ಯಕ್ತಪಡಿಸಿದ್ದರೂ ಅದನ್ನು ಸಿ.ಎಂ. ಬಲವಾಗಿ ಸಮರ್ಥಿಸಿಕೊಂಡು, ಇದೀಗ ಹೈಕಮಾಂಡ್ ಒತ್ತಡಕ್ಕೆ ಕಟ್ಟುಬಿದ್ದು ಮತ್ತೊಮ್ಮೆ ಜಾತಿಗಣತಿ ಸಮೀಕ್ಷೆಯ ನಿರ್ಧಾರ ಕೈಗೊಂಡಿದ್ದಾರೆ ಎಂದು ರಾಜ್ಯದ ಪ್ರತಿಪಕ್ಷದ ನಾಯಕ ಸರಕಾರದ ನಿರ್ಧಾರವನ್ನು ಟೀಕಿಸಿದ್ದಾರೆ. ಜಾತಿಗಣತಿಗಾಗಿ ರಾಜ್ಯ ಸರಕಾರವು ರು.167 ಕೋಟಿಯನ್ನು ವ್ಯಯ ಮಾಡಿದೆ, ಈಗಾಗಲೇ ದಶವಾರ್ಷಿಕ ರಾಷ್ಟ್ರೀಯ ಜನಗಣತಿಯಲ್ಲಿ ಜಾತಿಗಣತಿಯೂ ಸೇರಿಕೊಳ್ಳಲಿದೆ ಎಂದು ಪ್ರಧಾನಿ ಇತ್ತೀಚೆಗೆ ಹೇಳಿದ್ದರು. ಆ ಕಾರಣಕ್ಕಾಗಿ ರಾಜ್ಯ ಸರಕಾರ ನಡೆಸಲಿರುವ ಜಾತಿಗಣತಿ ಸಮೀಕ್ಷೆಯ ನಿಲುವನ್ನು ಕೆಲವರು ಪ್ರಶ್ನಿಸಿದ್ದಾರೆ. ಕೇಂದ್ರ ಸರಕಾರವು ಮುಂದಿನ ವರ್ಷವಷ್ಟೇ ಜನಗಣತಿ ನಡೆಸುವುದೆಂಬುವುದು ಈಗಾಗಲೇ ಖಚಿತವಾಗಿದೆ. ಹಾಗಾಗಿ ಈ ಹಿಂದಿನ ವರದಿಯಲ್ಲಿ ತನ್ನ ಕಡೆಯಿಂದ ಆಗಿದ್ದ ಲೋಪವನ್ನು ಆದಷ್ಟು ಬೇಗ ತಿದ್ದುವ ಉದ್ದೇಶವೂ ರಾಜ್ಯ ಸರಕಾರದ್ದಾಗಿರಬಹುದು. 90 ದಿನದಲ್ಲಿ ಈ ಸಲ ಜಾತಿಗಣತಿ ಪೂರ್ಣವಾಗಲಿದೆ ಎಂಬ ನಂಬಿಕೆ ರಾಜ್ಯ ಸರಕಾರಕ್ಕಿದೆ. ಆದರೆ ಈ ಸಲ ಮತ್ತೊಮ್ಮೆ ಜಾತಿಗಣತಿ ನಡೆಸಿದರೆ ಯಾವುದೇ ಲೋಪ ಆಗದಂತೆ ನೋಡಿ ಕೊಳ್ಳುವ ಬಹುದೊಡ್ಡ ಜವಾಬ್ದಾರಿ ರಾಜ್ಯ ಸರಕಾರದ ಮೇಲಿದೆ ಎಂಬುವುದನಂತೂ ಸರಕಾರ ಮರೆಯಲೇಬಾರದು.

ಸೊಂಪಾದಕೀಯ

ಚರ್ಚ್ ಆಸ್ಪದ ಸಂಗತಿ

ಬಹುತೇಕ ಜನ ದೇವರ ಮೇಲೆ ಎಷ್ಟೇ ನಂಬಿಕೆ ಇಟ್ಟಿದ್ದರೂ, ಭಗವಂತನ ಭಯದಿಂದ ಬದುಕುತ್ತಿರುವ ಭಕ್ತರ ಸಂಖ್ಯೆ ಎಷ್ಟೇ ದೊಡ್ಡದಿದ್ದರೂ, 'ಅಯ್ಯೋ, ದೇವರೆಲ್ಲಿದ್ದಾನೆ? ದೇವರು ಗೀವರು ಎಲ್ಲಾ ಸುಳ್ಳು' ಅನ್ನೋ ಜನರೂ ನಮ್ಮ ನಡುವೆ ಇದ್ದಾರೆ. ಆದರೆ ಇವೆಲ್ಲದರ ನಡುವೆ, 'ಪ್ರತಿಯೊಬ್ಬ ಮನುಷ್ಯನಲ್ಲೂ ದೇವರಿದ್ದಾನೆ' ಅಂತ ದೊಡ್ಡೋರು ಹೇಳಿದ ಮಾತನ್ನೇ ತಪ್ಪಾಗಿ ತಿಳಿದುಕೊಂಡು 'ನಾನೇ ದೇವರು' ಅನ್ನೋ ಹುಂಬರೂ ಇಲ್ಲಿದ್ದಾರೆ. ಅಂಥದ್ದೇ ಕೆಟಗರಿಗೆ ಸೇರಿದ ಟಾಮ್ ಮ್ಯಾಥ್ಯೂ ಎಂಬ ವ್ಯಕ್ತಿಯೊಬ್ಬನ ಕಥೆಯಿದು. ಕೆಲ ವರ್ಷದ ಹಿಂದೆ ಈತ ಬೆಂಗಳೂರಿನ ಚರ್ಚ್ ಒಂದಕ್ಕೆ ನುಗ್ಗಿ ಅಲ್ಲಿನ ಪರಿಸ್ಥಿತಿಯನ್ನು ಅಲ್ಲೋಲ ಕಲ್ಲೋಲ ಮಾಡಿದ. ಚರ್ಚಿನ ಗೇಟು ಮುರಿದು, ಪೀಠೋಪಕರಣಗಳನ್ನು ಧ್ವಂಸ ಮಾಡಿ 'ಐ ಆಮ್ ಗಾಡ್' ಎಂದು ಕೂಗಾಡಿದ. ಬೆಳಗಿನ ಜಾವ 4.30ರ ಸುಮಾರಿಗೆ ಹೋಗಿ ಅಲ್ಲಿನ ಸೆಕ್ಯುರಿಟಿ ಗಾರ್ಡ್ ಅನ್ನು ಎಬ್ಬಿಸಿದ್ದರ ಜತೆಗೆ ಅಲ್ಲಿ ದಾಂಧಲೆಯನ್ನೂ ಎಬ್ಬಿಸಿದ. ಅಂದಹಾಗೆ, ಈತ ಅದಕ್ಕೂ ಮುನ್ನ ಸಾಕಷ್ಟು ಬಾರಿ 'ನಾನೇ ದೇವರು, ಐ ಆಮ್ ಗಾಡ್' ಅಂತ ಹೇಳಿಕೊಂಡು ಕಿತಾಪತಿ ಕೆಲಸ ಮಾಡಿದ್ದನಂತೆ. ಹೀಗೆ ಹೇಳೋದನ್ನು ಕೇಳಿದರೆ ಈತ ನಟ- ನಿರ್ದೇಶಕ ಉಪೇಂದ್ರರ ಅಭಿಮಾನಿ ಇರಬಹುದೇ ಅಂತ ಅನುಮಾನ ಬಾರದಿರದು. ಆದರೆ ಚರ್ಚಿಗೆ ಹೋಗಿ ಗಲಾಟೆ ಮಾಡಿದ ವೇಳೆ ಈತ ಕುಡಿದಿದ್ದನಂತೆ. ಹಾಗಾಗಿ ಪರಮಾತ್ಮ ನನ್ನೊಳಗೇ ಇರುವಾಗ ಬೇರೆ ಯಾವ ದೇವರಿದ್ದಾನೆ ಅನ್ನೋ ಆತ್ಮವಿಶ್ವಾಸ ಇದ್ದರೂ ಇರಬಹುದು. ಈತ ಇದಕ್ಕೂ ಮುನ್ನ ಇಂಥದೇ ಕುಚೇಷ್ಟೆಗಳನ್ನು ಮಾಡಿದ್ದರೂ ಚರ್ಚಿನ ಫಾದರ್ ಇವನಿಗೆ ಬುದ್ಧಿ ಹೇಳಿಲ್ಲ ಅನುತ್ತೆ. ಅಥವಾ ಆ ಫಾದರ್, 'ಯಾರು ದೇವರು ಅನ್ನೋದ್ರ ಬಗ್ಗೆ ಅನುಮಾನ ಇದ್ದರೆ ಆತ ಬಹಿರಂಗವಾಗಿ ಚರ್ಚಿಗೆ ಬರಲಿ' ಅಂತ ಕರೆ ಕೊಟ್ಟಿದ್ದನ್ನು, 'ಬಹಿರಂಗವಾಗಿ ಚರ್ಚಿಗೆ ಬರಲಿ' ಅಂತ ತಪ್ಪಾಗಿ ಅರ್ಥೈಸಿ ಕೊಂಡು ಈತ ಬೆಳ್ಳಂಬೆಳಗ್ಗೆ ಚರ್ಚಿಗೆ ನುಗ್ಗಿರುವ ಸಾಧ್ಯತೆಯೂ ಇದೆ.

ಸಂಪಾದಕರ ಸದ್ಯಶೋಧನೆ

ವಿಮಾನದಲ್ಲಿ ಲಗೇಜ್ ನಿರ್ವಹಣೆ

ಒಂದು ವಿಮಾನ ನಿಲ್ದಾಣದ ಉತ್ಕೃಷ್ಟತೆ ಅಥವಾ ಉತ್ತಮ ಗುಣಮಟ್ಟಕ್ಕೆ ಆ ನಿಲ್ದಾಣ ಪ್ರಯಾಣಿಕರ ಲಗೇಜುಗಳನ್ನು ಹೇಗೆ ನಿರ್ವಹಿಸುತ್ತದೆ ಎಂಬುದೂ ಮಾನದಂಡ. ಕೆಲವು ವಿಮಾನ ನಿಲ್ದಾಣಗಳು ಇದೊಂದೇ ಸಂಗತಿಯಿಂದ ಹೆಸರು ಮಾಡಿದ ನಿದರ್ಶನವೂ ಇದೆ. ಉದಾಹರಣೆಗೆ ಜಪಾನಿನ ಕಾನ್ಸೈ ವಿಮಾನ ನಿಲ್ದಾಣ. ಅಲ್ಲಿ ಕಳೆದ ಮೂವತ್ತು ವರ್ಷಗಳಿಂದ ಪ್ರಯಾಣಿಕರ ಒಂದೇ ಒಂದು ಲಗೇಜ್ ಕಾಣೆಯಾಗಿಲ್ಲ ಅಥವಾ ತಡವಾಗಿ ಬಟವಾಡೆ ಆಗಿಲ್ಲ. ಅಷ್ಟು ಕರಾರುವಾಕ್ಕಾಗಿ ಅಲ್ಲಿ ಲಗೇಜುಗಳನ್ನು ನಿರ್ವಹಿಸಲಾಗುತ್ತದೆ. ಅದೊಂದೇ ಕಾರಣಕ್ಕೆ ಆ ವಿಮಾನ ನಿಲ್ದಾಣ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದೆ. ವಿಮಾನ ನಿಲ್ದಾಣಗಳಲ್ಲಿ ಲಗೇಜು ಹ್ಯಾಂಡ್ಲಿಂಗ್ (Luggage Handling) ಅಥವಾ ಚೆಕ್-ಇನ್ ಸಾಮಾನು ನಿರ್ವಹಣೆಯ ಪ್ರಕ್ರಿಯೆ ಅತ್ಯಂತ ಸಂಘಟಿತವಾದ ಹಾಗೂ ತಂತ್ರಜ್ಞಾನದ ಸಹಾಯದಿಂದ ನಡೆಸುವ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆ ಹತ್ತಾರು ಸಾವಿರಾರು ಪ್ರಯಾಣಿಕರ ಲಗೇಜುಗಳನ್ನು ನಿಖರವಾಗಿ, ಸುರಕ್ಷಿತವಾಗಿ, ನಿಗದಿತವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಗಮ್ಯಸ್ಥಾನಕ್ಕೆ ತಲುಪಿಸುವ ಉದ್ದೇಶವನ್ನು ಹೊಂದಿರುತ್ತದೆ. ಲಗೇಜು ಹ್ಯಾಂಡ್ಲಿಂಗ್ ಎಂದರೆ ಪ್ರಯಾಣಿಕರ ಬ್ಯಾಗ್ ಅಥವಾ ಲಗೇಜನ್ನು ವಿಮಾನ ನಿಲ್ದಾಣಕ್ಕೆ ಆಗಮಿಸಿದಾಗಿನಿಂದ ಹಿಡಿದು, ವಿಮಾನದಲ್ಲಿ ಸಾಗಿಸುವವರೆಗೆ ಮತ್ತು ಗಮ್ಯಸ್ಥಾನದಲ್ಲಿ ಪ್ರಯಾಣಿಕರಿಗೆ ತಲುಪುವವರೆಗೆ ನಡೆಯುವ ಒಂದು ವ್ಯವಸ್ಥಿತ ಮತ್ತು ಸಂಪೂರ್ಣ ಪ್ರಕ್ರಿಯೆ. ಈ ಕಾರ್ಯದಲ್ಲಿ ಹಲವು ಹಂತಗಳು, ಯಂತ್ರಗಳು ಹಾಗೂ ಸಿಬ್ಬಂದಿ ತೊಡಗಿರುತ್ತಾರೆ. ಪ್ರಯಾಣಿಕರು ವಿಮಾನ ನಿಲ್ದಾಣಕ್ಕೆ ಬರುವ ತಕ್ಷಣವೇ ತಮ್ಮ ಲಗೇಜುಗಳನ್ನು ಚೆಕ್-ಇನ್ ಕೌಂಟರ್‌ಗೆ ಒಯ್ಯುತ್ತಾರೆ. ಇಲ್ಲಿ ಸಿಬ್ಬಂದಿ ಅವರ ಟಿಕೆಟ್ ಪರಿಶೀಲಿಸಿ, ಲಗೇಜಿನ ಭಾರವನ್ನು ತೂಕದ ಅಳತೆ ಯಂತ್ರದಲ್ಲಿ ಅಳೆಯುತ್ತಾರೆ. ತೂಕ ಮಿತಿಯ ಮೀರುವ ಲಗೇಜುಗಳಿಗೆ ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆ. ಲಗೇಜು ಮೇಲೆ ಒಂದು ಟ್ಯಾಗ್ ಅಂಟಿಸಲಾಗುತ್ತದೆ. ಇದು ಬಾರ್ಕೋಡ್ ಅಥವಾ RFID ಟ್ಯಾಗ್ ಅನ್ನು ಹೊಂದಿರುತ್ತದೆ. ಚೆಕ್-ಇನ್ ಆದ ನಂತರ, ಲಗೇಜುಗಳನ್ನು ಬೆಲ್ಟ್ ನಲ್ಲಿ ಹಾಕಲಾಗುತ್ತದೆ. ಈ ಸಿಸ್ಟಮ್, ಲಗೇಜುಗಳನ್ನು ವಿಮಾನ ನಿಲ್ದಾಣದ ಒಳಗಿನ ಸಂಚಾರಿ ಮಾರ್ಗಗಳಲ್ಲಿ ಸಾಗಿಸುತ್ತದೆ. ಈ ಬೆಲ್ಟ್ ಸಿಸ್ಟಮ್ ಹಲವು ಗುರುತುಗಳನ್ನು, ರೋಬೋಟಿಕ್ ಆರ್ಮ್ ಹಾಗೂ ಸೆನ್ಸರ್‌ಗಳನ್ನು ಹೊಂದಿರುತ್ತದೆ. ನಂತರ ಲಗೇಜುಗಳು ಎಕ್ಸ್-ರೇ ಸ್ಕ್ಯಾನರ್ ಗಳ ಮೂಲಕ ಸಾಗುತ್ತವೆ. ಈ ಸ್ಕ್ಯಾನಿಂಗ್ ಪ್ರಕ್ರಿಯೆಯಲ್ಲಿ ಪ್ರತಿ ಲಗೇಜಿನಲ್ಲಿ ಹಾನಿಕರ, ಸ್ಫೋಟಕ ಅಥವಾ ನಿರ್ಬಂಧಿತ ವಸ್ತುಗಳ ಪರಿಶೀಲನೆ ನಡೆಯುತ್ತದೆ. ಸಂಶಯಾಸ್ಪದ ಲಗೇಜುಗಳನ್ನು ಮ್ಯಾನುಯಲ್ ತಪಾಸಣೆಗೆ ತೆಗೆದುಕೊಳ್ಳಲಾಗುತ್ತದೆ. ಸ್ಕ್ಯಾನಿಂಗ್ ನಂತರ ಲಗೇಜುಗಳನ್ನು ವಿಮಾನದ ಗಮ್ಯಸ್ಥಾನವನ್ನು ಅನುಸರಿಸಿ ಪ್ರತ್ಯೇಕಿಸಲಾಗುತ್ತದೆ. ಈ ಭಾಗದಲ್ಲಿ ಸ್ಮಾರ್ಟ್ ಟ್ಯಾಗ್‌ಗಳು ಮತ್ತು ಆರ್‌ಎಫ್‌ಐಡಿ ರೀಡರ್‌ಗಳು ಸಹಾಯದಿಂದ ಲಗೇಜು ಯಾವ ವಿಮಾನಕ್ಕೆ ಸೇರಬೇಕೋ ಅಲ್ಲಿಗೆ ಕಳುಹಿಸಲಾಗುತ್ತದೆ. ವಿಂಗಡಿಸುವ (ಸಾರ್ಟಿಂಗ್) ವ್ಯವಸ್ಥೆ ಸಂಪೂರ್ಣವಾಗಿ ಆಟೋಮೇಷನ್ ಆಧಾರಿತವಾಗಿರುತ್ತದೆ. ಲಗೇಜು ಸಾರ್ಟಿಂಗ್ ಪ್ರದೇಶದಿಂದ ಹೊರಬಂದು, ಲೋಡಿಂಗ್ ವಿಭಾಗಕ್ಕೆ ಬರುತ್ತದೆ. ಇಲ್ಲಿ ಲೋಡರ್‌ಗಳು ಅಥವಾ ಬಾಗೇಜು ಹ್ಯಾಂಡ್ಲರ್‌ಗಳು ಲಗೇಜುಗಳನ್ನು ಸಿದ್ಧಪಡಿಸುತ್ತಾರೆ. ಲಗೇಜುಗಳನ್ನು ULDs (Unit Load Devices) ಅಥವಾ ಟ್ರಾಲಿಗಳಲ್ಲಿ ಸಾಗಿಸಲಾಗುತ್ತದೆ. ಈ ULDಗಳನ್ನು ವಿಮಾನದ ಕಾರ್ಗೋ ವಿಭಾಗಕ್ಕೆ ನಿಯಮಿತ ರೀತಿಯಲ್ಲಿ ಲೋಡ್ ಮಾಡಲಾಗುತ್ತದೆ. ವಿಮಾನದ ತೂಕ ಮತ್ತು ಸಮತೋಲನ (Weight and Balance) ನಿಯಮಾನುಸಾರ ಲಗೇಜುಗಳನ್ನು ತುಂಬಲಾಗುತ್ತದೆ. ಲಗೇಜು ಹ್ಯಾಂಡ್ಲಿಂಗ್ ಸಿಬ್ಬಂದಿ, ಪೈಲಟ್‌ಗಳಿಗೆ ಅಥವಾ ಲೋಡ್ ಮಾಸ್ಟರ್‌ಗಳಿಗೆ ಲಗೇಜಿನ ಸಂಪೂರ್ಣ ಮಾಹಿತಿ ನೀಡುತ್ತಾರೆ. ವಿಮಾನ ತಲುಪಿದ ನಂತರ ಲಗೇಜುಗಳನ್ನು ಕಾರ್ಗೋ ವಿಭಾಗದಿಂದ ಹೊರ ತೆಗೆದುಕೊಳ್ಳಲಾಗುತ್ತದೆ. ಈ ಲಗೇಜುಗಳು ಮತ್ತೆ ವಿಮಾನ ನಿಲ್ದಾಣದ ಒಳಗಿನ ಲಗೇಜು ಸಂಚಾರಿ ಮಾರ್ಗದಲ್ಲಿ ಸಾಗುತ್ತವೆ. ಪ್ರಯಾಣಿಕರು ವಿಮಾನದಿಂದ ಇಳಿದು ಲಗೇಜು ಪಿಕಪ್ ಮಾಡಲು ಬ್ಯಾಗೇಜ್ ಕ್ಲೈಮ್ ಬೆಲ್ಟ್ ಪ್ರದೇಶಕ್ಕೆ ಬರುತ್ತಾರೆ. ಲಗೇಜುಗಳನ್ನು ಕನ್ವೆಯರ್ ಬೆಲ್ಟ್ ಮೂಲಕ ಹೊರತಂದು ಪ್ರಯಾಣಿಕರಿಗೆ ನೀಡಲಾಗುತ್ತದೆ. ಲಗೇಜಿನ ವಿಳಾಸ ತಪ್ಪಾಗಿ ಟ್ಯಾಗ್ ಆಗಿದ್ದರೆ, ಅದು ಬೇರೆ ನಿಲ್ದಾಣಕ್ಕೋ ಅಥವಾ ಬೇರೆ ವಿಮಾನಕ್ಕೋ ಹೋಗಬಹುದು. ಒಂದು ಬ್ಯಾಗ್ ನಿರ್ವಹಣೆಯಲ್ಲಿ ನೂರಾರು ಜನರ ಪಾತ್ರವಿರುವುದು ಗಮನಾರ್ಹ.

ಕೈ ಸವೆಯುವವರೆಗೂ ನಿರಂತರ ಬರೆಯಲು ಸೈ !

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ಪತ್ರಿಕೋದ್ಯಮದಲ್ಲಿ ಕೆಲವು Myth ಗಳಿವೆ. ಆ ಪೈಕಿ ಮಳೆಗಾಲದಲ್ಲಿ ಪತ್ರಿಕೆಯನ್ನು ಆರಂಭಿಸಬಾರದು ಎಂಬುದೂ ಒಂದು. ಇದರ ಹಿಂದೆ ಪ್ರಾಕ್ಟಿಕಲ್ ಕಾರಣವೂ ಇದೆ. ಅದೇನೆಂದರೆ, ಮಳೆಗಾಲದಲ್ಲಿ ಪತ್ರಿಕೆಗಳ ವಿತರಣೆ ಕಷ್ಟ ಎಂಬುದು. ಉಳಿದ ದಿನಗಳಲ್ಲಿ ಪತ್ರಿಕೆಯನ್ನು ಮನೆಯ ಅಂಗಳದಲ್ಲಿ ಬಿಸಾಡಿ ಹೋಗುವಂತೆ ಮಳೆಗಾಲದಲ್ಲಿ ಹಾಗೆ ಮಾಡುವಂತಿಲ್ಲ. ಪತ್ರಿಕೆ ನೆನೆದು ಒದ್ದೆಯಾಗಿ, ಬಿಡಿಸಲು ಆಗದಂತೆ ಮುದ್ದೆಯಾಗಿ ಬಿಡುತ್ತದೆ. ಹೊಸ ಪತ್ರಿಕೆ ಆರಂಭಿಸಲು ಮಳೆಗಾಲ ಸೂಕ್ತ ಸಮಯವಲ್ಲ ಎಂಬುದನ್ನು ನಾನು ಶಾಮರಾಯರಿಂದ ಹಿಡಿದು ವೈಯೆನ್ಕೆ ಅವರ ಬಾಯಲ್ಲಿ ಕೇಳಿದ್ದಿದೆ. ರವಿ ಬೆಳಗೆರೆ ಕೂಡ ಹಾಗೆ ಹೇಳುತ್ತಿದ್ದ. ಉಳಿದ ದಿನಗಳಲ್ಲಿ ಪತ್ರಿಕೆಗಳನ್ನು ಕಳಿಸಲು ವಿಶೇಷ ತಯಾರಿ ಮಾಡಬೇಕಾಗಿಲ್ಲ. ಆದರೆ ಮಳೆಗಾಲದಲ್ಲಿ ಪತ್ರಿಕೆಗಳು ಒದ್ದೆಯಾಗದಂತೆ ಪ್ಲಾಸ್ಟಿಕ್ ಹೊದಿಕೆ ಅತ್ಯಗತ್ಯ.

ಸಾಮಾನ್ಯವಾಗಿ ದೂರದ ಊರುಗಳಿಗೆ ಪತ್ರಿಕೆಗಳನ್ನು ಸಾಗಿಸುವಾಗ, ಮಧ್ಯದಲ್ಲಿ ಸಿಗುವ ಸಣ್ಣ ಸಣ್ಣ ಊರುಗಳು ಬಂದಾಗ, ಪತ್ರಿಕೆಯ ಬಂಡಲ್ ಗಳನ್ನು ಎಸೆದು ಹೋಗುವುದು ರೂಢಿ. ಆದರೆ ಮಳೆಗಾಲದಲ್ಲಿ ಹೀಗೆ ಎಸೆಯುವಂತಿಲ್ಲ. ಆಗಲೂ ಪತ್ರಿಕೆಗಳ ಬಂಡಲ್ ಗಳಿಗೆ ಪ್ಲಾಸ್ಟಿಕ್ ಹೊದಿಕೆಯನ್ನು ತೊಡಿಸಲೇಬೇಕು. ಹೊಸ ಪತ್ರಿಕೆಯನ್ನು ಆರಂಭಿಸುವುದಕ್ಕೂ, ಈ ರೀತಿ ಪತ್ರಿಕೆಯನ್ನು ವಿತರಿಸುವುದಕ್ಕೂ ಯಾವ ಸಂಬಂಧವೂ ಇಲ್ಲ. ಹೊಸ ಪತ್ರಿಕೆಯಾಗಲಿ, ಹಳೆಯ ಪತ್ರಿಕೆಯಾಗಲಿ, ಮಳೆಗಾಲದಲ್ಲಿ ಪತ್ರಿಕೆಯನ್ನು ಸಾಗಿಸುವಾಗ ವಿಶೇಷ ಆರೈಕೆ, ಹೊದಿಕೆ ಬೇಕೇ ಬೇಕು. ಪತ್ರಿಕೆ ತೊಯ್ದು ಮುದ್ದೆಯಾಗಬಹುದು ಎಂಬ ಸಾಧ್ಯತೆ ಬಿಟ್ಟರೆ, ಮಳೆಗಾಲಕ್ಕೂ, ಹೊಸ ಪತ್ರಿಕೆಗೂ ಯಾವ ಸಂಬಂಧವೂ ಇಲ್ಲ. ಆದರೂ ಹೊಸ ಪತ್ರಿಕೆಯನ್ನು ಆರಂಭಿಸಲು ಮಳೆಗಾಲ ಸೂಕ್ತವಲ್ಲ ಎಂಬ ಮಾತು ಬಹಳ ವರ್ಷಗಳಿಂದ ಚಾಲ್ತಿಯಲ್ಲಿ ಇರುವುದಂತೂ ನಿಜ.

ಹಾಗೆ ನೋಡಿದರೆ, ಹೊಸ ಪತ್ರಿಕೆಯನ್ನು ಆರಂಭಿಸಲು ಮಳೆಗಾಲವೇ ಅತ್ಯಂತ ಸೂಕ್ತ ಸಮಯ. ಬೆಳಗಿನ ಸಮಯದಲ್ಲಿ ಹೊರಗೆ ಮಳೆ ಸುರಿಯುತ್ತಿದ್ದರೆ, ಬಿಸಿ ಬಿಸಿ ಕಾಫಿ ಕುಡಿಯುತ್ತಾ, ಪತ್ರಿಕೆ ಓದುವುದು ಒಂದು ಹಿತವಾದ ಅನುಭವವೇ. ಸಾಮಾನ್ಯವಾಗಿ ಮಳೆಗಾಲದಲ್ಲಿ ಓಡಾಟ, ತಿರುಗಾಟ ಕಮ್ಮಿ. ಹೊರಗೆ ಮಳೆ ಸುರಿಯುತ್ತಿದ್ದರೆ, ಎಲ್ಲರೂ ಮನೆಯಲ್ಲಿಯೇ ಇರುವುದು ಜಾಸ್ತಿ. ಹೀಗಾಗಿ ಪತ್ರಿಕೆ ಓದಲು ಮೊದಲಿಗಿಂತ ಹೆಚ್ಚು ಸಮಯ ಸಿಗುತ್ತದೆ. ಅದರಲ್ಲೂ ಒಂದೇ ಪತ್ರಿಕೆಯನ್ನು ತರಿಸುವವರು, ಪತ್ರಿಕೆಯ ಹೆಸರಿನಿಂದ ಆರಂಭ ಮಾಡಿ, ಕೊನೆ ಪುಟದಲ್ಲಿ ಸಣ್ಣಕ್ಷರಗಳಲ್ಲಿ ಮುದ್ರಿತವಾಗುವ ಸಂಪಾದಕರ ಹೆಸರಿನ ತನಕ ಒಂದೂ ಅಕ್ಷರ ಬಿಡದಂತೆ ಓದಬಹುದು.

ಮಳೆಗಾಲದಲ್ಲಿ ಮಾರುಕಟ್ಟೆ ಗತಿ ನಿಧಾನವಾಗಿರುವುದರಿಂದ ಜಾಹೀರಾತುಗಳ ಒಳಹರಿವು ಕಮ್ಮಿ. ಆದರೆ ಹಿಂದಿನ ಕಾಲದ ಸಂಪಾದಕರು ಪತ್ರಿಕೆಯ ಹೂರಣದ ಬಗ್ಗೆ ಯೋಚಿಸುತ್ತಿದ್ದರೇ ಹೊರತು, ಜಾಹೀರಾತುಗಳ ಬಗ್ಗೆ ಎಂದೂ ತಲೆಕೆಡಿಸಿಕೊಂಡವರಲ್ಲ. ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟವಾದರೇನು, ಬಿಟ್ಟರೇನು ಎಂಬುದು ಅವರ ಧೋರಣೆಯಾಗಿತ್ತು. ಕೆಲವು ಸಂಪಾದಕರಂತೂ ಜಾಹೀರಾತು ಬಂದರೆ ಸಿಡಿಮಿಡಿಗೊಳ್ಳುತ್ತಿದ್ದರು. ಅದರಲ್ಲೂ ಮಹತ್ವದ ಸುದ್ದಿ ಇರುವ ದಿನ ಮುಖಪುಟದಲ್ಲಿ ಜಾಹೀರಾತು ಬಂದರೆ ಅದನ್ನು ನಿರ್ದಾಕ್ಷಿಣ್ಯವಾಗಿ ಒಳಪುಟಗಳಿಗೆ ತಳ್ಳಿಬಿಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಸಂಪಾದಕರು ಜಾಹೀರಾತನ್ನು ರದ್ದುಪಡಿಸುತ್ತಿದ್ದರು.

ಆದರೆ ಈಗಿನ ಸಂಪಾದಕನಿಗೆ ಆ ಸ್ವಾತಂತ್ರ್ಯ ಇಲ್ಲ. ಆತ ಸುದ್ದಿಗೆ ಮಹತ್ವ ಕೊಡುವಷ್ಟೇ ಜಾಹೀರಾತಿಗೂ ಮಹತ್ವ ಕೊಡಬೇಕೆಂದು ಪತ್ರಿಕೆಯ ಮಾಲೀಕ ಬಯಸುತ್ತಾನೆ. ಒಂದು ವೇಳೆ ಸುದ್ದಿಯನ್ನು ಬಿಟ್ಟರೆ ಯಾವ ಮಾಲೀಕನೂ ಕೇಳುವುದಿಲ್ಲ. ಆದರೆ ಒಂದಂಗುಲ ಜಾಹೀರಾತು ಬಿಟ್ಟರೆ ಸಂಪಾದಕನನ್ನು ಪ್ರಶ್ನಿಸದೇ ಬಿಡುವುದಿಲ್ಲ. ಒಬ್ಬ ಸಂಪಾದಕ ತನ್ನ ಸ್ಥಾನದಲ್ಲಿ ಮುಂದುವರಿಯಲು ಆತ ಜಾಹೀರಾತು ತರಲು ಎಷ್ಟು ಸಹಕರಿಸಿದ್ದಾನೆ ಎಂಬ ಅಂಶವೂ ಮುಖ್ಯ ಕಾರಣವಾಗಿರುತ್ತದೆ. ಹೀಗಾಗಿ ಕೆಲವು ಸಂಪಾದಕರು ಮಾಲೀಕರನ್ನು ಓಲೈಸಲು, ಸಂಪಾದಕೀಯ ಕೆಲಸ ಮಾಡುವುದಕ್ಕಿಂತ, ಜಾಹೀರಾತು ಸಂಗ್ರಹಿಸುವುದರಲ್ಲಿಯೇ ಮಗ್ನರಾಗುವುದು ಹೆಚ್ಚು. ಕೋವಿಡ್ ಬಳಿಕ ಮಾಲೀಕನ ಬವಣೆ ಎಂಥದ್ದು ಎಂಬುದನ್ನು ಪತ್ರಕರ್ತರು ಅರ್ಥ ಮಾಡಿಕೊಳ್ಳುವಂತಾಯ್ತು. ಈಗಿನ ಪತ್ರಿಕಾ ಮಾಲೀಕರು, ಪತ್ರಿಕೆಯನ್ನು ಆರಂಭಿಸಲು ಮಳೆಗಾಲ ಸೂಕ್ತವಲ್ಲ ಎಂದು ಹೇಳಿದ್ದರೆ ನಂಬಬಹುದಿತ್ತು. ಜಾಹೀರಾತನ್ನು ಲೆಕ್ಕಿಸದ ಆ ಕಾಲದಲ್ಲಿ ಹಾಗೆ ಹೇಳಿದ್ದು ಯಾಕೋ.

ನಾನು ಪ್ರವಾಸಿ ಪ್ರಪಂಚ ಪತ್ರಿಕೆ'ಯನ್ನು ಮಳೆಗಾಲದಲ್ಲಿ ಆರಂಭಿಸಿದಾಗ, ನನ್ನ ಮನಸ್ಸಿನಲ್ಲಿ ಆ ಮಾತುಗಳು ಸುಮ್ಮನೆ ಹಾದು ಹೋದವು. ಸಾಮಾನ್ಯವಾಗಿ ಯಾರೂ ಪತ್ರಿಕೆಯನ್ನು ಆರಂಭಿಸಿ ಎಂಬ ಉಪದೇಶ ಕೊಡುವುದಿಲ್ಲ. ಅದರಲ್ಲೂ ಒಬ್ಬ ಪತ್ರಕರ್ತನಿಗೆ ಯಾರೂ ಅಂಥ ಮಾತುಗಳನ್ನು ಹೇಳಲಾರರು. 'ನೀನು ಹಣ ಹೂಡುತ್ತೀಯ?' ಎಂದು ಕೇಳಬಹುದು ಎಂಬ ಭಯವೂ ಇದ್ದಿರಬಹುದು. ಯಾರನ್ನಾದರೂ ನಮ್ಮ ಸಲಹೆ ಅಥವಾ ಉಪದೇಶಗಳಿಂದ ಹಾಳು ಮಾಡಬೇಕು ಎಂಬ ಮನಸ್ಸಿದ್ದರೆ ಅಂಥವರಿಗೆ ಪತ್ರಿಕೆಯನ್ನು ಆರಂಭಿಸು ಎಂದು ಹೇಳಬೇಕಂತೆ. ಕಾರಣ ಪತ್ರಿಕೆಯನ್ನು ಆರಂಭಿಸಿ, ಉದ್ಧಾರವಾದವರು ಕಮ್ಮಿ. ನಷ್ಟ ಅನುಭವಿಸುವುದು ನಿಶ್ಚಿತವಾಗಿದ್ದರಿಂದ ಅಂಥ ಉಪದೇಶವನ್ನು ಧಾರಾಳವಾಗಿ ಕೊಡುತ್ತಾರೆ. ನೂರರಲ್ಲಿ ಒಬ್ಬನೋ, ಇಬ್ಬರೋ ಉದ್ಧಾರವಾಗಿರಬಹುದು. ಅದರಲ್ಲೂ ಒಬ್ಬನನ್ನು ಸಂಪೂರ್ಣ ಹಳ್ಳಕ್ಕೆ ಕೆಡವಲೇಬೇಕು ಎಂದು ನಿರ್ಧರಿಸಿದರೆ, ಅಂಥವನಿಗೆ 'ಪತ್ರಿಕೆಯನ್ನು ಆರಂಭಿಸು ಮತ್ತು ಜತೆಯಲ್ಲಿ ಟ್ರಕ್ ಬಿಜಿನೆಸ್ ನ್ನು ಮಾಡು' ಎಂದು ಹೇಳಬೇಕಂತೆ. ಈ ಪೈಕಿ ಒಂದನ್ನೇ ಮಾಡಿ ಬಚಾವ್ ಆದವರು, ಉದ್ಧಾರ ಆದವರು ಇಲ್ಲ. ಹೀಗಿರುವಾಗ ಎರಡನ್ನೂ ಮಾಡಿ ಉದ್ಧಾರವಾಗುವುದುಂಟೇ? ಸಾಧ್ಯವೇ ಇಲ್ಲ. ಆತ ಪಡ್ಚಾ!

ಆದರೆ ದೇಶದಲ್ಲಿಯೇ (ಜಗತ್ತಿನಲ್ಲಿಯೇ?) ಇವೆರಡನ್ನೂ ಮಾಡಿ ಜಯಿಸಿದ ಏಕಮೇವ ವ್ಯಕ್ತಿ ಅಂದ್ರೆ, ಅದು ವಿಜಯ ಸಂಕೇಶ್ವರ! ಅವರು ಟ್ರಕ್ ಮಾಲೀಕರಾಗಿ ಮತ್ತು ಪತ್ರಿಕಾ ಮಾಲೀಕರಾಗಿ ಗೆದ್ದರು. ಒಂದು ಕಾಲಿಗೆ ಕಲ್ಲು ಕಟ್ಟಿಕೊಂಡು ನೀರಿಗೆ ಜಿಗಿದರೆ ಬಚಾವಾಗಿ ಬರುವುದು ಕಷ್ಟ. ಅವರು ಎರಡೂ ಕಾಲಿಗೆ ಚಪ್ಪಡಿಕಲ್ಲು ಕಟ್ಟಿಕೊಂಡು ಸಮುದ್ರಕ್ಕೆ ಜಿಗಿದವರು. ಈಜಿ ಸುರಕ್ಷಿತವಾಗಿ ದಡ ಸೇರಿದವರು. ಅವರು ಒಂದು ಅಪವಾದ, ಬಿಡಿ. ಸಂಕೇಶ್ವರರ ನಿಯಮವನ್ನು ಬೇರೆ ಯಾರಿಗೂ ಅನ್ವಯಿಸಲು ಸಾಧ್ಯವಿಲ್ಲ. ಅದನ್ನು ಥಿಯರಿಯಾಗಿ ಅಭ್ಯಸಿಸಬೇಕೇ ಹೊರತು, ಜಾರಿಗೆ ತರುವ ಉಸಾಬರಿಗೆ ಹೋಗಬಾರದು. ಶಿವಾಜಿ ಪಕ್ಕದ ಮನೆಯಲ್ಲಿ ಹುಟ್ಟಿದರೇ ಒಳ್ಳೆಯದಂತೆ. ನಮ್ಮ ಮನೆಯಲ್ಲಿ ಹುಟ್ಟಿದರೆ ಯುದ್ಧಕ್ಕೆ ಕಳಿಸಬೇಕಾಗುತ್ತದೆ. ಅದೇ ರೀತಿ, ಸಂಕೇಶ್ವರರ ಉದಾಹರಣೆಯನ್ನು ಪಠ್ಯ-ಪುಸ್ತಕಗಳಲ್ಲಿ ಓದಲು, ಭಾಷಣಗಳಲ್ಲಿ ಕೇಳಲು ಚೆಂದ. ಆದರೆ ಅದನ್ನು ಜಾರಿಗೊಳಿಸುವುದು ಅಸಾಧ್ಯ.

ಹಾಗೆಯೇ ಯಾರಾದರೂ, 'ನೀವು ಬಹಳ ಚೆಂದವಾಗಿ ಬರೆಯುತ್ತೀರಿ, ಪತ್ರಿಕೆಯನ್ನು ಬಹಳ ಸುಂದರವಾಗಿ ತರುತ್ತೀರಿ' ಎಂದು ಹೇಳಿದರೆ, ಕೇಳಿ ಸುಮ್ಮನಾಗಬೇಕು. ಹೆಚ್ಚೆಂದರೆ, ಆ ದಿನ ಒಂದು ಪೆಗ್ ಜಾಸ್ತಿ ಹೀರಿ, ತೆಪ್ಪಗೆ ಮಲಗಿ, ಬೆಳಗಾಗುತ್ತಿದ್ದಂತೆ ಹಿಂದಿನ ದಿನ ನಿಮ್ಮ ಬಗ್ಗೆ ಹೇಳಿದ ಹೊಗಳಿಕೆಯ ಮಾತುಗಳನ್ನು ಮರೆತು ಬಿಡುವುದು ಜಾಣತನ. ಆದರೆ ಅಷ್ಟಕ್ಕೇ ಪತ್ರಿಕೆ ಆರಂಭಿಸಲು ಹೋಗಬಾರದು. ಅದು ಒಂಥರಾ, 'ನೀನು ವಿಮಾನವನ್ನು ಚೆನ್ನಾಗಿ ಹಾರಿಸುತ್ತೀಯಾ' ಎಂದು ಹೇಳಿದ ಮಾತ್ರಕ್ಕೆ ವಿಮಾನವನ್ನು ಖರೀದಿಸಲು ಮುಂದಾದ ಪೈಲಟ್ ನ ಕಥೆ ಥರ ಆಗಬಹುದು. ಕೆಲವರ ಮಾತುಗಳನ್ನು ಕೇಳಲಷ್ಟೇ ಹಿತವಾಗಿರುತ್ತವೆ. ಆದರೆ ಅದೇ ನಿಜ ಎಂದು ಭಾವಿಸಬಾರದು. 'ಯಾರಾದರೂ ನೀವು ವಿಪರೀತ ಖಾರ ತಿನ್ನುತ್ತೀರಿ, ನಿಮಗೆ ಅದು ಬಹಳ ಇಷ್ಟ ಅಂತ ತೋರುತ್ತದೆ' ಎಂದು ಹೇಳಿದರೆ, ಕೇಳಿ ಸುಮ್ಮನಾಗಬೇಕೇ ಹೊರತು, ಮತ್ತಷ್ಟು ಖಾರ ಹಾಕಿಸಿದ ಪದಾರ್ಥ ತಿಂದು, ನವರಂಧ್ರಗಳಲ್ಲಿ ನೀರು ಸುರಿಯುವಂಥ ಪರಿಸ್ಥಿತಿಯನ್ನು ತಂದುಕೊಳ್ಳಬಾರದು.

ಆದರೆ ನಾನು ಆ ಪೈಲಟ್ ಥರ, ಮತ್ತಷ್ಟು ಖಾರ ತಿಂದವನ ಥರ, ನನ್ನ ಕೈಯಾರೆ ಅಂಥ ಪರಿಸ್ಥಿತಿಯನ್ನು ತಂದುಕೊಂಡಿದ್ದೆ. ಪತ್ರಿಕೆ ಸಂಪಾದಕನಾಗುವುದೇ ಬೇರೆ, ಪತ್ರಿಕೆಯ ಮಾಲೀಕನಾಗುವುದೇ ಬೇರೆ. ಅವೆರಡೂ ಬೇರೆ ಬೇರೆ ಗುಣಧರ್ಮ, ಸ್ವಭಾವವನ್ನು ಅಪೇಕ್ಷಿಸುತ್ತದೆ. ಮಾಲೀಕ ಎಂದೂ ಸಂಪಾದಕನಂತೆ ಯೋಚಿಸುವುದಿಲ್ಲ. ಸಂಪಾದಕ ಎಂದೂ ಮಾಲೀಕನಂತೆ ವರ್ತಿಸುವುದಿಲ್ಲ ಮತ್ತು ವರ್ತಿಸಬಾರದು. ಸಂಪಾದಕನಾದವನು ಸಂಪಾದಕನಾಗಿದ್ದರೆ ಚೆಂದ. ಉತ್ತಮ ಸಂಪಾದಕ ಉತ್ತಮ ಮಾಲೀಕನಾಗಲಾರ. ಮೂಲತಃ ಅವೆರಡೂ ವಿಭಿನ್ನ ಮನಸ್ಥಿತಿ. ಹತ್ತು ವರ್ಷಗಳ ಹಿಂದೆ, ನಾನು ದ್ವಿಪಾತ್ರದಲ್ಲಿ ನಟಿಸಲು ಬಣ್ಣ ಹಚ್ಚಿಕೊಂಡಾಗ, ನಾನು ಅದೆಂಥ ಚಪ್ಪಡಿಕಲ್ಲನ್ನು ನನ್ನ ಮೇಲೆ ಎಳೆದುಕೊಳ್ಳಲು ಹೊರಟಿದ್ದೆ ಎಂಬುದು ನನ್ನ ಯೋಚನೆಯ ಪಲುಕಿಗೆ ಸಿಕ್ಕಿರಲಿಲ್ಲ. ಈಜು ಬರುವುದೆಂದು ಎರಡೂ ಕಾಲಿಗೆ ಕಲ್ಲು ಕಟ್ಟಿಕೊಂಡು ಸುಮ್ಮನೆ ನೀರಿಗೆ ಜಿಗಿದಿದ್ದೆ. ಕಾಲು ಬಡಿಯಲು ಸಾಧ್ಯವಾಗುತ್ತಾ ಎಂಬುದರ ಸಣ್ಣ ಪರಿವೆಯೇ ಇಲ್ಲದೆ.

ಯಾವುದೇ ಪತ್ರಿಕೆ ಇರಲಿ, ಅದು ವಿಪರೀತ ಬಂಡವಾಳವನ್ನು ಅಪೇಕ್ಷಿಸುತ್ತದೆ. ಮೊದಲ ಎರಡು-ಮೂರು ವರ್ಷಗಳ ಕಾಲ ಹಣ ಸುರಿಯುತ್ತಲೇ ಇರಬೇಕು. ನಂತರ ಹಣ ವಾಪಸ್ ಬರಲಾರಂಭಿಸುತ್ತದೆ, ಹನಿ ಹನಿಯಾಗಿ. ಅಷ್ಟರಲ್ಲಿ ಹಣ ಸುರಿದವ ಅಸ್ಥಿಪಂಜರದಂತೆ ನಿತ್ರಾಣನಾಗಿರುತ್ತಾನೆ. ಕೇವಲ ಮೂರು-ನಾಲ್ಕು ತಿಂಗಳಿಗೆ ಕೈಯೆತ್ತಿ ಬಿಡುವಷ್ಟು ನಿರಾಸೆ, ಹತಾಶೆ ಹಾಗೂ ಹಣಕಾಸಿನ ಜಂಜಾಟಗಳು ಬಂಡವಾಳ ತೊಡಗಿಸಿದವನನ್ನು ಹೈರಾಣ ಮಾಡಿಬಿಡುತ್ತವೆ. ಈ ಜಗತ್ತಿನಲ್ಲಿ ಉತ್ಪಾದನಾ ವೆಚ್ಚಕ್ಕಿಂತ ಮೂರ್ನಾಲ್ಕು ಪಟ್ಟು ಕಡಿಮೆ ಬೆಲೆಗೆ ಮಾರಾಟವಾಗುವ ಯಾವುದಾದರೂ ವಸ್ತುವಿದ್ದರೆ ಪತ್ರಿಕೆಯೊಂದೇ. ಉಳಿದ ಎಲ್ಲ ವಸ್ತುಗಳು ಉತ್ಪಾದನಾ ವೆಚ್ಚಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತವೆ.

ಉದಾಹರಣೆಗೆ, ಆಪಲ್ ಫೋನ್ ತಗೊಳ್ಳೋಣ. ಒಂದು ಐಫೋನನ್ನು ಉತ್ಪಾದಿಸಲು ಹೆಚ್ಚೆಂದರೆ 15 ರಿಂದ 20 ಸಾವಿರ ರುಪಾಯಿ ತಗುಲಬಹುದು. ಆದರೆ ಅದನ್ನು ಮಾರಾಟ ಮಾಡುವುದು ಒಂದು ಮುಕ್ಕಾಲು ಲಕ್ಷ ರುಪಾಯಿಗೆ. ಅಂದರೆ ಅದನ್ನು ಉತ್ಪಾದಿಸಲು ವೆಚ್ಚವಾಗುವ ಹಣಕ್ಕಿಂತ ಎಂಟು ಪಟ್ಟು ಜಾಸ್ತಿ ಬೆಲೆಗೆ ಅದನ್ನು ಮಾರಾಟ ಮಾಡಲಾಗುತ್ತದೆ. ಇದು ಪತ್ರಿಕೆ ವಿಷಯದಲ್ಲಿ ಸರಿ ಉಲ್ಟಾ. ಒಂದು ಪತ್ರಿಕೆಯನ್ನು ಸಿದ್ಧಪಡಿಸಿ, ಮುದ್ರಿಸಿ, ಓದುಗರ ಮನೆ ಬಾಗಿಲಿಗೆ ತಲುಪಿಸಲು ಕನಿಷ್ಠ 15 ರುಪಾಯಿ ಖರ್ಚಾಗುತ್ತದೆ. ಆದರೆ ಪತ್ರಿಕೆಯ ಮುಖಬೆಲೆ ಕೇವಲ ಐದು ರುಪಾಯಿ. ಪತ್ರಿಕೆಯನ್ನು ವಿತರಿಸುವ ಏಜೆಂಟ್‌ಗೆ ಮೂರು ರುಪಾಯಿ ಕಮಿಷನ್ ಕೊಟ್ಟರೆ ಮಿಕ್ಕುವುದು ಬರೀ ಎರಡು ರುಪಾಯಿ ಮಾತ್ರ. ಅಂದರೆ ಪತ್ರಿಕಾ ಮಾಲೀಕ ತನ್ನ ಜೇಬಿನಿಂದ 12 ರುಪಾಯಿ ನಷ್ಟ ಮಾಡಿಕೊಂಡು, ಒಂದು ಪತ್ರಿಕೆಯನ್ನು ಓದಿಸುತ್ತಾನೆ. ಈ ನಷ್ಟವನ್ನು ಭರಿಸುವುದಕ್ಕೆ ಇರುವ ಏಕ ಮಾತ್ರ ಮಾರ್ಗವೆಂದರೆ ಜಾಹೀರಾತು.

ಅದು ಒಂಥರಾ ಬಸ್ಸಿನ ಸೀಟುಗಳಿದ್ದಂತೆ. ಬಸ್ಸಿನ ಮೂರ್ನಾಲ್ಕು ಸೀಟು ಭರ್ತಿಯಾದರೂ ಓಡಿಸಬೇಕು, ಎಲ್ಲ ಸೀಟು ಖಾಲಿಯಿದ್ದರೂ ಓಡಿಸಬೇಕು. ಈ ಮಾತು ಜಾಹೀರಾತಿಗೂ ಅನ್ವಯ. ಒಂದು ಅಂಗುಲ ಜಾಹೀರಾತು ಇಲ್ಲದಿದ್ದರೂ ಪತ್ರಿಕೆಯನ್ನು ಮುದ್ರಿಸಲೇಬೇಕು. ಪತ್ರಿಕೆ ನಡೆಸುವುದು ಅಂಥ ಕಠಿಣ ಸವಾಲಿನ, ತಲೆ ಕೆಟ್ಟವರು ಮಾತ್ರ ಮಾಡಬಹುದಾದ, ಮಹಾ ಪಿರ್ಕಿಸ್ ದಂಧೆ. ಒಳ್ಳೆಯ ಪತ್ರಿಕೆಯನ್ನು ಮಾಡುವುದು ಕಷ್ಟವಲ್ಲ, ಆದರೆ ವ್ಯಾವಹಾರಿಕವಾಗಿ ಒಳ್ಳೆಯ ಪತ್ರಿಕೆ ಮಾಡುವುದು ಭಲೇ ಕಷ್ಟ. ಹೆಚ್ಚು ಹೆಚ್ಚು ಮಾರಾಟವಾದರೆ ಹೆಚ್ಚು ಹೆಚ್ಚು ಲಾಭ ಎಂಬುದು ಯಾವುದೇ ವ್ಯಾಪಾರ-ವಹಿವಾಟಿನ ಸಾರ್ವತ್ರಿಕ ನಂಬಿಕೆ. ಆದರೆ ಈ ನಿಯಮ ಪತ್ರಿಕೆ ಅನ್ವಯಿಸುವುದಿಲ್ಲ. ಹೆಚ್ಚು ಹೆಚ್ಚು ಮಾರಾಟವಾದಷ್ಟೂ ಹೆಚ್ಚು ಹೆಚ್ಚು ನಷ್ಟವಾಗುವುದು ಪತ್ರಿಕೆ ಮಾರಾಟದಲ್ಲಿ ಮಾತ್ರ. ಅಂದರೆ ವ್ಯಾಪಾರ-ವಾಣಿಜ್ಯ ಜಗತ್ತಿನ ಯಾವ ನಿಯಮ, ನಂಬಿಕೆ, ಪಟ್ಟುಗಳು ಕೆಲಸಕ್ಕೆ ಬರದಿರುವುದು ಪತ್ರಿಕೋದ್ಯಮದಲ್ಲಿ ಮಾತ್ರ.

ಇವೆಲ್ಲ ಗೊತ್ತಿದ್ದು ಗೊತ್ತಿದ್ದೂ ನಾನು 'ವಿಶ್ವವಾಣಿ'ಯನ್ನು ರಾಜ್ಯಮಟ್ಟದಲ್ಲಿ ಏಕಾಂಗಿಯಾಗಿ ಆರಂಭಿಸಿದ್ದು, ಅದನ್ನು ಮುನ್ನಡೆಸಲು ಹೆಣಗಿದ್ದು, ಈ ವ್ಯವಹಾರವೇ ಸಾಕು ಎಂದು ನಿರ್ಧರಿಸಿದ್ದು, ನಗುವವರ ಮುಂದೆ ಎಡವಿಬಿದ್ದಂತೆ ಎಲ್ಲರ ಟೀಕೆ-ಮೂದಲಿಕೆಯನ್ನು ಸಹಿಸಿಕೊಂಡಿದ್ದು, ಯಾವ ಕಾರಣಕ್ಕೂ ಸೋತೆ ಎನ್ನಬಾರದು ಎಂದು ಎದ್ದು ಕುಳಿತು ಮತ್ತೆ ಸಜ್ಜಾಗಿದ್ದು, ಪ್ರತಿ ಸಲ ಬಿದ್ದಾಗಲೂ ಕೊಡವಿ ಎದ್ದು ನಿಂತಿದ್ದು, ನಂತರ ಪತ್ರಿಕೆಯನ್ನು ತನ್ನ ಕಾಲ ಮೇಲೆ ನಿಲ್ಲುವಂತೆ ಲಾಭದಾಯಕ ವ್ಯವಹಾರವಾಗಿ ಪರಿವರ್ತಿಸಿದ್ದು, ಒಂದು ದೊಡ್ಡ ಯಶೋಗಾಥೆ. ಹಿಂತಿರುಗಿ ನೋಡಿದರೆ ಇವೆಲ್ಲ ಹೇಗೆ ಸಾಧ್ಯವಾಯಿತು ಎಂದು ನನಗೆ ವಿಸ್ಮಯವಾಗುವುದುಂಟು. ಅದಾದ ಬಳಿಕ, ನಲವತ್ತೆರಡು ವರ್ಷಗಳ 'ಲೋಕಧ್ವನಿ' ಪತ್ರಿಕೆಗೆ ಕೈ ಹಾಕಿದ್ದು, ನಂತರ ವಿಶ್ವವಾಣಿ ಟಿವಿ ಚಾನೆಲ್, ವಿಶ್ವವಾಣಿ ಪುಸ್ತಕ ಪ್ರಕಾಶನ, ವಿಶ್ವವಾಣಿ ವಿದ್ಯಾಪೀಠ, ವಿಶ್ವವಾಣಿ ಗ್ಲೋಬಲ್ ಫೋರಂ ಹಾಗೂ ಮೊನ್ನೆ ಮೊನ್ನೆ 'ಪ್ರವಾಸಿ ಪ್ರಪಂಚ'.. ಹೀಗೆ ಬೆಕ್ಕು ಮರಿ ಹಾಕಿದಂತೆ ಸಂಸಾರ ದೊಡ್ಡದಾಗುತ್ತಾ ಹೋಗುತ್ತಿದೆ. ಕರ್ನಾಟಕದಲ್ಲಿ ಬಹುತೇಕ ಎಲ್ಲ ರಾಜ್ಯಮಟ್ಟದ ಪತ್ರಿಕೆಗಳನ್ನು ಉದ್ಯಮಪತಿಗಳು, ಬಂಡವಾಳದಾರರು, ಕೈಗಾರಿಕೋದ್ಯಮಿಗಳು, ದತ್ತಿ ಸಂಸ್ಥೆಗಳು ನಡೆಸುತ್ತಿವೆ. ಆದರೆ 'ಬರೆಯುವ ಪತ್ರಕರ್ತ'ನೊಬ್ಬ ನಡೆಸುತ್ತಿರುವ ರಾಜ್ಯಮಟ್ಟದ ಪತ್ರಿಕೆಯೊಂದಿದ್ದರೆ ಅದು 'ವಿಶ್ವವಾಣಿ' ಮಾತ್ರ!

ಅದೇ ಪತ್ರಕರ್ತನ ಮತ್ತೊಂದು ಸಾಹಸವೇ 'ಪ್ರವಾಸಿ ಪ್ರಪಂಚ'. ನಿಮ್ಮ ಆಶೀರ್ವಾದ ನನ್ನ ಮೇಲಿರಲಿ. ಅಕ್ಷರದ ಮೇಲಾಣೆ, ನೀವು ಕೊಡುವ ಕಾಸಿಗೆ ಮೋಸ ಮಾಡುವುದಿಲ್ಲ. ಕೈ ಸವೆದು ಹೋಗುವ ತನಕ ಬರೆಯುತ್ತೇನೆ. ಪ್ರಾಮಿಸ್!

ಕುಂಟು ಕುದುರೆಗೆ ಕಡಲೆಕಾಳು ತಿನ್ನಿಸುತ್ತಿರೋದು ಯಾರು?

ಕಾಂಗ್ರೆಸ್ ಪಕ್ಷದಲ್ಲಿ ಓಟದ ಕುದುರೆಯ ಲಗಾಮು ಯಾರು ಎಳೆಯುತ್ತಿದ್ದಾರೆ? ಮದುವೆಯ ಕುದುರೆಗಳು ಯಾರ ಆದೇಶಕ್ಕೆ ತಕ್ಕಂತೆ ಕುಣಿಯುತ್ತಿವೆ? ಕುದುರೆ ಯಾವುದಾದರೂ ಇರಲಿ, ಅದರ ಒದೆ ಮಾತ್ರ ಭಯಾನಕವಾಗಿರುತ್ತದೆ. ಮದುವೆಯ ಕುದುರೆ ತಾನೇ ಓಟದ ಕುದುರೆ ಎಂದು ಕನಸು ಕಾಣುತ್ತಾ ಒದೆಯತೊಡಗಿದರೆ ಏನು ಮಾಡುವುದು?

ಸಂಗತ
ಡಾ.ವಿಜಯ್ ದರಡಾ
vveditoped@gmail.com

ಕತ್ತೆಗಳು ಗುಲಾಬ್ ಜಾಮೂನ್ ಮೆಲ್ಲುತ್ತಾ ಔತಣ ಮಾಡುತ್ತಿವೆ! ಎಂಬ ಹಳೆಯ ಮಾತೊಂದಿದೆ. ಯಾರು ಈ ಅದ್ಭುತ ಸಾಲು ಬರೆದವರೋ ನನಗೆ ಗೊತ್ತಿಲ್ಲ. ಏಕೆ, ಯಾವಾಗ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಕತ್ತೆಗಳು ಏಕೆ ಗುಲಾಬ್ ಜಾಮೂನನ್ನೇ ಮೆಲ್ಲುತ್ತಿವೆ ಎಂಬುದೂ ಗೊತ್ತಿಲ್ಲ. ಇಷ್ಟಕ್ಕೂ ಒಂದು ಕತ್ತೆ ಎಷ್ಟು ಗುಲಾಬ್ ಜಾಮೂನ್‌ಗಳನ್ನು ತಿನ್ನಬಲ್ಲದು? ಏಕೆ ಕತ್ತೆ ಬೇರೆ ಸ್ವೀಟ್ ತಿನ್ನಬಾರದು? ಇಂತಹ ಪ್ರಶ್ನೆಗಳು ನಿಮ್ಮ ಮನಸ್ಸಿನಲ್ಲಿ ಏಳಬಹುದು. ಪ್ರಾಮಾಣಿಕವಾಗಿ ಹೇಳಬೇಕೆಂದರೆ ನನ್ನ ಮನಸ್ಸಿನಲ್ಲೂ ಇವೇ ಪ್ರಶ್ನೆಗಳು ಬಂದಿವೆ. ಆದರೆ ಇವುಗಳಿಗೆ ಉತ್ತರ ಹುಡುಕುವುದು ಬಹಳ ಕಷ್ಟ. ಹೀಗಾಗಿ ಸದ್ಯದ ಮಟ್ಟಿಗೆ ಕತ್ತೆಯ ಕತೆ ಇಲ್ಲಿಗೇ ಬಿಡೋಣ. ಅದರ ಬದಲು ಕುದುರೆಗಳ ಬಗ್ಗೆ ಮಾತಾಡೋಣ!

ಇತ್ತೀಚೆಗೆ ಒಂದು ಸುದ್ದಿ ಓದುತ್ತಿದ್ದಾಗ ಕತ್ತೆ ಗುಲಾಬ್ ಜಾಮೂನ್ ತಿನ್ನುವ ಸಂಗತಿ ನನ್ನ ತಲೆಗೆ ಬಂತು. ಭೋಪಾಲದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಪಕ್ಷದ ಹಿರಿಯ ನಾಯಕ ರಾಹುಲ್ ಗಾಂಧಿ ಮಾತನಾಡುವಾಗ ರೇಸ್ ಕುದುರೆಗಳು, ಮದುವೆಯಲ್ಲಿ ಬಳಸುವ ಕುದುರೆಗಳು ಮತ್ತು ಕುಂಟು ಕುದುರೆಗಳ ನಡುವಿನ ವ್ಯತ್ಯಾಸವನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದ ಸಮಯ ಬಂದಿದೆ ಎಂದು ಹೇಳಿದ್ದರು. ಅವರ ಪ್ರಕಾರ ಕುದುರೆಗಳಲ್ಲಿ ಮೂರು ವಿಧವಿದೆ. ಮದುವೆಯ ಕುದುರೆ, ಓಟದ ಕುದುರೆ ಮತ್ತು ಕುಂಟು ಕುದುರೆ. ಮದುವೆಯ ಕುದುರೆ ಮದುವೆಯಲ್ಲಿ ಮಾತ್ರ ಬಳಕೆಯಾಗುವಂತೆ, ರೇಸ್‌ನ ಕುದುರೆ ರೇಸ್‌ನಲ್ಲಿ ಪಾಲ್ಗೊಳ್ಳುವಂತೆ ಮತ್ತು ಕುಂಟು ಕುದುರೆ ನಿವೃತ್ತಿಯಾಗುವಂತೆ ನಾವು ನೋಡಿಕೊಳ್ಳಬೇಕಿದೆ ಎಂದು ಅವರು ಹೇಳಿದ್ದರು. ಕುಂಟು ಕುದುರೆಗಳು ಬೇರೆ ಕುದುರೆಗಳಿಗೆ ಅಡ್ಡ ಬರಬಾರದು. ಅಡ್ಡ ಬಂದರೆ ಅವುಗಳ ವಿರುದ್ಧ ಕಾಂಗ್ರೆಸ್ ಪಕ್ಷ ಕ್ರಮ ಕೈಗೊಳ್ಳಲಿದೆ ಎಂದೂ ಅವರು ಎಚ್ಚರಿಕೆ ನೀಡಿದ್ದರು. ನಿಜ ಹೇಳಬೇಕೆಂದರೆ, ರಾಹುಲ್ ಗಾಂಧಿ ನೀಡಿದ ಈ ಉದಾಹರಣೆಯನ್ನೂ, ಅವರ ಅದ್ಭುತ ಯೋಜನೆಯನ್ನೂ ನಾನು ತುಂಬಾ ಎಂಜಾಯ್ ಮಾಡಿದೆ. ಕನಿಷ್ಠ ಪಕ್ಷ ಕಾಂಗ್ರೆಸ್‌ನ ಲಾಯದಲ್ಲಿ ಕುಂಟು ಕುದುರೆಗಳೂ ಇವೆ ಎಂದು ಒಬ್ಬರಾದರೂ ಸಾರ್ವಜನಿಕವಾಗಿ ಒಪ್ಪಿಕೊಳ್ಳುವ ಧೈರ್ಯ ತೋರಿದ್ದಾರಲ್ಲ! ಅದನ್ನು ಮೆಚ್ಚಿಕೊಳ್ಳಬೇಕು.

ಈಗ ನನಗೆ ಇನ್ನೊಂದು ಮಾತು ನೆನಪಾಗುತ್ತಿದೆ. ಕೊಳದಲ್ಲಿ ವಾಸಿಸುವ ಮೊಸಳೆಯ ಜೊತೆ ನೀವು ಕುಸ್ತಿಯಾಡಿ ಗೆಲ್ಲಬಲ್ಲಿರಾ? ಈ ವಾಕ್ಯವನ್ನು ತುಂಬಾ ವಿಶ್ಲೇಷಣೆಗೆ ಒಳಪಡಿಸಿ ಏನೇನೋ ಅರ್ಥ ಕಲ್ಪಿಸಿಕೊಳ್ಳಬೇಡಿ. ಅತ್ತಿತ್ತ ಅಲೆದಾಡುವ ನನ್ನ ಮೆದುಳಿಗೆ ದಿಢೀರ್ ಹೊಳೆದ ಮಾತಿದು, ಅಷ್ಟೆ. ನೇರವಾಗಿ ಹೇಳಬೇಕೆಂದರೆ ಇದರ ಅರ್ಥ, ನೀವು ಮೊಸಳೆಗಳಿಂದ ತುಂಬಿದ ಕೊಳದಲ್ಲಿ ಈಜಲು ಹೋದರೆ ಬದುಕಿ ಬರಲು ಸಾಧ್ಯವೇ? ಮೊಸಳೆ ಜೊತೆಗೆ ಮನುಷ್ಯ ಯುದ್ಧ ಮಾಡಲು ಸಾಧ್ಯವೇ? ಇದನ್ನು ಇನ್ನೊಂದು ದೃಷ್ಟಿಯಿಂದಲೂ ನೋಡಬಹುದು. ರಾಹುಲ್ ಗಾಂಧಿಯವರು ಯಾರನ್ನು ಕುಂಟು ಕುದುರೆಯೆಂದು ಕರೆದಿದ್ದಾರೋ ಅವರಿಗೆ ಇನ್ನೂ ಒದೆಯುವ ಶಕ್ತಿ ಇದೆಯೇ? ಇದೆ ಅಂತಾದರೆ ಅವರು ಯಾರಿಗೆ ಒದೆಯುತ್ತಾರೆ? ಅವರ ಅಶ್ವ ಶಕ್ತಿ ರೇಸ್‌ನ ಕುದುರೆಗಿಂತ ಹೆಚ್ಚಿರಲು ಸಾಧ್ಯವಿದೆಯೇ? ವೈಜ್ಞಾನಿಕವಾಗಿ ನೋಡುವುದಾದರೆ, ಒಂದು ಆರೋಗ್ಯವಂತ ಕುದುರೆ 2000 ಪೌಂಡ್‌ನ ತಾಕತ್ತಿನಲ್ಲಿ ಒದೆಯಬಲ್ಲದು. ಅದು ಎಂಥಾ ತೀವ್ರತರ ಒದೆತವೆಂದರೆ, ಒದೆ ತಿಂದವರ ಮೂಳೆ ಮುರಿದೇ ಹೋಗುತ್ತದೆ. ಅಥವಾ ವ್ಯಕ್ತಿಗೆ ಹೃದಯಾಘಾತವಾಗಬಹುದು. ಅದೃಷ್ಟ ಕೆಟ್ಟಿದ್ದರೆ ಅಂತಹ ಒದೆ ತಿಂದ ವ್ಯಕ್ತಿ ಸಾಯಲೂಬಹುದು. ಇಲ್ಲಿರುವ ಪ್ರಶ್ನೆಯೇನೆಂದರೆ, ಕುಂಟು ಕುದುರೆಗೆ ಓಡಲು ಸಾಧ್ಯವಿಲ್ಲದಿದ್ದರೂ ಅದು ಇನ್ನುಳಿದ ಓಟದ ಕುದುರೆಗಳಿಗೆ ಒದೆಯುವ ಶಕ್ತಿಯನ್ನು ಇನ್ನೂ ಹೊಂದಿರಬಹುದಲ್ಲ? ಪೂರ್ಣ ಪ್ರಮಾಣದಲ್ಲಿ ಒದೆಯಲು ಸಾಧ್ಯವಿಲ್ಲದಿದ್ದರೂ ಒಂದಷ್ಟು ಶಕ್ತಿಯನ್ನಾದರೂ ಹಾಕಿ ಆಘಾತ ನೀಡಬಹುದಲ್ಲ? ಇದನ್ನು ಬೇಕಾದರೆ ಚಮಕ್ ನೀಡುವ ಒದೆತವೆಂದು ಕರೆಯೋಣ! ಹೀಗೆ ಹೇಳುವಾಗ ನನಗೆ ಬಾಲ್ಯದ ಆಟೋಟಗಳು ನೆನಪಾಗುತ್ತವೆ. ಒಂದಷ್ಟು ಮಕ್ಕಳು ಓಟದ ಪಂದ್ಯದಲ್ಲಿ ಓಡುತ್ತಿರುವಾಗ ತುಂಟ ಹುಡುಗನೊಬ್ಬನಿಗೆ ತಾನು ಖಂಡಿತ ಗೆಲ್ಲುವುದಿಲ್ಲ ಎಂಬುದು ಖಾತ್ರಿಯಾದರೆ ಅಕ್ಕಪಕ್ಕ ಇರುವವರಿಗೆ ಅವನು ಅಡ್ಡಗಾಲು ಹಾಕುವುದಿಲ್ಲವೇ? ಆಗ ಸಹಜವಾಗಿಯೇ ವೇಗವಾಗಿ ಓಡುತ್ತಿರುವ ಮಗು ಮುಗ್ಗರಿಸಿ ಬೀಳುತ್ತದೆ. ತುಂಟ ಹುಡುಗನಿಗೆ ಗೆಲ್ಲುವ ಚಾನ್ಸ್ ಸಿಗುತ್ತದೆ. ಇಂತಹ ಕುಚೋದ್ಯಗಳನ್ನು ಬಾಲ್ಯದಲ್ಲಿ ನಾವೂ ಮಾಡಿದ್ದೇವೆ ಅಥವಾ ನೋಡಿದ್ದೇವೆ. ಕಾಂಗ್ರೆಸ್ ಪಕ್ಷದಲ್ಲಿ ಈಗ ಆಗುತ್ತಿರುವುದು ಕೂಡ ಇದೇ ಅಲ್ಲವೇ? ಪಕ್ಷದಲ್ಲಿರುವ ಕುಂಟು ಕುದುರೆಗಳು ನಿವೃತ್ತಿಯಾಗುವುದರ ಬದಲು ಓಟದ ಕುದುರೆಗಳಿಗೆ ಅಡ್ಡಗಾಲು ಹಾಕುತ್ತಿವೆ. ಓಟದ ಕುದುರೆಗಳನ್ನು ಗೌರವಿಸಿ, ಅವುಗಳ ಅಗತ್ಯವನ್ನು ಈಡೇರಿಸಿ, ಅವುಗಳ ಸಾಮರ್ಥ್ಯವನ್ನು ಸರಿಯಾಗಿ ಬಳಸಿಕೊಂಡಿದ್ದರೆ ಕಾಂಗ್ರೆಸ್ ಪಕ್ಷ ಚುನಾವಣೆಯ ರೇಸ್‌ನಲ್ಲಿ ಗೆಲ್ಲಲು ಸಾಧ್ಯವೇ ಇಲ್ಲ ಎಂಬ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಇದೇ ಪಕ್ಷ ಹಿಂದೆ ಭಾರತದ ಸ್ವಾತಂತ್ರ್ಯ ಚಳವಳಿಯನ್ನು ಮುನ್ನಡೆಸಿತ್ತು. ಆಗ ಈ ಪಕ್ಷದಲ್ಲಿದ್ದ ಪ್ರತಿಯೊಬ್ಬರೂ ಒಂದಲ್ಲಾ ಒಂದು ರೀತಿಯಲ್ಲಿ ರಣರಂಗಕ್ಕೆ ಧುಮುಕಿ ಕೆಚ್ಚೆದೆಯಿಂದ ಹೋರಾಡಿದ್ದರು. ಆದರೆ ಈಗೇನಾಗಿದೆ? ಬೇರೆ ಬೇರೆ ರಾಜ್ಯಗಳಲ್ಲಿ ಪಕ್ಷದ ಸ್ಥಿತಿ ಏನಾಗಿದೆ ನೋಡಿ. ಅಯ್ಯೋ ಅನ್ನಿಸುತ್ತದೆ. ಎಷ್ಟು ರಾಜ್ಯಗಳಲ್ಲಿ ದೊಡ್ಡ ಮಟ್ಟದ ಕಾಂಗ್ರೆಸ್ ನಾಯಕರಿದ್ದಾರೆ? ಇರುವ ಕೆಲವೇ ಕೆಲವು ದೊಡ್ಡ ನಾಯಕರಿಗೂ ಇನ್ನುಳಿದ ಕುಂಟು ಕುದುರೆಗಳು ಅಡ್ಡಗಾಲು ಹಾಕುತ್ತಿವೆ. ಹೀಗಾಗಿ ಅವರೂ ಮುಗ್ಗರಿಸುತ್ತಿದ್ದಾರೆ.

ಒಂದು ಮಾತು ಸ್ಪಷ್ಟವಾಗಿ ಹೇಳುತ್ತೇನೆ, ನಾನಿಲ್ಲಿ ಮದುವೆಯ ಮೆರವಣಿಗೆಯಲ್ಲಿ ಸಾಗುವ ಅಲಂಕಾರದ ಕುದುರೆ ಬಗ್ಗೆ ಮಾತೇ ಆಡುತ್ತಿಲ್ಲ. ನಾನು ಹೇಳುತ್ತಿರುವುದು ಕುಂಟು ಕುದುರೆಗಳ ಬಗ್ಗೆ ಮಾತ್ರ. ಹೀಗಾಗಿ ಸಹಜವಾಗಿಯೇ ಇಲ್ಲೊಂದು ಪ್ರಶ್ನೆ ಏಳುತ್ತದೆ. ಲಾಯದಲ್ಲಿ ಇತರ ಕುದುರೆಗಳಿಗಿಂತ ಕುಂಟು ಕುದರೆಗಳ ಸಂಖ್ಯೆಯೇ ಜಾಸ್ತಿಯಾದರೆ ಅವು ಇಡೀ ಲಾಯವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತವೆ. ಅದನ್ನು ತಪ್ಪಿಸುವುದು ಹೇಗೆ? ಇಲ್ಲಿ ನೋಡಿ. ನಾನು ರಾಹುಲ್ ಗಾಂಧಿಯವರಿಗೆ ಯಾವುದೇ ಸಲಹೆ ನೀಡುತ್ತಿಲ್ಲ.

ಆದರೆ ಒಂದು ಮಾತು ಹೇಳಬೇಕಿದೆ: ರಾಹುಲ್‌ಜೀ, ನಿಮ್ಮ ಲಾಯದಲ್ಲಿ ಕುಂಟು ಕುದುರೆಗಳೇ ತುಂಬಿ ತುಳುಕುತ್ತಿವೆ. ಅವುಗಳಿಂದ ಹೇಗೆ ಕಾಂಗ್ರೆಸ್ ಪಕ್ಷಕ್ಕೆ ಮುಕ್ತಿ ಕೊಡಿಸುತ್ತೀರಿ ಎಂಬುದೇ ನಿಮ್ಮ ಮುಂದಿರುವ ಸವಾಲು. ಇಲ್ಲವಾದರೆ ನಿಮ್ಮಲ್ಲಿರುವ ಓಟದ ಕುದುರೆಗಳೂ ಬೇರೆಡೆಗೆ ಓಡಿಹೋಗಬಹುದು! ಚೆನ್ನಾಗಿ ಓಡುವ ಕುದುರೆಗೆ ಎಲ್ಲೆಡೆಯಿಂದಲೂ ಸ್ವಾಗತ ಸಿಗುತ್ತದೆ.

ಕುಂಟು ಕುದುರೆಗಳು ಇನ್ನಿತರ ಓಟದ ಕುದುರೆಗಳಿಗೆ ಅಡ್ಡಿಯಾಗಬಾರದು, ಅಡ್ಡಿಯಾದರೆ ಅವರ ವಿರುದ್ಧ ಕಾಂಗ್ರೆಸ್ ಪಕ್ಷ ಕ್ರಮ ಕೈಗೊಳ್ಳಲಿದೆ ಎಂದು ರಾಹುಲ್ ಗಾಂಧಿಯವರು ಎಚ್ಚರಿಕೆ ನೀಡಿರುವುದು ಸರಿಯಾಗಿದೆ. ಆದರೆ ಏಕೆ ಬರೀ ಎಚ್ಚರಿಕೆ ನೀಡುತ್ತೀರಿ? ಕುಂಟು ಕುದುರೆಗಳನ್ನು ಈಗಾಗಲೇ ಗುರುತಿಸಿದ್ದರೆ ಏಕೆ ಅವುಗಳನ್ನು ಒದ್ದು ಹೊರಗೆ ಹಾಕುವುದಿಲ್ಲ? ಅದನ್ನು ಮಾಡುವುದಕ್ಕೆ ಒಳ್ಳೆಯ ಮುಹೂರ್ತ ಬರಲಿ ಎಂದು ಕಾಯುತ್ತಿದ್ದೀರಾ? ತಡ ಮಾಡಿದಷ್ಟೂ ಈ ಕುಂಟು ಕುದುರೆಗಳು ನಿಮ್ಮ ರೇಸ್‌ಗೆ ಹೆಚ್ಚು ಹಾನಿ ಮಾಡುತ್ತವೆ. ಮತ್ತೆ ನಾನಿಲ್ಲಿ ಉಪದೇಶ ಮಾಡುತ್ತಿದ್ದೇನೆ ಎಂದು ನಿಮಗೆ ಅನ್ನಿಸಬಹುದು! ರಾಹುಲ್ ಗಾಂಧಿ ಬುದ್ಧಿವಂತ ನಾಯಕ. ಕುಂಟು ಕುದುರೆಗಳಿಗೆ ಒಂದು ಗತಿ ಕಾಣಿಸಲು ಅವರಲ್ಲಿ ಏನಾದರೂ ಪ್ಲಾನ್ ಇದ್ದೇ ಇರುತ್ತದೆ. ನಾನು ಇನ್ನೊಂದು ಮಾತು ಹೇಳಬೇಕು. ಕಾಂಗ್ರೆಸ್‌ನಲ್ಲಿರುವ ಕುಂಟು ಕುದುರೆಗಳು ವಂಚಕ ಕುದುರೆಗಳೂ ಹೌದು. ಹೀಗಾಗಿ ಅವು ಅಷ್ಟು ಸುಲಭಕ್ಕೆ ತಮ್ಮ ಹಿಡಿತ ಬಿಟ್ಟುಕೊಡುವುದಿಲ್ಲ.

ಈಗ ಮದುವೆ ಮೆರವಣಿಗೆಯ ಬಾರಾತ್‌ನಲ್ಲಿ ಹೆಜ್ಜೆ ಹಾಕುವ ಕುದುರೆಗಳ ಬಗ್ಗೆ ಮಾತಾಡೋಣ. ಅವುಗಳಿಗೊಂದು ಗತಿ ಕಾಣಿಸದೆ ಈ ಕುದುರೆ ಪುರಾಣ ಮುಗಿಯುವುದಿಲ್ಲ! ಇವು ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಮಾಲಿಕನ ತಾಳಕ್ಕೆ ತಕ್ಕಂತೆ ಕುಣಿಯುವ ಅಲಂಕಾರದ ಕುದುರೆಗಳು. ಇವು ಮದುಮಗನನ್ನು ಮದುಮಗಳ ಮನೆಯ ಬಾಗಿಲಿಗೆ ದಿಬ್ಬಣದಲ್ಲಿ ಕೊಂಡೊಯ್ಯುತ್ತವೆ. ಈ ಕುದುರೆ ಇಲ್ಲದಿದ್ದರೆ ಮದುವೆಗೆ ಕಳೆಯೇ ಇರುವುದಿಲ್ಲ. ನೆನಪಿಡಿ, ಈ ಕುದುರೆಗೂ ಅದರದೇ ಆದ ಮೂಡ್ ಇರುತ್ತದೆ. ಕೆಣಕಿದರೆ ಅದೂ ಚೆನ್ನಾಗಿ ಒದೆಯುತ್ತದೆ. ಆದರೆ ಆ ಒದೆ ಅಕ್ಕಪಕ್ಕದಲ್ಲಿ ನಿಂತ ಜನಸಾಮಾನ್ಯರಿಗೆ ಬೀಳುತ್ತದೆಯೇ ಹೊರತು ಅದರ ಮಾಲಿಕನಿಗಲ್ಲ. ಅಲಂಕಾರಿಕ ಕುದುರೆಗಳು ಹಾಯಾಗಿ ಹುಲ್ಲು, ಹಿಂಡಿ ತಿನ್ನುತ್ತಾ, ಮಾಲಿಕ ಹೇಳಿದಂತೆ ಕೇಳಿಕೊಂಡು ಬದುಕು ನಡೆಸುತ್ತವೆ. ಸಾಮಾನ್ಯವಾಗಿ ಇವು ಮಾಲಿಕನಿಗೆ ಅಚ್ಚುಮೆಚ್ಚಿನ ಕುದುರೆಗಳಾಗಿರುತ್ತವೆ. ಆದರೆ ಒಮ್ಮೊಮ್ಮೆ ಕೆಲ ಕುದುರೆಗಳು ಬೇರೆಯವರ ಬಾರಾತ್‌ಗೂ ಹೋಗಿ ಕುಣಿಯುತ್ತವೆ. ಆಗ ಮೊದಲ ಮಾಲಿಕ ಸುಮ್ಮನೆ ನಿಂತು ಅಸಹಾಯಕನಾಗಿ ನೋಡುತ್ತಾನೆ! ಆದರೂ ರಾಹುಲ್ ಗಾಂಧಿ ಹೇಳಿದ್ದು ಸರಿಯಿದೆ: ಮದುವೆಯ ಕುದುರೆಗಳು ಮದುವೆಯಲ್ಲೇ ಇರಬೇಕು. ಆದರೆ ಅವುಗಳಲ್ಲಿ ಕೆಲ ಕುದುರೆಗಳು ಏನೇನೋ ಕನಸು ಕಾಣುತ್ತಾ, ಇನ್ನೇನೋ ಕಲ್ಪಿಸಿಕೊಳ್ಳುತ್ತಾ ನಾನೂ ಓಟದ ಕುದುರೆ ಎಂದು ಹೇಳಿಕೊಂಡು ತಿರುಗತೊಡಗಿದರೆ ಏನು ಮಾಡಬೇಕು?

ಕೊನೆಗೂ ನನ್ನ ಮನಸ್ಸಿನಲ್ಲಿ ಉಳಿಯುವ ಪ್ರಶ್ನೆ ಇದು: ಕಾಂಗ್ರೆಸ್ ಪಕ್ಷದಲ್ಲಿ ಓಟದ ಕುದುರೆಯ ಲಗಾಮು ಎಳೆಯುತ್ತಿರುವವರು ಯಾರು? ಕುಂಟು ಕುದುರೆಗೆ ಕಡಲೆಕಾಳು ತಿನ್ನಿಸುತ್ತಿರುವವರು ಯಾರು? ಮತ್ತು ಯಾರ ಆದೇಶದ ಮೇಲೆ ಮದುವೆಯ ಕುದುರೆಗಳು ಕುಣಿಯುತ್ತಿವೆ?

ಎಂಬಲ್ಲಿಗೆ ಕುದುರೆ ಪುರಾಣಂ ಸಂಪನ್ನಂ!

ಭಟ್ಟರ್ ಸ್ಕಾಚ್

- **ಸಂದೇಶ ಮಡಿವಾಳ, ಬೆಂಗಳೂರು**
ಭಟ್ರೇ, ರಾಜ್ಯದಲ್ಲಿ ಇಷ್ಟೆಲ್ಲ ಆಗುತ್ತಿದ್ದರೂ, ಬಿಜೆಪಿ ಏನು ಮಾಡುತ್ತಿದೆ?
– **ಪ್ರತಿಪಕ್ಷದ ನಾಯಕ ಅಶೋಕ್ ಅವರನ್ನು ಕೇಳಿದರೆ, ಅಡ್ಜಸ್ಟ್ ಮಾಡಿಕೊಳ್ಳೋಣ ಅಂದ್ರಂತೆ?**

- **ಕೋಮಲ ರಾಮಚಂದ್ರ, ಬಾಣಸವಾಡಿ**
ಭಟ್ರೇ, ಕಾಲ್ತುಳಿತ ಪ್ರಕರಣದಲ್ಲಿ ಒಂದು ವೇಳೆ ಸಿದ್ದರಾಮಯ್ಯ ಪ್ರತಿಪಕ್ಷದಲ್ಲಿ ಇದ್ದಿದ್ದರೆ?
– **ಮುಖ್ಯಮಂತ್ರಿ ರಾಜೀನಾಮೆ ಕೊಡುವಂತೆ ಮಾಡ್ತಾ ಇದ್ರು!**

- **ಸತೀಶ ಹೊನ್ನುವಂತ, ಮಂಡ್ಯ**
ಭಟ್ರೇ, ಸಾರ್ವಜನಿಕ ನೆನಪು ಕ್ಷಣಿಕ ಅಂತಾರಲ್ಲ?
– **ಹೂಂ.. ನಾಳೆ ಆರ್‌ಸಿಬಿ ಮ್ಯಾಚ್ ಆದ್ರೆ ಸ್ಟೇಡಿಯಂ ಫುಲ್!**

- **ನಾಗೇಂದ್ರ ಪಿ.ಪ್ರಸಾದ, ಪಿರಿಯಾಪಟ್ಟಣ**
ಭಟ್ರೇ, ಪ್ರತಿಪಕ್ಷದ ನಾಯಕ ಅಶೋಕ್ ಮಾತಾಡೋದು ಯಾವ ಭಾಷೆ?
– **ಕೆಲವರಿಗೆ ಕನ್ನಡದ ಥರ ಕೇಳಿಸುತ್ತದಂತೆ!**

- **ನೀಲೇಶ ಹಾಲಾಡಿ, ಕುಂದಾಪುರ**
ಭಟ್ರೇ, ರಾಜಕೀಯದಿಂದ ನಿವೃತ್ತರಾಗುವುದಾಗಿ ವೀರಪ್ಪ ಮೊಯಿಲಿ ಘೋಷಿಸಿದರೆ?
– **ನಂತರ ಪೂರ್ಣ ಅವಧಿಯನ್ನು ಮಹಾಕಾವ್ಯ ಬರೆಯಲು ಮೀಸಲಿಡದಿದ್ದರೆ ಅಭ್ಯಂತರವಿಲ್ಲ!**

- **ಪ್ರತಾಪ ಗೌಡ, ಹೆಗ್ಗಡದೇವನಕೋಟೆ**
ಭಟ್ರೇ, ಕಾರು ಬೇಡ, ಬೈಕ್ ಇರಲಿ ಅಂತಾಳಲ್ಲ?
– **ಅದು ಮದುವೆ ಆಗೋ ತನಕ ಹಾಗೆ, ನಂತರ ಕಾರೇ ಬೇಕು ಅಂತಾಳೆ!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಸಿದ್ದರಾಮಯ್ಯನವರು ಮೋದಿ ಸರ್ಕಾರಕ್ಕೆ ಸೊನ್ನೆ ಅಂಕ ಕೊಟ್ಟಿದ್ದಾರಲ್ಲ?
– **ಸೊನ್ನೆ ಹಿಂದೆ ಎಷ್ಟಾದರೂ ಬರಕೊಳ್ಳಲಿ ಅಂತ ಅಂದುಕೊಂಡಿದ್ದಾರಾ?!**

- **ತಿಟ್ಟೆ ಕೃಷ್ಣಮೂರ್ತಿ ಆಚಾರ್, ಸೋಸಲೆ**
ಭಟ್ರೇ, ಪ್ರಾಯದ ಹುಡುಗರು ಏಕಾದಶಿ ಉಪವಾಸ ಮಾಡಿಯೇ ಸಿದ್ಧ ಎಂದು ಹಠ ಹಿಡಿದು ಕುಳಿತರೆ ನೀವೇನಂತೀರಿ?
– **ಅದು ಪ್ರಾಯೋಪವಾಸ!**

- **ನಿಂಗರಾಜು ಆರ್., (ಇಮೇಲ್ ಮೂಲಕ)**
ಭಟ್ರೇ, ಕಾಲ್ತುಳಿತ ಪ್ರಕರಣದ ಪರಿಣಾಮವೇನು?
– **ಕರೋನಾ ಕಾಲ್ಕಿತ್ತಿದ್ದು!**

- **ರುಕ್ಕು, ಚಾಮರಾಜಪೇಟೆ**
ಭಟ್ರೇ, ಆಕೆ ಒಂದು ದಿನ ಸಹ ಮನೆಯಲ್ಲಿ ಕುಳಿತುಕೊಳ್ಳುವುದಿಲ್ಲವಲ್ಲ?
– **ತಿರುಗಿ ಕೆಟ್ಟವರಿಲ್ಲವೋ!**

ಓ ಹೆಣ್ಣೇ, ಗಂಡನನ್ನು ಏಕೆ ಕೊಂದೆ?

ಹೊಸ ತಲೆಮಾರು ಹಿಂಸೆಗೆ ಬಹಳ ಹತ್ತಿರವಾಗಿದೆ. ಕೆಲವು ಹಿಂಸೆಗಳು ಹಿಂಸೆಯೆಂದೇ ಇವರಿಗೆ ಅನ್ನಿಸದಂತೆ ಇಂಟರ್ನೆಟ್, ಫಿಲಂಗಳು, ವೆಬ್ ಶೋಗಳು, ಸೋಶಿಯಲ್ ಮೀಡಿಯಾ ಇವರನ್ನು ತರಬೇತುಗೊಳಿಸಿದೆ. ಮಕ್ಕಳು ಇಂಥ ಕಂಟೆಂಟ್‌ಗೆ ಮೊದಲಿಗಿಂತ ಹೆಚ್ಚು ತೆರೆದುಕೊಂಡಿದ್ದಾರೆ. ಹೆತ್ತವರು ಮಕ್ಕಳನ್ನು ಈ ವಿಷಯದಲ್ಲಿ ಸೂಕ್ಷ್ಮಜ್ಞರನ್ನಾಗಿ ಮಾಡಬೇಕು. ಹಿಂಸೆಯ ಲಕ್ಷಣಗಳು ಬಿಗಡಾಯಿಸುವ ಮೊದಲೇ ಚಿಕಿತ್ಸೆ ಕೊಡಿಸಬೇಕು.

ಕಾಡುದಾರಿ
ಹರೀಶ್ ಕೇರ
vveditoped@gmail.com

ಈ ವಾರದ ಟ್ರೆಂಡಿಂಗ್ ಸುದ್ದಿಗಳಲ್ಲಿ ಮೇಘಾಲಯದ 'ಹನಿಮೂನ್ ಮರ್ಡರ' ಒಂದು. ಬೆಂಗಳೂರು ಕಾಲ್ತುಳಿತದ ಸುದ್ದಿಯನ್ನೂ ಅದು ಒಳತಳ್ಳಿತು. ಹೆಂಡತಿಯನ್ನು ಕೊಲ್ಲುವ ಗಂಡನೂ ಹೊಸತಲ್ಲ. ಪತಿಯನ್ನು ಕೊಲ್ಲಿಸುವ ಪತ್ನಿಯೂ ಇತ್ತೀಚಿನದಲ್ಲ. ಆದರೂ ಅದು ಏಕೆ ರಾಷ್ಟ್ರೀಯ ಸುದ್ದಿಯಾಯಿತು ಎಂದರೆ ಹಲವು ಕಾರಣ. ಅದರಲ್ಲಿ ಅಡಗಿದ್ದ ನಿಗೂಢತೆ ಒಂದು. ಮದುವೆಯಾಗಿ ಇನ್ನೂ ತಿಂಗಳು ಸಹ ಆಗಿಲ್ಲ ಎಂಬುದು ಇನ್ನೊಂದು. ಚಾರಣಕ್ಕೆ ಹೋದ ಜೋಡಿಯನ್ನು ಯಾರೋ ಅಪಹರಿಸಿ ಗಂಡನನ್ನು ಕೊಂದು ಆಕೆಯನ್ನು ಅಪಹರಿಸಿರಬಹುದು ಎಂದು ಊಹಿಸಿದವರೇ ಹೆಚ್ಚು. ತಿರುವುಗಳಿರುವ ಪತ್ತೇದಾರಿ ಕತೆ ಯಾರಿಗೆ ತಾನೆ ಇಷ್ಟವಿಲ್ಲ? ಹಾಗೇ ಇದು ವಿಚಿತ್ರ ತಿರುವುಗಳನ್ನು ಪಡೆಯುತ್ತ ಹೋಯಿತು. ಒಂಟಿಯಾಗಿ ಸಿಕ್ಕಿದ ಗಂಡನ ಶವ. ಕಾಣೆಯಾದ ಪತ್ನಿ. ಕೊಲೆ ನಡೆದ ವಾರಗಳ ಬಳಿಕ ದಿಢೀರನೆ ಅಲ್ಲಿಂದ ಸಾವಿರಾರು ಕಿಮೀ ದೂರದಲ್ಲಿ ಪ್ರತ್ಯಕ್ಷಳಾಗುವ ಸುಂದರಿ. ಆಕೆ ಕ್ಷಣಕ್ಕೊಂದು ಕಟ್ಟುವ ಕತೆಗಳು. ಪತ್ನಿಯನ್ನು ಕೊಲ್ಲುವ ಪತಿ ನಮಗೇನೂ ಅಂಥ ಟಿಆರ್‌ಪಿ ಸರಕಲ್ಲ. ಆದರೆ ಬಾಯ್‌ಫ್ರೆಂಡ್ ಜೊತೆ ಸೇರಿ ಗಂಡನನ್ನು ಕೊಲ್ಲುವ ಚೆಲುವೆ? ಟಿಆರ್‌ಪಿ 'ಕಿತ್ಕೊಂಡ್ ಓಡುತ್ತೆ'. ಈಗ ಆಕೆ ಆರೋಪಿ, ಆ ಮಾತು ಬೇರೆ. ಸದ್ಯ ಆಕೆ ಅಪರಾಧಿ ಎಂದೇ ಗ್ರಹಿಸಿ ಮಾತಾಡೋಣ.

ಇತ್ತೀಚೆಗೆ ಹೀಗೆ ಗಂಡನನ್ನು ಕೊಲ್ಲಿಸಿದ ಹೆಂಡತಿಯ ಕೇಸ್ ಸೋನಂ- ರಘುವಂಶಿಯದಷ್ಟೆ ಅಲ್ಲ. ಮಾರ್ಚ್‌ನಲ್ಲಿ ಉತ್ತರ ಪ್ರದೇಶದ ನೌಕಾಧಿಕಾರಿಯೊಬ್ಬನ್ನು ಅವನ ಹೆಂಡತಿಯೂ ಆಕೆಯ ಗೆಳೆಯನೂ ಸೇರಿ ಕೊಂದು ಕತ್ತರಿಸಿ 15 ತುಂಡು ಮಾಡಿ ಡ್ರಂನಲ್ಲಿ ತುಂಬಿಸಿ ಕಾಂಕ್ರೀಟ್ ಮೆತ್ತಿದರು. ಕಾರ್ಕಳದ ಅಜೆಕಾರಿನಲ್ಲಿ ಬ್ಯೂಟಿಪಾರ್ಲರ್ ಮಾಲಕಿ ಗಂಡನಿಗೆ ಊಟದಲ್ಲಿ ಸ್ವಲ್ಪಸ್ವಲ್ಪವೇ ವಿಷವುಣಿಸಿ ಸಾಯಿಸಿದ ಆರೋಪ. ಕಾರಣ ಸೋಶಿಯಲ್ ಮೀಡಿಯಾದಲ್ಲಿ ಹುಟ್ಟಿಕೊಂಡ ಇನ್ನೊಬ್ಬನ ಪರಿಚಯ, ಗೆಳೆತನ, ಪ್ರೇಮ. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಬೆಂಗಳೂರಿನಿಂದ ಕಾರಿನಲ್ಲಿ ಹೋಗಿ ಕೊಡಗಿನ ಸುಂಟಿಕೊಪ್ಪದಲ್ಲಿ ಗಂಡನನ್ನು ಕೊಲ್ಲಿಸಿ ಪೆಟ್ರೋಲ್ ಸುರಿದು ಸುಟ್ಟುಹಾಕಿದ ಪತ್ನಿ. ಕಾರಣ ಇಬ್ಬಿಬ್ಬರು ಬಾಯ್‌ಫ್ರೆಂಡ್‌ಗಳು ಹಾಗೂ ಗಂಡನ ಆಸ್ತಿ. ಬಳ್ಳಾರಿಯಲ್ಲಿ ಪ್ರಿಯಕರನ ಜೊತೆ ಸೇರಿ ಗಂಡನಿಗೆ ನಿದ್ರೆ ಮಾತ್ರೆ ಕೊಟ್ಟು ದಿಂಬಿನಿಂದ ಉಸಿರುಗಟ್ಟಿಸಿ ಕೊಂದ ಮಹಿಳೆ. ಹೀಗೆ ಹೇಳುತ್ತಲೇ ಹೋಗಬಹುದು. ಇದೇನಾಗುತ್ತಿದೆ, ಯಾಕೆ ಹೆಣ್ಣುಮಕ್ಕಳು ತಮ್ಮ ಗಂಡಂದಿರನ್ನು ಹೀಗೆ ಕೊಲ್ಲುತ್ತಿದ್ದಾರೆ. ಬೇಡವೆಂದರೆ ಬಿಟ್ಟುಹೋಗಬಹುದಲ್ಲ. ಕೊಲ್ಲುವುದೇಕೆ ಎಂದು ನೀವು ಪ್ರಶ್ನಿಸುತ್ತೀರಿ ಎಂದು ನನಗೆ ಗೊತ್ತಿದೆ.

ಸ್ವಲ್ಪ ನಿಲ್ಲಿ. ಈಗ ಇನ್ನೊಂದು ಕಡೆಯ ಚಿತ್ರಣವನ್ನೂ ಸ್ವಲ್ಪ ನೋಡೋಣ. ಗೆಳತಿಗಾಗಿ ಹೆಂಡತಿಯನ್ನು ಕೊಂದವರ ಸಂಖ್ಯೆಯೇನೂ ಕಡಿಮೆ ಇಲ್ಲ. ತಾನು ವಿವಾಹದಾಚೆಗಿನ ಸಂಬಂಧ ಹೊಂದಿದ್ದು, ಅದನ್ನು ಪ್ರಶ್ನಿಸಿದ ಪತ್ನಿಯನ್ನು ಮುಗಿಸಿದ ಗಂಡಸರು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಈ ವಿಚಾರದಲ್ಲಿ ಇನ್ನೊಂದು ಆಯಾಮ ಇದೆ, ಅದು ಪತ್ನಿಯ ವಿವಾಹೇತರ ಸಂಬಂಧ ಮತ್ತು ಅದರಿಂದ ಕ್ರುದ್ಧನಾಗಿ ಆಕೆಯನ್ನು ಕೊಲ್ಲುವ ಗಂಡ. ಇದಕ್ಕೆ ಈ ವಾರದಲ್ಲಿಯೇ ನಡೆದ ಕೆಲವು ಘಟನೆಗಳ ಉದಾಹರಣೆ ಕೊಡಬಹುದು. ಆನೆಕಲ್‌ನಲ್ಲಿ ಇನ್ನೊಂದು ಸಂಬಂಧ ಹೊಂದಿದ್ದ ಪತ್ನಿಯ ತಲೆಯನ್ನು ಕತ್ತರಿಸಿ ಪೊಲೀಸ್ ಠಾಣೆಗೆ ತಂದನೊಬ್ಬ ಗಂಡ. ಇನ್ನು ಆಕೆ ಗಂಡನ ಜೊತೆ ಗಿದ್ದು ತನ್ನ ಕಡೆ ಗಮನ ಕೊಡುತ್ತಿಲ್ಲ ಎಂದು ರೇಗಿ ಪ್ರಿಯಕರನೇ ಪ್ರಿಯತಮೆಯನ್ನು ಹೋಟೆಲ್‌ಗೆ ಕರೆಸಿ ಇರಿದು ಕೊಂದ ಘಟನೆಯೂ ನಡೆದಿದೆ. ಪತ್ನಿಗೆ 'ಅನೈತಿಕ ಸಂಬಂಧ' ಇದೆ ಎಂದು ಅನುಮಾನಗೊಂಡು ಕ್ರೋಧತಪ್ತರಾಗಿ ಆಕೆಯನ್ನು ಕೊಲ್ಲುವ ಗಂಡಸರು ಬಹಳ ಸಂಖ್ಯೆಯಲ್ಲಿದ್ದಾರೆ, ಆಕೆಗೆ ಅದು ಇದೆಯೋ ಇಲ್ಲವೋ ಬೇರೆ ಮಾತು. ಆದರೆ ಇಂಥ ಗಂಡಸರ ಪ್ರಕರಣಗಳಲ್ಲಿ ಇಲ್ಲದ ರೋಚಕತೆ ಮಹಿಳೆಯರ ಅಪರಾಧಗಳಲ್ಲಿ ಹಣಕಿಹಾಕುತ್ತದೆ. ಯಾಕೆಂದು ನಿಮಗೇ ಗೊತ್ತಿದೆ.

ಈಗ ಸ್ವಲ್ಪ ಅಂಕಿ ಅಂಶಗಳನ್ನು ಗಮನಿಸೋಣ. ಇದು ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ ನೀಡಿದ 2022ರ ಸಾಲಿನ ವಿವರಗಳು. ಯಾಕೆಂದರೆ ಆ ಬಳಿಕದ ವರ್ಷಗಳ ಸಮಗ್ರ ಚಿತ್ರಣ ಇನ್ನೂ ದೊರೆತಿಲ್ಲ. ದೇಶದಲ್ಲಿ ನಡೆಯುವ ಕೊಲೆಗಳ ಮೂರನೇ ಪ್ರಮುಖ ಕಾರಣವೇ ಲವ್ ಅಫೇರ್. ಮೊದಲ ಹಾಗೂ ಎರಡನೇ ಕಾರಣಗಳು ಕ್ರಮವಾಗಿ ವಿವಾದ ಹಾಗೂ ವೈಯಕ್ತಿಕ ದ್ವೇಷ. ದೇಶದಲ್ಲಿ ನಡೆಯುವ ಹತ್ತು ಕೊಲೆಗಳಲ್ಲಿ ಒಂದರಲ್ಲಿ ಕೊಲೆಯಾದ ವ್ಯಕ್ತಿಯ ಲವರ್, ಗಂಡ ಅಥವಾ ಹೆಂಡತಿ ಮುಖ್ಯ ಪಾತ್ರ ವಹಿಸಿರುತ್ತಾರೆ. 2022ರಲ್ಲಿ ಭಾರತದಲ್ಲಿ ನಡೆದ 28522 ಕೊಲೆಗಳಲ್ಲಿ 2821ಕ್ಕೆ ಇಂಥ 'ಆಚೆ'ಯ ಸಂಬಂಧವೇ ಕಾರಣವಂತೆ. ಇದರಲ್ಲಿ ಪತ್ನಿಯರೂ, ಪತಿಯರೂ ಹೆಚ್ಚು ಕಡಿಮೆ ಸಮ ಸಂಖ್ಯೆಯಲ್ಲಿಯೇ ಇದ್ದಾರೆ. 220 ಗಂಡಸರು ಪತ್ನಿಯರಿಂದಲೂ, 270 ಸ್ತ್ರೀಯರು ಗಂಡನಿಂದಲೂ ಕೊಲೆಯಾಗಿದ್ದಾರಂತೆ. ಇನ್ನೂ ಬೇಕೆಂದರೆ ಆತ್ಮಹತ್ಯೆ ಕೇಸುಗಳನ್ನು ನೋಡಿ. ಅದೇ ವರ್ಷದ 17,924 ಸೂಸೈಡ್ ಪ್ರಕರಣಗಳಲ್ಲಿ 8,204ದಷ್ಟು, ಅಂದರೆ ಸರೀ ಅರ್ಧದಷ್ಟು, ವಿವಾಹಕ್ಕೆ ಸಂಬಂಧಿಸಿದ ತೊಡಕುಗಳಿಂದ ಆದವು.

ಎಲ್ಲಾ ಸರಿ. ವಿವಾಹದಾಚೆಯ ಸಂಬಂಧ ಎಂಬುದು ಅಪರಾಧದ ಪ್ರಮುಖ ಕಾರಣವಾಗುವತ್ತ ದಾಪುಗಾಲು ಹಾಕುತ್ತಿದೆ ಎಂಬುದರಲ್ಲಿ ಮಾತ್ರ ಸಂಶಯವಿಲ್ಲ. ಸದ್ಯ ಅಪರಾಧ ಮನೋತಜ್ಞರನ್ನು ಕಾಡುತ್ತಿರುವ ಸಂಗತಿ ಎಂದರೆ ಮಹಿಳೆಯರೇಕೆ ತಮಗೆ ಬೇಡವಾದ ಗಂಡನನ್ನು ಬಿಟ್ಟು ಹೋಗುವ ಬದಲು, ಇಷ್ಟೊಂದು ಸಂಖ್ಯೆಯಲ್ಲಿ ಭೂಮಿಯಿಂದಲೇ ತೊಡೆದುಹಾಕಲು ಮುಂದಾಗುತ್ತಾರೆ ಎಂಬುದು. ಈ ಪ್ರಶ್ನೆಯನ್ನು ಗಂಡಸರಿಗೆ ಅನ್ವಯಿಸಿದರೆ ಸುಲಭ ಉತ್ತರಗಳಿವೆ- ವಂಚಿತ ಭಾವದಿಂದ ಉಂಟಾದ ವ್ಯಗ್ರತೆ, ಅಧಿಕಾರದ ಸ್ಥಾಪನೆ. ಇನ್ನೊಂದು ಕಾರಣವೆಂದರೆ ಗಂಡಸು ಪತ್ನಿಯನ್ನು ಬಿಡಲು ಬಯಸಿದರೆ ಆತನ ಆಸ್ತಿಯ ಅರ್ಧ ಪಾಲು ಆಕೆಯೊಂದಿಗೇ ಹೋಗುತ್ತದೆ. ಅಪರಾಧ ಪ್ರವೃತ್ತಿಯ ಗಂಡು ಇದನ್ನು ಇಷ್ಟಪಡಲಾರ. ಆದರೆ ಮಹಿಳೆಯರ ವಿಷಯಕ್ಕೆ ಬಂದಾಗ ಇದಕ್ಕೆ ಉತ್ತರ ಹುಡುಕುವುದು ಜಟಿಲವಾಗುತ್ತದೆ. ಹಸೆಮಣೆಯಲ್ಲಿ ಕತ್ತು ಬಗ್ಗಿಸಿ ತಾಳಿ ಕಟ್ಟಿಸಿಕೊಳ್ಳುವ ಹೆಣ್ಣು, ಆ ಕ್ಷಣದಲ್ಲಿ ಸಂತೋಷವಾಗಿಯೇ ಇರುವಂತೆ ಕಾಣುವ ಆಕೆ, ಯಾಕೆ ಅವನ ಪಾಲಿಗೆ ಕೆಲವೇ ದಿನಗಳಲ್ಲಿ ಮೃತ್ಯು ದೇವತೆಯಾಗುತ್ತಾಳೆ?

ಇಲ್ಲಿಂದ ಮುಂದೆ ನಾನು ಹೇಳಲಿರುವ ಮಾತುಗಳೆಲ್ಲ ಈ ಅಪರಾಧ ಟ್ರೆಂಡ್‌ಗಳನ್ನು ಗಮನಿಸುತ್ತಿರುವ ಅಪರಾಧ ತಜ್ಞರು, ಮನಶ್ಶಾಸ್ತ್ರಜ್ಞರು ಹೇಳಿರುವ ಮಾತುಗಳು. ಮುಖ್ಯವಾಗಿ ಭಾರತದಲ್ಲಿ ಮದುವೆ ಎಂಬುದು ಬಹಳ ಒತ್ತಡದ ಒಂದು ವ್ಯವಸ್ಥೆ. ತನ್ನದೇ ಜಾತಿಯ, ಮತದ, ಅಂತಸ್ತಿನ, ಕುಟುಂಬದವರು ನೋಡಿದ ಗಂಡನ್ನೇ ಮದುವೆಯಾಗುವ ಪ್ರೆಶರ್. ಮದುವೆ ಮುಹೂರ್ತದ ಅಂತಿಮ ಕ್ಷಣದವರೆಗೂ ಈ ಮದುವೆ ತನಗೆ ಬೇಡವೆಂದು ರಚ್ಚೆ ಹಿಡಿದ ವಧು, ಕೊನೆಯ ಕ್ಷಣದಲ್ಲಿ



ಕುಟುಂಬದ ಮರ್ಯಾದೆ ಹೋಗುವುದು ಬೇಡವೆಂದು ತಾಳಿ ಕಟ್ಟಿಸಿಕೊಳ್ಳುತ್ತಾಳೆ. ಶಿಕ್ಷಿತರೂ ಇದಕ್ಕೆ ಹೊರತಲ್ಲ. ಡೈವೋರ್ಸ್ ಎಂಬುದು ಜಟಿಲ ಪ್ರಕ್ರಿಯೆ. ಜೊತೆಗೆ ವಿಚ್ಛೇದನ ಎಂಬುದು ಮಧ್ಯಮ ವರ್ಗದಲ್ಲಿ ಇಂದಿಗೂ ನಿಷೇಧಿತ, ಅಪವಿತ್ರ ಸಂಗತಿ. ಸಂಸಾರ ಎಂಬುದು ಉಸಿರು ಕಟ್ಟುವ ಅನೇಕ ಭಾರಗಳ ವಿಷಕಾರಿ ಮೊತ್ತ. ಮನಸ್ಸಿನ ದನಿಗೆ ಓಗೊಡುವ ಸಂಗಾತಿಗಳು ಎಷ್ಟು ಮಂದಿಗೆ ಸಿಗುತ್ತಾರೆ? ಹಾಗಿಲ್ಲದೆ ಹೋದಾಗ ಉಂಟಾಗುವ ಒತ್ತಡ ರಿಲೀಸ್ ಆಗುವುದು ಸೂಕ್ತ ಜೊತೆಗಾರ ಸಿಕ್ಕಾಗ. ಅಂಥ ವ್ಯಕ್ತಿಯ ಸಂಗದಲ್ಲಿ ಆಕೆ ಜೀವಂತಿಕೆ ಅನುಭವಿಸುತ್ತಾಳೆ.

ಆ ಹೊತ್ತಿನಲ್ಲಿ ಆಕೆಯ ಭಾವನಾತ್ಮಕ ಪ್ರವಾಹ ಹೇಗಿರುತ್ತದೆಂದರೆ ಇನ್ಯಾವ ಸಾಮಾಜಿಕ ಕಟ್ಟುಕಟ್ಟಳೆಗಳನ್ನು ಆಕೆ ಲೆಕ್ಕಿಸುವುದಿಲ್ಲ. ಆಗ ಅಪರಾಧ, ಕೊಲೆ, ಜೈಲು, ಸಂಸಾರದ ಸರ್ವನಾಶ- ಇಂಥ ಆಮೇಲಿನ ಸುಡುವಾಸ್ತವಗಳೆಲ್ಲ ಕಣ್ಣಿಗೆ ಕಾಣಿಸುವುದೇ ಇಲ್ಲ, ಹೊಸದಾಗಿ ಬದುಕು ಆರಂಭಿಸಬೇಕು ಎಂಬ ಭಾವವೊಂದೇ ವಿಜೃಂಭಿಸುತ್ತಿರುತ್ತದೆ. ಸೋನಂ ವಿಷಯದಲ್ಲಿ, ಆಕೆ ಪ್ರೀತಿಸಿದ್ದು ತನ್ನ ತಂದೆಯ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ನೌಕರನನ್ನು. ಸಮಾಜದ ಮತ್ತು ಆಕೆಯ ತಂದೆಯ ದೃಷ್ಟಿಯಲ್ಲಿ ಆತ ಯಾವ ರೀತಿಯಲ್ಲೂ ಆಕೆಗೆ ಸರಿಜೋಡಿಯಲ್ಲ, ಆಕೆಗೆ ಮದುವೆ ಎಂಬುದು ಟ್ರಿಗರ್ ಪಾಯಿಂಟ್. ಈ ಕ್ಷಣದಲ್ಲಿ ಒಂದು ನಿರ್ಧಾರ ತೆಗೆದುಕೊಳ್ಳದೇ ಹೋದರೆ ಜೀವನ ಇಲ್ಲಿಗೆ ಮುಗಿದಂತೆ ಎಂಬ ಚಡಪಡಿಕೆ ಶುರುವಾಗಿದೆ. ಅದಕ್ಕೆ ದೊಡ್ಡ ಅಡ್ಡಿ ಯಾರು- ಹೊಸ ಗಂಡ. ಅದನ್ನು ನಿವಾರಿಸಬೇಕು. ಸರಳವಾದ ಡೈವೋರ್ಸ್ ಹಾದಿ ಬಿಟ್ಟು ಆಕೆ ಹಿಡಿದದ್ದು ಕೊಲೆಯ ದಾರಿ. ವಿಚಿತ್ರವೆಂದರೆ ಇಲ್ಲಿ ಆಕೆಗೆ ರಘುವಂಶಿಯ ಮೇಲೆ ದ್ವೇಷವೇನೂ ಇಲ್ಲ. ಅವನನ್ನು ದಾರಿಯಿಂದ ತೊಡೆದುಹಾಕಬೇಕು ಎಂಬುದಷ್ಟೇ ಕಾರಣ.

ಕೆಲವು ಪ್ರಕರಣಗಳಲ್ಲಿ ಸ್ತ್ರೀಯರು ಜೀವನದ ಹಿಂದಿನ ಘಟನೆಗಳಿಂದ ಆದ ಯಾತನೆಯ ಗಾಯಗಳನ್ನು ಅಥವಾ ಮಾನಸಿಕ ಕಾಯಿಲೆಗಳನ್ನು ಹೊತ್ತಿರಬಹುದು. ಸಂಬಂಧದಲ್ಲಿ ಸವಾಲು ಎದುರಾದಾಗ ಅದು ಹಿಂಸಾತ್ಮಕವಾಗಿ ವ್ಯಕ್ತವಾಗಬಹುದು. ಅನೇಕ ಮಹಿಳೆಯರು ಗಂಡನಿಗೆ ಹೊಡೆಯುತ್ತಿರುತ್ತಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಭಾವನಾತ್ಮಕವಾಗಿ ಮೂಲೆಗೆ ಒತ್ತರಿಸಲಾದ ಭಾವನೆ ಹೊಂದಿರುವವರು ದಾಂಪತ್ಯದಿಂದ ತಾನು ಪಾರಾಗಲು ದಾರಿಯಿಲ್ಲ ಅನಿಸಿದಾಗ ಕೊಲೆಯಂಥ ಕೃತ್ಯಕ್ಕೆ ಇಳಿಯುತ್ತಾರೆ. ಸಂಬಂಧವನ್ನು ಬಿಟ್ಟುಬಿಡುವುದಕ್ಕಿಂತಲೂ ಕೊಲೆಯೇ ಹೆಚ್ಚು ಸರಿ ಎಂದು ತಮ್ಮನ್ನೇ ಸಮಜಾಯಿಸಿಕೊಳ್ಳುತ್ತಾರೆ.

ಡೈವೋರ್ಸ್ ಯಾಕೆ ಒಂದು ಸಾಧ್ಯತೆಯಾಗಿ ಕಾಣುವುದಿಲ್ಲವೆಂದರೆ ಅದರೊಂದಿಗೆ ಅಂಟಿಕೊಂಡಿರುವ ಸಾಮಾಜಿಕ ಅಸಹ್ಯ ಭಾವ, ನಮ್ಮ ಸಾಂಸ್ಕೃತಿಕ ಹಿನ್ನೆಲೆ ಮತ್ತು ಜಟಿಲತೆ, ಆರ್ಥಿಕ ಅವಲಂಬನೆ, ಫ್ಯಾಮಿಲಿ ಪ್ರೆಶರ್, ಸಮಾಜ ಏನೆಂದೀತೋ ಎಂಬ ಭಾವ, ಮಕ್ಕಳಿದ್ದಲ್ಲಿ ಅವರ ಹೊಣೆ, ಕಾನೂನು ಹೋರಾಟದ ಹೊರೆ ಇತ್ಯಾದಿ. ಇದಕ್ಕೆಲ್ಲ ಅಂತಿಮ ಪರಿಹಾರ ಕೊಲೆ. ವಿಚ್ಛೇದನವನ್ನು ಸಹಜ ಎಂಬಂತೆ ನೋಡದ, ಇಚ್ಛೆಯಿಲ್ಲದ ಮದುವೆಗಳಿಂದ ಸರಳ ವಿಚ್ಛೇದನವನ್ನು ಸಾಧ್ಯವಾಗಿಸದ ಸಮಾಜದ ಪಾಪವೂ ಈ ಅಪರಾಧಗಳ ಹಿಂದೆ ಇದೆ.

ಇನ್ನು ಯುವ ಸಮುದಾಯದಲ್ಲಿ ಈ ಸಮಸ್ಯೆ ಇನ್ನಷ್ಟು ಜಟಿಲ. ಹೊಸ ತಲೆಮಾರು ಹಿಂಸೆಗೆ ಬಹಳ ಹತ್ತಿರವಾಗಿದೆ. ಕೆಲವು ಹಿಂಸೆಗಳು ಹಿಂಸೆಯೆಂದೇ ಇವರಿಗೆ ಅನ್ನಿಸದಂತೆ ಇಂಟರ್ನೆಟ್, ಫಿಲಂಗಳು, ವೆಬ್ ಶೋಗಳು, ಸೋಶಿಯಲ್ ಮೀಡಿಯಾ ಇವರನ್ನು ತರಬೇತುಗೊಳಿಸಿದೆ. ಮಕ್ಕಳು ಇಂಥ ಕಂಟೆಂಟ್‌ಗೆ ಮೊದಲಿಗಿಂತ ಹೆಚ್ಚು ತೆರೆದುಕೊಂಡಿದ್ದಾರೆ. ಹೆತ್ತವರು ಮಕ್ಕಳನ್ನು ಈ ವಿಷಯದಲ್ಲಿ ಸೂಕ್ಷ್ಮಜ್ಞರನ್ನಾಗಿ ಮಾಡಬೇಕು. ಹಿಂಸೆಯ ಲಕ್ಷಣಗಳು ಇವರಲ್ಲಿ ಬಿಗಡಾಯಿಸುವ ಮೊದಲೇ ಕೌನ್ಸೆಲಿಂಗ್, ಚಿಕಿತ್ಸೆ ಕೊಡಿಸಬೇಕು.

ಇದನ್ನೆಲ್ಲ ನೋಡುವಾಗ, ಲಂಕೇಶರ 'ಗುಣಮುಖ' ನಾಟಕದಲ್ಲಿ ಅಲಾವಿ ಖಾನ್ ಎಂಬ ಪಾತ್ರ ಹೇಳುವ 'ಓ ದೇವರೇ, ಮನುಷ್ಯನನ್ನು ಏಕಿಷ್ಟು ಕ್ಲಿಷ್ಟ ವಸ್ತುವನ್ನಾಗಿ ಸೃಷ್ಟಿಸಿದೆ' ಎಂಬ ಸಂಭಾಷಣೆ ನೆನಪಾಗದೆ ಇರುತ್ತದೆಯೇ?

ಪ್ರಸ್ತುತ

ಸುರೇಂದ್ರ ಪೈ, ಭಟ್ಕಳ

ಅಲುಗಾಡುತ್ತಿದೆ ಮಕ್ಕಳ ಬುನಾದಿಯ ಕಲ್ಲು

ಈ ವರ್ಷ 1ನೇ ತರಗತಿಯ ದಾಖಲಾತಿಗೆ ಸಂಬಂಧಿಸಿದ ಗೊಂದಲಗಳಿಗೆ ಈಗಾಗಲೇ ಶಿಕ್ಷಣ ಇಲಾಖೆಯು ಪ್ರಸುತ್ತ ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ 5.5 ವರ್ಷ ವಯೋಮಿತಿ ಸಡಿಲಿಕೆ ನೀಡಿದೆ. ಆದರೆ ಮಕ್ಕಳು ಕಡ್ಡಾಯವಾಗಿ ಪೂರ್ವ ಪ್ರಾಥಮಿಕ (ಎಲ್‌ಕೆ ಜಿ, ಯುಕೆ ಜಿ) ಶಿಕ್ಷಣವನ್ನು ಕಡ್ಡಾಯವಾಗಿ ಮಾಡಿರಲೇಬೇಕು ಎಂಬ ನಿಯಮವನ್ನು ಆದೇಶದ ರೂಪದಲ್ಲಿ ಹೊರಡಿಸಿದೆ.

ಈ ಆದೇಶವು ಮೇಲ್ನೋಟಕ್ಕೆ ಪಾಲಕರಲ್ಲಿ ವಯೋಮಿತಿಯ ಗೊಂದಲ ನಿವಾರಿಸಿ ನಿರಾಳತೆಯನ್ನು ನೀಡಿದೆ ಎಂದೆನಿಸುವುದು ಸಹಜ. ಆದರೆ ವಾಸ್ತವದಲ್ಲಿ ಈ ವಯೋಮಿತಿ ಸಡಿಲಿಕೆಯು ಪುಟಾಣಿ ಕಂದಮ್ಮಗಳಿಗೆ ವರವಾಗುವ ಬದಲು ಶಾಪವಾಗಿ ಪರಿಣಮಿಸುತ್ತಿದೆ. ಶಿಕ್ಷಣವು ಮಗುವಿನ ಬೆಳವಣಿಗೆ ಹಾಗೂ ವಿಕಾಸಕ್ಕೆ ಅನುಗುಣವಾಗಿ ರೂಪಿಸಲಾಗಿರುತ್ತದೆ. ಅದರನ್ವಯ ಮಗು ನರ್ಸರಿ ಶಿಕ್ಷಣ ಪಡೆಯಲು 3-4 ವರ್ಷ, ಎಲ್ ಕೆ ಜಿ ಸೇರಲು 4-5 ವರ್ಷ ಹಾಗೂ ಯುಕೆಜಿ ಗೆ ದಾಖಲಾತಿ ಪಡೆಯಲು 5-6 ವಯಸ್ಸಿನ ಮಿತಿಗೆ ಒಳಪಟ್ಟಿರಬೇಕು ಎಂಬ ನಿಯಮವಿದೆ. ಆದರೆ ಪಾಲಕರು ಈ ವರ್ಷ ನೀಡಲಾಗಿರುವ ವಯೋಮಿತಿ ಸಡಲಿಕೆಯನ್ನೇ ಅವಕಾಶವೆಂಬಂತೆ ಬಳಸಿಕೊಂಡು ತಮ್ಮ ಮಕ್ಕಳಿಗೆ 5.5 ವರ್ಷವಾಗಿದೆ ಎಂಬ ಕಾರಣಕ್ಕೆ ಎಲ್‌ಕೆಜಿ , ಯುಕೆ ಜಿ ಕಲಿಯದಿದ್ದರೂ ಸಹ ತಮಗೆ ತಿಳಿದಿರುವ ಪೂರ್ವ ಪ್ರಾಥಮಿಕ ಶಾಲೆಯಿಂದ ನಕಲಿ ತೇರ್ಗಡೆ ಪ್ರಮಾಣ ಪತ್ರ ಖರೀದಿಸಿ 1ನೇ ತರಗತಿಗೆ ದಾಖಲಾತಿ ಪಡೆಯುತ್ತಿದ್ದಾರೆ. ನಮ್ಮ ಮಗುವಿಗೆ ಎಲ್ಲಾ ಬರುತ್ತೆ, ಮನೆಯಲ್ಲೇ ಎಲ್ಲಾ ನಾವು ಹೇಳಿಕೊಟ್ಟಿದ್ದೀವಿ, ನಮ್ಮ ಮಗು ರ್‍ಯಾಂಕ್ ಸ್ಟುಡೆಂಟ್, ದಾಖಲಾತಿ ಮಾಡಿಕೊಳ್ಳಿ ಎಂದು ಪಾಲಕರು ಸಮರ್ಥಿಸಿಕೊಳ್ಳುವ ದೃಶ್ಯಗಳು ದಾಖಲಾತಿ ಸಮಯದಲ್ಲಿ ಕಾಣಸಿಗುತ್ತದೆ. ಅದು ಹಾಗಲ್ಲ ಮಗುವಿಗೆ ಫೌಂಡೇಶನ್ ಹಂತದ ಕಲಿಕೆ ಆಗದೇ ನೇರವಾಗಿ ಒಂದನೇ ತರಗತಿ ಬಂದರೆ ಕಲಿಕಾ ಹಿನ್ನಡೆಯನ್ನು ಅನುಭವಿಸುತ್ತಾರೆ. ಜೊತೆಗೆ ಮಗುವಿನ ಆತ್ಮವಿಶ್ವಾಸವು ತುಸು ಕುಗ್ಗಬಹುದು. ಮಗು ಯುಕೆಜಿ ವಿದ್ಯಾಭ್ಯಾಸ ಕಲಿಯಲಿ, ಒಂದನೇ ತರಗತಿಗೆ ಸರಿ ಹೊಂದುವ ವಯೋಮಿತಿಗೆ ಇನ್ನು ಅವಕಾಶವಿದೆ ಎಂದು ಪುಟಾಣಿ ಕಂದಮ್ಮಗಳ ಮನಸ್ಥಿತಿ ಹಾಗೂ ಪ್ರಾಯೋಗಿಕ ಸಮಸ್ಯೆಗಳನ್ನು ಕುರಿತು ಪ್ರಾಂಶುಪಾಲರು ಮನವರಿಕೆ ಮಾಡಿದರೂ ಕ್ಯಾರೆ ಎನ್ನದೇ ಸುಳ್ಳು ದಾಖಲೆಯನ್ನು ಸೃಷ್ಟಿಸಿ ದಾಖಲಾತಿ ಪಡೆದುಕೊಳ್ಳುತ್ತಿದ್ದಾರೆ. ಸುಳ್ಳು ದಾಖಲೆ ಗಮನಿಸಿ ದಾಖಲಾತಿ ನೀಡುವುದಿಲ್ಲ ಎಂದರೆ ಆಡಳಿತ ಮಂಡಳಿಯವರಿಂದಲೋ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಅಲ್ಲಿ ಕೆಲಸ ಮಾಡುವ ಅಧಿಕಾರಿಗಳಿಂದಲೋ ಇನ್ ಫ್ಲುಯೆನ್ಸ್ ಮಾಡಿಸುತ್ತಾರೆ. ಇಲ್ಲಿ ಹಾಸ್ಯಾಸ್ಪದ ಸಂಗತಿಯೆಂದರೆ ಶಿಕ್ಷಣ ಇಲಾಖೆಯ ಆದೇಶದ ಬಗ್ಗೆ , ವಯೋಮಿತಿ ಹಾಗೂ ಕಲಿಕೆಗೂ ಇರುವ ಸಂಬಂಧದ ಬಗ್ಗೆ ಪಾಲಕರಿಗೆ ತಿಳಿ ಹೇಳಬೇಕಾದ ಶಿಕ್ಷಣ ಇಲಾಖೆಯ ಅಧಿಕಾರಿಗಳೇ ನಿಯಮವನ್ನು ಗಾಳಿಗೆ ತೂರಿ ಪಾಲಕರ ಪರವಾಗಿ ಖಾಸಗಿ ಶಾಲೆಯಲ್ಲಿ ದಾಖಲಾತಿ ಮಾಡಿಸುವಂತೆ ಪ್ರೋತ್ಸಾಹಿಸುತ್ತಿದ್ದಾರೆ.

ಎಲ್‌ಕೆ ಜಿ , ಯು ಕೆ ಜಿ ಹಂತದಲ್ಲಿ ಮಗುವಿನ ಮನೋವಿಕಾಸಕ್ಕೆ ತಕ್ಕಂತೆ ಸಂಪೂರ್ಣ ಚಟುವಟಿಕೆ ಆಧಾರಿತ ಕಲಿಕೆ ನಡೆಯುತ್ತದೆ. ಶಿಶು ಗೀತೆ ಕಲಿಯುವುದು, ಚಿತ್ರಗಳಿಗೆ ಬಣ್ಣ ತುಂಬುವುದು, ಬಣ್ಣಗಳ ಪರಿಕಲ್ಪನೆ, ಅಕ್ಷರ ಗುರುತಿಸುವಿಕೆ, ಒಂದಂಕಿ ಕಲಿಕೆ, ಸುತ್ತಮುತ್ತಲಿನ ಪ್ರಾಣಿ, ಪಕ್ಷಿ, ಮರ ಗಿಡಗಳ ಹೆಸರು ಅವುಗಳನ್ನು ಗುರುತಿಸುವಿಕೆ ಹೀಗೆ ನಲಿಯುತ್ತಾ ಕಲಿ ವಿಧಾನವನ್ನು ಅಳವಡಿಸಲಾಗಿರುತ್ತದೆ. ಈ ಕುರಿತಂತೆ ಇತ್ತೀಚಿನ ಎನ್ ಇಪಿ- 2020 ಸಹ ಬುನಾದಿ ಹಂತದ ಕಲಿಕೆಗೆ ಸಂಬಂಧಿಸಿದಂತೆ ವಿಶೇಷ ಒತ್ತು ನೀಡುತ್ತದೆ. ಇವೆಲ್ಲವನ್ನೂ ಅರ್ಥ ಮಾಡಿಕೊಳ್ಳದ ಪಾಲಕರು ಇಂದಿನ ವಿಭಕ್ತ ಕುಟುಂಬದಲ್ಲಿ ಮಗುವನ್ನು ನೋಡಿಕೊಳ್ಳುವುದೇ ಒಂದು ಸಮಸ್ಯೆ ಆಗಿರುವಾಗ, 'ತಾವು ಕೆಲಸಕ್ಕೆ ಹೋಗುತ್ತೇವೆ, ಮನೆಯಲ್ಲಿ ಮಗುವಿನ ಕಲಿಕೆಗೆ ಒತ್ತು ನೀಡುವವರು ಯಾರಿಲ್ಲ, ಪಕ್ಕದ ಮನೆಯ ಮಗು ಒಂದನೇ ತರಗತಿಯಲ್ಲಿದೆ' ಇತ್ಯಾದಿ ವೈಯಕ್ತಿಕ ಕಾರಣಕ್ಕಾಗಿ ಅಕ್ರಮ ಮಾರ್ಗದ ಮೂಲಕ ದಾಖಲಾತಿ ಮಾಡುತ್ತಾರೆ. ಇದರ ಪರಿಣಾಮವಾಗಿ ಮಗು ಆಯಾಯ ಹಂತದಲ್ಲಿ ಕಲಿಕೆಯಲ್ಲಿ ಹಿಂದುಳಿದು, ಮಾನಸಿಕ ಹಿಂಸೆಯನ್ನು ಅನುಭವಿಸುತ್ತಾ ಅದನ್ನು ಯಾರೊಂದಿಗೂ ಹೇಳಿಕೊಳ್ಳದ ಪರಿಸ್ಥಿತಿಗೆ ತಲುಪುತ್ತದೆ. ಇಲ್ಲಿ ಪಾಲಕರ ಎಡವಟ್ಟಿನ ನಿರ್ಧಾರಕ್ಕೆ ಬಲಿಯಾಗುವುದು ಮಗು. ಇವಕ್ಕೆಲ್ಲ ದೂರದರ್ಶಿತ್ವವಿಲ್ಲದ ಸರಕಾರಿ ಆದೇಶಗಳೇ ಕಾರಣ. ಇಂದು ಕನ್ನಡ ಭಾಷೆಯಲ್ಲಿ 1.32 ಲಕ್ಷ ಮಕ್ಕಳು ಫೇಲಾಗಿದ್ದಾರೆ ಏಕೆ? ಇದು ಒಂದು ಕಾರಣ. ನಮ್ಮಲ್ಲಿ ನಿಯಮಗಳು ಶಿಶು ಕೇಂದ್ರಿತವಾಗಿಲ್ಲ, ತಮ್ಮ ಆದೇಶಗಳಲ್ಲಿ ಲೂಪ್ ಹೋಲ್ ಏನಾದರೂ ಇದೆಯಾ? ರಂಗೋಲಿಯ ಕೆಳಗೆ ನುಸುಳಿ ಅಕ್ರಮ ಎಸಗಲು ಅವಕಾಶ ನೀಡುತ್ತಿದೇವೆಯೇ? ಎಂಬಿತ್ಯಾದಿ ಅಂಶಗಳನ್ನು ಚರ್ಚೆ ಮಾಡಿದಿದ್ದರೆ ಯಾವ ಪುಟಾಣಿ ಕಂದಮ್ಮಗಳು ಒತ್ತಡ ಅನುಭವಿಸುತ್ತಿರಲಿಲ್ಲ.

ಸಿಕ್ಕಿಂಗೆ 50ರ ಸಂಭ್ರಮ; ಆ್ಯಕ್ಟ್ ಈಸ್ಟ್‌ನಿಂದ ಆ್ಯಕ್ಟ್ ಫಾಸ್ಟ್ ನತ್ತ

ಪೂರ್ವ ಹಿಮಾಲಯದ ಮನಮೋಹಕ ಮೋಡಿಗಾರ ಈ ಸಿಕ್ಕಿಂ. ಭಾರತ-ಚೀನಾದ ನಡುವೆ ರಕ್ಷಣಾತ್ಮಕ ವಲಯವಾಗಿ ನಿಂತಿದ್ದು, 333 ವರ್ಷಗಳ ಕಾಲ ರಾಜರ ಆಡಳಿತದ ನಂತರ, ಜನಮತದ ಮೂಲಕ 1975ರಲ್ಲಿ 22ನೇ ರಾಜ್ಯವಾಗಿ ಭಾರತದೊಳಗೆ ವಿಲೀನಗೊಂಡಿತು. ಈ ಬೆಸುಗೆಗೆ ಈಗ 50ರ ಸಂಭ್ರಮ! ಸಿಕ್ಕಿಂ ಮತ್ತು ಇಡೀ ಈಶಾನ್ಯ ಭಾಗವು, ಭಾರತದ ಪ್ರಗತಿಯಲ್ಲಿ ಉಜ್ವಲ ಅಧ್ಯಾಯವಾಗಿ ಹೊರಹೊಮ್ಮುತ್ತಿದೆ.

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಪೂರ್ವ ಹಿಮಾಲಯಗಳ ಮಡಿಲಲ್ಲಿ ಅಲಂಕರಿಸಲ್ಪಟ್ಟಿರುವ ಸಿಕ್ಕಿಂ, ಭಾರತದಲ್ಲಿನ ಎರಡನೇ ಅತಿ ಸಣ್ಣ ಮತ್ತು ವೈವಿಧ್ಯಮಯ ಪರಿಸರ ಹೊಂದಿರುವ ರಾಜ್ಯ. ಅದ್ಭುತ ನೈಸರ್ಗಿಕ ಸೌಂದರ್ಯ, ಸಂಸ್ಕೃತಿಯ ವೈವಿಧ್ಯತೆ ಹಾಗೂ ಪ್ರಗತಿಪರ ನೀತಿಗಳಿಂದ ಸಿಕ್ಕಿಂ ದೇಶದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ.

ಸಂಭಾವ್ಯ ಬೆದರಿಕೆಗಳ ವಿರುದ್ಧ ಭಾರತದ ರಕ್ಷಣೆಯಲ್ಲಿ, ಭಾರತ ಮತ್ತು ಚೀನಾದ ನಡುವೆ 'ಬಫರ್ ಏರಿಯಾ' ರಾಜ್ಯವಾಗಿಯೂ ಪರಿಗಣಿಸಲ್ಪಟ್ಟಿದೆ. ವೈವಿಧ್ಯಮಯ ಪರಿಸರ ವ್ಯವಸ್ಥೆಗಳು, ಶ್ರೀಮಂತ ಸಾಂಸ್ಕೃತಿಕ ಪರಂಪರೆ, ಕೃಷಿ ಮತ್ತು ಪರಿಸರ ಪ್ರವಾಸೋದ್ಯಮದಲ್ಲಿ ಹೆಸರುವಾಸಿಯಾಗಿದೆ. ಚೀನಾ-ಟಿಬೆಟ್ ಸಂಪರ್ಕಿಸುವ ನಾಥುಲಾ ಪಾಸ್, ವ್ಯಾಪಾರ ಮತ್ತು ಭದ್ರತೆಯ ಜತೆಗೆ ಕಾರ್ಯತಂತ್ರದ ಭಾಗವಾಗಿದ್ದು, ಸಿಕ್ಕಿಂ ಪ್ರಮುಖ ಮಿಲಿಟರಿ ಸ್ಥಾಪನೆಗಳಿಗೆ ನೆಲೆಯಾಗಿದೆ. ಉತ್ತರ ಮತ್ತು ಈಶಾನ್ಯಕ್ಕೆ ಟಿಬೆಟ್ (ಚೀನಾ)ವನ್ನು, ಪೂರ್ವಕ್ಕೆ ಭೂತಾನ್, ಪಶ್ಚಿಮಕ್ಕೆ ನೇಪಾಳ ದೇಶದೊಂದಿಗೆ ಗಡಿ ಪ್ರದೇಶ ಹಂಚಿಕೊಂಡಿದೆ.

ಸುಮಾರು 7,096 ಚದರ ಕಿಮೀ ವಿಸ್ತೀರ್ಣ ಹೊಂದಿದ ಈ ರಾಜ್ಯ ಹಸಿರು ತುಂಬಿದ ಹಳ್ಳಿಗಳನ್ನು ಹೊಂದಿದ್ದು, ಇದಕ್ಕೆ ಬೆಟ್ಟಗಳು ಮತ್ತು ಹಿಮ ಆವರಿಸಿದ ಗಿರಿಪರ್ವತಗಳು ಮತ್ತಷ್ಟು ಸೊಬಗು ತುಂಬಿವೆ. ಇಂತಹ ಒಂದು ಸೊಬಗಿನ ರಾಜ್ಯಕ್ಕೆ ಕರ್ನಾಟಕದಿಂದ ಬಂದ ಅಧ್ಯಯನ ತಂಡದಲ್ಲಿ ನಾನೂ ಒಬ್ಬ ಪ್ರತಿನಿಧಿಯಾಗಿ ಭೇಟಿಕೊಟ್ಟಿದ್ದು, ಈ ಭಾಗದ ಸಂಸ್ಕೃತಿ, ಆಚಾರ-ವಿಚಾರಗಳನ್ನು ತಿಳಿದುಕೊಳ್ಳಲು ಅವಕಾಶವಾಯಿತು. ನಾವು ರಾತ್ರಿ ಉಳಿದುಕೊಂಡಿದ್ದ ಜಾಗದಿಂದ ಸ್ವಲ್ಪ ದೂರದಲ್ಲಿ ಬೆಳಕಿನ ನಕ್ಷತ್ರಗಳಂತೆ ಕಾಣುತ್ತಿದ್ದ ಬಗ್ಗೆ ಕೇಳಿದಾಗ, ಅವುಗಳೆಲ್ಲ ಬೆಟ್ಟ ಗುಡ್ಡಗಳ ಮೇಲಿರುವ ನಮ್ಮ ಮನೆಗಳು ಎಂದರು ಸ್ಥಳೀಯರು!

ನಮ್ಮ ರಾಜ್ಯದಲ್ಲಿ, ಕರಾವಳಿ ಭಾಗವನ್ನು ಉತ್ತರ ಕರ್ನಾಟಕ, ಬಯಲುಸೀಮೆಗೆ ಹೋಲಿಸಿ ನೋಡಿದಂತೆ, ಇಲ್ಲಿ ಬಂದಾಗ ನಮ್ಮ ರಾಜ್ಯಕ್ಕೆ, ಸಿಕ್ಕಿಂ ಸೊಬಗನ್ನು ಹೋಲಿಕೆ ಮಾಡಿದಾಗ ಬಹಳಷ್ಟು ವೈವಿಧ್ಯಮಯ ವಿಚಾರಗಳು ಕಂಡವು. ಗಡಿರಾಜ್ಯವಾಗಿ ಆಯಕಟ್ಟಿನ ಪ್ರದೇಶದಲ್ಲಿರುವುದರಿಂದ ಪ್ರತಿನಿತ್ಯ ಸೈನಿಕರ ಚಲನವಲನ ಇತರೆ ಪ್ರದೇಶಕ್ಕಿಂತ ಹೆಚ್ಚು! ಕೆಲವೊಮ್ಮೆ ಸೈನಿಕ ಕಾರ್ಯಾಚರಣೆಗಳು ನಡೆಯುವುದುಂಟು. ಸೈನ್ಯಕ್ಕೆ ಮಾತ್ರ ಅನುಮತಿ ಇರುವ No Mans Land ಎಂಬಂತಹ ಜಾಗಗಳು, ಚೀನಾದ ಸೈನಿಕರನ್ನು ಈ ಗಡಿಪ್ರದೇಶದಲ್ಲಿ ನಾವು ಹತ್ತಿರದಿಂದ ಸಹ ಕಾಣಬಹುದಾಗಿದೆ.

ಇಲ್ಲಿನ ಜನಸಂಖ್ಯೆ ವಿಚಾರದಲ್ಲಿ ರಾಜ್ಯಾಡಳಿತ ಮತ್ತು ಜನರು ಆತಂಕದಲ್ಲಿದ್ದಾರೆಂಬುದು ನಮಗೆ ಕಂಡುಬಂದ ಮಾಹಿತಿ. 2011ಕ್ಕೆ ಹೋಲಿಸಿದಲ್ಲಿ, 2024-25ಕ್ಕೆ ಶೇ.2ರಷ್ಟು ಏರಿಕೆಯಾದ ಸಮಾಧಾನವಿದ್ದರೂ, ಒಟ್ಟು 6 ಲಕ್ಷವಿರುವುದು ಇವರ ಆತಂಕಕ್ಕೆ ಮುಖ್ಯ ಕಾರಣ. ಜನಸಂಖ್ಯೆ ದ್ವಿಗುಣಗೊಳಿಸಲು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ಸರಕಾರಿ ನೌಕರರಿಗೆ ಹೆಚ್ಚುವರಿ ಬಡ್ತಿ, ಮಹಿಳಾ ಸರಕಾರಿ ನೌಕರರಿಗೆ ಒಂದರಿಂದ ಎರಡು ವರ್ಷಗಳವರೆಗೆ ಹೆರಿಗೆ ರಜೆ, ನೌಕರಿ ಮಾಡದ ತಾಯಂದಿರಿಗೆ ಆರ್ಥಿಕ ಅನುದಾನ, ಶಿಶು ಸಮೃದ್ಧಿ ಯೋಜನಾ ಮೂಲಕ ನವಜಾತ ಶಿಶುಗಳ ಹೆಸರಿಗೆ 10,800 ರು.ಗಳನ್ನು ಠೇವಣಿ ಇಟ್ಟು 18ರ ವಯಸ್ಸಿಗೆ ಬಂದ ಮೇಲೆ ಪಡೆಯುವಂತಹ ಯೋಜನೆಗಳು ಜಾರಿಯಲ್ಲಿವೆ.

ಭಾರತದೊಂದಿಗೆ ವಿಲೀನಗೊಂಡ ಬಳಿಕ, ಶಾಲೆಗೆ ಬಾರದ ಮಕ್ಕಳನ್ನು ಶಾಲೆಗೆ ಆಕರ್ಷಿಸಲು, ಶಾಲೆಯಲ್ಲಿ 5 ಕೆಜಿ ಅಕ್ಕಿ ಕೊಡಲು ಮೊಟ್ಟಮೊದಲು ಆರಂಭಿಸಿದ್ದೇ ಸಿಕ್ಕಿಂ ರಾಜ್ಯ! ಈ ರಾಜ್ಯವು ಲೆಪ್ಚಾ, ಭುಟಿಯಾ ಮತ್ತು ನೇಪಾಳಿ ಎಂಬ ಮೂರು ಪ್ರಮುಖ ಸಮುದಾಯಗಳನ್ನು ಹೊಂದಿದ್ದು, ಪ್ರಮುಖ ಭಾಷೆಗಳಾಗಿ ನೇಪಾಳಿ, ಭುಟಿಯಾ, ಲೆಪ್ಚಾ ಮತ್ತು ಸರಕಾರಿ ಭಾಷೆಯಾಗಿ ಇಂಗ್ಲಿಷ್ ಇದ್ದು, ಭುಟಿಯಾ ಭಾಷೆಯು ಸಿಕ್ಕಿಮೀಸ್ ಎಂದು ಗುರುತಿಸಿಕೊಂಡಿದೆ. ಲೋಸಾರ್, ಸಗಾ ದವಾ, ಮಾಘೇ ಸಂಕ್ರಾಂತಿ, ಪಾಂಗ್ ಲಾಬ್ಸೋಲ್, ದಶೈನ್ ನಂತಹ ಅನೇಕ ಮತ್ತು ವಿಶಿಷ್ಟ ಹಬ್ಬಗಳನ್ನು ಈ ರಾಜ್ಯ ಹೊಂದಿದೆ.

ಉತ್ಸವ, ಭಾಷೆ, ಆಹಾರ ಮತ್ತು ವಸ್ತ್ರಗಳಲ್ಲಿ ತಮ್ಮ ಸಂಸ್ಕೃತಿಯನ್ನು ವ್ಯಕ್ತಪಡಿಸುವ ಇವರು, ನೆಲ-ಜಲ-ಭಾಷೆಯ ಅಭಿಮಾನದ ಜತೆಗೆ ಧೈರ್ಯ ಮತ್ತು ಸಾಹಸಕ್ಕೆ ಹೆಸರುವಾಸಿಯಾದವರು. ಸಿಕ್ಕಿಂ ಒಂದು ಕನಸಿನ ರಾಜ್ಯವೆಂದು ಹೇಳಬಹುದು. ಭಾರತದಲ್ಲಿ ಸಹಜ ಕೃಷಿ, ಸಾವಯವ ಕೃಷಿಯನ್ನು ಅಳವಡಿಸಿಕೊಂಡು ಸಾಧಿಸಿದ ಮೊದಲ ಸಂಪೂರ್ಣ ರಾಜ್ಯವಾಗಿ ಹೊರಹೊಮ್ಮಿದೆ. ಇಲ್ಲಿ ಬೆಳೆ ವಿಧಾನವು, ಮುಖ್ಯ ಆಹಾರ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳ ಸಮ್ಮಿಶ್ರವಾಗಿದ್ದು, ಪ್ರಧಾನ ಬೆಳೆಗಳಲ್ಲಿ ಅಕ್ಕಿ, ಜೋಳ, ಗೋಧಿ ಮತ್ತು ಆಲೂಗಡ್ಡೆಗಳು ಸೇರಿವೆ. ದೊಡ್ಡ ಏಲಕ್ಕಿ, ಶುಂಠಿ ಮತ್ತು ಆಫ್-ಸೀಸನ್ ತರಕಾರಿಗಳಂತಹ ವಾಣಿಜ್ಯ ಬೆಳೆಗಳು ಮುಖ್ಯವಾಗಿವೆ. ಸಿಕ್ಕಿಂ, ಭಾರತದಲ್ಲಿ ದೊಡ್ಡ ಏಲಕ್ಕಿಯನ್ನು ಉತ್ಪಾದಿಸುವ ಅಗ್ರಸ್ಥಾನದಲ್ಲಿದ್ದು, ಇದು ದೇಶದ ಒಟ್ಟು ಉತ್ಪಾದನೆಯ ಶೇ.80ಕ್ಕಿಂತ ಹೆಚ್ಚು ಕೊಡುಗೆ ನೀಡುತ್ತದೆ.

ಇಷ್ಟೆಲ್ಲ ವಿಶೇಷತೆಗಳ ನಡುವೆ ಜೈವಿಕ ವೈವಿಧ್ಯತೆಗೂ ತನ್ನ ಕೊಡುಗೆ ನೀಡುತ್ತಿದೆ. ಸುಮಾರು ಐದು ಸಾವಿರಕ್ಕೂ ಹೆಚ್ಚು ಹೂವಿನ ಸಸ್ಯಗಳು, 600ಕ್ಕೂ ಹೆಚ್ಚು ಹಕ್ಕಿಗಳ ಪ್ರಭೇದಗಳು ಮತ್ತು ಅಪರೂಪದ ಕೆಂಪು ಕರಡಿ (Red Panda)ಯು ಸಿಕ್ಕಿಂ ರಾಜ್ಯದ ರಾಜ್ಯಪ್ರಾಣಿ ಎಂದು ಪರಿಗಣಿತವಾಗಿದೆ. ಸ್ವಚ್ಛತೆ, ಪರಿಸರ ರಕ್ಷಣೆಗೆ ಹೆಚ್ಚು ಮಹತ್ವ ಕೊಡುವ ಇಲ್ಲಿನ ಜನತೆ, ಪ್ಲಾಸ್ಟಿಕ್ ಬ್ಯಾಗ್ ನಿಷೇಧ, ಕೃಷಿ ಪ್ರೋತ್ಸಾಹ ಕಾರ್ಯಕ್ರಮಗಳನ್ನು ಹೆಚ್ಚು ಅನುಸರಿಸುತ್ತಿದ್ದು, ಹಸಿರುಶಕ್ತಿ ಮತ್ತು ಪರಿಸರಸ್ನೇಹಿ ನೀತಿಗಳನ್ನು ಸ್ಥಳೀಯ ಸಂಸ್ಥೆಗಳು ಕಟ್ಟುನಿಟ್ಟಾಗಿ ಜಾರಿಗೊಳಿಸುತ್ತಿವೆ.

ಇದರ ನಡುವೆ, ನಮಗೆ ಮತ್ತೊಂದು ಪ್ರಮುಖವಾಗಿ ಕಂಡಿದ್ದು, ಸಿಕ್ಕಿಂ ರಾಜ್ಯದ ನಮ್‌ಗ್ಯಾಲ್ ರಾಜಮನೆತನ. ಇದು 17ನೇ ಶತಮಾನದಲ್ಲಿ ಸ್ಥಾಪನೆಯಾಗಿ, 1975ರವರೆಗೆ ಸುಮಾರು 333 ವರ್ಷಗಳ ಕಾಲ ಈ ಪುಟ್ಟ ರಾಜ್ಯವನ್ನು ಆಳಿತು. ಈ ವಂಶದ ಸದಸ್ಯರನ್ನು ಚೋಗ್ಯಾಲ್‌ಗಳು (Chogyal) ಅಂದರೆ, ಬೌದ್ಧಧರ್ಮದ ಧರ್ಮರಾಜರು ಎಂದು ಕರೆಯಲಾಗುತ್ತಿತ್ತು.

ಫುಂಟ್ಸಾಗ್ ನಮ್‌ಗ್ಯಾಲ್:(1642-1670)- ಮೊದಲ ಚೋಗ್ಯಾಲ್, ಇವರು ನಮ್‌ಗ್ಯಾಲ್ ರಾಜವಂಶ(Namgyal dynasty) ಸ್ಥಾಪಿಸಿ, ಯುಕ್ಸೋಮ್ ಅನ್ನು ರಾಜಧಾನಿಯನ್ನಾಗಿ ಮಾಡಿದರು.

ಟೆನ್ಸುಂಗ್ ನಮ್‌ಗ್ಯಾಲ್:(1670-1700)- ಯುಕ್ಸೋಮ್‌ನಿಂದ ರಾಬ್ಡೆನ್ಸೆಗೆ ರಾಜಧಾನಿಯನ್ನು ಸ್ಥಳಾಂತರಿಸಿದರು. ನಂತರದಲ್ಲಿ ಬಂದ ತುಗ್ಸುಡ್ ನಾಮ್‌ಗ್ಯಾಲ್:(1793-1863)- ರಾಜಧಾನಿಯನ್ನು ತುಮ್ಲಾಂಗೆ ವರ್ಗಾಯಿಸಿದ ಮತ್ತು ಬ್ರಿಟಿಷ್ ಇಂಡಿಯಾದೊಂದಿಗೆ ಟಿಟಾಲಿಯಾ ಒಪ್ಪಂದಕ್ಕೆ ಸಹಿ ಹಾಕಿದ ದೀರ್ಘಾವಧಿಯ ಆಳ್ವಿಕೆಯ ಚೋಗ್ಯಾಲ್. ಮತ್ತು ಪಾಲ್ಡೆನ್ ತೊಂಡುಪ್ ನಮ್‌ಗ್ಯಾಲ್:(1963-1975)- ಸಿಕ್ಕಿಂನ ಕೊನೆಯ ಚೋಗ್ಯಾಲ್ ಆಗಿದ್ದು, ಇವರ ಆಳ್ವಿಕೆಯಲ್ಲಿ ಸಿಕ್ಕಿಂ, ಭಾರತದ 22ನೇ ರಾಜ್ಯವಾಗಿ ವಿಲೀನಗೊಳ್ಳುವುದರೊಂದಿಗೆ ಈ ಮನೆತನದ ಆಳ್ವಿಕೆ ಕೊನೆಗೊಂಡಿತು.

ಹೊಟೆಲ್ ಒಂದರಲ್ಲಿ ಚಹಾ ಕುಡಿಯುತ್ತಿದ್ದ ಸಮಯದಲ್ಲಿ ಅದರ ಮಾಲೀಕ, 'ರಾಜರ ಕಾಲದಲ್ಲಿ, ಮುಕ್ಕಾಲು ಜನಕ್ಕೆ ದುಡಿಮೆ ಇರುತ್ತಿರಲಿಲ್ಲ, ಕಾಲಭಾಗ ರಾಜರ ಕುಟುಂಬಕ್ಕೆ ಸೇರಿದ ಇವರಿಗೆ ದುಡಿಮೆಯ ಅಗತ್ಯವಿರಲಿಲ್ಲ. ಹೀಗಾಗಿ, ಬಹುತೇಕ ಕಡಗಣಿಸಿದಂತಾಗಿದ್ದ ಈ ಪ್ರದೇಶವು ಭಾರತದೊಂದಿಗೆ ಸೇರಿದ ಬಳಿಕ ತನ್ನ ಮಹತ್ವ ಪಡೆಯಲು ಆರಂಭಿಸಿತು. ಮೋದಿಯವರು ಪ್ರಧಾನಿಯಾಗಿ ಬಂದ ಬಳಿಕ, ನಮ್ಮ ರಾಜ್ಯಕ್ಕೆ ಇನ್ನಿಲ್ಲದ ಮಹತ್ವ ಕೊಟ್ಟಿದ್ದಾರೆ. ಪ್ರವಾಸೋದ್ಯಮಕ್ಕೆ, ಅಭಿವೃದ್ಧಿಕಾರ್ಯಗಳಿಗೆ ಕೋಟಿಕೋಟಿ ಸುರಿದಿದ್ದಾರೆ. ಇಂದಿನ ಯುವಕರು ಬದುಕಿನ ಭದ್ರತೆಯಲ್ಲಿ ನೆಮ್ಮದಿ ಜೀವನ ಮಾಡುವಂತಾಗಿದೆ' ಎಂದಿದ್ದು ಈಗಲೂ ಮನತಾಕುತ್ತಿದೆ.

ಇದೇ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 'ಸಿಕ್ಕಿಂ50' ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತ, 'ಸಿಕ್ಕಿಂ ದೇಶದ ಹೆಮ್ಮೆ. ಕಳೆದ ದಶಕದಲ್ಲಿ, ನಮ್ಮ ಸರಕಾರವು ಈಶಾನ್ಯವನ್ನು ಭಾರತದ ಅಭಿವೃದ್ಧಿ ಪಯಣದ ಕೇಂದ್ರಭಾಗದಲ್ಲಿ ಇರಿಸಿದೆ. ನಾವು 'ಆ್ಯಕ್ಟ್ ಈಸ್ಟ್' ನೀತಿಯನ್ನು 'ಆ್ಯಕ್ಟ್ ಫಾಸ್ಟ್' ಎಂಬ ಮನೋಭಾವದಿಂದ ಮುನ್ನಡೆಸುತ್ತಿದ್ದೇವೆ. ಸಿಕ್ಕಿಂ ಮತ್ತು ಇಡೀ ಈಶಾನ್ಯ ಭಾಗವು, ಭಾರತದ ಪ್ರಗತಿಯಲ್ಲಿ ಉಜ್ವಲ ಅಧ್ಯಾಯವಾಗಿ ಹೊರಹೊಮ್ಮುತ್ತಿದೆ. ಸಿಕ್ಕಿಂ ಅನ್ನು ಜಾಗತಿಕ ಪ್ರವಾಸೋದ್ಯಮ ತಾಣವನ್ನಾಗಿ ಮಾಡಲು ನಾವು ಪ್ರಯತ್ನಿಸುತ್ತಿದ್ದು, ಮುಂಬರುವ ವರ್ಷಗಳಲ್ಲಿ, ಭಾರತವು ಜಾಗತಿಕ ಕ್ರೀಡಾ ಸೂಪರ್ ಪವರ್ ಆಗಿ ಹೊರಹೊಮ್ಮಲು ಸಿದ್ಧವಾಗಿದೆ. ಜೊತೆಗೆ, ಸಿಕ್ಕಿಂ ಭಾರತಕ್ಕೆ ಮಾತ್ರವಲ್ಲದೆ ಇಡೀ ವಿಶ್ವಕ್ಕೆ ಹಸಿರು ಮಾದರಿ ರಾಜ್ಯವಾಗಬೇಕು ಎಂಬುದು ನಮ್ಮ ಕನಸು, ಅದನ್ನು ಈಡೇರಿಸಿ ತೋರಿಸುತ್ತೇವೆ' ಎಂದು ತಮ್ಮ ದೂರದೃಷ್ಟಿ ಬಿಚ್ಚಿಟ್ಟರು. ನಮ್ಮ ಪ್ರವಾಸದ ವೇಳೆ, ಸ್ಥಳೀಯರು ಹೆಚ್ಚು ಮಾತನಾಡಿದ್ದು ನಾಥುಲಾ ಪಾಸ್ ಎಂಬ ಪರ್ವತದ್ವಾರದ ಬಗ್ಗೆ!

ನಾಥುಲಾ ಪಾಸ್ ಸಿಕ್ಕಿಂ ರಾಜ್ಯದಲ್ಲಿ ಸಮುದ್ರಮಟ್ಟದಿಂದ ಸುಮಾರು 14,140 ಅಡಿ (4,310 ಮೀಟರ್) ಎತ್ತರದಲ್ಲಿ ಇದೆ. ಪ್ರಾಚೀನ ಕಾಲದಲ್ಲಿ ಸಿಲ್ಕ್ ರೋಡ್ (Silk Route) ಎಂಬ ಐತಿಹಾಸಿಕ ವ್ಯಾಪಾರ ಮಾರ್ಗದ ಭಾಗವಾಗಿತ್ತು ಎಂದು ತಿಳಿದು ಬರುತ್ತದೆ. ನಾಥುಲಾ ಪಾಸ್‌ನಲ್ಲಿ ಹವಾಮಾನ ಅತ್ಯಂತ ತೀವ್ರತರವಾಗಿದ್ದು, ಇದರ ತಾಪಮಾನ ಚಳಿಗಾಲದಲ್ಲಿ -20 ಡಿಗ್ರಿ ಸೆಲ್ಸಿಯಸ್‌ವರೆಗೆ ಇಳಿಯುತ್ತದೆ. ವರ್ಷದ ಬಹುಪಾಲು ಸಮಯ ಹಿಮಪಾತವಾಗುತ್ತದೆ. ಈ ಪ್ರದೇಶದಲ್ಲಿರುವ ಪರ್ವತಗಳು, ಹಿಮಪಾತ, ಮತ್ತು ವಿಶಿಷ್ಟವಾದ ಹೈ ಆಲ್ಟಿಟ್ಯೂಡ್ ಜೈವಿಕ ವೈವಿಧ್ಯತೆ ಪ್ರವಾಸಿಗರಿಗೆ ಆಕರ್ಷಣೆಯಾಗಿದೆ.

ಸಿಕ್ಕಿಂ ರಾಜ್ಯದ ವಿಧಾನಸಭಾ ಸ್ಪೀಕರ್, ಡೆಪ್ಯೂಟಿ ಸ್ಪೀಕರ್ ಜೊತೆಗೆ ರಾಜ್ಯದ ಪ್ರಧಾನ ಕಾರ್ಯದರ್ಶಿಯವರು ತಮ್ಮ ಸಮಯ ಮೀಸಲಿಟ್ಟು, ನಮ್ಮ ಅಧ್ಯಯನ ತಂಡದ ಜೊತೆ 2-3 ಗಂಟೆಗಳ ಕಾಲ ವಿಷಯಾಧಾರಿತ ಚರ್ಚೆಗಳನ್ನು ನಡೆಸಿದ್ದು ಬಹುಕಾಲ ನೆನಪಿನಲ್ಲಿ ಉಳಿಯುವಂಥಾದ್ದು! ಇಲ್ಲಿನ ಬಹುತೇಕರಿಗೆ ಕರ್ನಾಟಕ ಪರಿಚಿತವಾಗಿದ್ದು, ಅದರಲ್ಲೂ ಬೆಂಗಳೂರು ಅತ್ಯಂತ ಆಪ್ತ ನಗರವಾಗಿದೆ ಎಂದು ತಿಳಿದು ಸೋಜಿಗವಾಯಿತು. ಇರುವ ಅಷ್ಟೂ ಜನಸಂಖ್ಯೆ ಪರಿಗಣಿಸಿದಾಗ, ಹತ್ತು ಜನರಲ್ಲಿ ಆರು ಜನರು ದುಡಿಮೆ, ಓದೋಕೆ ಮತ್ತು ಇತರೆ ಕಾರಣದಿಂದ ಬೆಂಗಳೂರಿಗೆ ಹೋಗಿ ಬಂದಿರುತ್ತಾರೆ. ಇನ್ನಿಬ್ಬರು ಹೋಗುವ ತಯಾರಿಯಲ್ಲಿರುತ್ತಾರೆ ಎಂಬುದು ಇಲ್ಲಿನವರಿಗೆ ಬೆಂಗಳೂರು ನಗರದ ಜೊತೆಗಿರುವ ಒಡನಾಟ ತೋರಿಸುತ್ತದೆ.

ಯುನೆಸ್ಕೋ ವಿಶ್ವ ಹೆರಿಟೇಜ್ ತಾಣ ಕಾಂಚೆಂಜಂಗಾ ರಾಷ್ಟ್ರೀಯ ಉದ್ಯಾನವನವಿದೆ. ಫಾಂಬಾಂಗ್ ಲೋ, ಶಿಂಗ್ಬಾ ರೋಡೋಡೆಂಡ್ರಾನ್ ನಂತಹ ಧಾರ್ಮಿಕ ಸ್ಥಳಗಳು, ಪ್ರಮುಖ ಪ್ರವಾಸಿ ಆಕರ್ಷಣಾ ತಾಣಗಳಾದ ಹಿಮಪಾತದಿಂದ ನಿರ್ಮಿತವಾದ ಚಾಂಗು ಲೇಕ್ (Tsomgo) ಸರೋವರ, ತಿಬೆಟಿಯನ್ ಬೌದ್ಧ ಧರ್ಮದ ಪ್ರಮುಖ ಕೇಂದ್ರ, ರಂಟೆಕ್ ಬೌದ್ಧ ಮಠ, ಹೂಗಳ ಕಣಿವೆ ಎಂದೇ ಪ್ರಸಿದ್ಧವಾದ ಯುಮ್ಥಾಂಗ್ ಕಣಿವೆ, ಇಚ್ಛೆಗಳನ್ನು ಪೂರೈಸುವ ಪವಿತ್ರ ತಾಣ ಖೆಚೊಪಾಲ್ರಿ ಸರೋವರ ಸೇರಿದಂತೆ ಹಲವು ಜೀವವೈವಿಧ್ಯಮಯ ಸ್ಥಳಗಳು ನಮ್ಮನ್ನು ಮಂತ್ರಮುಗ್ಧಗೊಳಿಸುತ್ತವೆ.

ಶಿಕ್ಷಣದಲ್ಲಿ ಮಹಿಳೆಯರಿಗೆ ಪ್ರೋತ್ಸಾಹ, ಸಂಪೂರ್ಣ ಪ್ಲಾಸ್ಟಿಕ್ ನಿಷೇಧ, ಪರಿಸರದ ಬಗ್ಗೆ ಇವರಿಗಿರುವ ಕಾಳಜಿ ಇವರನ್ನು ದೇಶದಲ್ಲಿಯೇ ವಿಶಿಷ್ಟವಾಗಿ ಗುರುತಿಸುವಂತೆ ಮಾಡಿದೆ ಎನ್ನಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಿಕ್ಕಿಂನ ಆಯಕಟ್ಟಿನ ಸ್ಥಳವಾಗಿದ್ದು, ವೈವಿಧ್ಯಮಯ ಪರಿಸರ ವ್ಯವಸ್ಥೆಗಳು ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯು ಭಾರತಕ್ಕೆ ಅಮೂಲ್ಯ ಆಸ್ತಿಯಾಗಿದೆ, ಅದರ ಭದ್ರತೆ, ಆರ್ಥಿಕತೆ ಮತ್ತು ಪರಿಸರ ಸುಸ್ಥಿರತೆಗೆ ನಿರಂತರ ಕೊಡುಗೆ ನೀಡುತ್ತಿರುವ ಹೆಮ್ಮೆಯ ರಾಜ್ಯವಾಗಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:149

ಸಮಾಚಾರ ಸಣ್ಣದಲ್ಲ

ದಿಗ್ವಿಜಯ್ ಸೋದರ ಪಕ್ಷದಿಂದ ಉಚ್ಚಾಟನೆ

ಭೋಪಾಲ್: ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್‌ನ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಅವರ ಕಿರಿಯ ಸೋದರ ಲಕ್ಷ್ಮಣ್ ಸಿಂಗ್ ಅವರನ್ನು ಪಕ್ಷ ವಿರೋಧಿ ಚಟುವಟಿಕೆಗಳ ಕಾರಣಕ್ಕಾಗಿ ಪಕ್ಷದಿಂದ ಆರು ವರ್ಷಗಳ ಕಾಲ ಉಚ್ಚಾಟಿಸಲಾಗಿದೆ.

ಮಧ್ಯ ಪ್ರದೇಶದ ಮಾಜಿ ಶಾಸಕರಾದ ಲಕ್ಷ್ಮಣ್‌ರನ್ನು ಕಾಂಗ್ರೆಸ್ ಅಧ್ಯಕ್ಷರು ಪಕ್ಷದಿಂದ ಉಚ್ಚಾಟಿಸಿದ್ದು, ಆದೇಶ ತಕ್ಷಣದಿಂದಲೇ ಜಾರಿಗೆ ಬಂದಿದೆ ಎಂದು ಕಾಂಗ್ರೆಸ್ ಶಿಸ್ತು ಸಮಿತಿ ಕಾರ್ಯದರ್ಶಿ ತಾರೀಖ್ ಅನ್ವರ್ ಬುಧವಾರ ತಿಳಿಸಿದ್ದಾರೆ.

ಸಂಬಂಧ ನಿರ್ವಹಣೆ: ದೆಹಲಿ ವಿವಿ ಕೋರ್ಸ್

ದೆಹಲಿ: ಬದುಕಿನಲ್ಲಿ ಸಂಬಂಧಗಳನ್ನು ನಿಭಾಯಿಸುವುದು ಹೇಗೆ? ಈ ಪೀಳಿಗೆಯ ಯುವಜನತೆಗೆ ಈ ವಿಚಾರವನ್ನು ಕಲಿಸಿಕೊಡಬೇಕಿದೆ. ಅದಕ್ಕಾಗಿಯೇ ದೆಹಲಿ ವಿಶ್ವವಿದ್ಯಾಲಯ ಹೊಸ ಕೋರ್ಸ್ ಆರಂಭಿಸಿದೆ.



ಯುವಜನರು ಪ್ರೀತಿಗೆ ಒಳಗಾಗುವ, ಪ್ರೀತಿ ಕಡಿದುಕೊಳ್ಳುವ ಬಗೆಯನ್ನು ಡೇಟಿಂಗ್ ಅಪ್ಲಿಕೇಶನ್, ಸಾಮಾಜಿಕ ಮಾಧ್ಯಮ ಮತ್ತು ಸನ್ನಿವೇಶಗಳೇ ರೂಪಿಸುತ್ತಿವೆ. ಯುವಜನರಿಗೆ ಸಂಬಂಧ ನಿರ್ವಹಣೆಯನ್ನು ತಿಳಿಸಿಕೊಡಬೇಕಿದೆ ಎಂಬ ಉದ್ದೇಶದಿಂದ ದೆಹಲಿ ವಿವಿಯ ಮನೋವಿಜ್ಞಾನ ವಿಭಾಗ 'ನೆಗೋಷಿಯೇಟಿಂಗ್ ಇಂಟಿಮೇಟ್ ರಿಲೇಷನ್‌ಷಿಪ್' ಎಂಬ ಹೊಸ ಕೋರ್ಸ್ ಅನ್ನು 2025–26ರ ಶೈಕ್ಷಣಿಕ ಅವಧಿಗೆ ಆರಂಭಿಸುತ್ತಿದೆ. ಪ್ರೀತಿ, ಸ್ನೇಹವನ್ನು ಅರ್ಥಮಾಡಿಕೊಳ್ಳುವುದು, ಆರೋಗ್ಯಕರ ಬಂಧ ರಚನೆ ಮತ್ತಿತರ ಅಂಶಗಳನ್ನು ಈ ಕೋರ್ಸ್ ಒಳಗೊಂಡಿದೆ. ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಆಯ್ಕೆಯ ಕೋರ್ಸ್ ಇದಾಗಿದೆ ಎಂದು ಪ್ರಾಧ್ಯಾಪಕ ನವೀನ್ ಕುಮಾರ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮುಂದಿನ 10 ದಿನಗಳವರೆಗೂ ಟಿಕೆಟ್ ಪೂರ್ಣ ಬುಕಿಂಗ್ | ಪ್ರತಿದಿನವೂ ವೇಟಿಂಗ್ ಲಿಸ್ಟ್‌ನಲ್ಲಿರುವವರ ಸಂಖ್ಯೆ ಅಧಿಕ | ಕತ್ರಾ-ಶ್ರೀನಗರ ನಡುವೆ 272 ಕಿಮೀಗೆ 3 ಗಂಟೆ ಪಯಣ | ಕತ್ರಾದಿಂದ ಹೋಗುವಾಗ ಟಿಕೆಟ್ ಅಗ್ಗ, ಬರುವಾಗ ತುಟ್ಟಿ

ಕಾಶ್ಮೀರ ವಂದೇಭಾರತ್‌ಗೆ ಬಲು ಬೇಡಿಕೆ

ಶ್ರೀನಗರ: ಪ್ರಧಾನಿ ನರೇಂದ್ರ ಮೋದಿ ಇತ್ತೀಚೆಗೆ ಚಾಲನೆ ನೀಡಿದ ಕತ್ರಾ-ಶ್ರೀನಗರ ವಂದೇಭಾರತ್ ಎಕ್ಸ್‌ಪ್ರೆಸ್ ರೈಲಿಗೆ ವಂದೇಭಾರತ್ ಎಕ್ಸ್‌ಪ್ರೆಸ್‌ಗೆ ಪ್ರಯಾಣಿಕರಿಂದ ಭಾರಿ ಬೇಡಿಕೆ ಬಂದಿದೆ. ಪ್ರವಾಸಿಗರನ್ನು ಬಹಳವಾಗಿ ಸೆಳೆದುಕೊಳ್ಳುತ್ತಿದೆ.

ಮುಂದಿನ 10 ದಿನಗಳವರೆಗೂ ಟಿಕೆಟ್ ಬುಕಿಂಗ್ ಪೂರ್ಣಗೊಂಡಿದೆ ಎಂದು ಮಾತಾ ವೈಷ್ಣೋದೇವಿ ಕತ್ರಾ, ರೈಲು ನಿಲ್ದಾಣದ ನಿಲ್ದಾಣದ ಅಧೀಕ್ಷಕ ಜುಗಲ್ ಕಿಶೋರ್ ಶರ್ಮಾ ತಿಳಿಸಿದ್ದಾರೆ. ವಿಶ್ವದಲ್ಲೇ ಅತಿ ಎತ್ತರದ ಪ್ರದೇಶ ದಲ್ಲಿ ನಿರ್ಮಾಣ ಗೊಂಡಿರುವ ಚೆನಾಬ್ ರೈಲ್ವೆ ಸೇತುವೆ ಮೇಲೆ ಈ ವಿಶೇಷ ರೈಲಿನಲ್ಲಿ ಪ್ರಯಾಣಿಸಲು ಜಮ್ಮು- ಕಾಶ್ಮೀರ ಸೇರಿದಂತೆ ದೇಶದ ಜನರು ಬಹಳ ಉತ್ಸುಕರಾ ಗಿದ್ದಾರೆ. ಜನರಿಂದ ನಿರೀಕ್ಷೆಗೂ ಮೀರಿದ ಪ್ರತಿಕ್ರಿಯೆ ವ್ಯಕ್ತವಾ ಗಿದೆ. ಮುಂದಿನ 10 ದಿನಗಳವರೆಗೆ ಯಾವುದೇ ಸೀಟೂ ಲಭ್ಯವಿಲ್ಲ ಎಂದು ಶರ್ಮಾ ಹೇಳಿದರು.

ರೈಲು ಅತ್ಯಾಧುನಿಕ ಸೌಲಭ್ಯ ಹೊಂದಿದೆ. ಮುಖ್ಯವಾಗಿ ಮಾತಾ ವೈಷ್ಣೋದೇವಿ, ಅಮರನಾಥ ಯಾತ್ರಿಕರಿಗೆ ಅನುಕೂಲಕಾರಿಯಾಘಿದೆ. ಪ್ರಸಿದ್ಧ ಧಾರ್ಮಿಕ ಕೇಂದ್ರ ಗಳು ಮತ್ತು ಪ್ರವಾಸಿ ತಾಣಗಳನ್ನು ಸಂಪರ್ಕಿಸುತ್ತದೆ. ಹಾಗಾಗಿ ಈ ಅತಿವೇಗದ ರೈಲಿನಲ್ಲಿ ಯಾತ್ರೆ ಕೈಗೊಳ್ಳಲು ಜನರು ಹೆಚ್ಚಿನ ಸಂಖ್ಯೆಯಲ್ಲಿ ಕಾದು ನಿಂತಿದ್ದಾರೆ ಎಂದು ಅವರು ವಿವರಿಸಿದರು. ಜೂನ್ 12ರ ಪ್ರಯಾಣಕ್ಕೆ 90 ಮಂದಿ ವೇಟಿಂಗ್ ಲಿಸ್ಟ್‌ನಲ್ಲಿದ್ದರೆ, ಜೂ.13ರಂದು ಸಂಚ ರಿಸಲು ಬಯಸಿ ದವರಲ್ಲಿ 52 ಮಂದಿ ಕಾಯುವಿಕೆ ಯಲ್ಲಿದ್ದಾರೆ. ಜೂ.14 ಮತ್ತು 15ರ ಪ್ರಯಾಣಕ್ಕೆ ಕ್ರಮವಾಗಿ 36 ಮತ್ತು 27 ಮಂದಿ ವೇಟಿಂಗ್ ಲಿಸ್ಟ್‌ನಲ್ಲಿದ್ದರು.

ಟಿಕೆಟ್ ದರ ವ್ಯತ್ಯಾಸ!

ಕತ್ರಾದಿಂದ ಶ್ರೀನಗರಕ್ಕೆ ತೆರಳುವ ವಂದೇಭಾರತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಚೇರ್‌ಕಾರ್‌ನ ಟಿಕೆಟ್ ದರ 715 ರು.ಗಳಾಗಿದ್ದರೆ, ಎಕ್ಸಿಕ್ಯುಟಿವ್ ಕ್ಲಾಸ್ ಟಿಕೆಟ್ ದರ 1320 ರು.ಗಳಷ್ಟಿದೆ. ಆದರೆ, ಮರು ಪ್ರಯಾಣದಲ್ಲಿ ಟಿಕೆಟ್ ದರ ತುಸು ಹೆಚ್ಚಿನದಾಗಿದೆ. ಚೇರ್ ಕಾರ್ ಟಿಕೆಟ್ ದರ 880 ರು. ಮತ್ತು ಎಕ್ಸಿಕ್ಯುಟಿವ್ ಕ್ಲಾಸ್ ಟಿಕೆಟ್ ದರ 1515 ರು.ಗಳಾಗಿದೆ. ಸಸ್ಯಾಹಾರಿ ಊಟವೂ ಲಭ್ಯವಿರುತ್ತದೆ. ಕತ್ರಾ-ಶ್ರೀನಗರ್ ವಂದೇಭಾರತ್ ಎಕ್ಸ್‌ಪ್ರೆಸ್‌ನ ಬೋಗಿಗಳಲ್ಲಿ ಒಟ್ಟು 478 ಚೇರ್‌ಕಾರ್ ಆಸನಗಳು ಮತ್ತು 52 ಎಕ್ಸಿಕ್ಯುಟಿವ್ ಶ್ರೇಣಿ ಆಸನಗಳು ಇವೆ.ವಾರದಲ್ಲಿ ಮಂಗಳವಾರ ಹೊರತು ಉಳಿದ 6 ದಿನಗಳಲ್ಲಿಯೂ ವಂದೇಭಾರತ್ ಎಕ್ಸ್‌ಪ್ರೆಸ್ ಸಂಚಾರ ನಡೆಸುತ್ತದೆ. ದಿನದಲ್ಲಿ ಶ್ರೀನಗರ-ಕತ್ರಾ ರೈಲು ನಿಲ್ದಾಣದ ನಡುವೆ 4 ಬಾರಿ ಸಂಚಾರ ನಡೆಸಲಿದೆ.

943 ಸೇತುವೆ, 36 ಸುರಂಗ!

ಕತ್ರಾ-ಶ್ರೀನಗರ ನಡುವಿನ 272 ಕಿಮೀಗಳ ರೈಲು ಮಾರ್ಗದ ಅಭಿವೃದ್ಧಿಗೆ ಕೇಂದ್ರ ಸರಕಾರ 43,780 ಕೋಟಿ ರು.ಗಳನ್ನು ವೆಚ್ಚ ಮಾಡಿದೆ. ಈ ಮಾರ್ಗದಲ್ಲಿ 36 ಸುರಂಗಗಳು ಬರುತ್ತವೆ. ಸುರಂಗಗಳ ಒಳಗಿನ ರೈಲು ಪ್ರಯಾಣವೇ 119 ಕಿಮೀಗಳಷ್ಟಿದೆ. 3 ಗಂಟೆಗಳ ವಂದೇಭಾರತ್ ಎಕ್ಸ್‌ಪ್ರೆಸ್ ರೈಲು ಪಯಣದಲ್ಲಿ ಕಮಾನು ಆಕಾರದ ಚೆನಾಬ್ ರೈಲ್ವೆ ಸೇತುವೆ, ಕೇಬಲ್‌ಗಳ ಆಧಾರದಲ್ಲಿ ತೂಗುತ್ತಿರುವ 'ಅಂಜಿ ಖಾಡ್' ಸೇತುವೆಗಳು ಎದುರಾಗುತ್ತವೆ. ಅಷ್ಟೇ ಅಲ್ಲ, ಈ ಮಾರ್ಗದಲ್ಲಿ ಸೇತುವೆಗಳ ದೊಡ್ಡ ಸರಣಿಯೇ ಇದೆ. ಸಣ್ಣ ಸೇತುವೆಗಳೂ ಸೇರಿದಂತೆ ಒಟ್ಟು 943 ಸೇತುವೆಗಳ ಮೇಲೆ ರೈಲು ಈ ಮಾರ್ಗದಲ್ಲಿ ಸಾಗಲಿದೆ. ಪ್ರಯಾಣಿಕರಿಗೆ ರೋಚಕ ಅನುಭವ ಖಚಿತ.

ವಿಶಿಷ್ಟ ರೈಲು ಯಾನ ಅನುಭವ

ಚೆನಾಬ್ ನದಿ ಹರಿಯುವ ಆಳವಾದ ಕಣಿವೆಯ ತಳದಿಂದ 1178 ಅಡಿಗಳಷ್ಟು ಎತ್ತರದಲ್ಲಿ ಕಾಮನಬಿಲ್ಲಿನ ಆಕಾರದಲ್ಲಿ ಬಲು ಆಕರ್ಷಕವಾಗಿ ನಿರ್ಮಾಣಗೊಂಡಿರುವ ಚೆನಾಬ್ ರೈಲ್ವೆ ಸೇತುವೆಯ ಮೇಲೆ ಶರವೇಗದಲ್ಲಿ ಸಾಗುವ ವಂದೇಭಾರತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸುವ ಅನುಭವವೇ ಬಲು ವಿಶಿಷ್ಟ, ರುದ್ರ, ರಮಣೀಯ. ಅತ್ಯಂತ ಎತ್ತರದ ಹಿಮಾಲಯ ಪರ್ವತಗಳ ಪಂಕ್ತಿಯಿಂದ ಸುತ್ತುವರಿ ದಿರುವ ಚೆನಾಬ್ ರೈಲ್ವೆ ಸೇತುವೆ, ಅದರ ಮೇಲೆ ರೈಲಿನಲ್ಲಿ ಸಾಗುವಾಗ ಪ್ರಕೃತಿಯ ಸುಂದರ ದೃಶ್ಯಗಳನ್ನು ಕಣ್ತುಂಬಿಕೊಳ್ಳಬಹು ದಾದ ಅಪೂರ್ವ ಅವಕಾಶ. ಜಮ್ಮು-ಕಾಶ್ಮೀರದಲ್ಲಿ ಪ್ರವಾಸ ಕೈಗೊಳ್ಳು ವವರಿಗೆ ಚೆನಾಬ್ ಸೇತುವೆ ಮೇಲಿನ ರೈಲಿನ ಪಯಣ ಮತ್ತೊಂದು ಪ್ರವಾಸಿ ಆಕರ್ಷಣೆಯಾಗಿ ಪರಿಣಮಿಸಿದೆ. ಹಾಗಾಗಿಯೇ ವಂದೇಭಾರತ್ ರೈಲಿನಲ್ಲಿ ಪ್ರಯಾಣಿಸಲು ಸಾವಿರಾರು ಸಂಖ್ಯೆಯಲ್ಲಿ ಜನರು ಸಾಲುಗಟ್ಟಿದ್ದಾರೆ. 10 ದಿನಗಳವರೆಗೂ ಅದಾಗಲೇ ವಂದೇಭಾರತ್‌ನ ಎಲ್ಲಾ ಬೋಗಿಗಳೂ ಭರ್ತಿ ಆಗಿರುವುದರಿಂದ ಪ್ರಯಾಣಿಕರ ಕಾಯುವಿಕೆಯ ಅವಧಿ ದೀರ್ಘವಾಗುತ್ತಿದೆ.

2 ಗಂಟೆ 58 ನಿಮಿಷ!

ಕತ್ರಾ ರೈಲು ನಿಲ್ದಾಣದಿಂದ ಪ್ರತಿದಿನ ಬೆಳಗ್ಗೆ 8.10 ಗಂಟೆಗೆ ಹೊರಡುವ ವಂದೇಭಾರತ್ ಎಕ್ಸ್‌ಪ್ರೆಸ್ ಸಂಖ್ಯೆ 20401 ಶ್ರೀನಗರ ರೈಲು ನಿಲ್ದಾಣವನ್ನು ಬೆಳಗ್ಗೆ 11.08 ಗಂಟೆಗೆ ತಲುಪಲಿದೆ. 272 ಕಿಮೀಗಳಷ್ಟು ಅಂತರದ, ಒಟ್ಟು 2 ಗಂಟೆ 58 ನಿಮಿಷಗಳ ಈ ಪ್ರಯಾಣದಲ್ಲಿ ಮಧ್ಯೆ ಬನಿಹಾಲ್ ನಿಲ್ದಾಣದಲ್ಲಿ 2 ನಿಮಿಷಗಳ ನಿಲುಗಡೆ ಇದೆ ಎಂದು ಭಾರತೀಯ ರೈಲ್ವೆಯ ಕ್ಯಾಟ ರಿಂಗ್ ಮತ್ತು ಪ್ರವಾಸೋದ್ಯಮ ನಿಗಮ(ಐಆರ್‌ಸಿಟಿಸಿ) ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜಮ್ಮು-ಕಾಶ್ಮೀರದ ಗೇಮ್ ಚೇಂಜರ್

ಜೂನ್ 6ರಂದು ಪ್ರಧಾನಿ ನರೇಂದ್ರ ಮೋದಿ ಅವರು ಕತ್ರಾ ಮತ್ತು ಶ್ರೀನಗರ ನಡುವೆ ಚೆನಾಬ್ ಸೇತುವೆ ಮೇಲೆ ಸಾಗುವ ವಂದೇ ಭಾರತ್‌ನ ಎರಡು ವಿಶಿಷ್ಟ ರೈಲುಗಳಿಗೆ ಚಾಲನೆ ನೀಡಿ ಸ್ವತಃ ಪ್ರಯಾಣ ಮಾಡಿ ಖುಷಿ ಪಟ್ಟರು. ಕಾಮಗಾರಿ ಪೂರ್ಣಗೊಂಡ ಚೆನಾಬ್ ಸೇತುವೆಯನ್ನು ಲೋಕಾರ್ಪಣೆಗೊಳಿಸಿ ದೊಡ್ಡ ತ್ರಿವರ್ಣ ಧ್ವಜ ಹಿಡಿದು ಅತ್ತಿತ್ತ ಬೀಸುತ್ತಾ ಹೆಮ್ಮೆಯಿಂದ ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆ ಮೇಲೆ ಅತ್ತಿಂದಿತ್ತ ನಡೆದಾಡಿ ಸಂಭ್ರಮಿಸಿದರು. ಈ ಚೆನಾಬ್ ರೈಲು ಸೇತುವೆ ಮತ್ತು ವಂದೇ ಭಾರತ್ ರೈಲುಗಳ ಸಂಚಾರ ಜಮ್ಮು-ಕಾಶ್ಮೀರದ ಪಾಲಿಗೆ ಪ್ರವಾಸೋದ್ಯಮವನ್ನು ಇನ್ನಷ್ಟು ಉನ್ನತಿಗೇರಿಸುವ ಸಂಗತಿಗಳಾಗಿವೆ ಎಂದೇ ಹೇಳಲಾಗುತ್ತಿದೆ. ಇದೇ ಕಾರಣವಾಗಿ ಪ್ರವಾಸಿಗರ ಸಂಖ್ಯೆ ಹೆಚ್ಚಿದರೆ, ಜಮ್ಮು-ಕಾಶ್ಮೀರದಲ್ಲಿ ಹೋಟೆಲ್, ಟ್ಯಾಕ್ಸಿ, ಷಾಪಿಂಗ್ ಮೊದಲಾದ ಆತಿಥ್ಯ ಉದ್ಯಮ ಕ್ಷೇತ್ರದ ವಹಿವಾಟೂ ಮತ್ತಷ್ಟು ವೃದ್ಧಿಯಾಗಲಿದೆ. ಹಾಗಾಗಿಯೇ ಈ ಚೆನಾಬ್ ರೈಲ್ವೆ ಸೇತುವೆ ಮತ್ತು ವಂದೇಭಾರತ್ ರೈಲು ಸಂಚಾರವನ್ನು ಜಮ್ಮು-ಕಾಶ್ಮೀರದ ಪಾಲಿನ 'ಗೇಮ್ ಚೇಂಜರ್' ಎಂದೇ ಪರಿಗಣಿಸಲಾಗಿದೆ.

ದ್ರವ ಆಮ್ಲಜನಕ ಸೋರಿಕೆ: ಉಡ್ಡಯನ ಮತ್ತೆ ಮುಂದಕ್ಕೆ

ವಾಷಿಂಗ್ಟನ್: ಬುಧವಾರ ಸಂಜೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ (ಐಎಸ್ಎಸ್‌ಗೆ) ಪ್ರಯಾಣಿಸಬೇಕಿದ್ದ ಭಾರತೀಯ ಗಗನಯಾತ್ರಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಸೇರಿದಂತೆ ವಿವಿಧ ದೇಶಗಳ ನಾಲ್ವರು ಗಗನಯಾತ್ರಿಗಳ ಬಾಹ್ಯಾಕಾಶ ಯಾನ ಮತ್ತೆ ಮುಂದೂಡಿಕೆಯಾಗಿದೆ.

ಅಮೆರಿಕದ ಖಾಸಗಿ ಬಾಹ್ಯಾಕಾಶ ಯಾನ ಕಂಪನಿ ಹಮ್ಮಿಕೊಂಡಿರುವ 'ಆಕ್ಸಿಯಮ್ ಮಿಷನ್-4'ನ ಉಡ್ಡಯನ ಕಳೆದೆರಡು ದಿನಗಳಲ್ಲಿ ಎರಡನೇ ಬಾರಿಗೆ ಮುಂದೂಡಿಕೆಯಾಗಿದೆ. ಸ್ಪೇಸ್ ಎಕ್ಸ್‌ನ ರಾಕೆಟ್ ಉಡ್ಡಯನಕ್ಕೆ ಸಿದ್ಧವಾಗಿ ಕ್ಷಣಗಣನೆ ನಡೆದಿದ್ದಾಗ ಫಾಲ್ಕನ್ 9 ಉಡಾವಣಾ ವಾಹನದ ಗಗನಯಾತ್ರಿಕರ ಕೋಶದಲ್ಲಿ ದ್ರವ ಆಮ್ಲಜನಕ ಸೋರಿಕೆ ಕಂಡುಬಂದಿತು. ರಾಕೆಟ್ ಉಡಾವಣೆಗೂ ಮುನ್ನ ಉಡಾವಣಾ ಪ್ಯಾಡ್‌ನಲ್ಲಿ 7 ಸೆಕೆಂಡುಗಳ ಬಿಸಿ ಪರೀಕ್ಷೆ ನಡೆಸಲಾಯಿತು. ಆಗ ಪ್ರೊಪಲ್ಷನ್ ಬೇಯಲ್ಲಿ ಆಮ್ಲಜನಕ ಸೋರಿಕೆ ಪತ್ತೆಯಾಯಿತು. ಹಾಗಾಗಿ ಉಡ್ಡಯನ ಮುಂದೂಡಬೇ ಕಾಯಿತು. ಭಾರತ, ಹಂಗೆರಿ, ಅಮೆರಿಕ ದೇಶಗಳ ನಾಲ್ವರು ಗಗನಯಾತ್ರಿಗಳನ್ನು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಕ್ಕೆ ಕರೆದೊಯ್ಯಬೇಕಿದ್ದ ಆಕ್ಸಿಯಮ್ ಮಿಷನ್-4ರ ಉಡ್ಡಯನ ಮುಂದೂಡಿಕೆಯಾಗಿದ್ದು, ಮುಂದಿನ ಉಡ್ಡಯನದ ದಿನಾಂಕ ಮತ್ತು ಸಮಯ ಇನ್ನಷ್ಟೇ ಪ್ರಕಟವಾಗಬೇಕಿದೆ. ಇಸ್ರೊ ತಜ್ಞರ ತಂಡ ಆಕ್ಸಿಯಮ್ ಮತ್ತು ಸ್ಪೇಸ್ ಎಕ್ಸ್ ಕಂಪನಿಗಳ ತಜ್ಞರೊಂದಿಗೆ ಚರ್ಚೆ ನಡೆಸಿ ಸೋರಿಕೆ ಸರಿಪಡಿಸಲಿದೆ. ಮುಂದಿನ ಉಡಾವಣೆಗೂ ಮೊದಲು ಅಗತ್ಯ ಮತ್ತೊಮ್ಮೆ ಮೌಲ್ಯೀಕರಣ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ.

ಬ್ಯಾಂಕ್ ಹೊರೆ ತಪ್ಪಿಸಲು ವರ್ತಕರಿಗೆ ಶುಲ್ಕ: ಚಿಂತನೆ

₹3,000 ಮೀರಿದ ಯುಪಿಐಗೆ ಶುಲ್ಕ

ದೆಹಲಿ: ಮಹತ್ವದ ಬೆಳವಣಿಗೆಯಲ್ಲಿ 'ಏಕೀಕೃತ ಪಾವತಿ ಇಂಟರ್‌ಫೇಸ್'(ಯುಪಿಐ) ಆಧಾರಿತ ಪಾವತಿ ಸೇವೆ ಬಳಕೆದಾರರಿಗೆ(ವರ್ತಕರಿಗೆ) ಕೇಂದ್ರ ಸರಕಾರ ಸದ್ಯದಲ್ಲೇ ಶಾಕ್ ನೀಡುವ ಸಾಧ್ಯತೆ ಇದೆ. 3,000 ರು.ಗಳಿಗಿಂತ ಹೆಚ್ಚಿನ ಮೊತ್ತದ ಪಾವ ತಿಗಳಿಗೆ 'ವ್ಯಾಪಾರಿ ರಿಯಾಯಿತಿ ದರ'(ಎಂಡಿಆರ್) ವಿಧಿಸಲು ಚಿಂತನೆ ನಡೆಸಿದೆ ಎಂದು ತಿಳಿದುಬಂದಿದೆ.

ಮೂಲಸೌಕರ್ಯ ಮತ್ತು ಕಾರ್ಯಾಚರಣೆ ವೆಚ್ಚಗಳ ನಿರ್ವಹಣೆ ವಿಚಾರದಲ್ಲಿ ಬ್ಯಾಂಕ್‌ಗಳು ಮತ್ತು ಪಾವತಿ ಸೇವಾ ಪೂರೈಕೆದಾರರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ 'ಯುಪಿಐ' ಪಾವತಿ ಮೊತ್ತ 3 ಸಾವಿರ ರು. ಮೀರಿದಾಗ 'ಎಂಡಿಆರ್' ವಿಧಿಸಲು ಸರಕಾರ ಆಲೋಚಿಸುತ್ತಿದೆ. ವಹಿವಾಟಿನ ಸಂಖ್ಯೆಗೆ ಬದಲಾಗಿ ವಹಿವಾಟು ಮೌಲ್ಯ ಆಧರಿಸಿ ಎಂಡಿಆರ್ ಶುಲ್ಕ ನಿಗದಪಡಿಸಲು ಚರ್ಚೆ ನಡೆಯುತ್ತಿದೆ ಎನ್ನಲಾಗಿದೆ.

ಸಣ್ಣ ಪ್ರಮಾಣದ ಯುಪಿಐ ಪಾವತಿ ಸೇವೆ ಈಗಿರುವಂತೆ ಶುಲ್ಕ ವಿನಾಯಿತಿಯಾಗಿಯೇ ಮುಂದುವರಿಯಲಿದೆ. 3 ಸಾವಿರ ರು.ಗೂ ದೊಡ್ಡ ಮೊತ್ತದ ಯುಪಿಐ ಪಾವತಿಗಳಿಗೆ ಶುಲ್ಕ ವಿಧಿಸುವುದು ಅನಿವಾರ್ಯವಾಗಲಿದೆ. ಏಕೆಂದರೆ ಬ್ಯಾಂಕ್‌ಗಳಿಗೆ ನಿರ್ವಹಣಾ ವೆಚ್ಚದ ಹೊರೆ ತಗ್ಗಿಸಬೇಕಿದೆ ಎಂಬ ಮಾತುಗಳು ಸರಕಾರದ ಮಟ್ಟದಲ್ಲಿ ಕೇಳಿಬರುತ್ತಿವೆ.

ನಿರ್ವಹಣೆ ವೆಚ್ಚ ಬ್ಯಾಂಕ್‌ಗೆ ಹೊರೆ

ಡಿಜಿಟಲ್ ಪಾವತಿ ವಹಿವಾಟುಗಳ ನಿರ್ವಹಣೆಯಲ್ಲಿ ವೆಚ್ಚ ಹೆಚ್ಚುತ್ತಿದೆ ಎಂದು ಬ್ಯಾಂಕುಗಳು ಮತ್ತು ಪಾವತಿ ಸೇವಾ ಪೂರೈಕೆದಾರರು ಅಲವತ್ತುಕೊಂಡಿದ್ದಾರೆ. ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ಪಾವತಿಗಳ ಮೇಲಿನ ವ್ಯಾಪಾರಿ ರಿಯಾಯಿತಿ ದರವು ಶೇ.0.9ರಿಂದ ಶೇ.2 ರವರೆಗೂ ಇದೆ. ಅದೇ ರೀತಿ ಯುಪಿಐ ಪಾವತಿ ಸೇವೆಗಳ ನಿರ್ವಹಣೆ ವೆಚ್ಚದ ಹೊರೆಯನ್ನು ಬ್ಯಾಂಕ್‌ಗಳಿಗೆ ತಗ್ಗಿಸಲು ದೊಡ್ಡ ವ್ಯಾಪಾರಿಗಳ ಮೇಲೆ ಶೇ.0.3ರಷ್ಟು ವ್ಯಾಪಾರಿ ಶುಲ್ಕ ವಿಧಿಸುವಂತೆ ಭಾರತೀಯ ಪಾವತಿ ಮಂಡಳಿ ಪ್ರಸ್ತಾಪ ಸಲ್ಲಿಸಿದೆ. ಹಾಗಾಗಿ, ಕೇಂದ್ರ ಹಣಕಾಸು ಸಚಿವಾಲಯ ಈ ಕ್ರಮಕ್ಕೆ ಮುಂದಾಗಲಿದೆ. ಶೂನ್ಯ-ಎಂಡಿಆರ್ ನೀತಿ 2020ರ ಜನವರಿಯಿಂದೂ ಜಾರಿಯಲ್ಲಿದೆ. ಆದರೆ, ಸದ್ಯದಲ್ಲೇ ಬದಲಾಗಲಿದೆ ಎನ್ನಲಾಗಿದೆ.

ದೇಶದಲ್ಲಿನ ಮಾರುಕಟ್ಟೆಗಳಲ್ಲಿ ಚಿಲ್ಲರೆ ಮೊತ್ತದ ಡಿಜಿಟಲ್ ವಹಿವಾಟುಗಳಲ್ಲಿ ಯುಪಿಐ ಪಾವತಿ ಸೇವೆ ಸದ್ಯ ಶೇ.80ರಷ್ಟು ಬೃಹತ್ ಪ್ರಮಾಣಕ್ಕೆ ಬೆಳೆದಿದೆ. ಉಳಿದಂತೆ ಶೇ.20 ಪ್ರಮಾಣದ ವಹಿವಾಟಿನಲ್ಲಿ ನಗದು ಪಾವತಿಯೇ ಮುಂದುವರಿದಿದೆ.

ಆನೇಕಲ್ ಯೋಜನಾ ಪ್ರಾಧಿಕಾರ
'ಅಣ್ಣ' ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560099
www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/16/2025-26 ದಿನಾಂಕ: 10.06.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಎಸ್.ಆರ್.ಕಿಶೋರ್ ಕುಮಾರ್ ಬಿನ್ ಲೇ. ಎ.ರಾಮಯ್ಯರೆಡ್ಡಿ ಮತ್ತು ಶ್ರೀ ಆರ್. ಮುರಳಿಧರ್ ಬಿನ್ ಲೇ. ಎ.ರಾಮಯ್ಯರೆಡ್ಡಿ	ಆನೇಕಲ್	ಸರ್ಜಾಪುರ	ಯಮರೆ	92/2	4-30	ಕೈಗಾರಿಕಾ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಹಾಗೂ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಠಿಯಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ವಸತಿ ರಹಿತ ಸಾರ್ವಜನಿಕರಿಗೆ ಕಾನೂನು ಬದ್ಧವಾದ ನಿವೇಶನ ಒದಗಿಸುತ್ತೇವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-
ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್
DIPR/CP/VCPL/1174/2025-26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.

ನಂ: ಇಇ/ಎಂಐಡಿ/ಬೀದರ/ತಾ.ಶಾ-1/ಟೆಂಡರ್/2024-25/1050 ದಿನಾಂಕ: 10-06-2025

ಕೆಪಿಪಿ-ಪ್ರೋಕ್ಯೂರಮೆಂಟ್, ಟೆಂಡರ್ ಪ್ರಕಟಣೆ

1) ಕಾಮಗಾರಿಗಳ ವಿವರ.KPP -Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ. :KPP -Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. KPP -Portalನಲ್ಲಿ ನಮೂದಿಸಿದಂತೆ, 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲೂ -1,ಕೆ.ಡಬ್ಲೂ -2 & ಕೆ.ಡಬ್ಲೂ -3 ಮಾತ್ರ: **18-06-2025 ರಂದು 17.00 ಗಂಟೆವರೆಗೆ,** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲೂ -1,ಕೆ.ಡಬ್ಲೂ -2 & ಕೆ.ಡಬ್ಲೂ -3 ಮಾತ್ರ: **20-06-2025 ರಂದು 16.00 ಗಂಟೆ ವರೆಗೆ,** 8) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -1,ಕೆ.ಡಬ್ಲೂ -2 & ಕೆ.ಡಬ್ಲೂ -3 ಮಾತ್ರ: **23-06-2025 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 9) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -1,ಕೆ.ಡಬ್ಲೂ -2 & ಕೆ.ಡಬ್ಲೂ -3 ಮಾತ್ರ: **25-06-2025 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ.:ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 11) ಅಂತರ್ಜಾಲ ತಾಣದ ವಿಳಾಸ.KPP portal https://kppp.karnataka.gov.in

ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.
ವಾ.ಸಾ.ಸಂ.ಇ/ಬೀದರ/65/ಕೆ.ಎಸ್.ಎಂ.ಸಿ.&ಎ/2025-26

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು -584102
Phone /Fax-08532-238488/89
Web.www.rims-raichur.gov.in Email info@rims-raichur.com

ಸಂ. ರಿಮ್ಸ್ /ಸರಬರಾಜು/ಟೆಂಡರ್/2025-26 ದಿನಾಂಕ:10.06.2025

ಇ-ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿರುವ ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಯ ಟ್ರಾಮಾ ಕೇರ್ ಸೆಂಟರ್‌ನ್ನು ಸ್ಥಾಪಿಸಲು ಅವಶ್ಯವಿರುವ ವಿವಿಧ ಉಪಕರಣಗಳನ್ನು ಪೂರೈಸಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಯ ಟ್ರಾಮಾ ಕೇರ್ ಸೆಂಟರ್‌ಗೆ ಅವಶ್ಯವಿರುವ Operating Microscope – Neurosurgery ಉಪಕರಣವನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು (ಆರ್‌ಜಿಎಸ್ ಎಸ್‌ಹಚ್)/ಟೆಂಡರ್/ಉಪಕರಣ/137/ 2025-26/ಕಾಲ್-2 (DME/2025-26/IND1482)	295.00
2	ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಓಪೆಕ್) ಆಸ್ಪತ್ರೆಯ ಟ್ರಾಮಾ ಕೇರ್ ಸೆಂಟರ್‌ಗೆ ಅವಶ್ಯವಿರುವ Electro Surgical Unit ಉಪಕರಣವನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು(ಆರ್‌ಜಿಎಸ್ ಎಸ್‌ಹಚ್)/ಟೆಂಡರ್/ಉಪಕರಣ/139/ 2025-26/ಕಾಲ್-2 DME/2025-26/IND1483)	14.01

1) ಟೆಂಡರ್‌ಗಳನ್ನು ದಿನಾಂಕ: 11.06.2025 ರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು, **2) ಪ್ರಶ್ನೆಗಳಿಗೆ ಕೊನೆಯ ದಿನಾಂಕ:** 16.06.2025 ರ ಸಾಯಂಕಾಲ 5.00 ಗಂಟೆಯವರೆಗೆ, **3) ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ:** 10.07.2025ರ ಸಾಯಂಕಾಲ 5.00ಗಂಟೆವರೆಗೆ, **4) ತಾಂತ್ರಿಕ ಲಕೋಟೆ (ಮೊದಲನೇಯ ಕವರ್) ತೆರೆಯುವ ದಿನಾಂಕ :** 14.07.2025 ಬೆಳಿಗ್ಗೆ 11.30ಗಂಟೆಗೆ.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಸದರಿ ಟೆಂಡರ್‌ಗಳ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸುಲಾಗುವುದಿಲ್ಲ, ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು. ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ಕೋಶದ ವೆಬ್‌ಸೈಟ್ http://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರು
DIP/RCR/166/KSMC&A/166/2025-26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು
Telephone No: 9448994705

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section, CESC, Mysuru-570017.
Website: www.cescmysore.org
E-mail ID: gmpurc@cescmysore.org
Company Identity Number(CIN): U40109KA2004SGC035177

ಚಾವಿಸನಿನಿ/ಪ್ರವ್ಯ/ಉ.ಪ್ರವ್ಯ(ಖ)/ಸ.ಪ್ರವ್ಯ(ಖ)-1/2025-26/7162 ದಿನಾಂಕ: 09.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ವತಿಯಿಂದ 1000A, 20KA Vacum Auto Re-Closure ಗಳನ್ನು ಸರಬರಾಜು ಮಾಡಲು ಹಾಗೂ ಅಳವಡಿಸಲು ತಯಾರಿಕೆದಾರರಿಂದ "ಎಕ್ಸ್‌ಪ್ರೆಷನ್ ಆಫ್ ಇಂಟ್ರಸ್ಟ್" ಅಡಿಯಲ್ಲಿ ದರದ ಕೊಟೇಷನ್‌ಗಳನ್ನು ಆಹ್ವಾನಿಸಿದೆ.

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿ: 16.06.2025ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91-8046010000, +91-8068948777 ಅಥವಾ ಇ-ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ಸಹಿ/- ಪ್ರಧಾನ ವ್ಯವಸ್ಥಾಪಕರು(ಖರೀದಿ), ಚಾ.ವಿ.ಸ.ನಿನಿ., ಮೈಸೂರು
DIPR/DDMYS/443/KSMCA/275/2025-26

ಮುಂಬೈ ಲೋಕಲ್‌ಟ್ರೇನ್: ಸ್ವಯಂಚಾಲಿತ ಬಾಗಿಲು

ಮುಂಬೈ: ಮುಂಬೈನ ಉಪನಗರ ರೈಲು ಜಾಲದಲ್ಲಿ ಸಂಚರಿಸುವ ಎಲ್ಲಾ ರೈಲು ಬೋಗಿಗಳಿಗೂ ಸ್ವಯಂಚಾಲಿತವಾಗಿ ತೆರೆದುಕೊಳ್ಳುವ ಮತ್ತು ಮುಚ್ಚುವ ಬಾಗಿಲುಗಳನ್ನು ಅಳವಡಿಸಲು ಕೇಂದ್ರ ರೈಲ್ವೆ ಮಂಡಳಿ ನಿರ್ಧರಿಸಿದೆ.

ಜನನಿಬಿಡ ವಾಣಿಜ್ಯ ರಾಜಧಾನಿ ಮುಂಬೈನ ಜನಜೀವನದಲ್ಲಿ ಲೋಕಲ್ ಟ್ರೇನ್ ಎಂಬುದು ನಿತ್ಯದ ಜೀವನಾಡಿಯೇ ಆಗಿದೆ. ಒಂದು ದಿನ ಲೋಕಲ್ ಟ್ರೇನ್ ಸಂಚರಿಸದೇ ಇದ್ದರೂ ಮುಂಬೈನ ದೊಡ್ಡ ಜನಸಮುದಾಯ ಸಂಕಷ್ಟ ಅನುಭವಿಸುತ್ತದೆ. ಆದರೆ, ಇದೇ ಜೀವನಾಡಿಯ ಸಂಚಾರ ವೇಳೆ ವಿವಿಧ ಕಾರಣಗಳಿಂದಾಗಿ ಪ್ರತಿನಿತ್ಯವೂ ಸಾವು-ನೋವು ಸಂಭವಿಸುತ್ತಿದೆ ಎಂಬುದೇ ಚಿಂತೆಗೆ ಕಾರಣವಾಗಿದೆ. ಮುಂಬ್ರಾ ಮತ್ತು ದಿವಾ ನಡುವೆ ಲೋಕಲ್ ಟ್ರೇನ್ ಸೋಮವಾರದ ಸಂಚಾರದಲ್ಲಿ ಕಿಕ್ಕಿರಿದಿದ್ದ ಬೋಗಿಗಳಿಂದ 13 ಪ್ರಯಾಣಿಕರು ಕೆಳಕ್ಕೆ ಜಾರಿಬಿದ್ದು, 6 ಮಂದಿ ಸಾವಿಗೀಡಾಗಿ, 7 ಮಂದಿ ಗಾಯಗೊಂಡ ಘಟನೆ ಬಳಿಕ ಲೋಕಲ್ ಟ್ರೇನ್ ಸಂಚಾರ ಚರ್ಚೆಗೊಳಗಾಗುತ್ತಿದೆ. ಉತ್ತರ ಮುಂಬೈನಿಂದ ದಕ್ಷಿಣ ಮುಂಬೈವರೆಗೆ 450 ಕಿ.ಮೀ. ಲೋಕಲ್ ಟ್ರೇನ್‌ನ ಜಾಲವಿದೆ. ವಿಶ್ವದ ಅತಿಹಳೆಯ ಮತ್ತು ಜನನಿಬಿಡ ರೈಲು ಜಾಲವಾಗಿದೆ. ನಿತ್ಯವೂ 75 ಲಕ್ಷ ಪ್ರಯಾಣಿಕರ ಸಂಚರಿಸುವ ಮುಂಬೈ ಲೋಕಲ್ ಟ್ರೇನ್ ಎಲ್ಲಾ ಸಮಯದಲ್ಲೂ ಕಿಕ್ಕಿರಿದೇ ಇರುತ್ತದೆ. ಹಾಗಾಗಿ, ರೈಲುಗಳ ಸಂಖ್ಯೆ ಹೆಚ್ಚಿಸಿ, ಕುರ್ಲಾ-ಕಲ್ಯಾಣ್ ನಡುವೆ 4 ಹಳಿಗಳ ವ್ಯವಸ್ಥೆ ಮಾಡಿ, ಮುಂಬೈನ ಉಪನಗರ ರೈಲ್ವೆಗೆ ವಿಶೇಷ ಪ್ರಾಧಿಕಾರ ರಚಿಸಿ ಎಂದು ಪ್ರಯಾಣಿಕರ ಸಂಘಟನೆಗಳು ಒತ್ತಾಯಿಸುತ್ತಿವೆ. 2005ರಿಂದ 2024ರವರೆಗೂ ಮುಂಬೈನಲ್ಲಿ ವಿವಿಧ ರೈಲು ಸಂಬಂಧಿತ ದುರಂತಗಳಲ್ಲಿ ಬರೋಬ್ಬರಿ 51,802 ಮಂದಿ ಬಲಿಯಾಗಿದ್ದಾರೆ. ಅಂದರೆ ನಿತ್ಯ ಸರಾಸರಿ ಏಳು ಸಾವು ಸಂಭವಿಸುತ್ತಿವೆ.

ಕಲುಷಿತ ಆಹಾರ:85 ಮಂದಿ ಅಸ್ವಸ್ಥ

ವಿರುಧುನಗರ: ತಮಿಳುನಾಡಿನ ವಿರುಧುನಗರ ಜಿಲ್ಲೆಯ ದೇವಸ್ಥಾನವೊಂದರಲ್ಲಿ ತಯಾರಿಸಿದ್ದ ಆಹಾರ ಕಲುಷಿತಗೊಂಡಿದ್ದು, ಅದನ್ನು ಸೇವಿಸಿದ ಭಕ್ತರಲ್ಲಿ 85 ಮಂದಿ ಅಸ್ವಸ್ಥರಾಗಿದ್ದಾರೆ. ಅಸ್ವಸ್ಥರೆಲ್ಲರನ್ನೂ ವಿರುಧನಗರದ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ತಕ್ಷಣವೇ ಚಿಕಿತ್ಸೆ ಕೊಡಿಸಿದ್ದರಿಂದ ಎಲ್ಲಾ ಅಸ್ವಸ್ಥರೂ ಚೇತರಿಸಿಕೊಂಡಿದ್ದಾರೆ. ಕಲುಷಿತಗೊಂಡ ಆಹಾರವನ್ನು ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಕೀನ್ಯಾ ಬಸ್ ಅಪಘಾತ: 6 ಭಾರತೀಯರ ಸಾವು

ನ್ಯಾಂಡರುವಾ: ಆಫ್ರಿಕಾ ಖಂಡದ ಕೀನ್ಯಾ ದೇಶದಲ್ಲಿ ಬಸ್ ಕಂದಕಕ್ಕೆ ಉರುಳಿದ್ದರಿಂದ ಕೇರಳ ರಾಜ್ಯದ ಐವರು ಸೇರಿದಂತೆ ಒಟ್ಟು ಆರು ಮಂದಿ ಭಾರತೀಯರು ಸಾವಿಗೀಡಾಗಿದ್ದಾರೆ. ಮೃತರೆಲ್ಲರೂ ಕತಾರ್‌ನಲ್ಲಿ ನೆಲೆಸಿದ್ದ ಭಾರತೀಯರು. ಕೇರಳದ ಮಾವೆಲಿಕ್ಕರ ಮೂಲದ ಗೀತಾ ಶೋಜಿ ಐಸಾಕ್ (58), ಜಸ್ನಾ ಕುಟ್ಟಿಕ್ಕಟ್ಟುಚಲಿಲ್(29), ರುಹಿ ಮೆಹ್ರಿ ಮೊಹಮ್ಮದ್(18 ತಿಂಗಳ), ಒಟ್ಟಪಾಲಂನ ಎನ್.ರಿಯಾ(41) ಮತ್ತು ಟೈರಾ ರೊಡ್ರಿಗಸ್(8) ಮೃತರಲ್ಲಿ ಸೇರಿದ್ದಾರೆ. ಮತ್ತೊಬ್ಬ ಭಾರತೀಯ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. ನ್ಯಾಂಡರುವಾ ಕೌಂಟಿಯ ಓಲ್ ಜೊರೊರೊಕ್-ನಕುರು ರಸ್ತೆಯಲ್ಲಿರುವ ಗಿಚಾಕಾ ಪ್ರದೇಶದಲ್ಲಿ ಬಸ್ ಕಂದಕಕ್ಕೆ ಉರುಳಿದೆ. ಅಪಘಾತದಲ್ಲಿ 27 ಮಂದಿ ಗಾಯಗೊಂಡಿದ್ದಾರೆ. ಬಸ್‌ನಲ್ಲಿ ಪ್ರವಾಸಿಗರು, ಮೂವರು ಸ್ಥಳೀಯ ಮಾರ್ಗದರ್ಶಕರು ಮತ್ತು ಚಾಲಕ-ನಿರ್ವಾಹಕ ಇದ್ದರು. ನೈರೋಬಿಯಲ್ಲಿನ ಭಾರತೀಯ ಹೈಕಮಿಷನ್‌ನ ಅಧಿಕಾರಿಗಳ ತಂಡ ಸ್ಥಳಕ್ಕೆ ತೆರಳಿ ಭಾರತೀಯರಿಗೆ ನೆರವಾಗುತ್ತಿದೆ. ಅಲ್ಲದೇ, ಸ್ಥಳೀಯ ಅಧಿಕಾರಿಗಳ ಜತೆ ಸಂಪರ್ಕದಲ್ಲಿದೆ.

ಇಂದಿನಿಂದ ಕಂಚಿ ಶ್ರೀ ವಿಜಯ ಯಾತ್ರೆ

ಬೆಂಗಳೂರು: ಕಂಚಿ ಕಾಮಕೋಟಿ ಪೀಠದ ಜಗದ್ಗುರು ಶಂಕರ ವಿಜಯೇಂದ್ರ ಸ್ವಾಮೀಜಿ ಅವರ ವಿಜಯ ಯಾತ್ರೆ ಜೂ.12 ರಿಂದ 17 ರವರೆಗೆ ಕಲ್ಯಾಣಪುರಿಯಲ್ಲಿ ನಡೆಯಲಿದೆ. ಜಗದ್ಗುರು ಶಂಕರ ವಿಜಯೇಂದ್ರ ಸ್ವಾಮಿಜಿಗಳು ಗುರುವಾರದಿಂದ ದೊಡ್ಡಕಲ್ಲಸಂದ್ರದ ಶಂಕರ ಫೌಂಡೇಶನ್‌ನಲ್ಲಿ ಬೀಡು ಬಿಡಲಿದ್ದಾರೆ. ಈ ಸಮಯದಲ್ಲಿ ಪ್ರತಿದಿನ ಭಕ್ತಾದಿಗಳ ಭೇಟಿ, ಮಹಾತ್ರಿಪುರ ಸುಂದರಿ ಮತ್ತು ಚಂದ್ರಮೌಳೇಶ್ವರ ದೇವರ ಅಭಿಷೇಕ ಪೂಜೆ, ಪಾದುಕ ಪೂಜೆ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಈ ಕಾರ್ಯಕ್ರಗಳಲ್ಲಿ ಭಕ್ತಾದಿಗಳಿಗೆ ಭಾಗವಹಿಸಲು ಮುಕ್ತ ಅವಕಾಶವಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

10 ಜಿಲ್ಲೆಗಳಿಗೆ ಬಿಜೆಪಿ ಅಧ್ಯಕ್ಷರ ನೇಮಕ

ಬೆಂಗಳೂರು: ಹಲವು ವಿವಾದ ಹಾಗೂ ನಾಯಕರ ಅಸಮಾಧಾನದಿಂದ ನೆನಗುದಿಗೆ ಬಿದ್ದಿದ್ದ ಹತ್ತು ಜಿಲ್ಲೆಗಳಿಗೆ ಅಧ್ಯಕ್ಷರನ್ನು ಬಿಜೆಪಿ ನೇಮಕ ಮಾಡಿದೆ.

ಮೈಸೂರು ಗ್ರಾಮಾಂತರಕ್ಕೆ ಕೆ.ಎನ್.ಸುಬ್ಬಣ್ಣ, ಹಾಸನ-ಸಿದ್ದೇಶ್ ನಾಗೇಂದ್ರ, ಕೊಡಗು-ರವಿ ಕಾಳಪ್ಪ, ಉಡುಪಿ-ಕುತ್ಯಾರು ನವೀನ್ ಶೆಟ್ಟಿ, ಹಾವೇರಿ ವಿರೂಪಾಕ್ಷಪ್ಪ ಬಳ್ಳಾರಿ, ದಾವಣಗೆರೆ- ಎನ್. ರಾಜಶೇಖರ, ಚಿತ್ರದುರ್ಗ-ಕೆ.ಟಿ.ಕುಮಾರಸ್ವಾಮಿ, ತುಮಕೂರು-ಎಚ್.ಎಸ್. ರವಿಶಂಕರ್(ಹೆಬ್ಬಾಕ), ಮಧುಗಿರಿ-ಚಿದಾನಂದ ಗೌಡ, ಚಿಕ್ಕಬಳ್ಳಾಪುರ-ಎಸ್. ವಿರಾಮಚಂದ್ರ ಗೌಡ(ಸೀಕಲ್) ಅವರನ್ನು ಪಕ್ಷದ ಚುನಾವಣಾಧಿಕಾರಿ ಕ್ಯಾ.ಗಣೇಶ್ ಕಾರ್ಣಿಕ್ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ. ಈಗ ದೇಶದಾದ್ಯಂತ ಪಕ್ಷದ ಸಂಘಟನಾ ಪರ್ವ 2024-25 ನಡೆಯುತ್ತಿದ್ದು, ಇದರ ಅಂಗವಾಗಿ ರಾಜ್ಯದಲ್ಲಿ ಎರಡನೇ ಹಂತದಲ್ಲಿ ಉಳಿದಿರುವ 10 ಸಂಘಟನಾತ್ಮಕ ಜಿಲ್ಲಾ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಮುಗಿಸಲಾಗಿದೆ. ಜನವರಿಯಲ್ಲಿ 23 ಜಿಲ್ಲೆಗಳಿಗೆ ಬಿಜೆಪಿ ಜಿಲ್ಲಾಧ್ಯಕ್ಷರ ನೇಮಕ ಮಾಡಲಾಗಿತ್ತು. ಪಕ್ಷದಲ್ಲಿನ ಕೆಲ ಗೊಂದಲ, ಆಂತರಿಕ ಕಚ್ಚಾಟದಿಂದ 10 ಜಿಲ್ಲಾ ಘಟಕಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿರಲಿಲ್ಲ. ಮುಖ್ಯವಾಗಿ ಚಿಕ್ಕಬಳ್ಳಾಪುರ ಜಿಲ್ಲಾಧ್ಯಕ್ಷರನ್ನಾಗಿ ಸಂದೀಪ್ ರೆಡ್ಡಿ ಅವರನ್ನು ಮೊದಲ ಪಟ್ಟಿಯಲ್ಲೇ ನೇಮಕ ಮಾಡಲಾಗಿತ್ತು. ಇದಕ್ಕೆ ಸಂಸದ ಡಾ.ಕೆ. ಸುಧಾಕರ್ ಆಕ್ಷೇಪ ವ್ಯಕ್ತಪಡಿಸಿ, ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನು ಬಹಿರಂಗವಾಗಿ ಪ್ರಶ್ನಿಸಿದ್ದರು. ಇದರ ಬೆನ್ನಲ್ಲೇ ರಾಷ್ಟ್ರೀಯ ಅಧ್ಯಕ್ಷರ ಸೂಚನೆ ಮೇರೆಗೆ ಚಿಕ್ಕಬಳ್ಳಾಪುರ ಬಿಜೆಪಿ ಜಿಲ್ಲಾಧ್ಯಕ್ಷರ ಆಯ್ಕೆ ತಡೆ ಹಿಡಿಯಲಾಗಿತ್ತು.

ವೈದ್ಯರ ನಿರ್ಲಕ್ಷ್ಯಕ್ಕೆ ಮಗು ಸಾವು: ಆರೋಪ

ರಾಮನಗರ: ಆರು ತಿಂಗಳ ಮುದ್ದಾದ ಹೆಣ್ಣು ಮಗು ವೈದ್ಯರ ನಿರ್ಲಕ್ಷ್ಯದಿಂದ ಸಾವನ್ನಪ್ಪಿರುವ ಆರೋಪ ರಾಮನಗರದಲ್ಲಿ ಕೇಳಿ ಬಂದಿದೆ. ರಾಮನಗರದ

ಚಾಮುಂಡೇಶ್ವರಿ ಬಡಾವಣೆ ನಿವಾಸಿ ಶಿವರಾಜು ಎಂಬುವವರ ಮಗಳು ಶರಣ್ಯ (6) ಮೃತಪಟ್ಟಿದ್ದಾಳೆ. ಮಗುವಿನ ಕಾಲಿನಲ್ಲಿ ಗಂಟು ಬಂದಿರುವ ಹಿನ್ನೆಲೆ ಮಂಗಳವಾರ ರಾತ್ರಿ ಪೋಷಕರು ಆಸ್ಪತ್ರೆಗೆ ದಾಖಲು ಮಾಡಿದ್ದರು. ಹೈಡೋಸ್ ಇಂಜೆಕ್ಷನ್ ನೀಡಿದ ಪರಿಣಾಮ ಮಗು ಸಾವನ್ನಪ್ಪಿದ ಆರೋಪ ಮಾಡಲಾಗಿದೆ. ಅಲ್-ಖೈರ್ ಫೌಂಡೇಶನ್ ಹೆಸರಿನ ಕ್ಲಿನಿಕ್ ವೈದ್ಯ ಮೊಹಮದ್ ಸೈಫುಲ್ಲಾ ವಿರುದ್ಧ ಮಗು ಸಾವಿನ ಆರೋಪ ಮಾಡಲಾಗಿದೆ. ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಆರೋಗ್ಯ ಇಲಾಖೆ ಅಧಿಕಾರಿಗಳು ಕ್ಲಿನಿಲ್ ಸೀಜ್ ಮಾಡಿದ್ದಾರೆ. ಈ ಸಂಬಂಧ ವೈದ್ಯನ ವಿರುದ್ಧ ರಾಮನಗರ ಪುರಠಾಣೆಗೆ ದೂರು ದಾಖಲಾಗಿದೆ.

{ ಬಿ. ಶ್ರೀರಾಮುಲು } ಮಾಜಿ ಸಚಿವ

ಪರಿಶಿಷ್ಟ ಜಾತಿ ಮತ್ತು ಪಂಗಡ ಜನಾಂಗದ ಮಕ್ಕಳ ಹಣವನ್ನು ರಾಜಕಾರಣಕ್ಕೆ ಬಳಸಿಕೊಂಡವರಿಗೆ ಮುಂದಿನ ದಿನಗಳಲ್ಲಿ ಜನರೇ ತಕ್ಕ ಪಾಠ ಕಲಿಸುತ್ತಾರೆ. ಈ ಸರಕಾರವು ಪರಿಶಿಷ್ಟ ಜಾತಿ-ಪಂಗಡಗಳ ಜನರ ಪರವಾಗಿ ನಾವು ಇದ್ದೇವೆ ಎಂದು ಹೇಳಿಕೆ ನೀಡುತ್ತದೆ, ಆದರೆ ಆ ಮಕ್ಕಳನ್ನು ಉಳಿಸುವ ಕೆಲಸ ಕಾಂಗ್ರೆಸ್ ಮಾಡಲಿಲ್ಲ.

ಆರ್‌ಸಿಬಿ, ಕೆಎಸ್‌ಸಿಎ, ಡಿಎನ್‌ಎ ವಿರುದ್ಧ ಹೈಕೋರ್ಟ್‌ನಲ್ಲಿ ಅಡ್ವೊಕೇಟ್ ಜನರಲ್ ವಾದ | ಆರೋಪಿಗಳ ಜಾಮೀನಿಗೆ ವಿರೋಧ

ಕಾಲ್ತುಳಿತಕ್ಕೆ ಆರ್‌ಸಿಬಿ ಹೊಣೆ ಎಂದ ಸರಕಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆರ್‌ಸಿಬಿಯ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆಯನ್ನು ಪಲಾಯಾನಗೈಯ್ಯಲು ಯತ್ನಿಸಿದಾಗ ಬಂಧಿಸಲಾಗಿದೆ. ಆದರೂ ಈಗ ತನಿಖೆಯಲ್ಲಿ ದೋಷ ಹುಡುಕಲಾಗುತ್ತಿದೆ ಎಂದು ರಾಜ್ಯ ಸರಕಾರವು ಬುಧವಾರ ಹೈಕೋರ್ಟ್‌ನಲ್ಲಿ ಸೋಸಲೆ ಬಂಧನವನ್ನು ಸಮರ್ಥಿಸಿತು.

ತಮ್ಮ ಬಂಧನ ಅಕ್ರಮವಾಗಿರುವುದರಿಂದ ತಕ್ಷಣ ಬಿಡುಗಡೆ ಮಾಡಬೇಕು ಎಂದು ಕೋರಿ ನಿಖಿಲ್ ಸೋಸಲೆ, ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್ವರ್ಕ್ಸ್‌ನ ನಿರ್ದೇಶಕ ಸುನೀಲ್ ಮ್ಯಾಥ್ಯೂ, ಡಿಎನ್‌ಎನ ಮ್ಯಾನೇಜರ್ ಕಿರಣ್ ಕುಮಾರ್ ಮತ್ತು ಸಮಂತ್ ಮಾವಿನಕೆರೆ ಅವರ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣ ಕುಮಾರ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಸುದೀರ್ಘ ಎರಡೂವರೆ ತಾಸು ವಾದ ಪ್ರತಿವಾದ ಆಲಿಸಿದ ಪೀಠವು ಗುರುವಾರ ಮಧ್ಯಾಹ್ನ ಮಧ್ಯಂತರ ಪರಿಹಾರದ (ಆರೋಪಿಗಳ ಬಿಡುಗಡೆ ಕುರಿತಾಗಿ) ಕುರಿತು ಆದೇಶ ಮಾಡಲಾಗುವುದು ಎಂದು ಆದೇಶ ಕಾಯ್ದಿರಿಸಿತು.

ಇದಕ್ಕೂ ಮುನ್ನ, ರಾಜ್ಯ ಸರಕಾರದ ಪರವಾಗಿ ವಾದಿಸಿದ ಅಡ್ವೊಕೇಟ್ ಜನರಲ್ ಕೆ ಶಶಿಕಿರಣ್ ಶೆಟ್ಟಿ, ಕಾಲ್ತುಳಿತದಲ್ಲಿ 11 ಜನ ಮೃತಪಟ್ಟು, 50ಕ್ಕೂ ಹೆಚ್ಚು ಜನರು ಗಾಯಗೊಳ್ಳಲು ಆರ್‌ಸಿಬಿ ಮತ್ತು ಡಿಎನ್‌ಎ

ಸೂಕ್ತ ರೀತಿಯಲ್ಲಿ ಜನಸಂದಣಿ ನಿರ್ವಹಣೆ ಮಾಡದಿರುವುದೇ ಕಾರಣ ಎಂದು ಆರೋಪಿಸಿದರು. ಆರ್‌ಸಿಬಿಯು ಜೂನ್ 3ರಂದು ಅಹಮದಾಬಾದ್‌ನಲ್ಲಿ ನಡೆದಿದ್ದ ಫೈನಲ್ ಪಂದ್ಯದಲ್ಲಿ ಜಯಗಳಿಸುತ್ತಿದ್ದಂತೆ ರಾತ್ರಿ 11.30ಕ್ಕೆ ಜೂನ್ 4ರಂದು ಬೆಂಗಳೂರಿನಲ್ಲಿ ವಿಧಾನಸೌಧದಿಂದ ಚಿನ್ನಸ್ವಾಮಿ ಕ್ರೀಡಾಂಗಣದವರೆಗೆ ವಿಜಯೋತ್ಸವ ಆಚರಿಸಲಾಗುವುದು, ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಬೇಕು ಎಂದು ಟ್ವೀಟ್‌ಗಳನ್ನು ಮಾಡಿದೆ. ಆದರೆ ಇದಕ್ಕೆ ಸೂಕ್ತವಾದ ಅನುಮತಿ ಸಕ್ಷಮ ಪ್ರಾಧಿಕಾರದಿಂದ ಪಡೆದಿಲ್ಲ. ಸುಮಾರು 4 ಲಕ್ಷ ಜನರು ಕ್ರೀಡಾಂಗಣದ ಮುಂಭಾಗ ನೆರೆದಿದ್ದರು. ಡಿಎನ್‌ಎ ಈವೆಂಟ್ ಮ್ಯಾನೇಜ್‌ಮೆಂಟ್ ನೆಟ್ವರ್ಕ್ಸ್ ಆನ್‌ಲೈನ್‌ನಲ್ಲಿ ಉಚಿತ ಟಿಕೆಟ್ ಪಡೆಯುವಂತೆ ಸೂಚಿಸಿದೆ. 21 ಗೇಟ್‌ಗಳ ಪೈಕಿ 3 ಗೇಟ್‌ಗಳನ್ನು ಮಾತ್ರ ತೆರೆಯಲಾಗಿದೆ. ದುರ್ಘಟನೆಗೆ ಆರ್‌ಸಿಬಿ, ಡಿಎನ್‌ಎ ಮತ್ತು ಕೆಎಸ್‌ಸಿಎ ಕಾರಣ ಎಂದು ಬಲವಾಗಿ ಆಕ್ಷೇಪಿಸಿದರು.

ಎಫ್‌ಐಆರ್ ದಾಖಲಾಗುತ್ತಿದ್ದ ಬೆನ್ನಿಗೇ, ನಿಖಿಲ್ ಸೋಸಲೆ ಅವರು ಜೂನ್ 5ರ ರಾತ್ರಿ 10.56ಕ್ಕೆ ವಿಮಾನದ ಟಿಕೆಟ್ ಕಾಯ್ದಿರಿಸಿದ್ದು, ಬೆಳಗಿನ ಜಾವ 4.30ಕ್ಕೆ ವಿಮಾನ ನಿಲ್ದಾಣದಲ್ಲಿದ್ದಾಗ ಅವರನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಉಸ್ತುವಾರಿ ಡಿಸಿಪಿ ಅಕ್ಷಯ್ ಮಚೀಂದ್ರ ಸೂಚನೆಯ ಮೇರೆಗೆ ಸಿಸಿಬಿ ಪೊಲೀಸರು ಸೋಸಲೆಯನ್ನು ವಶಕ್ಕೆ ಪಡೆದು ಕಬ್ಬನ್ ಪಾರ್ಕ್ ಪೊಲೀಸರಿಗೆ ಒಪ್ಪಿಸಿದ್ದಾರೆ. ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯ ಉಸ್ತುವಾರಿ ಇನ್ಸ್‌ಪೆಕ್ಟರ್ ರವಿ ಅವರು ಸೋಸಲೆಯನ್ನು ಬಂಧಿಸಿದ್ದಾರೆಯೇ ವಿನಾ ಸಿಸಿಬಿ ಅಧಿಕಾರಿಗಳಲ್ಲ ಎಂದು ಸಮರ್ಥಿಸಿದರು. ಬಂಧನದಲ್ಲಿ ಯಾವುದೇ ತೆರನಾದ ಅಕ್ರಮ ನಡೆದಿಲ್ಲವಾದ್ದರಿಂದ ಅವರನ್ನು ಬಿಡುಗಡೆ ಮಾಡಬಾರದು ಎಂದು ಕೋರಿದರು.

ಸಾಕ್ಷ್ಯ ನಾಶ, ಅಭಿಮಾನಿಗಳಿಗೆ ಸರಿಯಾದ ರೀತಿಯಲ್ಲಿ ಉಚಿತ ಟಿಕೆಟ್ ಮಾಹಿತಿ ನೀಡದಿರುವುದು, ಜನಸಂದಣಿ ನಿಯಂತ್ರಿಸಲು ಸೂಕ್ತ ವ್ಯವಸ್ಥೆ, ಅಗ್ನಿಶಾಮಕ ದಳದ ವ್ಯವಸ್ಥೆ, ಬೆಳವಣಿಗೆಗಳ ಕುರಿತು ಜನರಿಗೆ ನಿರಂತರ ಮಾಹಿತಿ ಕೊರತೆ ಸೇರಿದಂತೆ 12 ಕಾರಣಗಳ ಹಿನ್ನೆಲೆಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಚಾರಕ್ಕಾಗಿ ಬ್ರ್ಯಾಂಡ್ ಮೌಲ್ಯ ಹೆಚ್ಚಿಸಲು ಜನರ ಪ್ರಾಣಕ್ಕೆ ಕುತ್ತು ತಂದು, ಎಫ್‌ಐಆರ್ ದಾಖಲಾಗುತ್ತಿದ್ದಂತೆ ನಾಪತ್ತೆಯಾಗಲು ಆರೋಪಿಗಳು ಪ್ರಯತ್ನಿಸಿದ್ದಾರೆ. ಇದಕ್ಕಾಗಿ ನಾಲ್ವರನ್ನು ಬಂಧಿಸಲಾಗಿದೆ ಎಂದು ವಿವರಿಸಿದರು.

ಬಂಧನ ಅಕ್ರಮ: ಅರ್ಜಿದಾರರ ವಾದ

ಅರ್ಜಿದಾರರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಸಂದೇಶ್ ಚೌಟ, ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನದ ನಂತರ ಆರೋಪಿಗಳನ್ನು ಬಂಧಿಸಲಾಗಿದೆ. ಸರಕಾರದ ಆಕ್ಷೇಪಣೆಯಲ್ಲಿ ಈ ಕುರಿತು ನಿರ್ದಿಷ್ಟವಾಗಿ ನಿರಾಕರಿಸಲಾಗಿಲ್ಲ. ದೀಪಕ್ ಮಹಾಜನ್ ವರ್ಸಸ್ ಜಾರಿ ನಿರ್ದೇಶನಾಲಯದ ಪ್ರಕರಣದಲ್ಲಿ ವ್ಯಕ್ತಿ ಸ್ವಾತಂತ್ರ್ಯ ನಿರಾಕರಿಸುವುದು ಬಂಧನವಾಗುತ್ತದೆ. ಇಲ್ಲಿ ಸಿಸಿಬಿ ಪೊಲೀಸರು ವಶಕ್ಕೆ ಪಡೆದಿರುವುದು ಬಂಧನವೇ ಆಗುತ್ತದೆ. ಆ ಸಂದರ್ಭದಲ್ಲಿ ಬಂಧನದ ಆಧಾರ ನೀಡಬೇಕಿತ್ತು. ಇದನ್ನು ನೀಡದಿರುವುದು ಬಂಧನವನ್ನು ಅಕ್ರಮವಾಗಿಸುತ್ತದೆ. ಸಿಸಿಬಿ ಪೊಲೀಸರು ಸೋಸಲೆಯನ್ನು ವಶಕ್ಕೆ ಪಡೆದಾಗ ನೀಡಿದ ಸೂಚನೆಯಲ್ಲಿ ಸಮಯ ಉಲ್ಲೇಖಿಸಿಲ್ಲ. ಬಂಧನ ಸಮಯ ಉಲ್ಲೇಖಿಸಬೇಕಿರುವುದು ತನಿಖಾಧಿಕಾರಿಯೋ ಅಥವಾ ಆರೋಪಿಯೋ? ಇನ್ಸ್‌ಪೆಕ್ಷನ್ ಮೆಮೊದಲ್ಲಿಯೂ ಸಮಯ ಉಲ್ಲೇಖವಿಲ್ಲ. ಬಂಧನದ ಸಮಯದಲ್ಲಿ ಒದಗಿಸಬೇಕಾದ ದಾಖಲೆಗಳನ್ನು 10 ಗಂಟೆ ವಿಳಂಬವಾಗಿ ಒದಗಿಸಿದ್ದಾರೆ. ಕಡ್ಡಾಯವಾಗಿ ನೀಡಬೇಕಿರುವ ದಾಖಲೆಗಳನ್ನು ಒದಗಿಸದಿರುವುದು ಕಾನೂನಿಗೆ ವಿರುದ್ಧವಾದ ಕ್ರಮ ಎಂದರು.

ಯೋಜನೆ ತಂತ್ರಜ್ಞಾನ ಮಾಹಿತಿಗೆ ಬಿಬಿಎಂಪಿ ಎಂಜಿನಿಯರ್‌ಗಳ ಪ್ರವಾಸ

ಸುರಂಗ ರಸ್ತೆ ಕಾಮಗಾರಿ; ಹೊರ ರಾಜ್ಯಕ್ಕೆ ತಂಡ

ಬೆಂಗಳೂರು: ನಗರದಲ್ಲಿ ಸುರಂಗ ಮಾರ್ಗ ನಿರ್ಮಾಣ ಮಾಡಲು ಬಿಬಿಎಂಪಿ ಎಂಜಿನಿಯರ್‌ಗಳ ತಂಡವು ಸುರಂಗ ರಸ್ತೆಯನ್ನೊಳಗೊಂಡ ರಾಜ್ಯಗಳಿಗೆ ಭೇಟಿ ನೀಡಿ ತಂತ್ರಜ್ಞಾನದ ಮಾಹಿತಿ ಪಡೆಯುತ್ತಿದ್ದಾರೆ.

ನಗರದಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು 18 ಕಿ.ಮೀ ಉದ್ದದ ಸುರಂಗ ಮಾರ್ಗವನ್ನು ನಿರ್ಮಾಣ ಮಾಡಲು ಸರಕಾರ ಮುಂದಾಗಿದ್ದು, ಈ ನಿಟ್ಟಿನಲ್ಲಿ ಅಗತ್ಯ ತಂತ್ರಜ್ಞಾನಗಳ ಮಾಹಿತಿ ಪಡೆಯಲು ಬಿಬಿಎಂಪಿ ಎಂಜಿನಿಯರ್‌ಗಳ ತಂಡವು ಸುರಂಗ ರಸ್ತೆಗಳನ್ನೊಳಗೊಂಡ ರಾಜ್ಯಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ. ಜೂನ್ 5ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಬಿಲ್ಡ್ ಒನ್ ಆಪರೇಟ್ ಟ್ರಾನ್ಸ್ ಮಾದರಿಯಡಿಯಲ್ಲಿ ಉತ್ತರ-ದಕ್ಷಿಣ ಸುರಂಗ ರಸ್ತೆ ಕಾರಿಡಾರ್ ನಿರ್ಮಾಣಕ್ಕೆ ಅನುಮೋದನೆ ನೀಡಿದೆ.

ನಗರದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದಾಗಿ ಉಪಮುಖ್ಯಮಂತ್ರಿ ಮತ್ತು ಬೆಂಗಳೂರು ಉಸ್ತುವಾರಿ ಸಚಿವ ಡಿ.ಕೆ. ಶಿವಕುಮಾರ್ ಈ ಯೋಜನೆಗೆ ಒತ್ತಾಯಿಸುತ್ತಿದ್ದು, ಮೊದಲ ಹಂತದಲ್ಲಿ 17,000 ಕೋಟಿ ರು. ವೆಚ್ಚದಲ್ಲಿ ಯೋಜನೆ ಕೈಗೆತ್ತಿಕೊಳ್ಳಲು ಸರಕಾರ ಮುಂದಾಗಿದೆ. ಸರಕಾರದ ನಿರ್ಧಾರ ಹಿನ್ನೆಲೆ ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದಾಗಿರುವ ಬಿಬಿಎಂಪಿ ಎಂಜಿನಿಯರ್‌ಗಳು, ಇತರ ರಾಜ್ಯಗಳಿಗೆ ಭೇಟಿ ನೀಡಿ, ಅಲ್ಲಿ ಬಳಕೆ ಮಾಡಿರುವ ತಂತ್ರಜ್ಞಾನಗಳನ್ನು ಅಧ್ಯಯನ ಮಾಡಲು ಮುಂದಾಗಿದ್ದಾರೆ.

ಈ ತಂಡವು ವಿಶಾಖಪಟ್ಟಣಕ್ಕೆ ಭೇಟಿ ನೀಡಿದ್ದು, ಅಲ್ಲಿನ ಸುರಂಗ ಮಾರ್ಗ ಯೋಜನೆಗಳನ್ನು ಅಧ್ಯಯನ ನಡೆಸಿದೆ. ರಾಯಪುರ ತಲುಪುವ 464

ಕಿಮೀ ಸುರಂಗ ರಸ್ತೆಯನ್ನು ನಿರ್ಮಿಸಲು ಎನ್‌ಎಚ್‌ಎಐ ಬಳಸುತ್ತಿರುವ ನ್ಯೂ ಆಸ್ಟ್ರೇಲಿಯನ್ ಸುರಂಗ ಮಾರ್ಗ ವಿಧಾನವನ್ನು ಅಧ್ಯಯನ ಮಾಡಲು ತಂಡ ವಿಶಾಖಪಟ್ಟಣಕ್ಕೆ ಭೇಟಿ ನೀಡಿತ್ತು ಎಂದು ತಿಳಿದುಬಂದಿದ್ದು, ಶೀಘ್ರದಲ್ಲೇ ತಂಡವು ಕಾಶ್ಮೀರಕ್ಕೂ ಭೇಟಿ ನೀಡಲಿದೆ ಎಂದು ತಿಳಿದುಬಂದಿದೆ.

ಈಗಾಗಲೇ ತಜ್ಞರು ಹಾಗೂ ನಾಗರಿಕರು ಯೋಜನೆ ಕೈಬಿಟ್ಟು, ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಬೇಕು ಎಂದು ಒತ್ತಾಯಿಸುತ್ತಿದ್ದು, ಇದರ ನಡುವಲ್ಲೇ ಅಧಿಕಾರಿಗಳು ಪೂರ್ವಸಿದ್ಧತಾ ಕಾರ್ಯಗಳನ್ನು ಆರಂಭಿಸಿದ್ದಾರೆ.

ಇತರ ನಗರಗಳಲ್ಲಿ ಮಾಡಲಾಗುತ್ತಿರುವ ಯೋಜನೆಗಳನ್ನು ಸಂಪೂರ್ಣ ವಿಶ್ಲೇಷಣೆ ಇಲ್ಲದೆ ನಗರದಲ್ಲಿ ಪುನರಾವರ್ತಿಸಲಾಗುವುದಿಲ್ಲ. ತಂತ್ರಜ್ಞಾನವನ್ನು ಅಧ್ಯಯನ ಮಾಡುವ ಬದಲು, ಎಂಜಿನಿಯರಿಂಗ್ ತಂಡವು ಇತರ ನಗರಗಳ ಕಾರ್ಯ ಸಾಧ್ಯತೆ ಮತ್ತು ಅವಶ್ಯಕತೆಗಳನ್ನು ನೋಡಬೇಕು ಮತ್ತು ಅವುಗಳನ್ನು ಬೆಂಗಳೂರಿಗೆ ಹೋಲಿಸಬೇಕು ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

ನಗರದಲ್ಲಿ ಭೂಸ್ವಾಧೀನ, ವೆಚ್ಚ ಕಳವಳಕಾರಿ

ಬಿಬಿಎಂಪಿ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ಮಾತನಾಡಿ, ಆಸ್ಟ್ರೇಲಿಯನ್ ಸುರಂಗ ಮಾರ್ಗ ವಿಧಾನವನ್ನು ಅಧ್ಯಯನ ಮಾಡಲು ವಿಶಾಖಪಟ್ಟಣಕ್ಕೆ ಹೋಗಿದ್ದೆವು. ಇತರ ನಿಯಮಿತ ವಿಧಾನಗಳಿಗೆ ಹೋಲಿಸಿದರೆ ಅಗತ್ಯವಿರುವ ಭೂಮಿ ಮತ್ತು ಅದಕ್ಕೆ ತೆಗೆದುಕೊಳ್ಳುವ ಸಮಯ. ಮೆಟ್ರೋ ರೈಲು ಯೋಜನೆಗೆ ಸುರಂಗ ಕೊರೆಯುವ ಯಂತ್ರದ ವ್ಯಾಸ 5.6 ಮೀ. ಆಗಿರುವುದರಿಂದ ನಮ್ಮ ಮೆಟ್ರೋ ಬಳಸುತ್ತಿರುವ ತಂತ್ರಜ್ಞಾನವನ್ನು ಈ ಯೋಜನೆಗೆ ಅಳವಡಿಸಿಕೊಳ್ಳಲು ಸಾಧ್ಯವಿಲ್ಲ. ಈ ಯೋಜನೆಗೆ ಕನಿಷ್ಠ 14.6 ಮೀ. ಅಗತ್ಯವಿದೆ. ಇಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸುವಾಗ ವಿಭಿನ್ನ ಮಾದರಿಗಳನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯವಿದೆ. ನಗರದಲ್ಲಿ ಭೂಸ್ವಾಧೀನ ಮತ್ತು ವೆಚ್ಚವು ಕಳವಳಕಾರಿ ವಿಚಾರವಾಗಿದೆ. ಯಾವುದೇ ಒಂದು ತೀರ್ಮಾನಕ್ಕೆ ಬರುವ ಮೊದಲು ನಾವು ಪ್ರತಿಯೊಂದು ಸುರಂಗ ಮಾರ್ಗ ವಿಧಾನಗಳನ್ನು ಅರ್ಥಮಾಡಿಕೊಳ್ಳಬೇಕು. ಹೀಗಾಗಿ ಇಲ್ಲಿಯವರೆಗೆ ಯಾವುದನ್ನೂ ಅಂತಿಮಗೊಳಿಸಲಾಗಿಲ್ಲ ಎಂದರು.

474 ಕೋಟಿ ಮಹಿಳೆಯರು ಪ್ರಯಾಣ
ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಂತಸ

ಮಹಿಳಾ ಉಚಿತ ಪ್ರಯಾಣ ಶಕ್ತಿ ಯೋಜನೆಗೆ 2 ವರ್ಷ

ಬೆಂಗಳೂರು: ರಾಜ್ಯ ಸರಕಾರದ ಗ್ಯಾರಂಟಿಗಳಲ್ಲೊಂದಾದ ಶಕ್ತಿ ಯೋಜನೆಗೆ ಉತ್ತಮ ಸ್ಪಂದನೆ ದೊರಕಿದ್ದು, ಜೂ.11, 2023ರಂದು ಆರಂಭಗೊಂಡ ಈ ಯೋಜನೆಯಲ್ಲಿ ಕೋಟ್ಯಂತರ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದಾರೆ.

ಈ ಕುರಿತು ಮಾತನಾಡಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 11 ಜೂನ್ 2023ರಂದು ಶಕ್ತಿ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಯಿತು. 2025ರ ಜೂನ್ 11ಕ್ಕೆ ಎರಡು ವರ್ಷ ಕಳೆದಿದೆ. ಜೂನ್.10, 2025ರವರೆಗೆ ಮೂರು ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಒಟ್ಟು 4,74,82,49,843 ಮಹಿಳೆಯರು ಟಿಕೆಟ್ ಮೌಲ್ಯ ಪಾವತಿಸದೇ ಶೂನ್ಯ ಟಿಕೆಟ್ ಪಡೆದು ಉಚಿತವಾಗಿ ಪ್ರಯಾಣಿಸಿದ್ದಾರೆ ಎಂದರು.

ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ 11 ಜೂನ್ 2025ರವರೆಗೆ ಪ್ರಯಾಣಿಸಿದಂತ ಮಹಿಳೆಯರ ಸಂಖ್ಯೆ 144,23,83,328 ಆಗಿದ್ದರೇ ಇದರ ಟಿಕೆಟ್ ಮೌಲ್ಯ 4556,27,06,789ರು. ಆಗಿದೆ. ಬಿಎಂಟಿಸಿ ಬಸ್‌ನಲ್ಲಿ ಇಲ್ಲಿಯವರೆಗೆ 150,69,56,654 ಮಂದಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದು, ಟಿಕೆಟ್ ಮೌಲ್ಯ 2061,04,38,637 ರು. ಆಗಿದೆ ಎಂದರು.

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ಉಚಿತವಾಗಿ 111,10,24,350 ಮಹಿಳೆಯರು ಪ್ರಯಾಣಿಸಿದ್ದರೇ ಅದರ ಹಣ 2968,47,45,225 ರು. ಆಗಿದೆ. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಬಸ್‌ನಲ್ಲಿ 68,78,85,511 ಮಹಿಳೆಯರು ಪ್ರಯಾಣಿಸಿದ್ದು, ಟಿಕೆಟ್ ಮೌಲ್ಯ 2408,58,99,134 ರು. ಆಗಿದೆ. ಮೂರು ಸಾರಿಗೆ ಬಸ್‌ಗಳಲ್ಲಿ 11 ಜೂನ್ 2023ರಿಂದ 2025ರ ಇಲ್ಲಿಯವರೆಗೆ 2 ವರ್ಷಗಳಲ್ಲಿ 4,74,82,49,843 ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದಾರೆ. ಇವರ ಟಿಕೆಟ್ ಮೌಲ್ಯವು 11994,37,89,779 ರು. ಆಗಿದೆ ಎಂದರು.

ಯಾವ ನಿಗಮ	ಎಷ್ಟು ಮಹಿಳೆಯರು ಪ್ರಯಾಣ
ಕೆಎಸ್‌ಆರ್‌ಟಿಸಿ	144,23,83,328
ಬಿಎಂಟಿಸಿ	150,69,56,654
ಎನ್‌ಡಬ್ಲ್ಯೂಕೆಆರ್‌ಟಿಸಿ	111,10,24,350
ಕೆಕೆಆರ್‌ಟಿಸಿ	68,78,85,511

ಬೆಂಗಳೂರು ನಗರ ವಿ.ವಿ 4ನೇ ಘಟಿಕೋತ್ಸವ | 39,780 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ | ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮ

ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ವಿದ್ಯಾವಂತರಿಂದ ಸಾಧ್ಯ: ರಾಜ್ಯಪಾಲರ ಅಭಿಮತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿದ್ಯಾವಂತ ಯುವಕರು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಬಹುದಾಗಿದ್ದು, ವಿಜ್ಞಾನ ಕ್ಷೇತ್ರವಾಗಿರಲಿ, ತಂತ್ರಜ್ಞಾನ ಕ್ಷೇತ್ರವಾಗಿರಲಿ, ವ್ಯವಹಾರ, ಕಲೆ ಅಥವಾ ಸಮಾಜ ಸೇವೆಯ ಕ್ಷೇತ್ರವಾಗಿರಲಿ ಪ್ರಯತ್ನಗಳಿಂದ ದೇಶವು ಪ್ರಗತಿ ಸಾಧಿಸುತ್ತದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಹೇಳಿದರು.

ಬುಧವಾರ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ ಬೆಂಗಳೂರು ನಗರ ವಿ.ವಿ 4ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಹಾನ್ ವಿಜ್ಞಾನಿ ಮತ್ತು ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಪ್ರಕಾರ ಕನಸು ಎಂದರೆ ನೀವು ಮಲಗಿರುವಾಗ ನೋಡುವುದಲ್ಲ, ನಿಮ್ಮನ್ನು ನಿದ್ದೆ ಮಾಡಲು ಬಿಡಬಾರದು ಎಂದು ಅದೇ ರೀತಿಯಲ್ಲಿ ಕನಸುಗಳನ್ನು ನನಸಾಗಿಸಲು ಶಿಕ್ಷಣವು ಅತ್ಯಂತ ದೊಡ್ಡ ಕೊಡುಗೆ ನೀಡುತ್ತದೆ ಎಂದರು. ವ್ಯಕ್ತಿಯ ಜೀವನವು ಹೊಸ ಆಲೋಚನೆಗಳು, ಜ್ಞಾನ ಮತ್ತು ಸಾಧ್ಯತೆಗಳಿಂದ ತುಂಬುವ ನಿರಂತರ ಪ್ರಯಾಣವಾಗಿದೆ. ಶಿಕ್ಷಣವು ನಮಗೆ ಉದ್ಯೋಗದ ಜತೆಗೆ ನೈತಿಕತೆ, ಸಹಾನುಭೂತಿ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ನೀಡುತ್ತದೆ ಎಂದು ಅವರು ತಿಳಿಸಿದರು.

ಬೆಂಗಳೂರು ನಗರ ವಿ.ವಿ. 4ನೇ ಘಟಿಕೋತ್ಸವವು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಥ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಯಾವುದೇ ರಾಷ್ಟ್ರದ ಅಭಿವೃದ್ಧಿಗೆ ಯುವ ಶಕ್ತಿಯೇ ಆಧಾರ ಎಂದು ಸ್ವಾಮಿ ವಿವೇಕಾನಂದರು ನಂಬಿದ್ದರು. ಅವರು ಯುವಕರನ್ನು ಸ್ವಾವಲಂಬಿ, ಧೈರ್ಯಶಾಲಿ ಮತ್ತು ಆತ್ಮವಿಶ್ವಾಸದಿಂದ ಕೂಡಿರಲು ಪ್ರೇರೇಪಿಸಿದರು. ಅದರಂತೆ ವಿದ್ಯಾವಂತ ಯುವಕರು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಬಹುದು. ಯಾವುದೇ ಕ್ಷೇತ್ರಕ್ಕೆ ಹೋದರೂ, ಅದು ವಿಜ್ಞಾನ ಕ್ಷೇತ್ರವಾಗಿರಲಿ, ತಂತ್ರಜ್ಞಾನ ಕ್ಷೇತ್ರ ವಾಗಿರಲಿ, ವ್ಯವಹಾರ, ಕಲೆ ಅಥವಾ ಸಮಾಜ ಸೇವೆಯ ಕ್ಷೇತ್ರವಾಗಿರಲಿ, ಪ್ರಯತ್ನಗಳಿಂದ ದೇಶವು ಪ್ರಗತಿ ಸಾಧಿಸುತ್ತದೆ ಎಂದು ಹೇಳಿದರು.

ಅಭಿವೃದ್ಧಿ ರಾಷ್ಟ್ರಕ್ಕಾಗಿ ಕೊಡುಗೆ ನೀಡಿ: ಭಾರತ ಸರಕಾರವು ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದ್ದು, ಇದರಲ್ಲಿ ಸ್ಥಳೀಯ ಭಾಷೆ ಮತ್ತು ಮಾತೃಭಾಷೆಯನ್ನು ಪ್ರಮುಖ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವತ್ತ ವಿಶೇಷ ಒತ್ತು ನೀಡಿದೆ. ಶಿಕ್ಷಣವನ್ನು ಹೆಚ್ಚು ಸಮಗ್ರ, ಪರಿಣಾಮಕಾರಿ ಮತ್ತು ಪ್ರಾಯೋಗಿಕವಾಗಿಸುವುದು ಇದರ ಪ್ರಮುಖ ಉದ್ದೇಶವಾಗಿದೆ. 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವುದು ಗುರಿಯಾಗಿದೆ. ರಾಷ್ಟ್ರೀಯ ಅಭಿವೃದ್ಧಿಗೆ ನಾಯಕತ್ವ ನೀಡುವುದು ಎಲ್ಲರ ಕರ್ತವ್ಯವಾಗಿದೆ. ಜ್ಞಾನ ಮತ್ತು ದೃಢಸಂಕಲ್ಪದ ಬಲದಿಂದ, ವೈಯಕ್ತಿಕ ಜೀವನದ ಜತೆಗೆ ದೇಶವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಲು ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ಪಾಟ್ನಾ ಹೈಕೋರ್ಟ್‌ನ ನ್ಯಾಯಮೂರ್ತಿ ಪಿ.ಬಿ. ಭಜಂತ್ರಿ ಮಾತನಾಡಿ, ಹೊಸ ಆರಂಭದ ಹೊಸ್ತಿಲಲ್ಲಿ ನಿಂತಿರುವ ಪದವೀಧರರು, ಜ್ಞಾನ, ಕೌಶಲ್ಯ ಮತ್ತು ಅಪರಿಮಿತ ಯುವ ಶಕ್ತಿಯಿಂದ ಶಸ್ತ್ರಸಜ್ಜಿತರಾಗಿದ್ದೀರಿ. ಬುದ್ಧಿವಂತಿಕೆಯಿಂದ ಕಾಳಜಿಯನ್ನು ಬೆಳೆಸುವ ಮತ್ತು ಜೀವನವಿಡೀ ಕಲಿಯುವ ಮನೋಭಾವವನ್ನು ರೂಪಿಸುವ ಬದ್ಧತೆ, ಈ ಮನಸ್ಸುಗಳಿಗೆ ನೀಡಬಹುದಾದ ಅತ್ಯುತ್ತಮ ಕೊಡುಗೆಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ವಿವಿ ಪ್ರಭಾರ ಕುಲಪತಿ ಕೆ.ಆರ್. ಜಲಜಾ, ಕುಲಸಚಿವ (ಮೌಲ್ಯಮಾಪನ) ಪ್ರೊ.ಬಿ. ರಮೇಶ್ ಇದ್ದರು.

ಪದವಿ ಪ್ರದಾನ

ಸಮಾರಂಭದಲ್ಲಿ ಒಟ್ಟು 39,780 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಈ ಪೈಕಿ 64 ವಿದ್ಯಾರ್ಥಿಗಳಿಗೆ ಪ್ರಥಮ ರ‍್ಯಾಂಕ್ ಪ್ರಮಾಣ ಪತ್ರ, ಚಿನ್ನದ ಪದಕ ಮತ್ತು ನಗದು ಬಹುಮಾನಗಳನ್ನು ವಿತರಿಸಿದರು.

ಬಾಬಾ ಸಿದ್ದಿಕಿ ಕೊಲೆ: ಜೀಷನ್ ಅಖ್ತರ್ ಸೆರೆ

ಮುಂಬೈ: ಮಹಾರಾಷ್ಟ್ರದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ (ಎನ್‌ಸಿಪಿ) ನಾಯಕ ಬಾಬಾ ಸಿದ್ದಿಕಿ ಕೊಲೆ ಪ್ರಕರಣದ ಪ್ರಮುಖ ಆರೋಪಿ, ಮಾಸ್ಟರ್‌ಮೈಂಡ್ ಜೀಷನ್ ಅಖ್ತರ್ ಅಲಿಯಾಸ್ ಮೊಹಮ್ಮದ್ ಯಾಸಿನ್ ಅಖ್ತರ್‌ನನ್ನು ಕೆನಡಾದಲ್ಲಿ

ಬಂಧಿಸಲಾಗಿದೆ. 2024ರ ಅ.12ರಂದು ಸಿದ್ದಿಕಿ ಕೊಲೆಯಾಗಿತ್ತು. ಗುಂಡಿಕ್ಕಿ ಕೊಲ್ಲುವ ಸಂಚು ರೂಪಿಸಿ, ಕೃತ್ಯ ನಡೆಸುವುದರಲ್ಲಿ ಜೀಷನ್ ಅಖ್ತರ್ ಪ್ರಮುಖ ಪಾತ್ರ ವಹಿಸಿದ್ದಾನೆ. ಶಾರ್ಪ್ ಶೂಟರ್‌ಗಳಾದ ಧರ್ಮರಾಜ್ ಕಶ್ಯಪ್, ಗುರ್ಮೇಲ್ ಬಲ್ಜೀತ್ ಸಿಂಗ್ ಮತ್ತು ಶಿವಕುಮಾರ್ ಗೌತಮ್ ಎಂಬ ಆರೋಪಿಗಳನ್ನು ನಿಯೋಜಿಸುವುದರಲ್ಲೂ ಜೀಷನ್ ಕೈವಾಡವಿದೆ ಎಂದು ಮುಂಬೈ ಪೊಲೀಸರು ಆರೋಪಿಸಿದ್ದಾರೆ. ಪಂಜಾಬ್ ರಾಜ್ಯದ ಜಲಂಧರ್ ಜಿಲ್ಲೆಯವನಾದ ಜೀಷನ್ ಅಖ್ತರ್, ಬಹಳಷ್ಟು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದಾನೆ. ಜಲಂಧರ್ ಗ್ರನೇಡ್ ಸ್ಫೋಟ ಪ್ರಕರಣದಲ್ಲಿ ಈ ಹಿಂದೆ ಬಂಧಿತನಾಗಿ ಬಳಿಕ ಜಾಮೀನು ಪಡೆದು ಹೊರಬಂದಿದ್ದ. ಆ ಬಳಿಕ ಕೆನಡಾಗೆ ಕಳ್ಳಮಾರ್ಗದಲ್ಲಿ ತೆರಳಿದ್ದಾನೆ ಎನ್ನಲಾಗಿದೆ.ಜೀಷನ್ ಅಖ್ತರ್, ಸದ್ಯ ತಿಹಾರ್ ಸೆರೆಮನೆಯಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಮತ್ತು ಪಾಕ್‌ನ ಐಎಸ್‌ಐ ಬೆಂಬಲಿತ ಲೂಟಿಕೋರ ಶಹಜಾದ್ ಭಟ್ಟಿಯ ಸಹಚರನೂ ಆಗಿದ್ದಾನೆ ಎನ್ನಲಾಗಿದೆ.

ವಿದೇಶಾಂಗ ನೀತಿ ಚರ್ಚೆಗೆ ಕಾಂಗ್ರೆಸ್ ಆಗ್ರಹ

ದೆಹಲಿ: ಪಾಕಿಸ್ತಾನದ ಭಯೋತ್ಪಾದನೆ ವಿಚಾರ ಮತ್ತು ಭಾರತದ ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆಯನ್ನು ಜಗತ್ತಿಗೆ ಎತ್ತಿ ತೋರಿಸಲೆಂದೇ 32 ದೇಶಗಳಿಗೆ ತೆರಳಿದ್ದ ಸಂಸದರು ಮತ್ತು ಮಾಜಿ ರಾಜತಾಂತ್ರಿಕ ಅಧಿಕಾರಿಗಳ ಏಳು ಸರ್ವಪಕ್ಷ ನಿಯೋಗಗಳೂ ದೇಶಕ್ಕೆ ವಾಪಸಾಗಿದ್ದಾರೆ. ಈಗಲಾದರೂ ಪ್ರಧಾನಿ ನರೇಂದ್ರ ಮೋದಿ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಪಹಲ್ಗಾಮ್ ಮೇಲಿನ ದಾಳಿ ನಂತರ ದೇಶದ ಭದ್ರತೆ ಹಾಗೂ ವಿದೇಶಾಂಗ ನೀತಿಯ ಸವಾಲುಗಳ ಕುರಿತು ಮುಕ್ತ ಚರ್ಚೆಗೆ ಒಪ್ಪುವರೇ ಎಂದು ಕಾಂಗ್ರೆಸ್ ಬುಧವಾರ ಪ್ರಶ್ನೆ ಮಾಡಿದೆ. ಚೀನಾ, ಪಾಕಿಸ್ತಾನ ವಿಷಯದಲ್ಲಿ ಭಾರತದ ಕಾರ್ಯತಂತ್ರ ಕುರಿತು ಪ್ರಧಾನಿ ಮೋದಿ ಒಂದು ಸಭೆಯನ್ನಾದರೂ ನಡೆಸುವರೇ? ಎಲ್ಲ ಪಕ್ಷಗಳ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಭೆ ಕರೆಯುತ್ತಾರೆಯೇ? ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ವ್ಯಂಗ್ಯವಾಗಿ ಪ್ರಶ್ನಿಸಿದ್ದಾರೆ. ಸಂಸತ್ತಿನ ವಿಶೇಷ ಅಧಿವೇಶನಕ್ಕಾಗಿ ಪ್ರತಿಪಕ್ಷಗಳು ಹಲವು ಬಾರಿ ಒತ್ತಾಯಿಸಿದರೂ ಪ್ರಧಾನಿ ಮೋದಿ ಕಡೆಗಣಿಸಿದರು ಎಂದು ರಮೇಶ್ ಬೇಸರ ವ್ಯಕ್ತಪಡಿಸಿದ್ದಾರೆ. ಪಾಕ್ ವಿರುದ್ಧ ಸೇನಾ ಕಾರ್ಯಾಚರಣೆ ವೇಳೆ ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳು ನಷ್ಟ ಅನುಭವಿಸಿದ ಬಗ್ಗೆ ರಕ್ಷಣಾ ಸಿಬ್ಬಂದಿಗಳ ಮುಖ್ಯಸ್ಥ(ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಸಿಂಗಾಪುರದಲ್ಲಿ ಹೇಳಿಕೆ ನೀಡಿರುವುದನ್ನೂ ಜೈರಾಮ್ ರಮೇಶ್ ಉಲ್ಲೇಖಿಸಿದ್ದಾರೆ.

ಮಂಗ್ಲಿ ಕಾರ್ಯಕ್ರಮದಲ್ಲಿ ಡ್ರಗ್ಸ್, ಹಲವರು ವಶಕ್ಕೆ

ಹೈದರಾಬಾದ್: ಖ್ಯಾತ ಗಾಯಕಿ ಮಂಗ್ಲಿ (ಸತ್ಯವತಿ ರಾಥೋಡ್) ಬರ್ತ್‌ಡೇ (ಜನ್ಮದಿನ) ಸಂಭ್ರಮಾಚರಣೆ ಕಾರ್ಯಕ್ರಮದ ಮೇಲೆ ತೆಲಂಗಾಣ ಪೊಲೀಸರು ದಾಳಿ ನಡೆಸಿದ್ದು ಮಾದಕ ವಸ್ತು ಪತ್ತೆಯಾಗಿದೆ. ಅದಾಗಲೇ ಡ್ರಗ್ಸ್

ಸೇವಿಸಿ ಮತ್ತಿನಲ್ಲಿದ್ದ ಹಲವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಎರ್ಲಪಲ್ಲಿಯಲ್ಲಿರುವ ತ್ರಿಪುರಾ ರೆಸಾರ್ಟ್‌ನಲ್ಲಿ ಬರ್ತ್‌ಡೇ ಪಾರ್ಟಿ ನಡೆಯುತ್ತಿದ್ದಾಗ ಮಾದಕದ್ರವ್ಯ ಬಳಕೆಯಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಚೆವೆಲ್ಲಾ ಠಾಣೆಯ ಪೊಲೀಸರು ದಿಢೀರ್ ದಾಳಿ ನಡೆಸಿದರು. ಈ ವೇಳೆ ಪಾರ್ಟಿಯಲ್ಲಿ ಗಾಂಜಾ, ವಿದೇಶಿ ಮದ್ಯ ಪತ್ತೆಯಾಗಿದೆ. ಪಾರ್ಟಿಯಲ್ಲಿ ಭಾಗಿಯಾಗಿದ್ದ ಹಲವರನ್ನು ಪೊಲೀಸರು ವಶಕ್ಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ 9 ಮಂದಿ ಮಾದಕ ವಸ್ತು ಸೇವಿಸಿರುವುದು ದೃಢಪಟ್ಟಿದೆ. ರಕ್ತದಲ್ಲಿ ಡ್ರಗ್ಸ್ ಅಂಶ ಪತ್ತೆಯಾದವರನ್ನೆಲ್ಲಾ ಬಂಧಿಸಿ, ಚೆವೆಲ್ಲಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ದಾಳಿ ವೇಳೆ ಪೊಲೀಸರು ವಿಡಿಯೊ ಮಾಡುತ್ತಿದ್ದುದಕ್ಕೆ ಗಾಯಕಿ ಮಂಗ್ಲಿ ವಿರೋಧ ವ್ಯಕ್ತಪಡಿಸಿದ್ದಾರೆ. 'ವಿಡಿಯೊ ಮಾಡುವುದನ್ನು ನಿಲ್ಲಿಸ್ತಿಯೋ ಇಲ್ವೋ?' ಎಂದು ಪೊಲೀಸ್ ಅಧಿಕಾರಿಗೇ ಗಾಯಕಿ ಗದರಿದ್ದಾರೆ ಎಂದೂ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಕರಾವಳಿಗೆ ಎಕ್ಸ್‌ಪ್ರೆಸ್ ರಸ್ತೆ: ಟೆಂಡರ್‌ಗೆ ಅಸ್ತು

ಬೆಂಗಳೂರು: ಪ್ರತಿ ಮಳೆಗಾಲದಲ್ಲೂ ರಾಜಧಾನಿಯೊಂದಿಗೆ ಸಂಪರ್ಕ ಕಡಿದುಕೊಳ್ಳುತ್ತಿರುವ ಬಂದರು ನಗರಿ ಮಂಗಳೂರಿಗೆ ಹೈಸ್ಪೀಡ್ ರಸ್ತೆ ಮತ್ತು ರೈಲು ಕಾರಿಡಾರ್ ಯೋಜನೆ ಜಾರಿಗೊಳಿಸುವ ನಿಟ್ಟಿನಲ್ಲಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ರೂಪಿಸಲು

ಹೆದ್ದಾರಿ ಸಚಿವಾಲಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿದೆ. ಕಾರಿಡಾರ್ ರಸ್ತೆ ನಿರ್ಮಾಣದ ಬಗ್ಗೆ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಂದ ಪತ್ರ ಬಂದಿದ್ದು, ಡಿಪಿಆರ್ ಸಿದ್ಧಪಡಿಸುವುದಕ್ಕೆ ಏ.30ರಂದು ಗುತ್ತಿಗೆ ನೀಡಲಾಗಿದೆ. ಈ ಪ್ರಕ್ರಿಯೆ ಪೂರ್ಣವಾಗಲು 18 ತಿಂಗಳ ಅವಧಿ ನಿರೀಕ್ಷಿಸಲಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲೆ ಸಂಸದ ಕ್ಯಾ.ಬ್ರಿಜೇಶ್ ಚೌಟ ಹೇಳಿದ್ದಾರೆ. ಈ ಹೈಸ್ಪೀಡ್ ಎಕ್ಸ್‌ಪ್ರೆಸ್ ಹೆದ್ದಾರಿಯು 4-8 ಪಥಗಳನ್ನು ಹೊಂದುವ ನಿರೀಕ್ಷೆಯಿದ್ದು, ಹಾಸನದ ಮೂಲಕ ಹಾದು ಹೋಗಲಿದೆ. ಈ ಹೆದ್ದಾರಿಯಿಂದ ಎರಡು ಮಹಾನಗರಗಳ ನಡುವಿನ ಸಾರಿಗೆ ಮೂಲಸೌಕರ್ಯ ಮತ್ತಷ್ಟು ಮೇಲ್ದರ್ಜೆಗೇರಲಿದೆ. ಇದೇ ವೇಳೆ ಶಿರಾಡಿ ಘಾಟಿಯಲ್ಲಿ ಪ್ರತ್ಯೇಕ ರೈಲು ಮಾರ್ಗ ನಿರ್ಮಿಸಲು ರೈಲ್ವೆ ಇಲಾಖೆ ಡಿಪಿಆರ್ ಸಿದ್ದಪಡಿಸಲು ಮುಂದಾಗಿದೆ. ಇಲ್ಲಿ ರಸ್ತೆ ಮತ್ತು ರೈಲು ಮಾರ್ಗವನ್ನು ಸಮಾನಾಂತರವಾಗಿ ಅಭಿವೃದ್ಧಿಪಡಿಸುವ ಸಾಧ್ಯತೆಗಳ ಬಗ್ಗೆ ರೈಲ್ವೆ ಪರಿಶೀಲನೆ ನಡೆಸಲಿದೆ ಎಂದು ಸಂಸದರು ತಿಳಿಸಿದ್ದಾರೆ.

2,423 ಹುದ್ದೆಗಳ ಭರ್ತಿಗೆ ಸ್ಟಾಫ್ ಸೆಲೆಕ್ಷನ್ ಕಮಿಷನ್ ಅರ್ಜಿ ಆಹ್ವಾನ

ಸ್ಟಾಫ್ ಸೆಲೆಕ್ಸನ್ ಕಮಿಷನ್ (ಎಸ್.ಎಸ್.ಸಿ) ಖಾಲಿ ಇರುವ ಉದ್ಯೋಗಕ್ಕಾಗಿ ಅರ್ಹ ಅಭ್ಯರ್ಥಿಗಳ ಆಯ್ಕೆ ನಡೆಸಿ ನೇಮಕಾತಿಯನ್ನು ಮಾಡಲಿದೆ. ಎಸ್ಎಸ್ಎಲ್ಸಿ ಮತ್ತು ದ್ವಿತೀಯ ಪಿಯುಸಿ ಮುಗಿಸಿ ಉತ್ತಮ ಸರಕಾರಿ ಉದ್ಯೋಗದ ಹುಡುಕಾಟದಲ್ಲಿರುವವರು ಈ ಹುದ್ದೆಗಳಿಗೆ ಅರ್ಜಿ ಹಾಕಬಹುದಾಗಿದೆ. ಕೊನೆಯ ದಿನ ಜೂನ್-23.

ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಮುಗಿಸಿ ಉತ್ತಮ ಸರಕಾರಿ ಉದ್ಯೋಗಕ್ಕಾಗಿ ಹುಡುಕಾಟ ನಡೆಸುವವರಿಗೆ ಸಿಹಿಸುದ್ದಿಯೊಂದು ಇಲ್ಲಿದೆ. ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್ಎಸ್ಸಿ) ಖಾಲಿ ಇರುವ ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿಯನ್ನು ಆಹ್ವಾನಿಸಿದೆ. ಈ ನೇಮಕಾತಿಯ ಮೂಲಕ ಒಟ್ಟು 2,423 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಭಾರತಾದ್ಯಂತ ಉದ್ಯೋಗ ಆಯ್ಕೆ ಮಾಡಲು ಸಿದ್ಧರಿರಬೇಕಾಗುತ್ತದೆ. ಆಸಕ್ತರು . ಸ್ಟಾಫ್ ಸೆಲೆಕ್ಷನ್ ಕಮಿಷನ್ ವೆಬ್ಸೈಟ್ನಲ್ಲಿ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗುತ್ತದೆ, ಕೊನೆಯ ದಿನ ಜೂ. 23.

ಕ್ಯಾಂಟೀನ್ ಅಟೆಂಡೆಂಟ್-36 ಹುದ್ದೆ, ವಿದ್ಯಾರ್ಹತೆ: ಎಸ್ಸೆಸ್ಸೆಲ್ಸಿ
ಫ್ಯೂಮಿಗೇಷನ್ ಅಸಿಸ್ಟೆಂಟ್-3 ಹುದ್ದೆ, ವಿದ್ಯಾರ್ಹತೆ: 12ನೇ ತರಗತಿ
ಜೂನಿಯರ್ ಎಂಜಿನಿಯರ್-124 ಹುದ್ದೆ, ವಿದ್ಯಾರ್ಹತೆ: 12ನೇ ತರಗತಿ
ಟೆಕ್ನಿಕಲ್ ಸೂಪರಿಟೆಂಡೆಂಟ್-8 ಹುದ್ದೆ, ವಿದ್ಯಾರ್ಹತೆ: 12ನೇ ತರಗತಿ, ಪದವಿ
ಟೆಕ್ನಿಕಲ್ ಅಟೆಂಡೆಂಟ್-21 ಹುದ್ದೆ, ವಿದ್ಯಾರ್ಹತೆ: ಎಸ್ಸೆಸ್ಸೆಲ್ಸಿ
ಸೈಂಟಿಫಿಕ್ ಅಸಿಸ್ಟಂಟ್ (ಎಲೆಕ್ಟ್ರಿಕಲ್)-9 ಹುದ್ದೆ, ವಿದ್ಯಾರ್ಹತೆ: ಪದವಿ
ಸೀನಿಯರ್ ಸೈಂಟಿಫಿಕ್ ಅಸಿಸ್ಟಂಟ್ -6 ಹುದ್ದೆ, ವಿದ್ಯಾರ್ಹತೆ: ಪದವಿ
ಎಂಟಿಎಸ್ (ಲೈಬ್ರರಿ ಅಟೆಂಡೆಂಟ್)-1 ಹುದ್ದೆ, ವಿದ್ಯಾರ್ಹತೆ: ಎಸ್ಸೆಸ್ಸೆಲ್ಸಿ
ಗರ್ಲ್ಸ್ ಕೇಡರ್ ಇನ್ಸ್ಟ್ರಕ್ಟರ್-126 ಹುದ್ದೆ, ವಿದ್ಯಾರ್ಹತೆ: ಪದವಿ
ಮ್ಯಾನೇಜರ್ ಅಕೌಂಟೆಂಟ್-1 ಹುದ್ದೆ, ವಿದ್ಯಾರ್ಹತೆ: ಪದವಿ
ಅಗ್ನಿಶಾಮಕ ಸಿಬ್ಬಂದಿ - 25 ಹುದ್ದೆ, ವಿದ್ಯಾರ್ಹತೆ: ಎಸ್ಸೆಸ್ಸೆಲ್ಸಿ
ಸಿವಿಲಿಯನ್ ಮೋಟಾರ್ ಡ್ರೈವರ್-31 ಹುದ್ದೆ, ವಿದ್ಯಾರ್ಹತೆ: ಎಸ್ಸೆಸ್ಸೆಲ್ಸಿ
ಎಂಟಿಎಸ್ (ನೈರ್ಮಲ್ಯ)-27 ಹುದ್ದೆ, ವಿದ್ಯಾರ್ಹತೆ: ಎಸ್ಸೆಸ್ಸೆಲ್ಸಿ

ವಯೋಮಿತಿ: ವಿವಿಧ ಹುದ್ದೆಗಳಿಗೆ ಅನುಗುಣವಾಗಿ 18ರಿಂದ 30 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದು. ಮೀಸಲಾತಿಗೆ ಅನುಗುಣವಾಗಿ ವಯೋಮಿತಿಯಲ್ಲಿ ಸಡಿಲಿಕೆ ಲಭ್ಯ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ, ಎಸ್ಸಿ/ಎಸ್ಟಿ ಅಭ್ಯರ್ಥಿಗಳಿಗೆ 5 ವರ್ಷ ಮತ್ತು ಪಿಡಬ್ಲ್ಯುಡಿ ಅಭ್ಯರ್ಥಿಗಳಿಗೆ 10 ವರ್ಷಗಳ ರಿಯಾಯಿತಿ ಇದೆ.

ಅರ್ಜಿ ಶುಲ್ಕ: ಎಸ್ಸಿ/ಎಸ್ಟಿ/ಪಿಡಬ್ಲ್ಯುಬಿಡಿ/ಇಎಸ್ಎಂ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕವಿಲ್ಲ. ಇತರ ಎಲ್ಲ ಅಭ್ಯರ್ಥಿಗಳು ಅರ್ಜಿ ಶುಲ್ಕವಾಗಿ 100 ರು. ಆನ್ಲೈನ್ ಮೂಲಕ ಪಾವತಿಸಬೇಕು.

ಆಯ್ಕೆ ವಿಧಾನ: ಲಿಖಿತ ಪರೀಕ್ಷೆ, ಸ್ಕಿಲ್ ಟೆಸ್ಟ್, ಡಾಕ್ಯುಮೆಂಟ್ ವೆರಿಫಿಕೇಷನ್, ಕಂಪ್ಯೂಟರ್ ಬೇಸ್ಡ್ ಎಕ್ಸಾಮಿನೇಷನ್, ಸಂದರ್ಶನದ ಮೂಲಕ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ.
ಅರ್ಜಿ ಸಲ್ಲಿಸಲು ಸ್ಟಾಫ್ ಸೆಲೆಕ್ಸನ್ ಕಮಿಷನ್ನ ವೆಬ್ಸೈಟ್ ಸಂದರ್ಶಿಸಿ: **https://ssc.gov.in/login**

ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್

411 ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ನಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಜೂನಿಯರ್ ಎಕ್ಸಿಕ್ಯುಟಿವ್, ಎಂಜಿನಿಯರ್ ಸೇರಿ ಒಟ್ಟು 411 ಹುದ್ದೆಗಳಿವೆ, ಭಾರತದಾದ್ಯಂತ ಉದ್ಯೋಗ ನಿರ್ವಹಿಸಲು ಅರ್ಜಿದಾರರು ಸಿದ್ಧರಿರಬೇಕು. ವಿವಿಧ ಹುದ್ದೆಗಳಿಗೆ ತಕ್ಕಂತೆ ಪದವಿ, ಎಂಬಿಎ, ಸ್ನಾತಕೋತ್ತರ ಪದವಿ, ಡಿಪ್ಲೊಮಾ, ದ್ವಿತೀಯ ಪಿ.ಯು ತೇರ್ಗಡೆಯಾದವರೂ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನ ಜೂನ್: 30

ಸೀನಿಯರ್ ಆಫೀಸರ್/ಅಸಿಸ್ಟಂಟ್ ಮ್ಯಾನೇಜರ್-33 ಹುದ್ದೆ. ವಿವಿಧ ಹುದ್ದೆಗಳಿಗೆ ಅನುಗುಣವಾಗಿ ಡಿಪ್ಲೊಮಾ, ಬಿ.ಎಸ್ಸಿ, ಪದವಿ, ಬಿ.ಇ ಅಥವಾ ಬಿ.ಟೆಕ್, ಸಿಎ, ಎಂಬಿಎ, ಸ್ನಾತಕೋತ್ತರ ಪದವಿ, ದ್ವಿತೀಯ ಪಿಯುಸಿ, ಪಿಹ್.ಡಿ ವಿದ್ಯಾರ್ಹತೆ ಹೊಂದಿದವರು ಅರ್ಜಿ ಸಲ್ಲಿಸಬಹುದು.

ವಯೋಮಿತಿ: ವಿವಿಧ ಹುದ್ದೆಗಳಿಗೆ ಅನುಗುಣವಾಗಿ 25 ವರ್ಷದಿಂದ 51 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದು. ಮೀಸಲಾತಿಗೆ ಅನುಗುಣವಾಗಿ ವಯೋಮಿತಿಯಲ್ಲಿ ಸಡಿಲಿಕೆ ಲಭ್ಯ. ಎಸ್ಸಿ/ಎಸ್ಟಿ ಅಭ್ಯರ್ಥಿಗಳಿಗೆ 5 ವರ್ಷ, ಪಿಡಬ್ಲ್ಯುಬಿಡಿ ಅಭ್ಯರ್ಥಿಗಳಿಗೆ 10 ವರ್ಷಗಳ ರಿಯಾಯಿತಿ ಇದೆ.

ಅರ್ಜಿ ಶುಲ್ಕ ಮತ್ತು ಆಯ್ಕೆ ವಿಧಾನ: ಅರ್ಜಿ ಶುಲ್ಕವಾಗಿ ಸಾಮಾನ್ಯ/ಒಬಿಸಿಎನ್ಸಿ/ಇಡಬ್ಲ್ಯುಎಸ್ ಅಭ್ಯರ್ಥಿಗಳು 1,180 ರು.. ಆನ್ಲೈನ್ ಮೂಲಕ ಪಾವತಿಸಬೇಕು. ಎಸ್ಸಿ/ಎಸ್ಟಿ/ಪಿಡಬ್ಲ್ಯುಬಿಡಿ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕವಿಲ್ಲ. ಕಂಪ್ಯೂಟರ್ ಬೇಸ್ಡ್ ಟೆಸ್ಟ್, ಗ್ರೂಪ್ ಟಾಸ್ಕ್ ಮತ್ತು ವೈಯಕ್ತಿಕ ಸಂದರ್ಶನದ ಮೂಲ ಅಭ್ಯರ್ತಿಗಳ ಆಯ್ಕೆ ನಡೆಯಲಿದೆ.

ವೆಬ್ಸೈಟ್: https://jobs.hpcl.co.in/Recruit_New/recruitlogin.jsp

ಹುದ್ದೆಗಳ ವಿವರ ಮತ್ತು ವಿದ್ಯಾರ್ಹತೆ

ಎಕ್ಸಿಕ್ಯುಟಿವ್ ಅಸಿಸ್ಟಂಟ್-10, ಜೂನಿಯರ್ ಎಕ್ಸಿಕ್ಯುಟಿವ್: ಸಿವಿಲ್-50, ಜೂನಿಯರ್ ಎಕ್ಸಿಕ್ಯುಟಿವ್: ಮೆಕ್ಯಾನಿಕಲ್-15, ಜೂನಿಯರ್ ಎಕ್ಸಿಕ್ಯುಟಿವ್: ಕ್ವಾಲಿಟಿ ಕಂಟ್ರೋಲ್-19, ಮೆಕ್ಯಾನಿಕಲ್ ಎಂಜಿನಿಯರ್ - 98, ಎಲೆಕ್ಟ್ರಿಕಲ್ ಎಂಜಿನಿಯರ್-35, ಸಿವಿಲ್ ಎಂಜಿನಿಯರ್-16, ಕೆಮಿಕಲ್ ಎಂಜಿನಿಯರ್-26, ಚಾರ್ಟರ್ಡ್ ಅಕೌಂಟೆಂಟ್-24, ಎಚ್ಆರ್ ಅಧಿಕಾರಿ-6, ಅಧಿಕಾರಿ-ಇಂಡಸ್ಟ್ರಿಯಲ್ ಎಂಜಿನಿಯರಿಂಗ್-1, ಅಸಿಸ್ಟಂಟ್ ಆಫೀಸರ್/ಆಫೀಸರ್-2, ಕಾನೂನು ಅಧಿಕಾರಿ-3, ಸೇಫ್ಟಿ ಆಫೀಸರ್-5, ಸೀನಿಯರ್ ಆಫೀಸರ್-ನಗರ ಅನಿಲ ವಿತರಣೆ-10, ಸೀನಿಯರ್ ಆಫೀಸರ್-ಸೇಲ್ಸ್-25, ಸೀನಿಯರ್ ಆಫೀಸರ್/ಅಸಿಸ್ಟಂಟ್ ಮ್ಯಾನೇಜರ್-6, ಚೀಫ್ ಮ್ಯಾನೇಜರ್/ಡೆಪ್ಯುಟಿ ಜನರಲ್ ಮ್ಯಾನೇಜರ್-2, ಮ್ಯಾನೇಜರ್: ಟೆಕ್ನಿಕಲ್-3, ಮ್ಯಾನೇಜರ್: ಸೇಲ್ಸ್-1, ಡೆಪ್ಯುಟಿ ಜನರಲ್ ಮ್ಯಾನೇಜರ್-1, ಡೆಪ್ಯುಟಿ ಜನರಲ್ ಮ್ಯಾನೇಜರ್: ಟೆಕ್ನಿಕಲ್ ಸರ್ವಿಸ್-1, ಡೆಪ್ಯುಟಿ ಜನರಲ್ ಮ್ಯಾನೇಜರ್: ಪಾಲಿಮರ್ ಎಕ್ಸ್ಪರ್ಟ್ ಹೆಡ್-1, ಡೆಪ್ಯುಟಿ ಜನರಲ್ ಮ್ಯಾನೇಜರ್: ಬ್ಯುಸಿನೆಸ್ ಡೆವಲಪ್ಮೆಂಟ್ ಹೆಡ್-1, ಐಎಸ್ ಆಫೀಸರ್-10, ಐಎಸ್ ಭದ್ರತಾ ಅಧಿಕಾರಿ -1, ಡೆಪ್ಯುಟಿ ಜನರಲ್ ಮ್ಯಾನೇಜರ್-1, ಡೆಪ್ಯುಟಿ ಜನರಲ್ ಮ್ಯಾನೇಜರ್: ಬಯೋ ಪ್ರೊಸೆಸ್-1, ಚೀಫ್ ಮ್ಯಾನೇಜರ್/ಡೆಪ್ಯುಟಿ ಜನರಲ್ ಮ್ಯಾನೇಜರ್: ಸೌರಶಕ್ತಿ-1, ಚೀಫ್ ಮ್ಯಾನೇಜರ್/ಡೆಪ್ಯುಟಿ ಜನರಲ್ ಮ್ಯಾನೇಜರ್ - ವೆಂಡರ್ ಡೆವಲಪ್ಮೆಂಟ್ - 1

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ: ಪದವೀಧರರಿಗೆ ಅಪ್ರೆಂಟಿಸ್ ಹುದ್ದೆ

सेन्ट्रल बैंक ऑफ़ इंडिया
Central Bank of India

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ತನ್ನ ಅಧಿಕೃತ ಅಧಿಸೂಚನೆಯ ಮೂಲಕ ಅಪ್ರೆಂಟಿಸ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಜೂನ್ 23ರೊಳಗೆ ಆನ್ಲೈನ್ನಲ್ಲಿ ಅರ್ಜಿ ಸಲ್ಲಿಸಬೇಕಾಗುತ್ತದೆ.

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಅಪ್ರೆಂಟಿಸ್ ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದು, ಇದು ಖಾಯಂ ಉದ್ಯೋಗ ಆಗಿರುವುದಿಲ್ಲ.
ಹುದ್ದೆಗಳ ಸಂಖ್ಯೆ: 4500
ಉದ್ಯೋಗ ಸ್ಥಳ: ಭಾರತದಾದ್ಯಂತ
ಹುದ್ದೆಯ ಹೆಸರು: ಅಪ್ರೆಂಟಿಸ್
ಸಂಬಳ: ತಿಂಗಳಿಗೆ ರು. 15,000/-

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ನೇಮಕಾತಿ ಅರ್ಹತಾ ವಿವರಗಳು

ಶೈಕ್ಷಣಿಕ ಅರ್ಹತೆ: ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಅಧಿಕೃತ ಅಧಿಸೂಚನೆಯ ಪ್ರಕಾರ ಅಭ್ಯರ್ಥಿಯು ಯಾವುದೇ ಮಾನ್ಯತೆ ಪಡೆದ ಮಂಡಳಿಗಳು ಅಥವಾ ವಿಶ್ವವಿದ್ಯಾಲಯಗಳಿಂದ ಪದವಿ/ ಪದವಿ ಪೂರ್ಣಗೊಳಿಸಿರಬೇಕು.
ವಯೋಮಿತಿ: ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ನೇಮಕಾತಿ ಅಧಿಸೂಚನೆಯ ಪ್ರಕಾರ, ಅಭ್ಯರ್ಥಿಯು ಕನಿಷ್ಠ 20 ವರ್ಷಗಳು ಮತ್ತು ಗರಿಷ್ಠ 28 ವರ್ಷಗಳನ್ನು ಹೊಂದಿರಬೇಕು.

ವಯೋಮಿತಿ ಸಡಿಲಿಕೆ

ಒಬಿಸಿ ಅಭ್ಯರ್ಥಿಗಳು: 03 ವರ್ಷಗಳು
TA/TU ಅಭ್ಯರ್ಥಿಗಳು: 05 ವರ್ಷಗಳು
ವಿಶೇಷಚೇತನರು (ಯುಆರ್) ಅಭ್ಯರ್ಥಿಗಳು: 10 ವರ್ಷಗಳು
ವಿಶೇಷಚೇತನರು (ಒಬಿಸಿ) ಅಭ್ಯರ್ಥಿಗಳು: 13 ವರ್ಷಗಳು
ವಿಶೇಷಚೇತನರು (ಎಸ್ಸಿ/ಎಸ್ಟಿ) ಅಭ್ಯರ್ಥಿಗಳು: 15 ವರ್ಷಗಳು

ಅರ್ಜಿ ಶುಲ್ಕ

ವಿಶೇಷಚೇತನ (ಸಾಮಾನ್ಯ)ಅಭ್ಯರ್ಥಿಗಳು: ರು. 400/-
ಎಸ್/ಎಸ್ಟಿ/ಎಲ್ಲಾ ಮಹಿಳೆಯರು/ಇಡಬ್ಲ್ಯುಎಸ್ ಅಭ್ಯರ್ಥಿಗಳು: ರು. 600/-
ಇತರ ಅಭ್ಯರ್ಥಿಗಳು: ರೂ. 800/-
ಆಯ್ಕೆ ಪ್ರಕ್ರಿಯೆ: ಆನ್ಲೈನ್ ಪರೀಕ್ಷೆ, ಸ್ಥಳೀಯ ಭಾಷಾ ಪರೀಕ್ಷೆ
ವೆಬ್ಸೈಟ್ ವಿಳಾಸ: https://www.centralbankofindia.co.in/en/recruitments

ಮಾಹಿತಿ: ಆರ್.ಕೆ. ಬಾಲಚಂದ್ರ,
ಬ್ಯಾಂಕಿಂಗ್ ಹಾಗೂ ಸಾಫ್ಟ್ಸ್ಕಿಲ್ ತರಬೇತುದಾರರು

51000 ಅತಿಥಿ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿ

ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕೃತ ಅಧಿಸೂಚನೆಯ ಮೂಲಕ ಅತಿಥಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಭ್ಯರ್ಥಿಗಳು ಜೂನ್-20ರ ಮೊದಲು ಆನ್ಲೈನ್ನಲ್ಲಿ ಅರ್ಜಿ ಸಲ್ಲಿಸಬಹುದು.

ಸರಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 9499 ಶಿಕ್ಷಕರ ಹುದ್ದೆಗಳಿಗೆ ನೇರ ನೇಮಕಾತಿ/ಬಡ್ತಿ/ವರ್ಗಾವಣೆಯ ಮೂಲಕ ಭರ್ತಿ ಮಾಡುವವರೆಗೆ ಅಥವಾ ಪ್ರಸಕ್ತ ಶೈಕ್ಷಣಿಕ ವರ್ಷದ ಮಾರ್ಚ್ 2026ರ ಅಂತ್ಯದವರೆಗೆ, ಯಾವುದು ಮೊದಲೋ ಅಲ್ಲಿಯ ವರೆಗೆ, ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಅತಿಥಿ ಶಿಕ್ಷಕರನ್ನು ಗೌರವಧನದ ಆಧಾರದ ಮೇಲೆ ತಾತ್ಕಾಲಿಕ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತಿದೆ.
ಒಟ್ಟು ಹುದ್ದೆಗಳ ಸಂಖ್ಯೆ: 51000
ಉದ್ಯೋಗ ಸ್ಥಳ: ಕರ್ನಾಟಕ
ಹುದ್ದೆಯ ಹೆಸರು: ಅತಿಥಿ ಶಿಕ್ಷಕರು
ಸಂಬಳ: ತಿಂಗಳಿಗೆ ರು.12500/-
ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಹುದ್ದೆ: 40000
ಸರಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಹುದ್ದೆ: 11000
ಅತಿಥಿ ಶಿಕ್ಷಕರ ಹುದ್ದೆಗಳ ಅರ್ಜಿಗಳನ್ನು/ಸ್ಕ್ಯಾನ್ ಪ್ರತಿಯನ್ನು ಆಯುಕ್ತರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು-01 ಇಲ್ಲಿಗೆ ಜೂನ್-20 ರೊಳಗೆ ಕಳುಹಿಸಬೇಕು.
ಇ-ಮೇಲ್ ವಿಳಾಸ: est4cpibng@gmail.com ಮೂಲಕ ಸಲ್ಲಿಸಬಹುದು.
ಆನ್ಲೈನ್ ಅರ್ಜಿ ವಿವರ: https://schooleducation.karnataka.gov.in/en

ದಯಾ ಕಿರಣ ಪೋಷಕರ ಆಶಾಕಿರಣ ಅನಾಥ ಮಕ್ಕಳ ಪಾಲಿಗೆ ಸುರಕ್ಷಿತ ತಾಣ

ಜಿಲ್ಲಾ ನೋಟ

ರಂಗನಾಥ ಕೆ.ಹೊನ್ನಮರಡಿ, ತುಮಕೂರು

ಅನಾಥ ಮಕ್ಕಳನ್ನು ರಕ್ಷಿಸಿ ಆರೈಕೆ ಮಾಡುತ್ತಿರುವ ಜಿಲ್ಲೆಯ ಕುಣಿಗಲ್ ತಾಲೂಕಿನ ವಾಣಿಗೆರೆಯ ದಯಾಕಿರಣ ಸಂಸ್ಥೆ ರಾಜ್ಯದಲ್ಲಿಯೇ ಮಾದರಿಯಾಗಿದೆ. ಏಡ್ಸ್ ಪೀಡಿತ ಮಕ್ಕಳನ್ನು ಪೋಷಿಸುತ್ತಿರುವ ದಯಾಭವನ ಸಂಸ್ಥೆಯಡಿ 2019ರಿಂದ ಸೇವೆ ಮಾಡುತ್ತಿರುವ 'ದಯಾ ಕಿರಣ' ಸಂಸ್ಥೆ ಇಲ್ಲಿಯವರೆಗೂ 210 ಅನಾಥ ಮಕ್ಕಳನ್ನು ರಕ್ಷಿಸಿದೆ.

ಮಕ್ಕಳ ಆರೈಕೆಯೇ ಆದ್ಯತೆ

ಈಗಾಗಲೇ 119 ಮಕ್ಕಳನ್ನು ದೇಶ, ವಿದೇಶದ ಪೋಷಕರಿಗೆ ಕಾನೂನಾತ್ಮಕವಾಗಿ ದತ್ತು ನೀಡಿದೆ. ಪ್ರಸ್ತುತ ಕೇಂದ್ರದಲ್ಲಿ ವಿಶೇಷ ಮಕ್ಕಳು ಸೇರಿದಂತೆ 18 ಮಕ್ಕಳಿದ್ದಾರೆ. ಪೋಷಕರಿಗಿಂತ ಮಿಗಿಲಾಗಿ ಕೇಂದ್ರದಲ್ಲಿ ಮಕ್ಕಳನ್ನು ಆರೈಕೆ ಮಾಡುತ್ತಿದ್ದಾರೆ. ದಯಾಕಿರಣ ಸಂಸ್ಥೆಯ ಕಾರ್ಯದರ್ಶಿ ಫಾ. ಜಿನೇಶ್.ಕೆ ವರ್ಕಿ ನೇತೃತ್ವದಲ್ಲಿ ಅನಾಥ ಮಕ್ಕಳಿಗೆ ಕಿಂಚಿತ್ತೂ ಕೊರತೆಯಾಗದಂತೆ ಸುಂದರವಾದ ಪರಿಸರದಲ್ಲಿ ನೋಡಿಕೊಳ್ಳಲಾಗುತ್ತಿದೆ.

ಏಕೈಕ ದತ್ತು ಸಂಸ್ಥೆ

ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಭಾರತ ಸರಕಾರ) ಹಾಗೂ ರಾಜ್ಯ ದತ್ತು ಸಂಪನ್ಮೂಲ ಪ್ರಾಧಿಕಾರದ ಆಡಳಿತ, ಪ್ರಾಧಿಕಾರಕ್ಕೆ ಒಳಪಟ್ಟಿರುವ ಜಿಲ್ಲೆಯ ಏಕೈಕ ದತ್ತು ಸಂಸ್ಥೆ ಇದು. ವಿವಿಧ ರಾಜ್ಯ, ವಿದೇಶದ ಪೋಷಕರಿಗೆ ಅನಾಥ ಮಕ್ಕಳನ್ನು ದತ್ತು ನೀಡಿ ಕೇಂದ್ರ, ರಾಜ್ಯ ಸರಕಾರಗಳಿಂದ ಪ್ರಶಂಸೆ ಗಳಿಸಿದೆ.

ವಿಶೇಷ ಮಕ್ಕಳ ರಕ್ಷಣೆ

ವಿಶೇಷ ಮಕ್ಕಳನ್ನು ಪಡೆಯಲು ಹಲವು ಪೋಷಕರು ಮುಂದೆ ಬಂದಿದ್ದಾರೆ. ಕಾನೂನು ಪ್ರಕ್ರಿಯೆ ಮುಗಿದ ನಂತರ ದತ್ತು ನೀಡಲಾಗುವುದು. ಪೋಷಕರಿಗೆ ನೀಡಿದ ನಂತರವೂ ಕಾನೂನಿನನ್ವಯ ಮಕ್ಕಳ ಬೆಳವಣಿಗೆ ಬಗ್ಗೆ ಸಂಸ್ಥೆಯ ವತಿಯಿಂದ ಕಾಳಜಿ ವಹಿಸಲಾಗುವುದು. ಈಗಾಗಲೇ ಮಕ್ಕಳನ್ನು ದತ್ತು ಪಡೆಯಲು ಹಲವು ಅರ್ಜಿ ಬಂದಿದ್ದು, ಪ್ರಕ್ರಿಯೆಯಲ್ಲಿವೆ.

ವೈದ್ಯರ ಉಚಿತ ಚಿಕಿತ್ಸೆ

ದಯಾಕಿರಣ ಸಂಸ್ಥೆಯಲ್ಲಿನ ಅನಾಥ ಮಕ್ಕಳಿಗೆ ಕುಣಿಗಲ್ನ ಮಕ್ಕಳ ತಜ್ಞ ಡಾ.ಮಂಜುನಾಥ್ ಅವರು ಉಚಿತವಾಗಿ ಚಿಕಿತ್ಸೆ ನೀಡುತ್ತಿದ್ದಾರೆ. ಕೇಂದ್ರದಿಂದ ದತ್ತು ನೀಡುವವರೆಗೂ ಇವರು ಮಕ್ಕಳ ಆರೋಗ್ಯವನ್ನು ಬಹಳ ಕಾಳಜಿಯಿಂದ ನೋಡಿಕೊಳ್ಳುತ್ತಾರೆ.

- ಮಕ್ಕಳ ರಕ್ಷಣೆಯಲ್ಲಿ ರಾಜ್ಯದಲ್ಲೇ ಪ್ರಥಮ
- ಅನಾಥ ಮಕ್ಕಳ ಪಾಲಿನ ಬೆಳಕು ದತ್ತು ಸಂಸ್ಥೆ
- ಸಮಾಜಮುಖಿ ಸೇವೆಯ ಒಂದು ಎನ್ಜಿಒ
- ಉಭಯ ಸರಕಾರಗಳಿಂದ ಪ್ರಶಂಸೆ ಗಳಿಸಿದೆ

ಮಕ್ಕಳನ್ನು ಬಿಸಾಕಬೇಡಿ

ಮಕ್ಕಳನ್ನು ಸಾಕಲಾಗದ ಪೋಷಕರು ಭವಿಷ್ಯದ ಕುಡಿಗಳನ್ನು ಅನಾಥ ಮಾಡಬೇಡಿ. ಇಂತಹ ಮಕ್ಕಳ ಪಾಲಿಗೆ ದಯಾಕಿರಣ ಸಂಸ್ಥೆ ಹಗಲಿರುಳು ಕಾರ್ಯನಿರ್ವಹಿಸುತ್ತಿದೆ. ಕೆಲವರು ಎಲ್ಲೆಂದರಲ್ಲಿ ಹುಟ್ಟಿದ ಮಕ್ಕಳನ್ನು ಬಿಸಾಕಿ ಹೋಗುತ್ತಾರೆ. ಇದೊಂದು ಅಮಾನವೀಯ ಕೃತ್ಯ. ನಿಮಗೆ ಮಕ್ಕಳು ಬೇಡವಾಗಿದ್ದರೆ ನಮ್ಮ ಸಂಸ್ಥೆಗೆ ತಂದು ಕೊಡಿ. ಇಲ್ಲಿ ತಂದು ಬಿಡಿ ಎಂದು ದಯಾಕಿರಣ ಸಂಸ್ಥೆಯ ವ್ಯವಸ್ಥಾಪಕ ರಮೇಶ್ ಮನವಿ ಮಾಡಿಕೊಂಡಿದ್ದಾರೆ.

210 ಅನಾಥ ಮಕ್ಕಳ ರಕ್ಷಣೆ

ಇದು ಜಿಲ್ಲೆಯ ಏಕೈಕ ದತ್ತು ಸಂಸ್ಥೆ. ಕಾನೂನಾತ್ಮಕವಾಗಿ ಕಾರ್ಯನಿರ್ವಹಿಸುತ್ತಿರುವ ದಯಾಕಿರಣ ಒಂದು ಎನ್ಜಿಒ. ಇದುವರೆಗೆ 210 ಅನಾಥ ಮಕ್ಕಳ ರಕ್ಷಣೆ ಮಾಡಿದೆ. 119 ಮಕ್ಕಳನ್ನು ದೇಶ, ವಿದೇಶದ ಪೋಷಕರಿಗೆ ದತ್ತು ನೀಡಲಾಗಿದೆ. ದೇಶದ ವ್ಯಾಪ್ತಿಯಲ್ಲಿ 108 ಮಕ್ಕಳನ್ನು ದತ್ತು ನೀಡಲಾಗಿದೆ.ವಿದೇಶದ ಪೋಷಕರಿಗೆ 11 ಮಕ್ಕಳನ್ನು ದತ್ತು ನೀಡಲಾಗಿದೆ. ಪ್ರಸ್ತುತ 18 ಮಕ್ಕಳು ಕೇಂದ್ರದಲ್ಲಿದ್ದಾರೆ. ವಿಶೇಷ ಮಕ್ಕಳ ಆರೈಕೆ ಮೂಲಕವೂ ಮಾನವೀಯತೆಯನ್ನು ಮೆರೆಯುತ್ತಿದೆ.

18 ವರ್ಷಗಳಿಂದ ಏಡ್ಸ್ ಪೀಡಿತ ಮತ್ತು ಎರಡ್ಮೂರು ವರ್ಷದಿಂದ ಅನಾಥ ಮಕ್ಕಳನ್ನು ಬೆಳೆಸುವ ಕಾರ್ಯ ದೇವರ ಸೇವೆಗೆ ಸಮಾನ. ದಯಾಕಿರಣ ಸಂಸ್ಥೆಗೆ ಬಂದ ಮಕ್ಕಳು ಅನಾಥರಲ್ಲ. ಅವರನ್ನು ಪೋಷಕರಿಗಿಂತಲೂ ಹೆಚ್ಚು ಕಾಳಜಿಯಿಂದ ನೋಡಿಕೊಳ್ಳಲಾಗುತ್ತದೆ. ಅನಾಥ ಮಕ್ಕಳಿದ್ದರೆ ದಯಾಕಿರಣ ಸಂಸ್ಥೆಗೆ ತಂದುಕೊಡಿ

-ಫಾ. ಜಿನೇಶ್.ಕೆ ವರ್ಕಿ,
ಕಾರ್ಯದರ್ಶಿ, ದಯಾಭವನ

ಜಿಲ್ಲೆ ಜನ ಮರೆತಿಲ್ಲ ಆಕ್ಸಿಜನ್ ದುರಂತ ಕೊಟ್ಟ ಭರವಸೆ ಮರೆಯಿತೆ ಸರಕಾರ?

ಜಿಲ್ಲಾ ನೋಟ

ದೇವನೂರು ಶ್ರೀನಿವಾಸ್, ಚಾಮರಾಜನಗರ

ಚಾಮರಾಜನಗರದಲ್ಲಿ ಕೋರೋನಾ ಎರಡನೇ ಅಲೆ ವೇಳೆ ಮೃತಪಟ್ಟ ಕುಟುಂಬಗಳಿಗೆ ಅಂದಿನ ಸರಕಾರ ಎರಡರಿಂದ ಮೂರು ಲಕ್ಷ ರು. ಪರಿಹಾರ ನೀಡಿ ಕೈತೊಳೆದುಕೊಂಡಿತು. ಅದೇ ಆರ್ಸಿಬಿ ಸಂಭ್ರಮಾಚರಣೆಯ ವೇಳೆ ಕಾಲ್ತುಳಿತದಲ್ಲಿ ಮೃತ ಪಟ್ಟವರಿಗೆ 25 ಲಕ್ಷ ರು.ಪರಿಹಾರ ನೀಡಿದೆ. ಜತೆಗೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮವನ್ನೂ ತಕ್ಷಣವೇ ಜರುಗಿಸಿದೆ. ಆದರೆ, ಅದೇ ರೀತಿ ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ಕೋರೋನಾದ ಎರಡನೇ ಅಲೆ ವೇಳೆ ಆಕ್ಸಿಜನ್ ಸಿಗದೇ ಮೃತ ಪಟ್ಟ ಕುಟುಂಬಗಳಿಗೆ ಸೂಕ್ತ ಪರಿಹಾರವೂ ಸಿಗಲಿಲ್ಲ, ಒಬ್ಬ ಸಣ್ಣ ಮಟ್ಟದ ಅಧಿಕಾರಿಯ ಮೇಲೆ ಯಾವ ಕ್ರಮವೂ ಆಗಲಿಲ್ಲ. ಏಕೆ ಈ ತಾರತಮ್ಯ ಎಂಬ ಪ್ರಶ್ನೆ ಜಿಲ್ಲೆಯ ಸಂತ್ರಸ್ತ ಕುಟುಂಬಗಳನ್ನು ಕಾಡುತ್ತಿದೆ.

ಆಕ್ಸಿಜನ್ ದುರಂತ

ಕೊರೊನಾ ಎರಡನೇ ಅಲೆ 2021 ರ ಮೇ 2 ರ ರಾತ್ರಿ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಆಮ್ಲಜನಕ ಸಿಗದೇ 36 ಮಂದಿ ಅಸುನೀಗಿದ್ದರು. ಅದರಲ್ಲೂ ಎಲ್ಲಾ ಬಡ ಕುಟುಂಬಗಳು, ಕೆಲವರು ಸಂಸಾರದ ಹೊಣೆ ಹೊತ್ತವರು,ಇನ್ನು ಕೆಲವರು ಕುಟುಂಬದ ಆಧಾರಸ್ತಂಭವಾದವರು, ಈ ವೇಳೆ ಮೃತ ಪಟ್ಟ ಒಂದೊಂದು ಕುಟುಂಬವೂ ಒಂದೊಂದು ದಾರುಣ ಕಥೆಯನ್ನೇ ಹೇಳುತ್ತವೆ. ಈ ದುರಂತಕ್ಕೂ ಮೊದಲು ಕುಟುಂಬಗಳು ನಿರುಮ್ಮಳವಾಗಿದ್ದವು. ಆದರೆ ಆ ಘನಘೋರ ದುರಂತದ ಬಳಿಕ ಕುಟುಂಬ ನಿರ್ವಹಣೆಗೆ ಪರಾದಾಡುವ ಸ್ಥಿತಿಯಲ್ಲಿವೆ.

ಜಿಲ್ಲಾಸ್ಪತ್ರೆಯೇ ಸ್ಮಶಾನ

ಅಂದು ಮಧ್ಯೆರಾತ್ರಿ ಏಕಾಏಕಿ ಆಮ್ಲಜನಕದ ಕೊರತೆಯಿಂದ ನರಳಾಡಿ ಎಲ್ಲರ ಕಣ್ಮುಂದೇ ಒದ್ದಾಡಿ ಒದ್ದಾಡಿ ಮೃತಪಟ್ಟವರೇ ಹೆಚ್ಚು. ಸುಮಾರು 36 ಮಂದಿ ಮೃತಪಟ್ಟಿದ್ದರು. ಜಿಲ್ಲಾಸ್ಪತ್ರೆಯ ಒಳಗೆ ಹಾಗೂ ಹೊರಗೆ ಮೃತಪಟ್ಟ ಘಟನೆ ಇಡೀ ದೇಶದ ಗಮನ ಸೆಳೆದಿತ್ತು. ಕರ್ನಾಟಕ ರಾಜ್ಯದ ಮಟ್ಟಿಗೆ ಇದೊಂದು ಕರಾಳ ಘಟನೆಯಾಗಿ ಇಂದಿಗೂ ಕಾಡುವ ದುರಂತ ನೆನಪು ಮಾತ್ರ ಜಿಲ್ಲೆಯ ಜನರ ಮನಸಿನಿಂದ ಮಾಸದೇ ಉಳಿದಿದೆ.

ಗಣ್ಯ ನಾಯಕರ ಭೇಟಿ

ಈ ದುರಂತ ಸಂಭವಿಸುತ್ತಿದ್ದಂತೆ ಸ್ಥಳಕ್ಕೆ ಭೇಟಿ ನೀಡಿದ್ದ ಅಂದಿನ ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅದ್ಯಕ್ಷ ಡಿ.ಕೆ.ಶಿವಕುಮಾರ್ ಒಳಗೊಂಡ ತಂಡ ಭೇಟಿ ನೀಡಿ ಮೃತ ಕುಟುಂಬಕ್ಕೆ ಸಾಂತ್ವನ ಹೇಳಿ ಧೈರ್ಯ ತುಂಬುವ ಕೆಲಸ ಮಾಡಿದ್ದರು.
ಮೃತ ಕುಟುಂಬಕ್ಕೆ ಒಂದು ಲಕ್ಷ ಪರಿಹಾರವನ್ನು ತಕ್ಷಣ ನೀಡುವ ಮೂಲಕ ಉತ್ತಮ ಕೆಲಸ ಮಾಡಿ ಜನ ಮನ ಗೆದ್ದಿತ್ತು. ಅಲ್ಲದೇ ಆಡಳಿತ ವರ್ಗದಿಂದ ಮಾಹಿತಿ ಪಡೆದು ಘಟನೆಯ ಬಗ್ಗೆ ತಮ್ಮದೇಯಾದ ತನಿಖಾ ವರದಿಯನ್ನು ಸಿದ್ದಪಡಿಸಿಕೊಂಡಿತ್ತು.

ಭರವಸೆ ಈಡೇರಲ್ಲಿಲ್ಲ

ನಮ್ಮ ಸರಕಾರ ಬಂದರೆ 36 ಮೃತ ಕುಟುಂಬಗಳಿಗೆ ಸೂಕ್ತ ಪರಿಹಾರ ಹಾಗೂ ಉದ್ಯೋಗ ನೀಡಿ, ಇದಕ್ಕೆ ಕಾರಣರಾದ ಅಧಿಕಾರಿಗಳನ್ನ ಕೂಡಲೇ ಬಂಧಿಸಿ ಕ್ರಮ ಜರಗಿಸುವುದಾಗಿ ಹೇಳಿದ್ದರು. ಅಲ್ಲದೇ ಈ ಘಟನೆ ಆರೋಗ್ಯ ಸಚಿವ ಸುಧಾಕರ್ , ಜಿಲ್ಲಾ ಉಸ್ತುವಾರಿ ಸಚಿವ ಸುರೇಶ್ ಕುಮಾರ್, ಡಿಸಿ, ಡಿಎಚ್ಒ ಸೇರಿದಂತೆ ಎಲ್ಲರ ಮೇಲೂ ಎಫ್ಐಆರ್ ಹಾಕಬೇಕು ಎಂದು ಅಣದು ಪಟ್ಟು ಹಿಡಿದ್ದಿದ್ದರು. ಆದರೆ ತಮ್ಮದೇ ಸರಕಾರ ಬಂದರೂ ಈವರವಿಗೂ ತಪ್ಪಿತಸ್ಥರ ವಿರುದ್ದ ಯಾವ ಕ್ರಮವೂ ಆಗಿಲ್ಲ ಎಂದು ನೊಂದ ಕುಟುಂಬಗಳು ಆಕ್ರೋಶ ಹೊರ ಹಾಕುತ್ತಿವೆ.

- » ಕಾಲ್ತುಳಿತದ ಘಟನೆ ಪರಿಹಾರದ ಬೆನ್ನಲ್ಲೇ ಅಪಸ್ವರ
- » ಚಾ.ನಗರದಲ್ಲಿ ಸತ್ತರೆ ಬರೀ 3 ಲಕ್ಷ ರು. ಪರಿಹಾರ
- » ಆಕ್ಸಿಜನ್ ದುರಂತದ ಕುಟುಂಬಸ್ಥರಿಂದ ಆಕ್ರೋಶ
- » ಎಲ್ಲ ಜೀವಕ್ಕೂ ಒಂದೇ ಬೆಲೆ ಅಲ್ವಾ ಸಂತ್ರಸ್ತ ನೊಂದವರ ಪ್ರಶ್ನೆ

ಘೋಷಿಸಿದ ಎರಡು ಲಕ್ಷ ರೂ. ಪರಿಹಾರವನ್ನು ತಮಗೆ ಸರಿಯಾಗಿ ನೀಡಿಲ್ಲ, ಯಾವ ನೌಕರರ ವಿರುದ್ಧವು ಕ್ರಮ ಆಗಲಿಲ್ಲ, ಬೆಂಗಳೂರಿಗೆ ಒಂದು ಕಾನೂನು ಚಾಮರಾಜನಗರಕ್ಕೆ ಮತ್ತೊಂದು ಕಾನೂನಾ? ಸರಕಾರಿ ಕೆಲಸ ಕೂಡ ಕೊಟ್ಟಿಲ್ಲ. ಕಾಂಗ್ರೆಸ್ ಸರಕಾರ ನೌಕರಿ ಭರವಸೆ ಕೊಟ್ಟಿತ್ತು. ರಾಹುಲ್ ಗಾಂಧಿ ಅವರು ಕೂಡ ಉದ್ಯೋಗದ ಭರವಸೆ ನೀಡಿದ್ದರು. ಭರವಸೆ ಇದುವರೆವಿಗೂ ಈಡೇರಿಲ್ಲ.

-ನಾಗರತ್ನ,
ಸಂತ್ರಸ್ತ ಕುಟುಂಬದ ಸದಸ್ಯೆ

ಆರ್ಸಿಬಿ ಸಾವಿಗೆ 25 ಲಕ್ಷ ಪರಿಹಾರ

ಬೆಂಗಳೂರಲ್ಲಿ ಆರ್ಸಿಬಿ ಸಂಭ್ರಮಾಚರಣೆ ಕಾಲ್ತುಳಿತದಲ್ಲಿ ಮೃತಪಟ್ಟ ಕೂಡಲೇ ಸರಕಾರ ಪೊಲೀಸ್ ಅಧಿಕಾರಿಗಳನ್ನ ಅಮಾನತು ಮಾಡಿ, ಮೃತರ ಕುಟುಂಬಕ್ಕೆ 25 ಲಕ್ಷ ಪರಿಹಾರ ನೀಡಿದೆ. ಆದರೆ ಅದೇ ಕಾನೂನು ಚಾಮರಾಜನಗರ ಜಿಲ್ಲೆಯ ಆಕ್ಸಿಜನ್ ದುರಂತದ ಕುಟುಂಬ ಪರಿಹಾರ ಹಾಗೂ ಸಂಬಂಧಪಟ್ಟವರಿಗೆ ಕ್ರಮ ಏಕೆ ಇಲ್ಲ ಎನ್ನುವ ಪ್ರಶ್ನೆಯನ್ನ ಕುಟುಂಬದವರ ಜೊತೆ ಸಂಘ ಸಂಸ್ಥೆಗಳು ಸಹ ಧ್ವನಿ ಎತ್ತಿವೆ. ಕುಟುಂಬದ ಸದಸ್ಯರಿಗೆ ಸಮರ್ಪಕ ಪರಿಹಾರ ನೀಡದೇ ಇರುವುದಕ್ಕೆ ಸಂಘ ಸಂಸ್ಥೆಗಳು ಹೋರಾಡುವುದಕ್ಕೆ ನಿರ್ಧರಿಸಿದೆ.
ಆಮ್ಲಜನಕ ದುರಂತಕ್ಕೆ ಹೊಣೆ ಹೊರಬೇಕಾದ ಸರಕಾರ ಪರಿಹಾರ, ಉದ್ಯೋಗ ನೀಡದೇ ಅನ್ಯಾಯ ಎಸಗಿದೆ ಎಂದು ರೈತ ಸಂಘಟನೆ, ದಲಿತ ಸಂಘಟನೆ, ಕನ್ನಡಪರ ಹೋರಾಟಗಾರರು, ಎಸ್ಡಿಪಿಐ ಸಂಘಟನೆಗಳು ಸಂತ್ರಸ್ತರ ಜೊತೆ ಸಭೆ ಸೇರಿ ಚರ್ಚಿಸಿ ತೀವ್ರ ಆಕ್ರೋಶ ಹೊರಹಾಕಿದ್ದಾರೆ.
ಒಟ್ಟಿನಲ್ಲಿ, ದುರಂತ ನಡೆದು ವರ್ಷಗಳು ಉರುಳುತ್ತಿದ್ದರೂ ಈವರವಿಗೂ ಸರಕಾರ ಮಾತ್ರ ಆಕ್ಸಿಜನ್ ದುರಂತದ ಸಂತ್ರಸ್ತರ ನೋವಿಗೆ ಸ್ಪಂದಿಸದೇ ಇರುವುದು ಮಾತ್ರ ಆಡಳಿತ ವ್ಯವಸ್ಥೆಯ ದುರಂತವೇ ಸರಿ..!

ವಿಶ್ವವಾಣಿ ಬೆಂಗಳೂರು 12-06-2025 ಗುರುವಾರ

ವಿರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ @vishwavaninews

ಚಿತ್ತವಿಹಾರ

ಅರಿವಿನ ಹರಿವು

● ಮಾಯಾ ಬಾಲಚಂದ್ರ

ನಮ್ಮ ಬಗ್ಗೆ ನಾವು ಏನೆಂದುಕೊಂಡಿರುತ್ತೇವೆಯೋ ಹಾಗೆಯೇ ವರ್ತಿಸುತ್ತಿರುತ್ತೇವೆ. ನಮ್ಮ ಕ್ಷಮತೆ, ಕಾರ್ಯವೈಖರಿ, ತೆಗೆದುಕೊಳ್ಳುವ ನಿರ್ಧಾರಗಳು ಎಲ್ಲವೂ ನಾವು ಮನಸ್ಸಿನಲ್ಲಿ ಮುದ್ರಿಸಿಕೊಂಡ ನಮ್ಮ ವ್ಯಕ್ತಿತ್ವದ ನೀಲಿ ನಕಾಶೆಯನ್ನು ಅವಲಂಬಿಸಿಯೇ ಇರುತ್ತವೆ.

ಅರಸನ ಪುತ್ರನೊಬ್ಬ ಶಿಶುವಾಗಿದ್ದಾಗಲೇ ಕಾಡಿನಲ್ಲಿ ಕಳೆದು ಹೋಗಿಬಿಡುತ್ತಾನೆ. ಆ ಮಗುವನ್ನು ಕಂಡ ಅಗಸ ದಂಪತಿಗಳು ಸಂತೋಷದಿಂದ ಆ ಮಗು ತಮ್ಮದೇ ಎಂಬಂತೆ ಸಾಕಿ ಬೆಳೆಸುತ್ತಾರೆ. ಬೆಳೆಯುತ್ತಾ ಬೆಳೆಯುತ್ತಾ ಕತ್ತೆಗಳನ್ನು ಸಾಕುವುದು, ಬಟ್ಟೆಗಳನ್ನು ಒಗೆಯುವುದು ಎಲ್ಲ ಕೆಲಸಗಳನ್ನು ನಿರ್ವಹಿಸಲಾರಂಭಿಸುತ್ತಾನೆ. ಮುಂದೊಮ್ಮೆ ಸಂತನೊಬ್ಬ ಈತನನ್ನು ಕಂಡು ಸಂದೇಹಗೊಂಡು ಅಗಸನ ಬಳಿ ಪ್ರತ್ಯೇಕವಾಗಿ ವಿಚಾರಿಸುತ್ತಾನೆ. ಆಗ ಅಗಸ ಈತ ತಮ್ಮ ಸ್ವಂತ ಮಗನಲ್ಲ, ಕಾಡಿನಲ್ಲಿ ಆಕಸ್ಮಿಕವಾಗಿ ಸಿಕ್ಕಿದ ಶಿಶುವನ್ನು ಬೆಳೆಸಿದ್ದೇವೆ, ಈಗ ಪ್ರೌಢನಾಗಿದ್ದಾನೆ ಎಂದು ಒಪ್ಪಿಕೊಳ್ಳುತ್ತಾನೆ. ಆ ಹುಡುಗನಲ್ಲಿ ರಾಜವಂಶದ ಲಕ್ಷಣಗಳನ್ನೆಲ್ಲ ಕಂಡ ಸಂತ, ತನ್ನ ದಿವ್ಯ ದೃಷ್ಟಿಯಿಂದ ಈತ ರಾಜಕುಮಾರನೇ ಎಂಬುದನ್ನು ಅರಿಯುತ್ತಾನೆ. ನಂತರ ಆ ಹುಡುಗನಿಗೆ ನಿನ್ನ ಜಾಗ ಇದಲ್ಲ, ಈ ರಾಜ್ಯವನ್ನು ರಕ್ಷಿಸುವ ದೊಡ್ಡ ಜವಾಬ್ದಾರಿ ನಿನ್ನದು. ಅದನ್ನು ನಿರ್ವಹಿಸುವ ಸಲುವಾಗಿ ನೀನು ಅರಮನೆಗೆ ತೆರಳು ಎಂದು ಸೂಚಿಸುತ್ತಾನೆ. ಆಗ ಆ ಹುಡುಗ ಅಲ್ಲಿ ಒಗೆಯಲು ಬೇಕಾದಷ್ಟು ಬಟ್ಟೆಗಳು ಸಿಗಬಹುದೇ? ನಾನಲ್ಲಿ ಹೆಚ್ಚು ಕತ್ತೆಗಳನ್ನು ಸಾಕಿಕೊಳ್ಳಬಹುದಲ್ಲವೇ? ನನ್ನ ವ್ಯವಹಾರವನ್ನು ವಿಸ್ತರಿಸಿಕೊಳ್ಳಬಹುದಲ್ಲವೇ? ಎಂದೆಲ್ಲಾ ವಿಚಾರಿಸುತ್ತಾನೆ. ಆತ ತನ್ನ ಸಾಮರ್ಥ್ಯಕ್ಕೆ ಹಾಕಿಕೊಂಡ ಪರಿಧಿ ಅದು. ಅದರಾಚೆ ಆತ ಯೋಚಿಸಲಾರ.

ದೀರ್ಘಕಾಲದಿಂದ ಸತ್ಯವೆಂದೇ ನಂಬಿಕೊಂಡು ಅದರಂತೆಯೇ ಬದುಕಿದ, ಅನುಭವ ಜನ್ಯ ಸ್ವವ್ಯಕ್ತಿ ಚಿತ್ರಣವನ್ನು ಒಂದೆರಡು ಮಾತುಗಳಿಂದ ಬದಲಾಯಿಸಲು ಸಾಧ್ಯವಿಲ್ಲ. ಅಂತರಂಗದಲ್ಲಿ ಘನೀಕರಿಸಿದ ಭಾವಗಳು ನಿಧಾನವಾಗಿ ಕರಗಿ ಹರಿದು ಹೋಗಬೇಕು. ಹಾಗೆ ಕರಗಲು ಒಳ ಹೊರಗಿನಿಂದಲೂ ಒಂದಿಷ್ಟು ತಾಪ ಹುಟ್ಟಬೇಕು. ಈ ತಾಪ ಉದ್ವಿಗ್ನಗೊಳಿಸುವ, ಆತುರತೆಯೆಡೆಗೆ ಕೊಂಡೊಯ್ಯುವ, ಶೀಘ್ರ ಚಲಿಸುವ ತಾಪವಲ್ಲ. ತಾಳ್ಮೆ ಎಂಬ ತಪದಿಂದಷ್ಟೇ ಉದಿಸಬಲ್ಲ ತಾಪ ಇದು. ಈ ತಾಪದಿಂದ, ಸುಪ್ತ ಮನಸ್ಸಿನಲ್ಲಿ ಶಿಲೆಯಂತೆ ಗಟ್ಟಿಯಾಗಿ ನೆಲೆ ನಿಂತ ತಪ್ಪು ನಂಬಿಕೆಗಳು ಕರಗಿ, ನಿಜ ಸ್ವಸಾಮರ್ಥ್ಯದ ಅರಿವಿನ ಹರಿವಾಗುತ್ತದೆ

ಹನಿ ಮಳೆ

ವಿಪರ್ಯಾಸ

ಆಡಳಿತದ ವೈಫಲ್ಯಕ್ಕೆ
ಅಮಾಯಕ ಜೀವಿಗಳ ಬಲಿ
ಜೊತೆಗೆ ಅಮಾನತು ಆದೇಶ
ದಕ್ಷ ಅಧಿಕಾರಿಗಳ ಬಲಿ

● ಮಹಾಂತೇಶ ಮಾಗನೂರ

ಡಾ. ಪ್ರಕಾಶ ಖಾಡೆ ಅರವತ್ತರ ಸಂಭ್ರಮ

ಸಮೃದ್ಧ ಸಾಹಿತ್ಯದ ಪ್ರಕಾಶಮಾನ ಬೆಳಕು

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿರುವ ಡಾ. ಪ್ರಕಾಶ ಖಾಡೆ ಅವರು 50 ಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ್ದಾರೆ; ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ; ಇದೀಗ ಪ್ರಕಾಶ ಖಾಡೆ ಅವರಿಗೆ ಅರವತ್ತರ ಸಂಭ್ರಮ!

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಾಲ್ಕು ದಶಕಗಳಿಂದ ನಿರಂತರವಾಗಿ ಬರೆದುಕೊಂಡು ಬಂದು ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುವ ಬಾಗಲಕೋಟೆಯ ಡಾ.ಪ್ರಕಾಶ ಗಣಪತಿ ಖಾಡೆ ಅವರಿಗೆ ಈಗ ಅರವತ್ತು ವರ್ಷ. 10 ಜೂನ 1965 ರಂದು ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ತೊದಲಬಾಗಿ ಗ್ರಾಮದಲ್ಲಿ ತಂದೆ ಗಣಪತಿ ಖಾಡೆ, ತಾಯಿ ಗಂಗೂಬಾಯಿ ಅವರ ಉದರದಲ್ಲಿ ಜನಿಸಿ ಬಂದ ಅಪ್ಪಟ ಗ್ರಾಮೀಣ ಪ್ರತಿಭೆ ಪ್ರಕಾಶರು. ವಿದ್ಯಾರ್ಥಿದೆಸೆಯಲ್ಲಿಯೇ 1986 ರಲ್ಲಿ 'ಗೀತ ಚಿಗಿತ' ಸಂಪಾದಿತ ಕವನ ಸಂಕಲನದಿಂದ ಇತ್ತೀಚಿನ 'ಬಾಳುಕುನ' ಪುರಾಣ ಕಥಾ ಸಂಕಲನದವರೆಗೆ ಈ ವರೆಗೆ ಬರೆದುಕೊಂಡು ಬಂದೆದೆಲ್ಲಾ ಸಮೃದ್ಧ ಸಾಹಿತ್ಯ.

ಖ್ಯಾತ ಸಾಹಿತಿ ಕುಂ.ವೀರಭದ್ರಪ್ಪ ಅವರು ಹೇಳುವಂತೆ 'ಪ್ರಕಾಶ ಖಾಡೆ ಅವರು ದಣಿವರಿಯದೆ ಬರೆಯುತ್ತಿರುವ ಅವಿಶ್ರಾಂತ ಬರಹಗಾರ. ಈ ಕೆಟೆಗರಿಯ ಲೇಖಕರನ್ನು ಫ್ರಾಲಿಫಿಕ್ ಅಥವಾ ಸಮೃದ್ಧ ಬರಹಗಾರ ಅನ್ನಬಹುದು' ಎಂದಿದ್ದಾರೆ. ಕಾವ್ಯ, ಕಥೆ, ನಾಟಕ, ಜೀವನಚರಿತ್ರೆ, ಸಂಶೋಧನೆ, ಸಂಪಾದನೆ, ಜಾನಪದ ಹಾಗೂ ವಿಮರ್ಶೆಗಳು ಸೇರಿದಂತೆ 51 ಕೃತಿಗಳನ್ನುಡಾ.ಖಾಡೆ ರಚಿಸಿದ್ದಾರೆ.

ಪ್ರೀತಿ ಬಟ್ಟಲು, ಕೃಷ್ಣಾ ತೀರದ ಜನಪದ ಒಗಟುಗಳು, ನೆಲಮೂಲ ಸಂಸ್ಕೃತಿ, ಜಾನಪದ ಲೋಕ, ಜನಪದ ಕೋಗಿಲೆ ಚಲವಾದಿ ಗೌರಮ್ಮ, ಮೌನ ಓದಿನ ಬೆಡಗು, ಜಾನಪದ ಹೆಬ್ಬಾಗಿಲು, ಸಾಹಿತ್ಯ ಸಂಗತಿ, ನವೋದಯ ಕಾವ್ಯದ ಮೇಲೆ ಜಾನಪದದ ಪ್ರಭಾವ, ಕಣ್ಣುಗಳಿಗೆ ಮೌನ ಅರ್ಥವಾಗುತ್ತದೆ. ಶಾಂತಿ ಬೀಜಗಳ ಜತನ, ಕೊರೊನಾ ಕಾಲದ ಕವಿತೆಗಳು, ಬೇಂದ್ರೆ ಕಾವ್ಯದ ದೇಸಿಯತೆ, ಬಾಗಲಕೋಟೆ ಹೋಳಿ, ಕಾವ್ಯ ನಾದದ ಧ್ಯಾನ, ಚೆಲುವಿ ಚಂದ್ರಿ, ಬಾಳುಕುನ ಪುರಾಣ ಕಥಾ





ಸಂಕಲನ ಮುಂತಾದವು ಪ್ರಕಾಶ ಖಾಡೆ ಅವರ ಪ್ರಕಟಿತ ಕೃತಿಗಳು.

ಆಕಾಶವಾಣಿ, ದೂರದರ್ಶನಗಳಲ್ಲಿ ಹಲವು ಸಾಹಿತ್ಯಿಕ ಕಾರ್ಯಕ್ರಮಗಳು ಪ್ರಸಾರವಾಗಿವೆ.

ಸಮ್ಮೇಳಾಧ್ಯಕ್ಷರು

ಬೆಂಗಳೂರದಲ್ಲಿ ಜೂನ 2023 ರಲ್ಲಿ ಜರುಗಿದ ರಾಜ್ಯ ಮಟ್ಟದ ಮೇಘಮೈತ್ರಿ 6 ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು. ವಿಜಯಪುದಲ್ಲಿ 01 ಡಿಸೆಂಬರ 2024 ರಲ್ಲಿ ಜರುಗಿದ ರಾಜ್ಯಮಟ್ಟದ ಪುಸ್ತಕ ಪರಿಷತ್ತು ಸಮ್ಮೇಳನಾಧ್ಯಕ್ಷರಾಗಿದ್ದರು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಸೇರಿದಂತೆ ಮೈಸೂರು ದಸರಾ ಕವಿಗೋಷ್ಠಿ, ಚಾಲುಕ್ಯ ಉತ್ಸವ, ನವರಸಪುರ ಉತ್ಸವ, ಹಂಪಿ ಉತ್ಸವ, ಕಿತ್ತೂರು ಮೊದಲಾದ ಉತ್ಸವಗಳ ಕವಿಗೋಷ್ಠಿಗಳಲ್ಲಿ ಪಾಲ್ಗೊಂಡಿದ್ದಾರೆ. ನಾಡಿನ ಗಣ್ಯ ಪತ್ರಿಕೆಗಳಲ್ಲಿ ಕಥೆ, ಕವಿತೆ, ವಿಮರ್ಶೆ ಮತ್ತು ಅಪಾರ ಲೇಖನಗಳು ಪ್ರಕಟವಾಗಿವೆ. ಸಾಮಾಜಿಕ ಜಾಲತಾಣಗಳಲ್ಲಿ ಇವರ ನೂರಾರು ಉಪನ್ಯಾಸಗಳು ಪ್ರಸಾರವಾಗಿವೆ.

ಪಠ್ಯ ಪುಸ್ತಕದಲ್ಲಿ

ಇವರ ಲೇಖನಗಳು ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ,ವಿಜಯಪುರದ ಮಹಿಳಾ ವಿಶ್ವ ವಿದ್ಯಾಲಯ ಹಾಗೂ ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವ ವಿದ್ಯಾಲಯಗಳ ಪದವಿ ತರಗತಿ ವಿದ್ಯಾರ್ಥಿಗಳಿಗೆ ಪಠ್ಯಗಳಾಗಿವೆ. ಕೊವಿಡ್-19 ಕೊರೊನಾ ಕಾಲ ಘಟ್ಟದ ಲಾಕ್ ಡೌನ್ ವೇಳೆಯಲ್ಲಿ ಪ್ರತಿ ದಿವಸ ಮನೆಯಲ್ಲಿದ್ದುಕೊಂಡೆ 'ದೇಸಿ:ಕನ್ನಡದ ಅನನ್ಯತೆ' ಹೆಸರಿನಲ್ಲಿ ಸಾಮಾಜಿಕ ಜಾಲತಾಣದಲ್ಲಿ ಐವತ್ತಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿದ್ದಾರೆ. 'ಬೆಳಕಾಯಿತು ಬಾಗಲಕೋಟೆ' ಹೆಸರಿನಲ್ಲಿ ಫೇಸ್‌ಬುಕ್ ಲೈವ್‌ದಲ್ಲಿ ನಾಡಿನ ವಿದ್ವಾಂಸರಿಂದ ಅವಿಭಜಿತ ವಿಜಯಪುರ, ಬಾಗಲಕೋಟೆ ಜಿಲ್ಲೆಯ ಸಾಧಕರನ್ನು ಕುರಿತು 143 ಹೆಚ್ಚು ಸರಣಿ ಉಪನ್ಯಾಸಗಳು ಪ್ರಸಾರವಾಗಿವೆ.

ಯುಟ್ಯೂಬ್‌ನಲ್ಲಿ

ಇವರ 'ಕೂಡಿ ಕಟ್ಟಿದ ಕನ್ನಡ, ಒಲುಮೆ ಹಾಡಿಗೆ' ಗೀತೆಗಳು ಯುಟ್ಯೂಬ್ ಮೂಲಕ ಜಗದೆಲ್ಲೆಡೆ ಜನಪ್ರಿಯವಾಗಿವೆ. ಕನ್ನಡ ಅಧ್ಯಾಪಕರಾಗಿ ಮೂವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿ ಇದೇ ಜೂನ್ 30 ರಂದು ವೃತ್ತಿಯಿಂದ ನಿವೃತ್ತರಾಗಲಿದ್ದಾರೆ. ಪ್ರಕಾಶ ಖಾಡೆ ಅವರ ಪತ್ನಿ ಅನ್ನಪೂರ್ಣ, ಮಕ್ಕಳಾದ ಉಮಾ,ಪ್ರತಿಮಾ,ಅಭಿನವ ಸೊಸೆ ದಿವ್ಯಾ ಅಳಿಯಂದಿರಾದ ಪ್ರವೀಣ, ಪವನ ಹಾಗೂ ಮೊಮ್ಮಗಳು ಶ್ರೀಜಾ ಇವರದು ತುಂಬು ಕುಟುಂಬ.

ನಿವೃತ್ತಿಯ ನಂತರವೂ ಇವರಿಂದ ಸಾಕಷ್ಟು ಸಾಹಿತ್ಯ ಕೃಷಿ ನಡೆದು, ಇನ್ನಷ್ಟು ಮೌಲಿಕ ಕೃತಿಗಳು ಬೆಳಕು ಕಾಣಲಿ ಎಂದು ಇವರ ಸಾಹಿತ್ಯಾಭಿಮಾನಿಗಳ ಹಾರೈಕೆಯಾಗಿದೆ.

ಪ್ರಶಸ್ತಿಗಳು ಗೌರವಗಳು

ಬಿಡುವಿಲ್ಲದೇ ಬರೆಯುವ ಇವರಿಗೆ ನಾಡಿನ ಮೂಲೆ ಮೂಲೆಗಳಿಂದ ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಮುದ್ದಣ ಕಾವ್ಯ ಪ್ರಶಸ್ತಿ, ಸಿಂದಗಿಯ ಕಡಣಿ ಮತ್ತು ಬೇಂದ್ರೆ ಸಾಹಿತ್ಯ ಪ್ರಶಸ್ತಿ, ಹುಬ್ಬಳ್ಳಿಯ ಬೊಮ್ಮಾಯಿ ಪ್ರತಿಷ್ಠಾನ ಪ್ರಶಸ್ತಿ, ಆಜೂರ ಪ್ರತಿಷ್ಠಾನ ಪ್ರಶಸ್ತಿ, ಬೀಳಗಿ, ಸಮೀರವಾಡಿ. ಅರಕೇರಿ ಕನ್ನಡ ಸಾಹಿತ್ಯ ಪರಿಷತ್ತು ದತ್ತಿ ಪ್ರಶಸ್ತಿ ಹರಿಹರಶ್ರೀ ಸಾಹಿತ್ಯ ಪ್ರಶಸ್ತಿ, ವಿಜಯಪುರ ಪುಸ್ತಕ ಪರಿಷತ್ತು ಪ್ರಶಸ್ತಿ, ಮುಂಬಯಿಯ ಮೊಗವೀರ ಕಥಾ ಪ್ರಶಸ್ತಿ ಹಾಗೂ ಸಂಕ್ರಮಣ ಸಾಹಿತ್ಯ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ.

ನೋಡುವ ದೃಷ್ಟಿಕೋನದಲ್ಲಿದೆ ವಿಭಿನ್ನ ಭಾವ

ಜನಕಜೆಯ ದರುಶನದಿನಾಯ್ತು ರಾವಣ ಚಪಲ।
ಕನಕಮೃಗದರುಶನದೆ ಜಾನಕಿಯ ಚಪಲ।
ಜನವವನ ನಿಂದಿಪುದು; ಕನಿಕರಿಪುದಾಕೆಯಲಿ।
ಮನದ ಬಗೆಯರಿಯದದು - ಮಂಕುತಿಮ್ಮ ॥

ಸೀತೆಯ ದರುಶನ ಕಂಡ ರಾವಣನಿಗೆ ಸೀತೆಯ ಮೇಲೆ ಚಪಲ ಉಂಟಾಯಿತು; ಬಂಗಾರದ ಮೈ ಬಣ್ಣ ಹೊಂದಿದ್ದ ಜಿಂಕೆಯನ್ನು ಕಂಡ ಸೀತೆಗೆ ಅದರ ಮೇಲೆ ಚಪಲ ಉಂಟಾಯ್ತು. ಈ ಎರಡು ಚಪಲಗಳಿಂದಲೇ ಭವಿಷ್ಯದಲ್ಲಿ ಅನರ್ಥಗಳುಂಟಾದವು. ಆದರೆ ಈ ಲೋಕ ರಾವಣನನ್ನು ಮಾತ್ರ ನಿಂದಿಸಿ, ಸೀತೆಯ ಬಗೆಗೆ ಕನಿಕರ ತೋರಿಸುತ್ತಾರೆ. ಪಡೆದುಕೊಂಡು ಅನುಭವಿಸುವ ಚಪಲತೆಯು ಒಂದೇ ಆದರೂ ಸಹ ಈ ಲೋಕದ ಜನರ ಅಭಿಪ್ರಾಯಗಳು ಭಿನ್ನ ಭಿನ್ನವಾಗಿರುತ್ತವೆ. ನೋಡುವ ದೃಷ್ಟಿಕೋನಗಳು ಬಗೆಬಗೆಯಾಗಿರುತ್ತವೆ ಎಂಬ ಸತ್ಯವನ್ನು ಈ ಪದ್ಯದಲ್ಲಿ ಹೇಳಿದ್ದಾರೆ.

ಸೀತೆಯನ್ನು ಕಂಡ ರಾವಣನಿಗೆ ಮೋಹ ಉಂಟಾಗಿ, ಅವಳು ಬೇರೆಯವರ ಧರ್ಮಪತ್ನಿ ಎಂಬುದನ್ನೂ ಮರೆತು ಅವಳ ಮೇಲೆ ಚಪಲ ಉಂಟಾಯಿತು. ಎಲ್ಲ ಧರ್ಮಗಳನ್ನು ಬಲ್ಲ ರಾವಣನಿಗೇ ಹೆಣ್ಣನ್ನು ನೋಡಿದ ಮೇಲೆ ಆತನಿಗೆ ಮನದಲ್ಲಿ ಚಪಲ ಉಂಟಾಗಿ ಮುಂದೆ ಆತನ ಸಾವಿಗೂ ಸಹ ಅದೇ ಚಪಲ ಮುಳುವಾಯಗಿತ್ತು. ಇದು ಮಾಯಾ ಜಿಂಕೆ, ಇದು ಕಾನನ, ಇಲ್ಲಿ ರಾಕ್ಷಸರ ಕೆಲವು ಆಟಗಳು ನಡೆಯುತ್ತವೆ, ಯಾವುದೇ ಕಾರಣಕ್ಕೂ ಆ ಮಾಯಾಮೃಗವನ್ನು ನೀನು ಬೇಡುವುದು ಬೇಡ ಎಂದು ಶ್ರೀರಾಮಚಂದ್ರನು ಸೀತೆಗೆ ಹೇಳಿದರೂ ಸಹ ಆಕೆಯು ನನಗೆ ಆ ಬಂಗಾರ ವರ್ಣದ ಜಿಂಕೆಯು ಬೇಕೇ ಬೇಕೆಂದು ಹಠ ಹಿಡಿದಳು. ಕೊನೆಗೆ ವಿಧಿಯಿಲ್ಲದೆ ಶ್ರೀ ರಾಮಚಂದ್ರನು ಆ ಮಾಯಾಮೃಗದ ಬೆನ್ನು ಹತ್ತಿ ಹೋದನು, ನಂತರ ಲಕ್ಷ್ಮಣನನ್ನೂ ಸಹ ಸೀತಾ ಮಾತೆ ಕಳುಹಿಸಿದಳು. ಆ ಬಂಗಾರವರ್ಣದ ಜಿಂಕೆ ಬೇಕೇ ಬೇಕು ಹಠ, ಚಪಲ ಅವಳಲ್ಲಿಯೂ ಹುಟ್ಟಿಕೊಂಡಿದ್ದರಿಂದಲೇ ಒತ್ತಾಯ ಪೂರ್ವಕವಾಗಿ ಶ್ರೀ ರಾಮಚಂದ್ರನನ್ನೂ, ಲಕ್ಷ್ಮಣನನ್ನೂ ಆಕೆಯು ಕಳುಹಿಸಿದ್ದು. ಅವಳು ಮಾಯಾಮೃಗದ ಚಪಲ ತೋರದಿದ್ದರೆ, ರಾಮಾಯಣ ಯುದ್ಧವೇ ನಡೆಯುತ್ತಿರಲಿಲ್ಲವೇನೋ! ಇಲ್ಲಿ ಮೂಡುವ ಪ್ರಶ್ನೆ ಎಂದರೆ 'ಸೀತೆಯು ತನಗೊಲಿಯಬೇಕು ಎಂಬ ಚಪಲ ರಾವಣನಲ್ಲಿಯೂ, ಆ ಮಾಯಾಜಿಂಕೆಯು ತನಗೆ ಬೇಕು' ಎಂಬ ಚಪಲ ಸೀತೆಯ ಮನದಲ್ಲಿಯೂ ಮೂಡಿದ್ದವು. ಅಂದರೆ ಇಲ್ಲಿ ವಸ್ತು ಯಾವುದೇ ಇರಲಿ ಮನದಲ್ಲಿ ಮೂಡಿದ್ದು ಆಸೆಯೇ ಹೌದು.



ರವೀ ಚಿಕ್ಕನಾಯಕನಹಳ್ಳಿ

ಆದರೆ ಈ ಜಗತ್ತು ಜನಕಜೆಯ ಮೇಲೆ ಕನಿಕರವನ್ನು ತೋರಿಸುತ್ತಾ, ಆಕೆಯಲ್ಲುಂಟಾದ ಚಪಲದ ಬಗ್ಗೆ ಯಾರೂ ಯೋಚಿಸುವುದಿಲ್ಲ. ಆದರೆ ರಾವಣನನ್ನು ಮಾತ್ರ ಆತನ ಚಪಲದ, ಆತನ ಗುಣದ ಬಗ್ಗೆ ಹೀಯಾಳಿಸುತ್ತಾರೆ. ಆತನನ್ನು ಖಳನಾಯಕನನ್ನಾಗಿ ನೋಡುತ್ತಾರೆ. ಏಕಾಗಿ ಈ ತಾರತಮ್ಯ? ಸೀತೆಯು ಅಬಲೆಯಾಗಿದ್ದಳೆಂದೇ? ಅವಳು ಸ್ತ್ರೀ ಎಂದೇ? ಇರಬಹುದು. ಆದರೆ ಇಲ್ಲಿ ಅವಳಿಗೆ ಜಿಂಕೆಯನ್ನು ಕಂಡಾಕ್ಷಣ ಆ ಜಿಂಕೆಯ ಮೇಲೆ ಚಪಲ ಹೇಗುಂಟಾಯಿತೋ ಹಾಗೆಯೇ ರಾವಣನಿಗೆ ಸೀತೆಯನ್ನು ಕಂಡ ಮೇಲೆ ಚಪಲವುಂಟಾಯಿತು. ಆದರೆ ಸೀತೆಗೆ ಕನಿಕರಿಸಿ, ರಾವಣನನ್ನು ದೂರುತ್ತೇವೆ. ಇದಕ್ಕೆ ಕಾರಣ ನಾವು ಒಂದೇ ವಸ್ತುವನ್ನು, ಒಂದೇ ಪಾತ್ರವನ್ನು, ಒಂದೇ ಕೃತ್ಯವನ್ನು ನೋಡುವ ದೃಷ್ಟಿಕೋನಗಳು ಬೇರೆ ಬೇರೆಯಾಗಿರುತ್ತವೆ. ಯಾರೋ ಮಾಡಿದ ಒಂದು ಕೃತ್ಯ ನನ್ನ ಕಣ್ಣಿಗೆ ತಪ್ಪಾದರೆ ಅದೇ ಕೃತ್ಯ ಬೇರೆಯವರಿಗೆ ಸರಿ ಎನಿಸಬಹುದು! ಆದುದರಿಂದ 'ಲೋಕೋಭಿನ್ನರುಚಿ' ಎನ್ನುವಂತೆ ಈ ಲೋಕದಲ್ಲಿ ಅವರವರ ಮನಸ್ಸಿನಂತೆ ಅವರವರಿಗೆ ಕಾಣುತ್ತವೆ ಎಂಬುದನ್ನು ವಿವರಿಸಿದ್ದಾರೆ.

ಮೆಂತ್ಯ ದೋಸೆ ಇಲ್ಲಿ ವಿಶೇಷ!

● ಕೆ. ಶ್ರೀನಿವಾಸರಾವ್ ಹರಪನಹಳ್ಳಿ

ಕರಾವಳಿಯ ಹೆದ್ದಾರಿ ಗುಂಟ ಸಾಗಿದರೆ ಸಿಗುವ ಈ ಪುಟಾಣಿ ರೆಸ್ಟಾರೆಂಟ್‌ನಲ್ಲಿ ಮೆಂತ್ಯ ದೋಸೆ ಬಹು ರುಚಿ; ಇತರ ತಿನಿಸುಗಳೂ ಸವಿ ರುಚಿ.

ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಕುಂದಾಪುರದಿಂದ ಉಡುಪಿಗೆ ಸಾಗುವ ವಾಹನಗಳು ಮಾರ್ಗ ಮಧ್ಯದ ಕೋಟದಲ್ಲಿ ಗಕ್ಕೆಂದು ನಿಂತು, ಮುಂದೆ ಹೋಗದೇ ಸತ್ಯಾಗ್ರಹ ಮಾಡುತ್ತವೆ. ಕಾರಣ ಅರಿತ ಚಾಲಕರು ವಾಹನ ಬಲಕ್ಕೆ ತಿರುಗಿಸಿ ಪಕ್ಕದ ಫಿಶರೀಸ್ ರಸ್ತೆಯ ಕ್ರಾಸಿನಲ್ಲಿ 300 ಮೀ. ಸಾಗಿದರೆ, ಎಡಬದಿಯಲ್ಲಿ ಹೋಟೆಲ್‌ಲತಾ ರೆಸ್ಟೋರೆಂಟ್ ಗೋಚರಿಸುತ್ತದೆ. ಒಳಹೊಕ್ಕರೆ ಕಣ್ಣೆವೆಯಿಟ್ಟಲ್ಲೆಲ್ಲ ಶುಚಿ, ಆಹ್ಲಾದಕರ ವಾತಾವರಣ! ಮಾಲೀಕ ವೆಂಕಟೇಶ ಪ್ರಭುಗಳು ಗಲ್ಲಾದಿಂದ ಕೆಳಗಿಳಿದು ಬಂದು ಮುಗುಳ್ನಗೆಯಿಂದ ಸ್ವಾಗತಿಸಿ ಕೂರಲು ಆಸನ ತೋರುತ್ತಾರೆ. ಸಹಾಯಕರು ಬರುವುದು ತಡವಾದರೆ ತಾವೇ ತಿಂಡಿ ತಂದು ಕೊಡುತ್ತಾರೆ.

1962 ರಲ್ಲಿ ತಂದೆಯವರು ಆರಂಭಿಸಿದ ಈ ಹೋಟೆಲಿಗೆ ಸಾತ್ ಕೊಟ್ಟು ನಂತರ ತಾವೇ ಮುನ್ನಡೆಸಿ ಇಂದಿನ ಯಶಸ್ಸಿನಲ್ಲಿ 40 ವರ್ಷಗಳ ಸುಧೀರ್ಘ ಪಯಣ ಸಾಗಿಸಿದ ಕೋಟದಲ್ಲಿಯೇ ಜನಿಸಿದ ಕೆ.ವೆಂಕಟೇಶ ಪ್ರಭುಗಳು ಲತಾ ರೆಸ್ಟೋರೆಂಟ್ ಸಾರಥಿ! ಮೊದಮೊದಲು ಅಷ್ಟಾಗಿ ಜನಮನ್ನಣೆ ಗಳಿಸಿರಲಿಲ್ಲ. ಎಲ್ಲ ಹೋಟೆಲುಗಳಲ್ಲಿ ಸಿಗುವ ಪದಾರ್ಥಗಳನ್ನೇ ತಾವೂ ಮಾಡಿದರೆ ಯಶಸ್ಸು ದೊರೆಯದೆಂಬುದನ್ನು ಅರಿತ ಪ್ರಭುಗಳು ತಿಂಡಿಗಳ ರೂಪುರೇಷೆಯನ್ನೇ ಬದಲಾಯಿಸಿದರು.

ರುಚಿಕರ ತಿನಿಸುಗಳು

ಇಡ್ಲಿವಡೆ, ಉಪ್ಪಿಟ್ಟು,ಪೂರಿ ಜೊತೆಗೆ ಕರಾವಳಿಯ ಜನಪ್ರಿಯ ಕೊಟ್ಟೆ ಕಡುಬು, ಗೋಳಿಬಜೆ, ಒತ್ತು ಶಾವಿಗೆ, ಪೋಡಿ, ಸುಕ್ಕಿನುಂಡೆ, ಬನ್ಸ್, ಮೆಂತ್ಯದ ದೋಸೆ, ತುಪ್ಪದ ಮಸಾಲೆ ತಯಾರಿಸತೊಡಗಿದರು; ಜತೆಗೆ, ಪೊಂಗಲ್, ಪರೋಟ, ಆಂಬೊಡೆ, ರಾಗಿ ಮುದ್ದೆ, ಬಸ್ಸಾರು, ಮಾವಿನ ರಸಾಯನ, ಕೊತ್ತಂಬರಿ ಕಷಾಯ, ಇನ್ನೂ ಹಲವು ತಿನಿಸುಗಳು ಇಲ್ಲಿವೆ! ದರ ಹೆಚ್ಚಿಲ್ಲ.ಮಂದಹಾಸದ ಸರ್ವರುಗಳು. ಶೀಘ್ರ ತಂದಿಡುತ್ತಾರೆ.

ಬಾಯಿಮಾತಿನಲ್ಲೇ ಜನಪ್ರಿಯತೆಯ ಮಜಲನ್ನೇರಿದ ಈ ಹೋಟೆಲಿಗೆ ಹಲವು ಗಣ್ಯರು ಭೇಟಿ ನೀಡಿದ್ದಾರೆ. ಅನಂತ್ ನಾಗ್, ರಮೇಶ್ ಭಟ್, ಅರುಣ್ ಸಾಗರ್, ರಿಷಭ್ ಶೆಟ್ಟಿ, ಉಪೇಂದ್ರ, ಅಪರ್ಣ, ಉಮಾಶ್ರೀ, ಮುಖ್ಯಮಂತ್ರಿ ಚಂದ್ರು, ಶ್ರೀನಿವಾಸ ಪೂಜಾರಿ , ನಳಿನ್ ಕುಮಾರ್ ಕಟೀಲ್, ಕಾರ್ಕಳ ಸುನೀಲ್ ಕುಮಾರ್ , ವೇದವ್ಯಾಸ ಕಾಮತ್, ರಘುಪತಿ ಭಟ್, ಹಲವು ಟಿವಿ ತಾರೆಯರು, ಜೊತೆಗೆ ಕನಿಷ್ಠ 50 ಯೂ ಟ್ಯೂಬರುಗಳು ಇಲ್ಲಿ ತಿಂಡಿ ಸವಿವಿದ್ದಾರೆ. ಇಲ್ಲಿ ದೊರಕುವ ಮೆಂತ್ಯದ ದೋಸೆ, ಎಲ್ಲರ ಬಾಯಲ್ಲೂ ಪ್ರಸಿದ್ಧ! ಪಕ್ಕದಲ್ಲಿರುವ ಹಲವು ಮಕ್ಕಳ ತಾಯಿ ಹಾಗೂ ಅಮೃತೇಶ್ವರಿ ದೈವಳಕ್ಕೆ ಬಂದವರು ಇಲ್ಲಿ ಭೇಟಿ ಕೊಡುವುದು ವಾಡಿಕೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1	2		3	■	4			5
■		■	6	7		■	■	
8			■		■	9	10	
	■	■	11		12	■		■
13	14			■	15			16
■		■	17	18		■	■	
19			■		■	20		
	■	■	21		22	■		■
23				■	24			

ಎಡದಿಂದ ಬಲಕ್ಕೆ

1. ಮಧ್ಯಮ ಪಾಂಡವ (4)
4. ಸರ ತರುವಾಗ ಗಡಿಬಿಡಿ (4)
6. ಮೊಸಳೆಗೆ ಕೈ ಇದೆಯೆ? (3)
8. ಆಧಾರಕ್ಕೆ ಕೊಟ್ಟಿರುವ ಕೋಲು (3)
9. ಲಂಕೆಯ ಅಧಿಪತಿ (3)
11. ಆಗಲ್ಲ ಎಂದಾಗ ಕಂಡ ವಿಸ್ತಾರ (3)
13. ಮೋಸಗಾರ (4)
15. ಚೇತರಿಸು ಎನ್ನುವುದು ಹೀಗೆ (4)
17. ಮರವೇರಿ ನೋಡಿದ ಯುದ್ಧ (3)
19. ರಸದ ಮಧ್ಯೆ ಸಿಲುಕಿದ ವೇಗ (3)
20. ಅಸ್ತವ್ಯಸ್ತವಾಗಿರುವ ಕರುಣೆ (3)
22. ಪ್ರಜ್ಞೆಗೆ ಮತ್ತೊಂದು ಹೆಸರು (3)
24. ಇದನ್ನು ತಿಂದರೆ ಕೊಬ್ಬು ದೂರ (4)
25. ಮಹಾವಿಷವಿದು (4)

ಮೇಲಿಂದ ಕೆಳಕ್ಕೆ

2. ಕಾಮಧೇನುವಿನ ಮಗಳು (3)
3. ಮೃತ್ಯು ದೇವತೆ (2)
4. ನಯಗೊಳಿಸಲು ಬಳಸುವ ಒಂದು ಉಪಕರಣ (2)
5. ಮಣ ಭಾರವಿದ್ದಾನೆ ಗಂಡ (3)
7. ಕೈ, ಕಾಲಿಗೆ ಹಾಕಿಕೊಳ್ಳುವ ಬಳೆ (3)
8. ನಂದನಿಗಾದ ಖುಷಿ (3)
10. ಗೊಂಚಲು (3)
11. ನಾಡಿನ ದೊರೆ (3)
12. ತಿರುಗಿ ಬಂದಿರುವ ಮಾವಿನಹಣ್ಣು (3)
14. ಇದರ ಹಾಡನ್ನು ಕೇಳುವುದು ಕಷ್ಟ! (3)
16. ಮಗನ ಹಾದಿ ಸರಾಗ (3)
18. ಮಾಡಿದ ಕೆಲಸಕ್ಕೆ ಸಿಕ್ಕ ಸಂಬಳ (3)
19. ಬೆಳ್ಳಿ (3)
21. ಹಲವರಿಂದ ನಡೆದ ಗಲಾಟೆ (3)
22. ತಿಳಿ ಎನ್ನುತ್ತಾ ಬಂದಿರುವ ಶತ್ರು (2)
23. ತಿರುಗಿ ಬಂದಿರುವ ಉರಗ (2)

ಭಗವಂತನನ್ನು ಕಾಣಲು ಬೇಕಾದ ಭಾವ

ಒಮ್ಮೆ ರಾಜಾ ವಿಕ್ರಮಾದಿತ್ಯನು ತನ್ನ ರಾಜ್ಯದಲ್ಲಿನ ಪ್ರಜೆಗಳ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ಮಾರುವೇಷದಲ್ಲಿ ದೇಶ ಸಂಚಾರ ಹೊರಟನು. ಒಂದು ಕಡೆ ಬ್ರಾಹ್ಮಣನೊಬ್ಬ ಯಜ್ಞವನ್ನು ಮಾಡುತ್ತಿದ್ದ ದೃಶ್ಯವು ಅವನ ಕಣ್ಣಿಗೆ ಬಿತ್ತು. ಆ ಬ್ರಾಹ್ಮಣನ ಆಶ್ರಮದ ಹತ್ತಿರವೇ ಯಜ್ಞಕುಂಡದಿಂದ ಹೊರಬಿದ್ದ ಬೂದಿಯ ಒಂದು ಗುಡ್ಡವೇ ಏರ್ಪಟ್ಟಿತ್ತು. ವಿಕ್ರಮಾದಿತ್ಯನು ಅವನ ಬಳಿಗೆ ಹೋಗಿ, ಸ್ವಾಮಿ! ನೀವೇನು ಮಾಡುತ್ತಿದ್ದೀರಿ? ಎಂದು ಪ್ರಶ್ನಿಸಿದ.

ಅದಕ್ಕೆ ಆ ಬ್ರಾಹ್ಮಣನು, ಮಗೂ, ನಾನು ಕಳೆದ 68 ವರ್ಷಗಳಿಂದಲೂ ಭಗವಂತನನ್ನು ಕುರಿತು ಯಜ್ಞವನ್ನು ಮಾಡುತ್ತಿದ್ದೇನೆ. ಈ ಪಕ್ಕದಲ್ಲಿ ಸಂಗ್ರಹವಾಗಿರುವುದು ಆ ಯಜ್ಞದ ಭಸ್ಮವೇ! ಎಂದು ಹೇಳಿದನು.

ಹಾಗಾದರೆ ನೀವೇನಾದರೂ ಭಗವದನುಗ್ರಹಕ್ಕೆ ಪಾತ್ರರಾಗಿದ್ದೀರಾ? ಎಂದು ವಿಕ್ರಮಾದಿತ್ಯನು ಪ್ರಶ್ನಿಸಿದನು. ಅದೇ ನನ್ನಲ್ಲಿರುವ ಕೊರಗು. ಒಮ್ಮೆಯಾದರೂ ಭಗವಂತನು ನನಗೆ ತನ್ನ ದರ್ಶನ ಭಾಗ್ಯವನ್ನು ಕರುಣಿಸಲಿಲ್ಲ. ಕಡೇ ಪಕ್ಷ ಅವನು ಸ್ವಪ್ನದಲ್ಲಿಯೂ ನನಗೆ ಕಾಣಿಸಿಕೊಳ್ಳಲಿಲ್ಲ ಎಂದು ಆ ಬ್ರಾಹ್ಮಣನು ಮಾರುತ್ತರಿಸಿದ.

ಆ ಬ್ರಾಹ್ಮಣನ ಮಾತನ್ನು ಕೇಳಿ ವಿಕ್ರಮಾದಿತ್ಯನ ಮನಸ್ಸು ಕರಗಿತು. ಆ ಆಶ್ರಮದಲ್ಲಿಯೇ ಕುಳಿತು ಭಗವಂತನನ್ನು ಶುದ್ಧ ಮನಸ್ಸಿನಿಂದ ಧ್ಯಾನ ಮಾಡಿದ. ದೇವರು ಅವನಿಗೆ ಪ್ರತ್ಯಕ್ಷನಾಗಿ, ರಾಜಾ! ನಿನಗೇನು ಬೇಕೋ ಅದನ್ನು ಕೋರಿಕೋ! ಎಂದು ಹೇಳಿದನು. ದೇವಾ ನನಗೇನೂ ಬೇಕಾಗಿಲ್ಲ. ಆದರೆ ಆ ವೃದ್ಧ ಬ್ರಾಹ್ಮಣನು ನಿನ್ನನ್ನು ಕುರಿತು ಕಳೆದ 68 ವರ್ಷಗಳಿಂದ ಯಜ್ಞಗಳನ್ನು ಮಾಡುತ್ತಿದ್ದರೂ ಸಹ ನೀನೇತಕ್ಕೆ ಆವನಿಗೆ ನಿನ್ನ ದರ್ಶನ ಭಾಗ್ಯವನ್ನು ಕರುಣಿಸಲಿಲ್ಲ? ಎಂದು ವಿಕ್ರಮಾದಿತ್ಯನು ಕೇಳಿದ ಪ್ರಶ್ನೆಗೆ ದೇವರು ಪಕಪಕನೆ ನಕ್ಕನು.

ರಾಜಾ! ನಾನು ಭಾವಪ್ರಿಯನೇ ಹೊರತು, ಬಾಹ್ಯಪ್ರಿಯನಲ್ಲ. ನೀನು ಸಮಾರಾಧನೆಯನ್ನು ಮಾಡುತ್ತೀಯೋ, ಎಷ್ಟು ಜನಕ್ಕೆ ಅನ್ನವಿಕ್ಕುತ್ತೀಯೋ, ಎಷ್ಟು ಜನಕ್ಕೆ ವಸ್ತ್ರಾದಿಗಳನ್ನು ದಾನ ಮಾಡಿತ್ತೀಯೋ ಎನ್ನುವ ಲೆಕ್ಕ ನನಗೆ ಬೇಕಾಗಿಲ್ಲ. ನನಗೆ ಬೇಕಾಗಿರುವುದು ಭಾವವೇ. ಯಾರು ಶುದ್ಧ ಮನಸ್ಸಿನಿಂದ ನನ್ನನ್ನು ಧ್ಯಾನಿಸುತ್ತಾರೋ ಅವರೇ ನನ್ನ ಪ್ರಿಯ ಭಕ್ತರು. ಅಂತಹ ಪರಮ ಭಕ್ತರಿಗೆ ನಾನು ದಾಸಾನುದಾಸ. ಆ ಬ್ರಾಹ್ಮಣನು ನಿರಂತರವಾಗಿ ಮಂತ್ರವನ್ನು ಉಚ್ಚರಿಸುತ್ತಿದ್ದಾನೆ. ಆದರೆ ಅವನ ದೃಷ್ಟಿಯೆಲ್ಲಾ ಮಂತ್ರವನ್ನು ಉಚ್ಚರಿಸುವುದರ ಮೇಲಿದೆಯೇ ಹೊರತು ಮಾಧವನಾದ ನನ್ನ ಮೇಲಲ್ಲ. ಕೇವಲ ತುಟಿಯಂಚಿನಲ್ಲಿ ಉಚ್ಚರಿಸುವ ಮಂತ್ರಗಳಲ್ಲ ನನಗೆ ಬೇಕಾಗಿರುವುದು. ಆ ಕರೆ ಹೃದಯದ ಅಂತರಾಳದಿಂದ ಬರಬೇಕು ಎಂದು ವಿವರಿಸಿದ ಭಗವಂತ.

ನಮ್ಮಲ್ಲಿಯೂ ಅನೇಕರು ಬೆಳಗ್ಗೆ ಗಡಿಬಿಡಿಯಲ್ಲಿ ಗೀತೆ, ಮಂತ್ರ ಹೇಳುತ್ತೇವೆ. ಒಂದು ಟೈಮ್ ಟೇಬಲ್ ಹಾಕಿಕೊಂಡು ಎಷ್ಟು ಗಂಟೆಗೆ ಪೂಜೆ ಇಷ್ಟು ಗಂಟೆಗೆ ಊಟ ತಿಂಡಿ ಎಂದು ಧಾವಂತದಿಂದ ಇಡೀ ದಿನವನ್ನು ಆ ಸಮಯದ ಲೆಕ್ಕಾಚಾರಕ್ಕೆ ತಕ್ಕಂತೆ ಮುಗಿಸುತ್ತೇವೆ. ಕೊನೆಗೆ ಎಲ್ಲವನ್ನೂ ಅಂದುಕೊಂಡಂತೆ ಮಾಡಿದೆವು ಎನ್ನುವ ಸಮಾಧಾನಕ್ಕಿಂತ, ಅಲ್ಲೊಂದು ಖಿನ್ನತೆ ಮನೆ ಮಾಡಿರುತ್ತದೆ. ಏಕೆಂದರೆ ಈ ಧಾವಂತದಲ್ಲಿ ಮುಗಿಸಿದ ಯಾವ ಕೆಲಸದಲ್ಲೂ ನಾವು ತನ್ಮಯ ಭಾವದಲ್ಲಿ ಇರಲು ಸಾಧ್ಯವಿಲ್ಲ.

ಈ ಗಡಿಬಿಡಿಗಳಲ್ಲಿ ದೇವರಿಗೆ ನಮಸ್ಕರಿಸಬೇಕಾದರೆ ದೀಪ ಹಚ್ಚಬೇಕಾದರೆ ನಮ್ಮಲ್ಲಿರಬೇಕಾದ ಸಮಾಧಾನ ಭಾವ, ಸಮರ್ಪಣೆ ಎಲ್ಲವೂ ಸಮಯದ ಲೆಕ್ಕಾಚಾರದಲ್ಲಿ ಕಳೆದು ಹೋಗುತ್ತದೆ. ಆದ್ದರಿಂದಲೇ ದಿನದಲ್ಲಿ ಎಷ್ಟು ಕೆಲಸ ಮುಗಿಸುತ್ತೇವೆ ಎನ್ನುವುದಕ್ಕಿಂತ, ಮಾಡುವ ಒಂದಷ್ಟು ಕೆಲಸಗಳನ್ನು ಎಷ್ಟು ತನ್ಮಯತೆಯಿಂದ ಮಾಡುತ್ತೇವೆ ಎನ್ನುವುದು ನಮ್ಮ ಮನಸ್ಸಿನ ನೆಮ್ಮದಿಗೆ ಕಾರಣವಾಗುತ್ತದೆ.

ಆಗಾಗ ಸುಮ್ಮನೆ ಒಂದು ಕಾಫಿ ಕುಡಿಯುತ್ತಾ ಕೇಳುವ ನಮ್ಮಿಷ್ಟದ ಹಾಡು, ದೇವರ ಮನೆಯಲ್ಲಿ ಮಾಡುವ ಒಂದಷ್ಟು ಹೊತ್ತಿನ ಧ್ಯಾನ, ಅಡುಗೆ ಮನೆಯಲ್ಲಿ ಗುನುಗುತ್ತ ಮಾಡುವ ನಮ್ಮಿಷ್ಟದ ಅಡುಗೆ ಎಲ್ಲವೂ ಸಂಭ್ರಮವಾಗಬೇಕು. ಆಗ ಪ್ರತಿದಿನವೂ ಸಹ್ಯವಾಗುತ್ತದೆ. ಕೆಲಸಕ್ಕೆ ಹೋಗಿ ಬರುವ ಧಾವಂತ ಇದ್ದದ್ದೇ. ಮನೆಯಲ್ಲಿರುವ ಸ್ವಲ್ಪ ಹೊತ್ತು ಇಂತಹ ಚಿಕ್ಕಪುಟ್ಟ ಕ್ಷಣಗಳನ್ನು ನಮ್ಮದಾಗಿಸಿಕೊಂಡು ಸಂಭ್ರಮಿಸೋಣ.

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಕತಾರ್ ಕನ್ನಡಿಗರಿಂದ ಪರಿಸರ ದಿನಾಚರಣೆ!

ಯಾವ ದೇಶದಲ್ಲಿದ್ದರೇನು, ಪರಿಸರ ನಮಗೆ ಬೇಕೇ ಬೇಕು ತಾನೆ! ಕತಾರ್‌ನಲ್ಲಿರುವ ಕನ್ನಡಿಗರು ವಿಶ್ವ ಪರಿಸರ ದಿನಾಚರಣೆಯನ್ನು ವಿಶಿಷ್ಟವಾಗಿ ಆಚರಿಸಿದರು. ಕರ್ನಾಟಕ ಸಂಘ ಕತಾರ್ (ಕೆಎಸ್‌ಕ್ಯು) ಸದಸ್ಯರು, ಅಲ್ಲಿನ ವೈಬ್ರಂಟ್ ಸೇಫ್ಟಿ ಅಕಾಡೆಮಿಯಲ್ಲಿ ಚಿತ್ರಕಲೆ, ಬಣ್ಣ ಹಚ್ಚುವ ಮತ್ತು ಭಾಷಣ ಸ್ಪರ್ಧೆಗಳೊಂದಿಗೆ ಪರಿಸರ ದಿನವನ್ನು ಆರಂಭಿಸಿದರು. ಅದೇ ಸಮಯದಲ್ಲಿ, 12 ವರ್ಷ ದೊಳಗಿನ ಮಕ್ಕಳಿಗಾಗಿ ಒಂದು ನಿಮಿಷದ ವಿಡಿಯೋ ಜಾಗೃತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು, ಇದು ಅವರ ಸೃಜನಶೀಲತೆ ಮತ್ತು ಪರಿಣಾಮಕಾರಿ ಸಂದೇಶವನ್ನು ಪ್ರದರ್ಶಿಸಿತು.

ಕೆಎಸ್‌ಕ್ಯು, ತನ್ನ ರಜತ ವರ್ಷದ ಪ್ರಯುಕ್ತ, ಅಲ್ಲಿನ ದೆಹಲಿ ಪಬ್ಲಿಕ್ ಶಾಲೆಗೆ 25 ಸಸಿಗಳ ಕೊಡುಗೆಯನ್ನು ನೀಡಿತು. ಪ್ರಾಂಶುಪಾಲರಾದ ಅಸ್ನಾ ನಫೀಸ್, ಸೌಲಭ್ಯಗಳ ವ್ಯವಸ್ಥಾಪಕ ಶಶಿ ಶೇಖರ್ ಪಾತ್ರ ಮತ್ತು ಕೆಎಸ್‌ಕ್ಯು ಆಡಳಿತ ಮಂಡಳಿ ಸದಸ್ಯರೊಂದಿಗೆ, ವಿದ್ಯಾರ್ಥಿಗಳು ಈ ಸಸಿಗಳನ್ನು ನೆಡುವ ಕಾರ್ಯದಲ್ಲಿ ಭಾಗವಹಿಸಿದರು. ಜೂನ್ 5 ರಂದು, ಪರ್ಲಿಂಗ್ ಇಂಟರ್ನ್ಯಾಷನಲ್ ಶಾಲೆಯಲ್ಲಿ ಆಚರಣೆಗಳು ಮುಂದುವರಿದವು, ಪರಿಸರ ದಿನದ ಮಹತ್ವವನ್ನು ಸಾರಲು ಮತ್ತಷ್ಟು ಸಸಿಗಳನ್ನು ನೆಡಲಾಯಿತು. ಇದರ ನಂತರ, ಕಿಶೋರ್ ಅವರು 18+ ವಯೋಮಿತಿಯವರಿಗೆ ಪರಿಸರ ರಸಪ್ರಶ್ನೆ ಸ್ಪರ್ಧೆಯ ಅಂತಿಮ ಸುತ್ತನ್ನು ನಡೆಸಿದರು.

ಕರ್ನಾಟಕ ಸಂಘ ಕತಾರ್‌ನ ಈ ಅಭಿಯಾನವು ಸಮುದಾಯವನ್ನೊಳಗೊಂಡ ಪರಿಸರ ಕಾಳಜಿ ಮತ್ತು ಯುವಜನರ ಸಕ್ರಿಯ ಭಾಗವಹಿಸುವಿಕೆಗೆ ನಾಂದಿಯಾಯಿತು; ಆ ಮೂಲಕ ದೂರದ ಕತಾರ್‌ನಲ್ಲೂ ಹಸಿರನ್ನು ಬೆಳೆಸುವ ಉದಾಹರಣೆಗೆ ಸಾಕ್ಷಿಯಾಯಿತು.

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಚೆನ್ನೈ ಸೇರಲು ಸಂಜು ಒಲವು

ಚೆನ್ನೈ: ರಾಜಸ್ಥಾನ್ ರಾಯಲ್ಸ್ ನಾಯಕ ಸಂಜು ಸ್ಯಾಮ್ಸನ್ ಮುಂದಿನ ಆವೃತ್ತಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಸೇರುವ ಸಾಧ್ಯತೆ ಇದೆ ಎಂದು ವರದಿ ಯಾಗಿದೆ.



ಸ್ಯಾಮ್ಸನ್ ಅವರ ಇತ್ತೀಚಿನ ಸಾಮಾಜಿಕ ಮಾಧ್ಯಮ ಚಟುವಟಿಕೆ ನೋಡುವಾಗ ಅವರು ರಾಜಸ್ಥಾನ್ ಫ್ರಾಂಚೈಸಿ ತೊರೆಯುವುದು ಖಚಿತ ಎನ್ನುವಂತಿದೆ. ಕೆಲ ದಿನಗಳ ಹಿಂದಷ್ಟೇ ಸಂಜು ತಮ್ಮ ಪತ್ನಿಯೊಂದಿಗೆ ರಸ್ತೆ ದಾಟುವ ಫೋಟೋ ವೊಂದನ್ನು ಹಂಚಿಕೊಂಡು 'ಚಲಿಸುವ ಸಮಯ..!' ಎಂದು ಶೀರ್ಷಿಕೆ ನೀಡಿದ್ದರು. ಆ ಫೋಟೊದಲ್ಲಿ ಸಂಜು ಹಳದಿ ಗೆರೆಗೆ ಕಾಲಿಡುತ್ತಿರುವುದು ಕಾಣಬಹುದು, ಹೀಗಾಗಿ ನೆಟ್ಟಿಗರು ಇದು ಸಂಜು ಚೆನ್ನೈ ಸೇರುವ ಸುಳಿವು ಎಂದು ಹೇಳಲಾರಂಭಿಸಿದ್ದಾರೆ. ಸಂಜು ಸ್ಯಾಮ್ಸನ್ 2018ರಲ್ಲಿ ರಾಜಸ್ಥಾನ್ ರಾಯಲ್ಸ್‌ನೊಂದಿಗೆ ತಮ್ಮ ಎರಡನೇ ಇನ್ನಿಂಗ್ಸ್ ಪ್ರಾರಂಭಿಸಿದ್ದರು. ಐಪಿಎಲ್ 2022 ಮತ್ತು 2025ರ ಮೆಗಾ ಹರಾಜಿನ ಮೊದಲು ಅವರನ್ನು ಫ್ರಾಂಚೈಸಿ ಉಳಿಸಿಕೊಂಡಿತ್ತು. 18ನೇ ಆವೃತ್ತಿಯಲ್ಲಿ ಗಾಯದ ಸಮಸ್ಯೆಯಿಂದ ಅವರು ಹೆಚ್ಚು ಪಂದ್ಯಗಳನ್ನು ಆಡಿರಲಿಲ್ಲ, ಅಲ್ಲದೆ ಕೋಚ್ ರಾಹುಲ್ ದ್ರಾವಿಡ್ ಜತೆ ಮನಸ್ತಾಪ ಮಾಡಿಕೊಂಡಿದ್ದರು ಎಂಬ ಆರೋಪ ಕೂಡ ಕೇಳಿ ಬಂದಿತ್ತು. ಇದೀಗ ಸಂಜು ಚೆನ್ನೈ ಸೇರಲಿದ್ದಾರೆ ಎಂಬ ವದಂತಿ ದಟ್ಟವಾಗಿದೆ.

ಐಸಿಸಿ ಟಿ20 ರ‍್ಯಾಂಕಿಂಗ್ ತಿಲಕ್‌ಗೆ 3ನೇ ಸ್ಥಾನ

ದುಬೈ: ಭಾರತದ ಎಡಗೈ ಆಟಗಾರ ತಿಲಕ್ ವರ್ಮಾ ಅವರು ಐಸಿಸಿ ಪುರುಷರ ಟಿ20 ಬ್ಯಾಟರ್‌ಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ ಒಂದು ಸ್ಥಾನ ಬಡ್ತಿ ಪಡೆದು

ಮೂರನೇ ಸ್ಥಾನಕ್ಕೇರಿದ್ದಾರೆ. ಬುಧವಾರ ಪ್ರಕಟವಾದ ಈ ಪಟ್ಟಿಯ ಬೌಲರ್‌ಗಳ ವಿಭಾಗದಲ್ಲಿ ವರುಣ್ ಚಕ್ರವರ್ತಿ ಮತ್ತು ರವಿ ಬಿಷ್ಣೋಯಿ ಕ್ರಮವಾಗಿ ಮೂರನೇ ಮತ್ತು ಏಳನೇ ಸ್ಥಾನ ಉಳಿಸಿಕೊಂಡಿದ್ದಾರೆ. ಬ್ಯಾಟರ್‌ಗಳ ಪಟ್ಟಿಯಲ್ಲಿ ಆಸ್ಟ್ರೇಲಿಯಾದ ತಾರೆ ಟ್ರಾವಿಸ್ ಹೆಡ್ (856 ರೇಟಿಂಗ್ ಪಾಯಿಂಟ್) ಮೊದಲ ಸ್ಥಾನದಲ್ಲಿದ್ದರೆ, ಆರಂಭ ಆಟಗಾರ ಅಭಿಷೇಕ್ ಶರ್ಮಾ ಎರಡನೇ ಸ್ಥಾನ (829) ಕಾಪಾಡಿಕೊಂಡಿದ್ದಾರೆ. ತಿಲಕ್ ವರ್ಮಾ 804 ಪಾಯಿಂಟ್ಸ್ ಗಳಿಸಿದ್ದಾರೆ. ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ (739) ಒಂದು ಸ್ಥಾನ ಕೆಳಕ್ಕೆ ಸರಿದಿದ್ದು, ಆರನೇ ಸ್ಥಾನದಲ್ಲಿದ್ದಾರೆ. ಅವರು ಅಗ್ರ 10ರ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಭಾರತದ ಮೂರನೇ ಆಟಗಾರರಾಗಿದ್ದಾರೆ.

ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ | ರಬಾಡ ಮಿಂಚಿನ ಬೌಲಿಂಗ್

ಆಸ್ಟ್ರೇಲಿಯಾ 212 ರನ್‌ಗೆ ಆಲೌಟ್

ಲಾರ್ಡ್ಸ್: ಇಲ್ಲಿ ಬುಧವಾರ ಆರಂಭಗೊಂಡ ಐಸಿಸಿ ವಿಶ್ವ ಕ್ರಿಕೆಟ್ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡವು ದಕ್ಷಿಣ ಆಫ್ರಿಕಾ ವಿರುದ್ಧ ಮೊದಲ ದಿನ ಕೇವಲ 212 ರನ್‌ಗಳಿಗೆ ಆಲೌಟ್ ಆಯಿತು.

ಟಾಸ್ ಗೆದ್ದಿದ್ದ ದ. ಆಫ್ರಿಕಾ ತಂಡವು ಆಸೀಸ್ ಪಡೆಯನ್ನು ಬ್ಯಾಟಿಂಗ್‌ಗೆ ಇಳಿಸಿತು. ಸಂಘಟಿತ ಬೌಲಿಂಗ್ ದಾಳಿಗಿಳಿದ ದ. ಆಫ್ರಿಕಾದ ಬೌಲರ್‌ಗಳು ಆರಂಭದಲ್ಲಿಯೇ ಆಸ್ಟ್ರೇಲಿಯಾವನ್ನು ಕಟ್ಟಿ ಹಾಕುವಲ್ಲಿ ಯಶಸ್ವಿಯಾದರು. ಆಸೀಸ್ ತಂಡದ ಪರವಾಗಿ ಉಸ್ಮಾನ್ ಖವಾಜಾ ಮತ್ತು ಮಾರ್ನಸ್ ಲಬುಶೇನ್ ಇನ್ನಿಂಗ್ಸ್ ಆರಂಭಿಸಿದರು. ತಂಡದ ಮೊತ್ತ ಕೇವಲ 12 ರನ್ ಆಗುವಷ್ಟರಲ್ಲಿ ಯಾವುದೇ ರನ್ ಗಳಿಸದ ಖವಾಜಾ, ರಬಾಡಾ ಬೌಲಿಂಗ್‌ನಲ್ಲಿ ತನ್ನ ವಿಕೆಟ್ ಒಪ್ಪಿಸಿ ಪೆವಿಲಿಯನ್‌ಗೆ ತೆರಳಿದರು.

ಆ ಬಳಿಕವೂ ಆಸೀಸ್‌ನ ಜತೆಯಾಟ ಮುಂದುವರಿಯಲಿಲ್ಲ. ತಂಡದ ಮೊತ್ತ 16 ರನ್ ಆದಾಗ ಕ್ಯಾಮರೂನ್ ಗ್ರೀನ್ ಔಟ್ ಆದರು. ಕೇವಲ 4 ರನ್ ಗಳಿಸಿದ್ದ ಕ್ಯಾಮರೂನ್ ಗ್ರೀನ್‌ರವರು ರಾಬಡ ಅವರಿಗೇ ವಿಕೆಟ್ ಒಪ್ಪಿಸಿದರು. ಲಬುಶೇನ್ ಜೊತೆ ಸ್ಟೀವನ್ ಸ್ಮಿತ್ ಸ್ವಲ್ಪ ಹೊತ್ತು ಜತೆಯಾಟವನ್ನು ಮುಂದುವರಿಸಿದರು. ಆದರೆ ತಂಡದ ಮೊತ್ತ 46 ರನ್ ಆಗಿದ್ದಾಗ 16 ರನ್ ಗಳಿಸಿದ್ದ ಲಬುಶೇನ್ ಔಟ್ ಆದರು.

ಆ ನಂತರ ಕ್ರೀಸ್‌ಗೆ ಬಂದ ಟ್ರಾವಿಸ್ ಹೆಡ್ ಕೂಡಾ ನಿರ್ಣಾಯಕ ಸಂದರ್ಭದಲ್ಲಿ ವೈಫಲ್ಯ ಕಂಡರು. ಕೇವಲ 11 ರನ್ ಗಳಿಸಿ ಜಾನ್ಸೆನ್‌ಗೆ ವಿಕೆಟ್ ಒಪ್ಪಿಸಿದರು. ಆಗ ಆಸೀಸ್ ಸ್ಕೋರ್ 4 ವಿಕೆಟ್ ನಷ್ಟಕ್ಕೆ ಕೇವಲ 67 ರನ್‌ಗಳಾಗಿತ್ತು. ಆ ಬಳಿಕ ಸ್ಟೀವನ್ ಸ್ಮಿತ್ ಮತ್ತು ಬ್ಯೂ ವೆಬ್‌ಸ್ಟರ್ ಆಸ್ಟ್ರೇಲಿಯಾ ಇನ್ನಿಂಗ್ಸ್‌ಗೆ

ಆಧಾರಸ್ತಂಭವಾಗಿ ಕ್ರೀಸ್‌ನಲ್ಲಿ ನಿಂತರು. ತಂಡದ ಮೊತ್ತ 146 ಆದಾಗ 66 ರನ್ ಗಳಿಸಿದ್ದ ಸ್ಟೀವನ್ ಸ್ಮಿತ್ ವಿಕೆಟ್ ಪತನವಾಯಿತು.

ನಂತರ ಆಸೀಸ್‌ನ ಉಳಿದ ವಿಕೆಟ್‌ಗಳೂ ಒಂದೊಂದಾಗಿಯೇ ಪತನವಾದವು. ಅಲೆಕ್ಸ್ ಕ್ಯಾರಿ ಮಾತ್ರ 23 ಗಳಿಸುವಲ್ಲಿ ಯಶಸ್ವಿಯಾದರು. ಉಳಿದಂತೆ ತಂಡದ ನಾಯಕ ಪ್ಯಾಟ್ ಕಮಿನ್ಸ್ ಕೇವಲ 1 ರನ್, ನಾಥನ್ ಲಿಯಾನ್ ಮತ್ತು ಜೋಶ್ ಹೇಜಲ್‌ವುಡ್ ಯಾವುದೇ ರನ್ ಗಳಿಸದೆ ವಿಕೆಟ್ ಕಳೆದುಕೊಂಡರು.

ದಕ್ಷಿಣ ಆಫ್ರಿಕಾ ತಂಡದ ಪರವಾಗಿ 51 ರನ್‌ಗಳನ್ನು ನೀಡಿ 5 ವಿಕೆಟ್ ಪಡೆದ ಕಾಗಿಸೊ ರಬಡಾ ಯಶಸ್ವಿ ಬೌಲರ್ ಎನಿಸಿದರು. ಮಾರ್ಕೋ ಜಾನ್ಸೆನ್ 3 ವಿಕೆಟ್ ಪಡೆದರೆ, ಕೇಶವ್ ಮಹಾರಾಜ್ ಮತ್ತು ಹೈಡೆನ್ ಮಾರ್ಕ್ರಮ್ ತಲಾ ಒಂದು ವಿಕೆಟ್ ಪಡೆದರು.

ಪಾಂಟಿಂಗ್ ದಾಖಲೆ ಸರಿಗಟ್ಟಿದ ಸ್ಮಿತ್

ಆಸ್ಟ್ರೇಲಿಯಾ ತಂಡದ ಮಾಜಿ ನಾಯಕ ಸ್ಟೀವ್ ಸ್ಮಿತ್ ತಮ್ಮದೇ ತಂಡದ ಮಾಜಿ ನಾಯಕ ರಿಕಿ ಪಾಂಟಿಂಗ್ ದಾಖಲೆಯೊಂದನ್ನು ಸರಿಗಟ್ಟಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧ

ಇಲ್ಲಿನ ಐತಿಹಾಸಿಕ ಲಾರ್ಡ್ಸ್ ಅಂಗಣದಲ್ಲಿ ನಡೆಯುತ್ತಿರುವ ಮೂರನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದಲ್ಲಿ ಆಡುವ ಮೂಲಕ ಸ್ಮಿತ್, ತಮ್ಮ ಅಂತಾರಾಷ್ಟ್ರೀಯ ಕ್ರಿಕೆಟ್ ಜೀವನದಲ್ಲಿ 6ನೇ ಐಸಿಸಿ ಟೂರ್ನಿಯ ಫೈನಲ್ ಪಂದ್ಯವನ್ನು ಆಡಿದಂತಾಯಿತು, ಆ ಮೂಲಕ ಇಷ್ಟೇ ಐಸಿಸಿ ಟೂರ್ನಿಗಳ ಫೈನಲ್ ಆಡಿರುವ ರಿಕಿ ಪಾಂಟಿಂಗ್ ದಾಖಲೆಯನ್ನು ಸರಿಗಟ್ಟಿದ್ದಾರೆ. ಸ್ಟೀವನ್ ಸ್ಮಿತ್ ತಾವಾಡಿರುವ ಐದು ಐಸಿಸಿ ಫೈನಲ್‌ಗಳಲ್ಲಿ ನಾಲ್ಕು ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದ್ದಾರೆ. ರಿಕಿ ಪಾಂಟಿಂಗ್ ತಮ್ಮ ನಾಯಕತ್ವದಲ್ಲಿ ಎರಡು ಬಾರಿ ಸೇರಿದಂತೆ ಒಟ್ಟಾರೆ ಐದು ಬಾರಿ ಚಾಂಪಿಯನ್ ಆಗಿದ್ದಾರೆ. ಇದೀಗ ಸ್ಟೀವನ್ ಸ್ಮಿತ್ ಅವರು ರಿಕಿ ಪಾಂಟಿಂಗ್ ಅವರ ದಾಖಲೆಯನ್ನು ಸರಿಗಟ್ಟುವ ಅವಕಾಶವನ್ನು ಹೊಂದಿದ್ದಾರೆ.

ಆರ್‌ಸಿಬಿ ಮಾರಾಟ ಇಲ್ಲ: ವದಂತಿಗೆ ತೆರೆ

ಬೆಂಗಳೂರು: ಕನ್ನಡಿಗರ ನೆಚ್ಚಿನ ಫ್ರಾಂಚೈಸಿ ರಾಯಲ್ ಚಾಲೆಂಜರ್ ಬೆಂಗಳೂರು (ಆರ್‌ಸಿಬಿ) ಮಾರಾಟವಾಗಲಿದೆ ಎಂಬ ಸುದ್ದಿ ಹರಿದಾಡಿತ್ತು, ಆದರೆ ಇದನ್ನು ಆರ್‌ಸಿಬಿ ಮಾಲಕತ್ವ ಹೊಂದಿರುವ ಯುನೈಟೆಡ್ ಸ್ಪಿರಿಟ್‌ನ ಮಾತೃ ಸಂಸ್ಥೆ ಡಿಯಾಜಿಯೊ ತಳ್ಳಿ ಹಾಕಿದೆ. ನಮ್ಮ ತಂಡ ಮಾರಾಟಕ್ಕಿಲ್ಲ, ಅವೆಲ್ಲ ಬರೀ ವದಂತಿಗಳಷ್ಟೇ ಎಂದು ಹೇಳಿದೆ.

16,834 ಕೋಟಿ ರು..ಗೆ ಫ್ರಾಂಚೈಸಿಯನ್ನು ಮಾರಾಟ ಮಾಡಲು ಯೋಚಿಸಲಾಗುತ್ತಿದೆ ಎಂದು ವರದಿಯಾಗಿತ್ತು. ಆದರೆ ಅವೆಲ್ಲ ಸುಳ್ಳು ಎಂದು ಡಿಯಾಜಿಯೊ ಸ್ಪಷ್ಟನೆ ನೀಡಿ ಈ ವದಂತಿಗೆ ಡಿಯಾಜಿಯೊ ತೆರೆ ಎಳೆದಿದ್ದು, ಅಭಿಮಾನಿಗಳು ನಿರಾಳರಾಗಿದ್ದಾರೆ.

ಪಂದ್ಯ ಸ್ಥಳಾಂತರ

ನವೆಂಬರ್ 13ರಿಂದ 19ರ ವರೆಗೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಭಾರತ-ಎ ಮತ್ತು ದಕ್ಷಿಣ ಆಫ್ರಿಕಾ-ಎ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿಯು ಬೆಂಗಳೂರಿನ ಬದಲು ರಾಜ್‌ಕೋಟ್‌ನಲ್ಲಿ ಆಯೋಜಿಸಲಾಗುತ್ತಿದೆ. ಯಾವುದೇ ನಿರ್ದಿಷ್ಟ ಕಾರಣ ನೀಡದೆ ಭಾರತೀಯ ಕ್ರಿಕೆಟ್ ಮಂಡಳಿ (ಬಿಸಿಸಿಐ) ಪತ್ರಿಕಾ ಪ್ರಕಟಣೆಯನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಬೆಂಗಳೂರಿನ ಪಂದ್ಯಗಳನ್ನು ರಾಜ್‌ಕೋಟ್‌ಗೆ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದೆ.

ಮುಂದಿನ ವರ್ಷ ನಡೆಯಲಿರುವ ಫಿಫಾ ವಿಶ್ವಕಪ್ ಫುಟ್ಬಾಲ್

ಬ್ರೆಜಿಲ್, ಆಸ್ಟ್ರೇಲಿಯಾಗೆ ಅರ್ಹತೆ

ಸಾವೊ ಪಾಲೊ(ಬ್ರೆಜಿಲ್): ಮಂಗಳವಾರ ರಾತ್ರಿ ನಡೆದಿದ್ದ ಅರ್ಹತಾ ಪಂದ್ಯದಲ್ಲಿ ಪೆರುಗ್ವೆ ವಿರುದ್ಧ 1-0 ಅಂತರದ ಗೆಲುವು ದಾಖಲಿಸಿದ ಬ್ರೆಜಿಲ್ ತಂಡವು ಮುಂದಿನ ವರ್ಷ ನಡೆಯಲಿರುವ ಫಿಫಾ ಫುಟ್ಬಾಲ್ ವಿಶ್ವಕಪ್-2026 ಟೂರ್ನಿಗೆ ಅರ್ಹತೆ ಗಿಟ್ಟಿಸುವಲ್ಲಿ ಯಶಸ್ವಿಯಾಗಿದೆ. 2026ರ ಫಿಫಾ ವಿಶ್ವಕಪ್ ಆವೃತ್ತಿಯಲ್ಲಿ 48 ತಂಡಗಳು ಭಾಗವಹಿಸಲಿದ್ದು, ಹಿಂದಿನ 32 ತಂಡಗಳ ಬದಲಿಗೆ ಈಗ ವಿಶ್ವಾದ್ಯಂತ ಅರ್ಹತಾ ಅಭಿಯಾನಗಳು ನಡೆಯುತ್ತಿದ್ದು, ಇದುವರೆಗೆ 10 ತಂಡಗಳು ಅರ್ಹತೆಯನ್ನು ಪಡೆದಿದೆ.

ಜಪಾನ್, ಇರಾನ್, ದಕ್ಷಿಣ ಕೊರಿಯಾ, ಆಸ್ಟ್ರೇಲಿಯಾ, ಜೋರ್ಡಾನ್, ಉಜ್ಬೇಕಿಸ್ತಾನ್, ನ್ಯೂಜಿಲೆಂಡ್, ಅರ್ಜೆಂಟೀನಾ, ಬ್ರೆಜಿಲ್, ಈಕ್ವೆಡಾರ್ ಈಗಾಗಲೇ ಫಿಫಾ ಫುಟ್‌ಬಾಲ್ ವಿಶ್ವಕಪ್‌ಗೆ ಅರ್ಹತೆ ಗಿಟ್ಟಿಸಿಕೊಂಡ ತಂಡಗಳಾಗಿವೆ. ವಿಶ್ವ ಚಾಂಪಿಯನ್ ಬ್ರೆಜಿಲ್, ವಿಶ್ವಕಪ್‌ನ ಪ್ರತಿಯೊಂದು ಆವೃತ್ತಿಯಲ್ಲಿ ಪಾಲ್ಗೊಂಡಿರುವ ಏಕೈಕ ರಾಷ್ಟ್ರವೆನಿಸಿದೆ.

ಜೆಡ್ಡಾದಲ್ಲಿ ನಡೆದ ಮತ್ತೊಂದು ಅರ್ಹತಾ ಪಂದ್ಯದಲ್ಲಿ ಸೌದಿ ಅರೇಬಿಯಾ ವಿರುದ್ಧ 2-1 ಗೋಲುಗಳ ಅಂತರದ ಗೆಲುವು ಸಾಧಿಸಿದ ಆಸ್ಟ್ರೇಲಿಯಾ ಕೂಡಾ ಮುಂದಿನ ಫಿಫಾ ವಿಶ್ವಕಪ್ ಫುಟ್ಬಾಲ್ ಟೂರ್ನಿಗೆ ಅರ್ಹತೆಯನ್ನು ಪಡೆದುಕೊಂಡಿತು.

2026ರ ಫಿಫಾ ಫುಟ್ಬಾಲ್ ವಿಶ್ವಕಪ್ ಪಂದ್ಯಾವಳಿಯು

ಅಮೆರಿಕ, ಮೆಕ್ಸಿಕೊ ಮತ್ತು ಕೆನಡಾ ದೇಶಗಳ ಆತಿಥ್ಯದಲ್ಲಿ ನಡೆಯಲಿದೆ. ಫುಟ್ಬಾಲ್ ವಿಶ್ವಕಪ್‌ನ ಇತಿಹಾಸದಲ್ಲಿ ಮೂರು ರಾಷ್ಟ್ರಗಳು ಆತಿಥ್ಯ ವಹಿಸುತ್ತಿರುವುದು ಇದೇ ಮೊದಲ ಬಾರಿಯಾಗಿದ್ದು, ಒಟ್ಟು 16 ನಗರಗಳಲ್ಲಿ ಪಂದ್ಯಾವಳಿಯು ಆಯೋಜನೆಯಾಗಲಿವೆ.

ಇತ್ತೀಚೆಗೆ ಫಿಫಾ ವಿಶ್ವಕಪ್ ಅರ್ಹತಾ ಸುತ್ತಿನಲ್ಲಿ ತಾರತಮ್ಯ ನಡೆಸಿದ ಕಾರಣಕ್ಕೆ 6 ದೇಶಗಳಿಗೆ ಫಿಫಾ ದಂಡ ಹಾಕಿತ್ತು. ಅಲ್ಬೇನಿಯಾ, ಈಕ್ವೆಡಾರ್, ಪರಗ್ವೆ, ರೊಮೇನಿಯಾ, ಬೋಸ್ನಿಯಾ-ಹರ್ಜೆಗೋವಿನಾ, ಇಂಡೋನೇಷ್ಯಾ ದಂಡಕ್ಕೊಳಗಾದ ದೇಶಗಳಾಗಿವೆ.

ಗೌತಮ್ ಗಂಭೀರ್ ಮಾಡಿದ್ದ ಮನವಿ ಬಹಿರಂಗಪಡಿಸಿದ ಪಿಚ್ ಕ್ಯುರೇಟರ್

ಪಂದ್ಯದ ಅಭ್ಯಾಸಕ್ಕೆ ಪಿಚ್ ನೀಡಿ: ಗಂಭೀರ್

ಲೀಡ್ಸ್: ಶುಭ್‌ಮನ್ ಗಿಲ್ ನಾಯಕತ್ವದ ಟೀಮ್ ಇಂಡಿಯಾ ಜೂನ್ 20ರಂದು ಇಂಗ್ಲೆಂಡ್ ವಿರುದ್ಧ ಆರಂಭವಾಗಲಿರುವ ಐದು ಪಂದ್ಯಗಳ ಟೆಸ್ಟ್ ಸರಣಿಗೆ ಸಜ್ಜಾಗುತ್ತಿದೆ, ಆ ಮೂಲಕ ತನ್ನ 2025-27ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಭಿಯಾನವನ್ನು ಆರಂಭಿಸಲಿದೆ. ಈಗಾಗಲೇ ಭಾರತ ತಂಡವು ಇಂಗ್ಲೆಂಡ್‌ಗೆ ತೆರಳಿದ್ದು, ಬೆಹನ್‌ಹ್ಯಾಮ್‌ನಲ್ಲಿ ಅಭ್ಯಾಸ ನಡೆಸುತ್ತಿದೆ. ಪರಿಸ್ಥಿತಿಗೆ ತಕ್ಕಂತೆ ಪಿಚ್‌ಗಳನ್ನು ಅಭ್ಯಾಸ ನಡೆಸಲು ನೀಡಬೇಕೆಂದು ಹೆಡ್ ಕೋಚ್ ಗೌತಮ್ ಗಂಭೀರ್ ನಮಗೆ ಸಲಹೆ ನೀಡಿದ್ದರು ಎಂದು ಪಿಚ್ ಕ್ಯುರೇಟರ್ ಜಾಶ್ ಮಾರ್ಡನ್ ತಿಳಿಸಿದ್ದಾರೆ.

ರೆವ್‌ಸ್ಪೋರ್ಟ್ಸ್ ಜೊತೆ ಮಾತನಾಡಿದ ಪಿಚ್ ಕ್ಯುರೇಟರ್ ಜಾಶ್ ಮಾರ್ಡನ್, 'ನಮಗೆ ಹೆಚ್ಚು ಫ್ಲ್ಯಾಟ್ ಅಲ್ಲದ ಹಾಗೂ ತುಂಬಾ ಹಸಿರಿನಿಂದ ಕೂಡಿರದ, ಉತ್ತಮ ಗುಣಮಟ್ಟದ ಪಿಚ್ ಬೇಕು. ಇದರಿಂದ ನಮಗೆ ಪಂದ್ಯಕ್ಕೆ ಉತ್ತಮ ತಯಾರಿ ನಡೆಸಲು ಸಾಧ್ಯವಾಗುತ್ತದೆ ಎಂದು ಗೌತಮ್ ಗಂಭೀರ್ ಸೇರಿದಂತೆ ಕೋಚಿಂಗ್ ಸಿಬ್ಬಂದಿ ಸಭೆಯಲ್ಲಿ ನಮಗೆ ತಿಳಿಸಿದ್ದರು. ಅವರು ಬ್ಯಾಟಿಂಗ್ ಡ್ರಿಲ್‌ಗಳಿಗೆ ಮಾತ್ರವಲ್ಲದೆ ಹೆಚ್ಚು ವಾಸ್ತವಿಕ ಪರಿಸ್ಥಿತಿಗಳನ್ನು ಬಯಸಿದ್ದರು. ಆದ್ದರಿಂದ ಹುಲ್ಲಿನ ಹೊದಿಕೆ, ನಿವ್ವಳ ಅಗಲ ಮತ್ತು ಉದ್ದದ ವಿಸ್ತರಣೆಯೂ ಸೇರಿದಂತೆ ಕೆಲ ಅಂಶಗಳನ್ನು ಸರಿಹೊಂದಿಸಿದ್ದೇವೆ, ಹಾಗಾಗಿ ಪಿಚ್ ಬಗೆಗಿನ ಪ್ರತಿಕ್ರಿಯೆ ಉತ್ತಮವಾಗಿದೆ' ಎಂದು ಪಿಚ್ ಕ್ಯುರೇಟರ್ ಜಾಶ್ ಮಾರ್ಡನ್ ತಿಳಿಸಿದ್ದಾರೆ.

'ಇಂಗ್ಲೆಂಡ್‌ನ ಮಣ್ಣು ಬ್ಯಾಟಿಂಗ್‌ಗೆ ಸ್ನೇಹಿಯಾಗಿದೆ. ಆದರೆ ಪಿಚ್ ನೋಡಲು ಬಹುಶಃ ಒಣಗಿದ ಅಥವಾ ಫ್ಲ್ಯಾಟ್ ವಿಕೆಟ್ ರೀತಿ ಕಾಣಬಹುದು. ನಾವು ಇಲ್ಲಿನ ಹುಲ್ಲಿನ ಸಾಂದ್ರತೆಯನ್ನು ನಿರ್ವಹಿಸಿದ್ದೇವೆ, ಹಾಗಾಗಿ ಹುಲ್ಲು ದಟ್ಟವಾಗಿಲ್ಲ. ಭಾರತ ಮತ್ತು ಆಸ್ಟ್ರೇಲಿಯಾ ಪ್ರಸ್ತುತ ಬಳಸುತ್ತಿರುವ ಪಿಚ್‌ಗಳು ನಮ್ಮ ಸಾಮಾನ್ಯ ಬಿಳಿ ಚೆಂಡಿನ ಮೇಲ್ಮೈಗಳಿಗಿಂತ ಸ್ವಲ್ಪ ಹೆಚ್ಚು ಹುಲ್ಲನ್ನು ಹೊಂದಿದ್ದು, ಪಿಚ್ ಸಮತೋಲನದಿಂದ ಕೂಡಿದೆ. ಕಂದು ಬಣ್ಣದ ಮೇಲ್ಮೈ ಇದ್ದರೂ ಸಹ, ವೇಗದ ಬೌಲರ್‌ಗಳಿಗೆ ಪಿಚ್ ಸಾಕಷ್ಟು ಅವಧಿ ನೆರವು ನೀಡಲಿದೆ ಎಂದೂ ಪಿಚ್ ಕ್ಯುರೇಟರ್ ಹೇಳಿದ್ದಾರೆ.

ದೂರತೀರ ಯಾನದ ಮಧುರ ಗಾನ

ಹರಿವು, ನಾತಿಚರಾಮಿ, ಆಕ್ಟ್ 1978, 19.20.21 ನಂತಹ ಅದ್ಭುತ ಚಿತ್ರಗಳನ್ನು ನಿರ್ದೇಶಿಸಿ ಮೆಚ್ಚುಗೆ ಪಡೆದ ನಿರ್ದೇಶಕ ಮಂಸೋರೆ ನಿರ್ದೇಶಿಸಿರುವ ದೂರ ತೀರ ಯಾನ ಚಿತ್ರದ ಟೈಟಲ್ ಸಾಂಗ್ ರಿಲೀಸ್ ಆಗಿದೆ. ಕಿರಣ್ ಕಾವೇರಪ್ಪ ಸಾಹಿತ್ಯ ರಚಿಸಿರುವ ಈ ಗೀತೆಗೆ ಬಕ್ಕೇಶ್ ಹಾಗೂ ಕಾರ್ತಿಕ್ ಸಂಗೀತ ಸಂಯೋಜಿದ್ದು, ಬಕ್ಕೇಶ್-ಇಶಾ ಸುಚಿ ದನಿಯಲ್ಲಿ ಹಾಡು ಮಧುರವಾಗಿ ಮೂಡಿಬಂದಿದೆ. ದೂರ ತೀರದ ಈ ಹಾಡಿಗೆ ದೂರದೂರುಗಳಿಂದಲೂ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಪಯಣದಲ್ಲಿ ಸಾಗುವ ಕಥೆ ಇದಾಗಿದ್ದು, ವಿಜಯ್ ಕೃಷ್ಣ ನಾಯಕನಾಗಿ ನಟಿಸಿದ್ದು, ಪ್ರಿಯಾಂಕಾ ಕುಮಾರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ನಮ್ಮ ಚಿತ್ರದ ಟೈಟಲ್ ಸಾಂಗ್‌ನಲ್ಲಿ ಹೊಸ ಶಕ್ತಿಯಿದೆ. ಸಂಗೀತ ಪ್ರಿಯ ರಿಗೆ ಈ ಹಾಡು ತುಂಬಾ ಹಿಡಿಸಿದೆ ಎಂದು ವಿಜಯ್ ಕೃಷ್ಣ ಹೇಳಿ ದರು. ಚಿತ್ರದಲ್ಲಿ ನನಗೆ ಪ್ರಿಯ ವಾದ ಪಾತ್ರವೇ ಸಿಕ್ಕಿದೆ, ಇದು ಎಲ್ಲರಿಗೂ ಕನೆಕ್ಟ್ ಆಗುವ ಪಾತ್ರ ಎಂದು ನಾಯಕಿ ಪ್ರಿಯಾಂಕಾ ಕುಮಾರ್ ತಿಳಿಸಿದರು. ಡಿ.ಕ್ರಿಯೇ ಷನ್ಸ್‌ನಲ್ಲಿ ದೇವರಾಜ್ ಚಿತ್ರ ನಿರ್ಮಾಣ ಮಾಡಿದ್ದು, ದೂರ ತೀರಯಾನ ಜುಲೈ 11 ರಂದು ತೆರೆಗೆ ಬರಲಿದೆ.

ಟಾಕೀಸ್

> ನಮ್ಮ ಸಿನಿಮಾದ ಹಾಡುಗಳಲ್ಲಿ ಒಂದೇ ಒಂದು ಇಂಗ್ಲೀಷ್-ಸಾಗುವ ಪದ ಕೂಡ ಬಳಸಿಲ್ಲ, ಅಂತಹ ಸಾಹಿತ್ಯ ಇಲ್ಲಿದ್ದು ಇದು ನಮ್ಮ ಕನ್ನಡ ಭಾಷೆಯ ಹಿರಿಮೆಯಾಗಿದೆ. ಇದು ದೂರ ಪಯಣಿಸುವ ಪಯಣಿಗರಿಗೆ ಸಿಕ್ಕ ಸುಮಧುರ ಗೀತೆಯಾಗಿದೆ. ನಮ್ಮ ಚಿತ್ರದಲ್ಲಿ ಆರು ಹಾಡುಗಳು ಹಾಗೂ ಎರಡು ಬಿಟ್ಸ್ ಇವೆ. ದೂರ ತೀರ ಯಾನ ಬೆಂಗಳೂರಿನಿಂದ ಗೋವಾದವರೆಗೂ ನಡೆಯುವ ಪಯಣದ ಕಥೆ.
>
> - ಮಂಸೋರೆ ನಿರ್ದೇಶಕ